ಹುಬ್ಬಳ್ಳಿ
ಶುಕ್ರವಾರ, 13 ಮಾರ್ಚ್ 2026
ಸಂಪುಟ 15, ಸಂಚಿಕೆ 354, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಸಾಧಕ ಮಹಿಳಾ ರೈತರಿಗೆ ಪ್ರಚಾರ ಅಗತ್ಯ | ೦೭
ಸಿಇಸಿ ಪದಚ್ಯುತಿಗೆ 200 ಸಂಸದರ ಸಹಿ | ೦೭
ಜೀವಮಾನದ ಗೋಡೆಗೆ ಬಿಸಿಸಿಐ ಗರಿ | ೧೦

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಕೃಷ್ಣ ಪಕ್ಷ, ತಿಥಿ:ದಶಮಿ, ನಕ್ಷತ್ರ: ಪೂರ್ವಾಷಾಢ

ದಿನದ ಮಾತು

ಬುದ್ಧಿವಂತನಾದವನು ತಾನು ಅಜರಾಮರನೆಂದೇ ತಿಳಿದುಕೊಂಡು ವಿದ್ಯೆ ಮತ್ತು ಸಂಪತ್ತನ್ನು ಗಳಿಸುತ್ತಿರಬೇಕು.

▲ ಸುಭಾಷಿತ

ಯುದ್ಧಕಾಲದಲ್ಲೊಂದು ಅಕಾಲಿಕ ಚಿಂತೆ!

ಉಘೇ ವೀರಭೂಮಿಗೆ

• ಸಂತೋಷ್ ತಮ್ಮಯ್ಯ

• ಪುಟ ೬

ಕಿರುಸುದ್ಧಿ

ನಿಯಮಾನುಸಾರ ಲೋಕ ಸಭೆ ಕಾರ್ಯನಿರ್ವಹಣೆ

• **ಹೊಸದಿಲ್ಲಿ:** ಲೋಕಸಭೆಯ ಸಭಾಪತಿಪೀಠ ಯಾರೇ ಒಬ್ಬ ವ್ಯಕ್ತಿಗೆ ಸೇರಿದ್ದಲ್ಲ, ಇದು ಸದನದ ಘನತೆಯ ದ್ಯೋತಕವಾಗಿದೆ. ಸದನವು ನಿಯಮಗಳಿಗೆ ಅನುಸಾರ ಕಾರ್ಯ ನಿರ್ವಹಿಸುತ್ತದೆ. ಯಾರೇ ಸದಸ್ಯರಿಗೆ ತಮಗೆ ಬೇಕೆನಿಸಿದ ಸಮಯದಲ್ಲಿ ತಮಗೆ ಬೇಕಾದ ವಿಚಾರದಲ್ಲಿ ಸ್ವೇಚ್ಛೆಯಿಂದ ಮಾತನಾಡುವ ಹಕ್ಕಿಲ್ಲ ಎಂದು ಸಭಾಪತಿ ಓಂ ಬಿರ್ಲಾ ಹೇಳಿದ್ದಾರೆ.

• ಪುಟ ೭

ಗೃಹ ಬಳಕೆ ಸಿಲಿಂಡರ್ ಅಭಾವವಿಲ್ಲ: ಮುನಿಯಪ್ಪ

• **ವಿಧಾನಪರಿಷತ್:** ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಉಂಟಾಗಿರುವ ಯುದ್ಧ ಪರಿಸ್ಥಿತಿಯಿಂದಾಗಿ ಕರ್ನಾಟಕ ಮಾತ್ರವಲ್ಲದೇ ದೇಶಾದ್ಯಂತ ಅಡುಗೆ ಅನಿಲ ಅಭಾವ ಉಂಟಾಗಿದೆ. ಆದರೆ, ಗೃಹ ಬಳಕೆ ಸಿಲಿಂಡರ್‌ಗಳಿಗೆ ರಾಜ್ಯದಲ್ಲಿ ಕೊರತೆ ಯಿಲ್ಲ, 10– 12 ದಿನ ಗಳಲ್ಲಿ ವಾಣಿಜ್ಯ ಸಿಲಿಂಡರ್‌ಗಳೂ ಪೂರೈಕೆಯಾಗಲಿವೆ. ರಾಜ್ಯದ ಜನತೆ ಆತಂಕ ಪಡುವ ಅಗತ್ಯವಿಲ್ಲ ಎಂದು ಆಹಾರ ಮತ್ತು ನಾಗರಿಕ ಸಬರಾಜು ಇಲಾಖೆ ಸಚಿವ ಕೆ.ಎಚ್. ಮುನಿಯಪ್ಪ ಅವರು ಹೇಳಿದರು.

• ಪುಟ ೫

ಬಿಪಿಎಲ್: ವಾರ್ಷಿಕ ಆದಾಯ ಮಿತಿ 3 ಲಕ್ಷ ರೂ.ಗೆ ಹೆಚ್ಚಳ?

• **ವಿಧಾನಸಭೆ:** ರಾಜ್ಯದಲ್ಲಿ ಆದ್ಯತಾ ಕುಟುಂಬಗಳಿಗೆ (ಪಿಎಚ್‌ಎಚ್) ನೀಡಲಾಗುವ ಪಡಿತರ ಚೀಟಿಗಳ ವಾರ್ಷಿಕ ಆದಾಯ ಮಿತಿಯನ್ನು ಪ್ರಸ್ತುತ ಇರುವ 1.20 ಲಕ್ಷ ರೂ.ಗಳಿಂದ 3 ಲಕ್ಷ ರೂ.ಗಳಿಗೆ ಹೆಚ್ಚಿಸಲು ರಾಜ್ಯ ಸರ್ಕಾರ ಪರಿಶೀಲನೆ ನಡೆಸುತ್ತಿದೆ ಎಂದು ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

• ಪುಟ ೫

ದಶಕಗಳಿಂದ ಉಗ್ರವಾದ ಪೋಷಿಸುತ್ತಿರುವ ಪಾಕ್

• ಪುಟ ೭

ಅನಿಲ್ ಅಂಬಾನಿ ಒಡೆತನದ 581 ಕೋಟಿ ರೂ. ಆಸ್ತಿ ಜಪ್ತಿ

• ಪುಟ ೭

16 ದೇಶಗಳ ವಿರುದ್ಧ ಸೆಕ್ಷನ್ 301 ತನಿಖೆ

• ಪುಟ ೭

ಹಾರ್ಮುಜ್ ಮೂಲಕ ಭಾರತೀಯ ಹಡಗುಗಳು ಸಂಚರಿಸಲು ಇರಾನ್ ಅನುಮತಿ

ಭಾರತಕ್ಕೆ ತೈಲ, ಅನಿಲ ಸರಾಗ

• **ಹೊಸದಿಲ್ಲಿ:** ಇಸ್ರೇಲ್–ಅಮೆರಿಕ ಮತ್ತು ಇರಾನ್ ನಡುವೆ ನಡೆಯುತ್ತಿರುವ ಉದ್ವಿಗ್ನ ಪರಿಸ್ಥಿತಿಯ ನಡುವೆಯೂ ಭಾರತದ ತೈಲ ಟ್ಯಾಂಕರ್‌ಗಳು ಹಾಗೂ ಕಂಟೈನರ್ ಹಡಗುಗಳು ಹಾರ್ಮುಜ್ ಜಲಸಂಧಿಯ ಮೂಲಕ ಸಂಚರಿಸಲು ಇರಾನ್ ಅನುಮತಿ ನೀಡಿದ್ದು, ಇದು ಜಾಗತಿಕ ಮಟ್ಟದಲ್ಲಿ ಭಾರತಕ್ಕೆ ಸಿಕ್ಕ ಮಹತ್ವದ ಗೆಲುವು ಎಂದು ಬಣ್ಣಿಸಲಾಗಿದೆ.



ಈ ಮಹತ್ವದ ಬೆಳವಣಿಗೆಯು ಭಾರತಕ್ಕೆ ಕಚ್ಚಾ ತೈಲ ಮತ್ತು ನೈಸರ್ಗಿಕ ಅನಿಲ ಪೂರೈಕೆಯನ್ನು ಸರಾಗಗೊಳಿಸಲಿದೆ.

ವಿದೇಶಾಂಗ ಸಚಿವ ಎಸ್. ಜೈಶಂಕರ್ ಹಾಗೂ ಇರಾನ್‌ನ ತನ್ನ ಸಹವರ್ತಿ ಸಯ್ಯದ್ ಅಬ್ಬಾಸ್ ಅರಾಗ್ಚಿ ಅವರ ನಡುವೆ 3 ಬಾರಿ ದೂರವಾಣಿ ಮಾತುಕತೆಯ ಬಳಿಕ ಈ ಅನುಮತಿ ಲಭ್ಯವಾಗಿದೆ ಎಂದು ಹೇಳಲಾಗಿದೆ. ಈ ಹಿನ್ನೆಲೆಯಲ್ಲಿ ಭಾರತೀಯ ಹಡಗುಗಳು ಹಾರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿ ದಾಟುತ್ತಿರುವುದಾಗಿ ಮಾಹಿತಿ ಸಿಕ್ಕಿದೆ. ಇದರ ಮಧ್ಯೆ, ಹಾರ್ಮುಜ್ ಜಲಸಂಧಿಯ ಮೂಲಕ ಕಚ್ಚಾ ತೈಲವನ್ನು ಹೊತ್ತುಕೊಂಡು ಬಂದ ಒಂದು ಹಡಗು ಮುಂಬೈ ಬಂದರಿಗೆ ತಲುಪಿದೆ. ಸೌದಿ ಅರೇಬಿಯಾದಿಂದ ಹೊರಟ ಲೈಬೀರಿಯಾ ಧ್ವಜದ ಟ್ಯಾಂಕರ್ ಬುಧವಾರ ಮುಂಬೈ ಬಂದರಿಗೆ ಬಂದಿದ್ದು, ಯುದ್ಧ ಆರಂಭವಾದ ಬಳಿಕ ಈ ಮಾರ್ಗದ ಮೂಲಕ ಭಾರತಕ್ಕೆ ತಲುಪಿದ ಮೊದಲ ತೈಲ ಹಡಗು ಇದಾಗಿದೆ. ➡ಪುಟ ೪

ದೇಶದಲ್ಲಿ ಇಂಧನ ಕೊರತೆ ಇಲ್ಲ

ಇದರ ನಡುವೆ, ಇಂಧನ ಸಚಿವ ಹರ್ದೀಪ್ ಸಿಂಗ್ ಪುರಿ



ಗುರುವಾರ ಸಂಸತ್ತಿನಲ್ಲಿ ಮಾತನಾಡಿ ದೇಶದಲ್ಲಿ ಇಂಧನ ಕೊರತೆ ಇಲ್ಲ ಎಂದು ಹೇಳಿದರು. ಆಧುನಿಕ ಇಂಧನ ಇತಿಹಾಸದಲ್ಲಿ ಇಂತಹ ಕ್ಷಣವನ್ನು ಜಗತ್ತು ಎದುರಿಸಿಲ್ಲ. ಭಾರತದ ಕಚ್ಚಾ ತೈಲ ಸರಬರಾಜು ಸುರಕ್ಷಿತವಾಗಿದೆ. ಹಾರ್ಮುಜ್ ಮೂಲಕ ಬರಬೇಕಿದ್ದ ಪ್ರಮಾಣಕ್ಕಿಂತಲೂ ಹೆಚ್ಚು ತೈಲವನ್ನು ಭಾರತ ಈಗಾಗಲೇ ಖಚಿತಪಡಿಸಿಕೊಂಡಿದೆ ಎಂದು ಹೇಳಿದರು.



ಭಾರತಕ್ಕೆ ತೈಲ ತಂದ ಟ್ಯಾಂಕರ್‌ನ ರಹಸ್ಯ ಪ್ರಯಾಣ

ಯುದ್ಧದ ನೆರಳಲ್ಲಿ 'ಕತ್ತಲ ದಾರಿ' ಪಯಣ!

• **ಮುಂಬೈ:** ಮಧ್ಯಪ್ರಾಚ್ಯದಲ್ಲಿ ಅಮೆರಿಕ– ಇರಾನ್ ಸಂಘರ್ಷ ತೀವ್ರವಾಗಿರುವ ಸಂದರ್ಭದಲ್ಲಿ, ತೈಲ ಹೊತ್ತುಕೊಂಡು ಬಂದ ಒಂದು ದೊಡ್ಡ ಕಚ್ಚಾತೈಲ ಟ್ಯಾಂಕರ್ 'ಕತ್ತಲ ದಾರಿ' ಬಳಸಿಕೊಂಡು ಅಪಾಯಕರ ಹಾರ್ಮುಜ್ ಜಲಸಂಧಿಯನ್ನು ದಾಟಿ ಎಲ್ಲರಿಗೂ ಅಚ್ಚರಿ ಮೂಡಿಸಿದೆ. ಸೌದಿ ಅರೇಬಿಯಾದಿಂದ ಹೊರಟ ಈ ಲಿಬೇರಿಯಾ ಧ್ವಜದ 'ಶೆನ್‌ಲಾಂಗ್ ಸ್ಯೂಝ್‌ಮ್ಯಾಕ್ಸ್' ಟ್ಯಾಂಕರ್ ಸುಮಾರು 1.35 ಲಕ್ಷ ಮೆಟ್ರಿಕ್ ಟನ್ ಕಚ್ಚಾ ತೈಲ ಹೊತ್ತು ಮುಂಬೈ ಬಂದರಿಗೆ ಸುರಕ್ಷಿತವಾಗಿ ತಲುಪಿದೆ. ಅಮೆರಿಕ–ಇರಾನ್ ಯುದ್ಧ ಆರಂಭವಾದ ಬಳಿಕ ಹಾರ್ಮುಜ್ ಮೂಲಕ ಭಾರತ ತಲುಪಿದ ಮೊದಲ ಟ್ಯಾಂಕರ್ ಇದಾಗಿದೆ.

'ಡಾರ್ಕ್ ಮೋಡ್' ಎಂದರೇನು?: ಸಾಮಾನ್ಯವಾಗಿ ಸಮುದ್ರದಲ್ಲಿ ಸಾಗುವ ಪ್ರತಿಯೊಂದು ಹಡಗು ಆಟೋಮ್ಯಾಟಿಕ್ ಐಡೆಂಟಿಫಿಕೇಷನ್ ಸಿಸ್ಟಮ್(ಎಐಎಸ್) ಮೂಲಕ ತನ್ನ ಗುರುತು, ಸ್ಥಳ ಮತ್ತು ದಿಕ್ಕನ್ನು ಪ್ರಸಾರ ಮಾಡುತ್ತದೆ. ➡ಪುಟ ೪

ಅಪಾಯದ ನಡುವೆ ಸಾಹಸ

ಈ ಹಡಗಿನ ಪ್ರಯಾಣ ಮಾರ್ಚ್ 1ರಂದು ಸೌದಿ ಅರೇಬಿಯಾದ ರಾಸ್ ತನೂರಾ ಬಂದರಿನಿಂದ ಆರಂಭವಾಯಿತು.ಕೆಲ ದಿನಗಳ ಬಳಿಕ ಅದು ಯುದ್ಧದಿಂದ ಉದ್ವಿಗ್ನವಾಗಿರುವ ಹಾರ್ಮುಜ್ ಜಲಸಂಧಿಗೆ ಪ್ರವೇಶಿಸಿತು. ಇತ್ತೀಚಿನ ಸಂಘರ್ಷಗಳಿಂದಾಗಿ ಈ ಮಾರ್ಗದಲ್ಲಿ ಹಲವಾರು ಹಡಗುಗಳ ಮೇಲೆ ದಾಳಿ ನಡೆದಿರುವುದರಿಂದ ಬಹುತೇಕ ವ್ಯಾಪಾರಿಕ ಹಡಗುಗಳು ಸಂಚಾರವೇ ನಿಲ್ಲಿಸಿವೆ. ಆದರೆ ಈ ಟ್ಯಾಂಕರ್ ಮಾತ್ರ ಅಪಾಯವನ್ನು ಲೆಕ್ಕಿಸದೆ 'ಡಾರ್ಕ್ ಟ್ರಾನ್ಸಿಟ್' ತಂತ್ರದಿಂದ ಮಾರ್ಗ ದಾಟಿ ಮುಂಬೈ ಬಂದರಿಗೆ ಸುರಕ್ಷಿತವಾಗಿ ತಲುಪಿದೆ.

ಅನುಮತಿ ಪಡೆಯದ ಹಡಗುಗಳಿಗೆ ಎಚ್ಚರಿಕೆ

ಭಾರತೀಯ ಹಡಗುಗಳಿಗೆ ಅನುಮತಿ ನೀಡಿದ್ದರೂ, ಹಾರ್ಮುಜ್ ಜಲಸಂಧಿಯನ್ನು ದಾಟಲು ಬಯಸುವ ಎಲ್ಲಾ ಹಡಗುಗಳು ಇರಾನ್‌ನಿಂದ ಪೂರ್ವಾನುಮತಿ ಪಡೆಯಬೇಕು ಎಂದು ಇರಾನ್ ಎಚ್ಚರಿಸಿದೆ. ಅನುಮತಿ ಪಡೆಯದೇ ಸಾಗಿದರೆ ಹಡಗುಗಳನ್ನು ಗುರಿಯಾಗಿಸಬಹುದು ಎಂದು ತಿಳಿಸಲಾಗಿದೆ. ➡ಪುಟ ೪



ಯುದ್ಧ ಕೊನೆಗೊಳಿಸಲು ಷರತ್ತು ವಿಧಿಸಿದ ಇರಾನ್

ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷವು ಭಾರೀ ತಿರುವು ಪಡೆದುಕೊಂಡಿದ್ದು, ಈ ಯುದ್ಧವನ್ನು ಕೊನೆಗೊಳಿಸಲು ಅಮೆರಿಕ ಮತ್ತು ಇಸ್ರೇಲ್ ಮುಂದೆ ಇರಾನ್ ಮೂರು ಷರತ್ತುಗಳನ್ನು ಮಂಡಿಸಿದೆ. ಒಂದು ಯುದ್ಧಕ್ಕೆ ಸಂಬಂಧಿಸಿದ ಯಾವುದೇ ನಿರ್ಣಯವು ಇರಾನ್‌ನ ಕಾನೂನುಬದ್ಧ ಹಕ್ಕುಗಳನ್ನು ಗುರುತಿಸಬೇಕು, ಎರಡು ದೇಶವು ಭವಿಷ್ಯದ ದಾಳಿಗಳನ್ನು ಎದುರಿಸುವುದಿಲ್ಲ ಎಂದು ಖಾತರಿಪಡಿಸಬೇಕು, ಮೂರು ಯುದ್ಧದ ಸಮಯದಲ್ಲಿ ಉಂಟಾದ ಹಾನಿಗಾಗಿ ಇರಾನ್‌ಗೆ ಪರಿಹಾರ ನೀಡಬೇಕು ಎಂದು ಇರಾನ್ ಅಧ್ಯಕ್ಷ ಮಸೌದ್ ಪೆಜಾಶ್ಕಿಯಾನ್ ಹೇಳಿದ್ದಾರೆ.

ಪರ್ಷಿಯನ್ ಗಲ್ಫ್ ಪ್ರದೇಶದಲ್ಲಿ 28 ಭಾರತೀಯ ಹಡಗುಗಳು

ಭಾರತದ ನೌಕಾ ಸಾಗಣೆ ಸಚಿವಾಲಯದ ಪ್ರಕಾರ, ಪರ್ಷಿಯನ್ ಗಲ್ಫ್ ಪ್ರದೇಶದಲ್ಲಿ ಈಗ 28 ಭಾರತೀಯ ಧ್ವಜ ಹೊಂದಿರುವ ಹಡಗುಗಳು ಕಾರ್ಯನಿರ್ವಹಿಸುತ್ತಿವೆ. ಹಾರ್ಮುಜ್ ಜಲಸಂಧಿಯ ಪಶ್ಚಿಮ ಭಾಗದಲ್ಲಿ 24 ಹಡಗುಗಳು, 677 ಭಾರತೀಯ ನೌಕರರು ಮತ್ತು ಜಲಸಂಧಿಯ ಪೂರ್ವ ಭಾಗದಲ್ಲಿ 4 ಹಡಗುಗಳು, 101 ಭಾರತೀಯ ನೌಕರರು ಇದ್ದಾರೆ. ಅಧಿಕಾರಿಗಳು ಪರಿಸ್ಥಿತಿಯನ್ನು ಸಮೀಪದಿಂದಲೇ ಗಮನಿಸುತ್ತಿದ್ದಾರೆ ಮತ್ತು ಭಾರತೀಯ ಹಡಗುಗಳು ಹಾಗೂ ನೌಕರರ ಸುರಕ್ಷತೆಗಾಗಿ ನಿರಂತರವಾಗಿ ಸಂಪರ್ಕದಲ್ಲಿದ್ದಾರೆ.

ಇಂಧನ ಕೊರತೆ ವದಂತಿ

• **ಹೊಸದಿಲ್ಲಿ:** ಪಶ್ಚಿಮ ಏಷ್ಯಾ ಸಂಕಷ್ಟದ ಹಿನ್ನೆಲೆ ದೇಶದಲ್ಲಿ ಪೆಟ್ರೋಲ್, ಡೀಸೆಲ್ ಹಾಗೂ ಎಲ್‌ಪಿಜಿ ಕೊರತೆ ಉಂಟಾಗಿದೆ ಎಂಬ ವದಂತಿಗಳ ಹಿನ್ನೆಲೆ ಜನರು ಪೆಟ್ರೋಲ್ ಬಂಕ್‌ಗಳು ಮತ್ತು ಗ್ಯಾಸ್ ಏಜೆನ್ಸಿಗಳ ಮುಂದೆ ನಿಂತಿರುವ ದೃಶ್ಯಗಳು ಗುರುವಾರವೂ ಸಾಮಾನ್ಯವಾಗಿತ್ತು. ಆದರೆ, ಕೇಂದ್ರ ಸರ್ಕಾರ ಸಂಸತ್ತಿನಲ್ಲಿ ಸ್ಪಷ್ಟಪಡಿಸಿದ್ದು, ದೇಶದಲ್ಲಿ ಇಂಧನ ಕೊರತೆ ಇಲ್ಲ ಎಂದು ಹಾಗೂ ವದಂತಿಗಳಿಗೆ ಅವಕಾಶ ಕೊಡಬಾರದು ಎಂದು ಹೇಳಿದೆ. ಆದಾಗ್ಯೂ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆಯಿಂದಾಗಿ ಹಲವೆಡೆ ಹೋಟೆಲ್‌ಗಳು ತಮ್ಮ ಕಾರ್ಯಾಚರಣೆಯನ್ನು ಕಡಿಮೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಎದುರಾಗಿದೆ. ಚೆನ್ನೈ ಸೇರಿದಂತೆ ಕೆಲವು ನಗರಗಳಲ್ಲಿ ಹೋಟೆಲ್‌ಗಳು ದೋಸೆ, ಫ್ರೈಡ್ ರೈಸ್ ಮುಂತಾದ ಹೆಚ್ಚಿನ ಇಂಧನ ಬೇಕಾಗುವ ಆಹಾರಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಿದ್ದಾಗಿ ವರದಿಯಾಗಿದೆ. ಗ್ಯಾಸ್ ಬುಕ್ಕಿಂಗ್‌ಗಾಗಿ ಜನರು ಹೆಚ್ಚಾಗಿ ಮನವಿ ಸಲ್ಲಿಸುತ್ತಿರುವುದರಿಂದ ತೈಲ ಕಂಪನಿಗಳ ಆನ್‌ಲೈನ್ ವ್ಯವಸ್ಥೆಯೂ ಒತ್ತಡಕ್ಕೆ ಒಳಗಾಗಿದೆ. ಆದರೆ, ಎರಡ್ಮೂರು ದಿನಗಳಲ್ಲಿ ಸಾಮಾನ್ಯ ಸ್ಥಿತಿಗೆ ಮರಳಲಿದೆ ಎಂದು ಹೇಳಲಾಗಿದೆ.

ಮೇ ವೇಳೆಗೆ ಎಲ್ಲಾ ಕ್ರಸ್ಟ್‌ಗೇಟ್ ಬದಲಾವಣೆ ಕಾರ್ಯ ಪೂರ್ಣ

ತುಂಗಭದ್ರಾ ಡ್ಯಾಂಗೆ ಹೊಸ ಗೇಟ್

• **ವಿಧಾನ ಪರಿಷತ್:** ತುಂಗಭದ್ರಾ ಅಣೆಕಟ್ಟೆಯ ಎಲ್ಲ ಕ್ರಸ್ಟ್‌ಗೇಟ್‌ಗಳ ಬದಲಾವಣೆ ಕಾರ್ಯವನ್ನು ರಾಜ್ಯ ಸರ್ಕಾರ ಆದ್ಯತೆ ಮೇರೆಗೆ ಕೈಗೆತ್ತಿಕೊಂಡಿದ್ದು, ಬರುವ ಮೇ ವೇಳೆಗೆ ಪೂರ್ಣಗೊಳಿಸಲಾಗುವುದು



ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ಮೇಲ್ಮನೆಯಲ್ಲಿ ಶೂನ್ಯ ವೇಳೆಯಲ್ಲಿ ಜೆಡಿಎಸ್‌ನ ಟಿ.ಎ.ಶರವಣ, ತುಂಗಭದ್ರಾ ಅಣೆಕಟ್ಟು ಕ್ರಸ್ಟ್ ಗೇಟ್ ಅಳವಡಿಕೆ ವಿಚಾರ ಪ್ರಸ್ತಾಪಿಸಿದರು. ತುಂಗಭದ್ರಾ ಅಣೆಕಟ್ಟೆಯ 33 ಗೇಟ್‌ಗಳ ದುರಸ್ತಿ ಕಾರ್ಯವನ್ನು ಹಂತ–ಹಂತವಾಗಿ ಕೈಗೊಳ್ಳಲು ಬೇಡಿಕೊಂಡರೂ ಸರ್ಕಾರ ಕೇಳದೇ ಎಲ್ಲ ಗೇಟ್‌ಗಳನ್ನು ಕಿತ್ತುಹಾಕಿದೆ. ಈವರೆಗೆ 14 ಗೇಟ್‌ಗಳ ಅಳವಡಿಕೆ ಕಾರ್ಯಮುಗಿದಿದೆ. ಇನ್ನೂ ಕ್ರಸ್ಟ್‌ಗೇಟ್‌ಗಳ ತೆರವು ಕಾರ್ಯವೂ ಬಾಕಿ ಇದೆ. ಎಲ್ಲ ಗೇಟ್ ಅಳವಡಿಕೆಗೆ ಸುಮಾರು 133 ಮಾನವ ದಿನಗಳ ಬೇಕು ಎಂದು ಸಮಸ್ಯೆ ಬಿಚ್ಚಿಟ್ಟರು. ➡ಪುಟ ೪

14 ಗೇಟ್ ಅಳವಡಿಕೆ ಕಾರ್ಯ ಪೂರ್ಣ

ಈಗಾಗಲೇ 25 ಗೇಟ್‌ಗಳ ಫ್ಯಾಬ್ರಿಕೇಶನ್ ಕೆಲಸ ಮುಗಿದಿದ್ದು, 2 ಗೇಟ್‌ಗಳ ಕೆಲಸ ನಡೆಯುತ್ತಿದೆ. 26 ಗೇಟ್‌ಗಳನ್ನು ತೆಗೆಯಲಾಗಿದ್ದು, 2 ಗೇಟ್‌ಗಳ ತೆರವುಕಾರ್ಯ ನಡೆಯುತ್ತಿದೆ. ಇದರಲ್ಲಿ 14 ಗೇಟ್‌ಗಳ ಅಳವಡಿಕೆ ಕಾರ್ಯ ಪೂರ್ಣಗೊಂಡಿದ್ದು, 3 ಗೇಟ್‌ಗಳ ಕಾರ್ಯ ಪ್ರಕ್ರಿಯೆಯಲ್ಲಿದೆ. ಮೇ ತಿಂಗಳ ಒಳಗಾಗಿ ಎಲ್ಲಾ ಗೇಟ್ ಬದಲಾವಣೆ ಮುಗಿಸಲು ವ್ಯವಸ್ಥೆ ಮಾಡಲಾಗಿದೆ ಎಂದು ಡಿ.ಕೆ. ಶಿವಕುಮಾರ್ ವಿವರಿಸಿದರು.

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಹಾಯಕ ಸಚಿವ ಜಿತಿನ್ ಹೇಳಿಕೆ

ಕಾಳುಮೆಣಸು ಉತ್ಪಾದನೆ ಹೆಚ್ಚಳ

• **ಮಡಿಕೇರಿ:** ಕೊಡಗು ಜಿಲ್ಲೆಯಲ್ಲಿ ಪ್ರಸಕ್ತ(2025–26ನೇ) ಸಾಲಿನಲ್ಲಿ ಕಾಳುಮೆಣಸು ಉತ್ಪಾದನೆ ಶೇ.16ರಷ್ಟು ಹೆಚ್ಚಾಗುವ ನಿರೀಕ್ಷೆಯಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ



ಸಚಿವಾಲಯದ ರಾಜ್ಯ ಸಚಿವ ಜಿತಿನ್ ಪ್ರಸಾದ್ ಹೇಳಿದ್ದಾರೆ.

ಕೊಡಗಿನಲ್ಲಿ ಕಾಳುಮೆಣಸು ಉತ್ಪಾದನೆಯ ಸ್ಥಿತಿ, ರಫ್ತಿನ ಪರಿಣಾಮ, ರೈತರಿಗೆ ಬೆಂಬಲ ಮತ್ತು ಕನಿಷ್ಠ ಆಮದು ಬೆಲೆಯ ಪರಿಷ್ಕರಣೆಯ ಬಗ್ಗೆ ಕೊಡಗು–ಮೈಸೂರು ಸಂಸದ ಯದುವೀರ್ ಒಡೆಯರ್ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವ ಜಿತಿನ್ ಪ್ರಸಾದ್ ಅವರು, ಕಳೆದ ವರ್ಷಕ್ಕೆ ಹೋಲಿಸಿದರೆ 2025–26ರಲ್ಲಿ ಕೊಡಗಿನಲ್ಲಿ ಕಾಳುಮೆಣಸು ಉತ್ಪಾದನೆಯು ಸುಮಾರು ಶೇ.16 ರಷ್ಟು ಹೆಚ್ಚಾಗಬಹುದು ಎಂದು ಮಾಹಿತಿ ನೀಡಿದ್ದಾರೆ. ➡ಪುಟ ೪



ಬಡ್ಡಿ ಮನ್ನಾಕ್ಕೆ ಯದುವೀರ್ ಮನವಿ

ಮತ್ತೊಂದೆಡೆ ಇತ್ತೀಚೆಗೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿಯಾಗಿರುವ ಯದುವೀರ್ ಅವರು, ಕೊಡಗು ಕಾಫಿ ಬೆಳೆಗಾರರ ಸಹಕಾರ ಸಂಘದಿಂದ ಭಾರತೀಯ ಕಾಫಿ ಮಂಡಳಿಗೆ ಪಾವತಿಸಬೇಕಿರುವ ಬಡ್ಡಿಯನ್ನು ಮನ್ನಾ ಮಾಡುವಂತೆ ಕೋರಿ ಮನವಿ ಸಲ್ಲಿಸಿದ್ದಾರೆ. ➡ಪುಟ ೪

ಯುಕೆಪಿ–3ನೇ ಹಂತದ ಆಲಮಟ್ಟಿ ಯೋಜನೆ

ಸಂತ್ರಸ್ತರಿಗೆ ಪರಿಹಾರ ಪ್ಯಾಕೇಜ್



20 ಗ್ರಾಮಗಳಿಗೆ ಪುನರ್ವಸತಿ ಬದಲು ಪರಿಹಾರ ನೀಡಲು ಚಿಂತನೆ

• **ವಿಧಾನ ಪರಿಷತ್:** ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಲು ಭೂಮಿ ಖರೀದಿಸುವಾಗ ಅನಗತ್ಯ ವಿವಾದ ಬರಬಾರದು ಎಂಬ ದೂರದೃಷ್ಟಿಯಿಂದ ಯುಕೆಪಿ–3ನೇ ಹಂತದ ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆ ಹೊಂದುವ 20 ಗ್ರಾಮ ಗಳಿಗೆ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಲ್ಪಿಸುವ ಬದಲಾಗಿ ಪರಿಹಾರ ಪ್ಯಾಕೇಜ್ ನೀಡಲು ಚಿಂತಿಸಲಾಗಿದೆ. ಈ ಸಂಬಂಧ ಆಯಾ ಶಾಸಕರು, ಜನಪ್ರತಿನಿಧಿಗಳೊಂದಿಗೆ ಸಮಾಲೋಚಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು. ➡ಪುಟ ೪

ಸಂದರ್ಶನ ದಿನಾಂಕ ಹಿಂಪಡೆದ ಆಯೋಗ

• **ಬೆಂಗಳೂರು:** ಕರ್ನಾಟಕ ಲೋಕಸೇವಾ ಆಯೋಗ ನಡೆಸಿದ ಕೆಎಎಸ್ ಪರೀಕ್ಷೆಯಲ್ಲಿ ಅಕ್ರಮ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ, ಆಯ್ಕೆಯಾಗಿದ್ದ ಅಭ್ಯರ್ಥಿಗಳಿಗೆ ನಿಗದಿಯಾಗಿದ್ದ ಸಂದರ್ಶನ ದಿನಾಂಕವನ್ನು ಕೆಪಿಎಸ್‌ಸಿ ಹಿಂಪಡೆದಿದೆ. 2024ರಲ್ಲಿ 384 ಹುದ್ದೆಗಳಿಗೆ ಪರೀಕ್ಷೆ ನಡೆಸಿದ್ದ ಕೆಪಿಎಸ್‌ಸಿ ಕಳೆದ ವಾರವಷ್ಟೇ ಮುಖ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಸಂದರ್ಶನಕ್ಕೆ 1:3 ಅನುಪಾತದಲ್ಲಿ ಅಭ್ಯರ್ಥಿಗಳ ಆಯ್ಕೆಯನ್ನು ಪ್ರಕಟಿಸಿತ್ತು. ➡ಪುಟ ೪

ಕಿರು ಸುದ್ದಿ

ಜಿಲ್ಲೆಗೆ ನಾಳೆ ಜೋಶಿ



ಧಾರವಾಡ: ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರು ಮಾ.14ರಂದು ಧಾರವಾಡ ಜಿಲ್ಲಾ ಪ್ರವಾಸ ಗೊಂಡಿದ್ದು, ಅಂದು ಮಧ್ಯಾಹ್ನ 3.30ಕ್ಕೆ ನೂತನ ಕ್ರೀಡಾ ಸಂಕೀರ್ಣ ಮತ್ತು ಅಂತಾರಾಷ್ಟ್ರೀಯ ಮಟ್ಟದ ಈಜುಕೊಳ ಲೋಕಾರ್ಪಣಾ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

ಸಂಜೆ 5.30ಕ್ಕೆ ಕರ್ನಾಟಕ ಕಾಲೇಜು ಮೈದಾನದಲ್ಲಿ ಧಾರವಾಡ ಸಂಸದ ಕ್ರೀಡಾ ಮಹೋತ್ಸವದ ಸಮಾರೋಪದಲ್ಲಿ ಪಾಲ್ಗೊಂಡು ವಿಜೇತರಿಗೆ ಪ್ರಶಸ್ತಿ ಪ್ರದಾನ ಮಾಡುವರು. ಸಂಜೆ 7.35ಕ್ಕೆ ಬೆಂಗಳೂರಿಗೆ ಮರುಪ್ರಯಾಣ ಬೆಳೆಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಾಳೆ ಉಳವಿಗೆ ಪಾದಯಾತ್ರೆ

ಹುಬ್ಬಳ್ಳಿ: ಇಲ್ಲಿಯ ಗೋಪನಕೊಪ್ಪದ ಶ್ರೀ ಸಿದ್ದೇಶ್ವರ ಸದ್ಭಕ್ತ ಮಂಡಳಿ ಶ್ರೀ ಕ್ಷೇತ್ರ ಉಳವಿಗೆ ಮಾ.14 ರಂದು ಬೆಳಗ್ಗೆ 4 ಗಂಟೆಗೆ ಶ್ರೀ ಕ್ಷೇತ್ರ ಉಳವಿಗೆ ಪಾದಯಾತ್ರೆ ಹಮ್ಮಿಕೊಂಡಿದೆ. ಗೋಪನಕೊಪ್ಪದ ಸಿದ್ದೇಶ್ವರ ದೇವಸ್ಥಾನದಿಂದ ಹೊರಟು ನಿಗದಿ ಗ್ರಾಮದಲ್ಲಿ ವಾಸ್ತವ್ಯ, ಅಲ್ಲಿಂದ ಮಾ.15 ರಂದು ಹೊರಟು ಹಳಿಯಾಳದಲ್ಲಿ ವಾಸ್ತವ್ಯ ಹಾಗೂ 16 ರಂದು ಬಾಮಣಗಿ, 17 ರಂದು ಕಣೇರಿ ಯಿಂದ ಹೊರಟು 18ರಂದು ಉಳವಿ ಚನ್ನಬಸವೇಶ್ವರ ದೇವಸ್ಥಾನ ತಲುಪಲಿದೆ ಎಂದು ಸದ್ಭಕ್ತ ಮಂಡಳಿ ಪ್ರಕಟಣೆಗೆ ತಿಳಿಸಿದೆ.

ನಿರ್ದೇಶಕರ ಆಯ್ಕೆ





ಕುಂದಗೋಳ: ಪಟ್ಟಣದ ಜಗದ್ಗುರು ಶಿವಾನಂದ ಮಠದ ಉಚಿತ ಪ್ರಸಾದ ನಿಲಯದ ನೂತನ ನಿರ್ದೇಶಕರಾಗಿ ಶಂಕರಗೌಡ ದೊಡ್ಡಮನಿ ಹಾಗೂ ಬಸವರಾಜ ರಾಮಣ್ಣ ಬ್ಯಾಹಟ್ಟಿ ಅವರನ್ನು ನೇಮಕ ಮಾಡಲಾಗಿದೆ. ಮಠದ ಆಡಳಿತ ಮಂಡಳಿಯವರು ಇವರಿಬ್ಬರನ್ನು ಪ್ರಸಾದ ನಿಲಯದ ನಿರ್ವಹಣೆಗೆ ನೇಮಕ ಮಾಡಿದ್ದು,ಭಕ್ತರಿಗೆ ಉತ್ತಮ ಸೇವೆ ಸಲ್ಲಿಸುವ ಉದ್ದೇಶದಿಂದ ಈ ಜವಾಬ್ದಾರಿಯನ್ನು ವಹಿಸಲಾಗಿದೆ. ಈ ಕುರಿತು ಪ್ರತಿಕ್ರಿಯಿಸಿದ ಶಂಕರಗೌಡ ದೊಡ್ಡಮನಿ ಹಾಗೂ ಬಸವರಾಜ್ ಬ್ಯಾಹಟ್ಟಿ, ನಮ್ಮ ಮೇಲೆ ವಿಶ್ವಾಸವಿಟ್ಟು ಉಚಿತ ಪ್ರಸಾದ ನಿಲಯದ ನಿರ್ದೇಶಕರಾಗಿ ನೇಮಿಸಿದ ಮಠದ ಶ್ರೀಗಳಿಗೆ ಹಾಗೂ ಭಕ್ತರಿಗೆ ಕೃತಜ್ಞತೆಗಳು ಎಂದು ತಿಳಿಸಿದ್ದಾರೆ.

ಉಚಿತ ಆರೋಗ್ಯ ತಪಾಸಣೆ ನಾಳೆ

ಉಪ್ಪಿನಬೆಟಗೇರಿ: ಅಮ್ಮಿನಬಾವಿ ಸಂಸ್ಥಾನ ಪಂಚಗೃಹ ಹಿರೇಮಠದ ಕರ್ತೃ ಶ್ರೀಗುರುಶಾಂತಲಿಂಗ ಶಿವಯೋಗಿಗಳ ಜಾತ್ರಾ ಮಹೋತ್ಸವದ ಅಂಗವಾಗಿ ಪ್ರಸ್ತುತ ಶ್ರೀಮಠದ ಉಭಯ ಶ್ರೀಗಳ ಸಂಕಲ್ಪದಂತೆ ಮಾ.14 ಮತ್ತು ಮಾ.15 ರಂದು ಬೆಳಗ್ಗೆ 10.30ಕ್ಕೆ ಉಚಿತ ಆರೋಗ್ಯ ತಪಾಸಣಾ ಶಿಬಿರಗಳು ಜರುಗಲಿವೆ.

ಮಾ.14 ರಂದು ಇಲ್ಲಿಯ ಮಂಜುಶ್ರೀ ನಗರದ ಎಸ್.ಡಿ.ಎಂ. ನಾರಾಯಣ ಹಾರ್ಟ ಸೆಂಟರ್ ವತಿಯಿಂದ ಹೃದಯ ರೋಗತಜ್ಞ ಡಾ. ವಿನಯಕುಮಾರ ಪಿ. ಅವರ ನೇತೃತ್ವದಲ್ಲಿ ಬಿ.ಪಿ., ಆರ್‌ಬಿಎಸ್, ಇಸಿಜಿ ಮತ್ತು ಎಕೋ ತಪಾಸಣೆಯನ್ನು ಈ ಶಿಬಿರದಲ್ಲಿ ಮಾಡಲಾಗುವುದು.

ಮಾ.15 ರಂದು ಧಾರವಾಡ ದಲ್ಲಿರುವ ಆರ್ಥೋ ಕೇರ್ ಕ್ಲಿನಿಕ್ ವತಿಯಿಂದ ಎಲುಬು-ಕೀಲು ತಜ್ಞ ವೈದ್ಯ ಡಾ.ವಿಕಾಸ ಗುರು ತಿಗಡಿ ಅವರ ನೇತೃತ್ವದಲ್ಲಿ ಮಂಡಿನೋವು, ಕೀಲು ಸವಕಳಿ, ಬೆನ್ನು ಮೂಳೆ ಮತ್ತು ಕುತ್ತಿಗೆ ನೋವು, ಕೈ-ಕಾಲು ಸೆಳೆತ, ಎಲುಬು ಹಾಗೂ ನರರೋಗಗಳು, ವಕ್ರಕಾಲು, ಸಂಧಿವಾತ, ಆರ್ಥೋಸ್ಕೋಪಿ ಚಿಕಿತ್ಸೆಗಳೂ ಸೇರಿದಂತೆ ವಿವಿಧ ತಪಾಸಣೆ ನಡೆಸಲಾಗುವುದು. ಎರಡೂ ಶಿಬಿರಗಳು ಅಮ್ಮಿನಬಾವಿ ಸಂಸ್ಥಾನ ಪಂಚಗೃಹ ಹಿರೇಮಠದ ಆವರಣದಲ್ಲಿಯೇ ನಡೆಯುತ್ತಿದೆ ಎಂದು ಮಠದ ವತಿಯಿಂದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾ.22ಕ್ಕೆ ಜೆಎಸ್ಸೆಸ್‌ನಲ್ಲಿ ಕ್ಯಾಂಪಸ್ ಸಂದರ್ಶನ

ಧಾರವಾಡ: ಸಮೀಪದ ಬೇಲೂರು ಟಾಟಾ ಮೋಟರ್ಸ್ ಕಂಪನಿ ಐಟಿಐ ಅಥವಾ ಡಿಪ್ಲೋಮಾ, ಯಾವುದೇ ಕೋರ್ಸ್ ಉತ್ತೀರ್ಣ ಅಭ್ಯರ್ಥಿಗಳಿಗೆ ಅಪ್ರೆಂಟಿಸ್ ಹುದ್ದೆಗೆ ಕ್ಯಾಂಪಸ್ ಸಂದರ್ಶನ ಮಾ.22ರಂದು ನಗರದ ಜನತಾ ಶಿಕ್ಷಣ ಸಮಿತಿ ಮಂಜುನಾಥೇಶ್ವರ ಐಟಿಐ ಕಾಲೇಜಿನಲ್ಲಿ ಏರ್ಪಡಿಸಿದೆ. ಎಸ್ಸೆಸ್ಸೆಲ್ಸಿಯಲ್ಲಿ ಶೇ.50, ಐಟಿಐ ಹಾಗೂ ಡಿಪ್ಲೋಮಾದಲ್ಲಿ ಶೇ.60ರಷ್ಟು ಅಂಕಗಳಿಸಿದ ಅಭ್ಯರ್ಥಿಗಳು ಸ್ವ-ವಿವರ, ಫೋಟೋ ಹಾಗೂ ದಾಖಲೆಗಳೊಂದಿಗೆ ಸಂದರ್ಶನಕ್ಕೆ ಹಾಜರಾಗಬೇಕು. ಮಾ.21ರೊಳಗೆ ಹೆಸರು ನೋಂದಾವಣಿಗೆ ಪ್ರಕಟಣೆ ತಿಳಿಸಿದೆ.

ದೇವಕ್ಕ ಮಲ್ಲಿಗವಾಡ ನಿಧನ



ಧಾರವಾಡ: ನಗರದ ಮಾಳಮಡ್ಡಿಯ ಗೌಳಿಗಲ್ಲಿ (ಮಾರುತಿ ನಗರದ) ನಿವಾಸಿ ದೇವಕ್ಕ ಲಕ್ಷ್ಮಣ ಮಲ್ಲಿಗವಾಡ (72) ಗುರುವಾರ ನಿಧನ ಹೊಂದಿದರು. ಇವರಿಗೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಳಗವಿದೆ.



ಧಾರವಾಡ: ಗ್ಯಾಸ್ ಬೆಲೆ ಏರಿಕೆ ಖಂಡಿಸಿ ಕೇಂದ್ರ ಸರ್ಕಾರ ವಿರುದ್ಧ ಧಾರವಾಡ ಜಿಲ್ಲಾಧಿಕಾರಿ ಕಚೇರಿ ಮುಂದೆ ಕಾಂಗ್ರೆಸ್ ಕಾರ್ಯಕರ್ತರ ಗುರುವಾರ ಪ್ರತಿಭಟನೆ ನಡಸಿದರು.

ಆತ್ಮ ನಿರ್ಭರಕ್ಕೆ ಪಿಎಂ ಸ್ವನಿಧಿ ಅಡಿಪಾಯ

ಅಳ್ನಾವರ: ಬೀದಿ ಬದಿ ವ್ಯಾಪಾರಿಗಳಿಗೆ ಯಾವುದೇ ಭದ್ರತೆ ಇಲ್ಲದೆ ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ನೀಡಲಾಗುತ್ತಿರುವ ಸಾಲ ಸೌಲಭ್ಯದಿಂದ ಆರ್ಥಿಕ ಚಟುವಟಿಕೆಗಳ ಪುನಶ್ಚೇತನಕ್ಕೆ ಸಹಕಾರಿಯಾಗಿದೆ ಎಂದು ಪಟ್ಟಣ ಪಂಚಾಯತಿ ಸಮುದಾಯ ಅಧಿಕಾರಿ ಮಹಾಂತೇಶ ಬೆಂತೂರ ಹೇಳಿದರು.

ಅಳ್ನಾವರ ಪ.ಪಂ ವತಿಯಿಂದ ಆಯೋಜಿಸಿದ್ದ ಪಿಎಂ ಸ್ವ ನಿಧಿ ಯೋಜನೆಯ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬೀದಿ ಬದಿ ವ್ಯಾಪಾರ ನಡೆಸುವ ಅನೇಕ ಕುಟುಂಬಗಳಿಗೆ ಪ್ರಧಾನ ಮಂತ್ರಿ ಬೀದಿ ಬದಿ ವ್ಯಾಪಾರಿಗಳಿಗಾಗಿ ಆತ್ಮ ನಿರ್ಭರ ಯೋಜನೆಯಡಿ ನೀಡುವ ಸಾಲ ಸೌಲತ್ತು ವ್ಯಾಪಾರಿಗಳ ಪಾಲಿಗೆ ವರದಾನವಾಗುವದರ ಜೊತೆಗೆ ಆತ್ಮ ನಿರ್ಭರ ಭಾರತ ನಿರ್ಮಾಣಕ್ಕೂ ಅಡಿಪಾಯವಾಗಿದೆ ಎಂದರು. ಪಿಎಂ ಸ್ವನಿಧಿ ಯೋಜನೆಯಡಿ ಮುಖ್ಯವಾಗಿ ಡಿಜಿಟಲ್ ವಹಿವಾಟನ್ನು ಪ್ರೋತ್ಸಾಹಿಸಲು ಆದ್ಯತೆ ನೀಡಲಾಗಿದೆ ಎಂದರು.

ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆಯ ಅಧಿಕಾರಿ ರವಿ ಮುನವಳ್ಳಿ ಮಾತನಾಡಿ, ಇಲಾಖೆಯಿಂದ ಆಯೋಜಿಸಲಾಗುವ ತರಬೇತಿಗಳ ಬಗ್ಗೆ ವಿವರಿಸಿ ಪ್ರಯೋಜನ ಪಡೆದುಕೊಳ್ಳುವಂತೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಸಮುಧಾಯ ಸಂಘಟನಾಧಿಕಾರಿ ನಾಗರಾಜ ಗುರ್ಲಹೊಸುರ, ಕಾರ್ಮಿಕ ಇಲಾಖೆಯ ಚನ್ನಮ್ಮ ಪಾಟೀಲ, ಶಿಶು ಅಭಿವೃದ್ಧಿ ಯೋಜನಾ ಇಲಾಖೆಯ ಶಿಲ್ಪಾ ತರಗಾರ, ಡಾ.ನವೀನಗೌಡ ಪಾಟೀಲ ಹಾಗೂ ವಿವಿಧ ರಾಷ್ಟ್ರೀಕೃತ ಬ್ಯಾಂಕುಗಳ ಅಧಿಕಾರಿಗಳು ಉಪಸ್ಥಿತರಿದ್ದರು.



ಅಳ್ನಾವರ: ಅಳ್ನಾವರ ಪ.ಪಂ ವತಿಯಿಂದ ಆಯೋಜಿಸಿದ್ದ ಪಿಎಂ ಸ್ವನಿಧಿ ಯೋಜನೆಯ ಕಾರ್ಯಾಗಾರವನ್ನು ಪಟ್ಟಣ ಪಂಚಾಯತಿ ಸಮುದಾಯ ಅಧಿಕಾರಿ ಮಹಾಂತೇಶ ಬೆಂತೂರ ಉದ್ಘಾಟಿಸಿದರು.

ಸಾಂಪ್ರದಾಯಿಕ ಕಟ್ಟಿಗೆ ಒಲೆಗಳಿಗೆ ಮೊರೆ

ಹುಬ್ಬಳ್ಳಿ: ಯುದ್ಧ ಹಿನ್ನೆಲೆ ಎಲ್‌ಪಿಜಿ ಸಿಲಿಂಡರ್‌ಗಳ ಸರಬರಾಜು ಸ್ಥಗಿತವಾಗಿರುವ ಕಾರಣ ವಾಣಿಜ್ಯ ನಗರಿ ಹುಬ್ಬಳ್ಳಿಯ ಕೆಲವು ಹೋಟೆಲ್‌ಗಳ ಮಾಲೀಕರು ಸಾಂಪ್ರದಾಯಿಕ ಕಟ್ಟಿಗೆ ಒಲೆಗಳ ಮೊರೆ ಹೋಗಿವೆ. ಸದ್ಯ ಬೆರಳಣಿಕೆ ಎಷ್ಟು ಹೋಟೆಲ್‌ಗಳು ಬಂದ್ ಆಗಿದ್ದು, ಇನ್ನೂ ಎರಡು ದಿನಗಳಲ್ಲಿ ಎಲ್ಲ ಹೋಟೆಲ್‌ಗಳ ಬಂದ ಆಗುವ ಪರಿಸ್ಥಿತಿ ಎದುರಾಗಿದೆ.

ಕೆಲವು ಹೋಟೆಲ್‌ಗಳು ದೋಸೆಯಂತಹ ಹೆಚ್ಚು ಅನಿಲ ಬೇಡುವ ತಿಂಡಿ, ಆಹಾರ ಪದಾರ್ಥಗಳನ್ನು ಮೆನ್ಯೂವಿನಿಂದ ಕೈಬಿಡಲಾಗಿದ್ದು, ರೈಸ್, ಪುಲಾವು, ಸಾಂಬರಗಳಂಥ ಪದಾರ್ಥಗಳನ್ನು ಮಾಡಿ ಗ್ರಾಹಕರ ಹಸಿವು ನಿಗಿಸುತ್ತಿದ್ದಾರೆ. ಇಲ್ಲಿಯ ಹೊಸೂರಿನಲ್ಲಿರುವ ಕೆನರಾ ಹೋಟೆಲ್‌ನಲ್ಲಿ ಮಂಗಳವಾರ ಪದಾರ್ಥಗಳ ತಯಾರಿ ಕಟ್ಟಿಗೆ ಒಲೆಯಿಂದಲೇ ಮಾಡಲಾಗಿದೆ. ಇಲ್ಲಿ ನಿತ್ಯ 5-6 ಸಿಲಿಂಡರ್ ಬಳಕೆಯಾಗುತ್ತಿತ್ತು. ಅದಕ್ಕೆ ಪರ್ಯಾಯವಾಗಿ ಕಟ್ಟಿಗೆ ಒಲೆಯಲ್ಲಿ ಅಡುಗೆ ಮಾಡುತ್ತಿದ್ದಾರೆ. ಒಲೆಗಾಗಿ ನಿತ್ಯ 3 ಕ್ವಿಂಟಾಲ್ ಕಟ್ಟಿಗೆ ಬಳಕೆ ಮಾಡಿಕೊಳ್ಳುತ್ತಿದೆ. 1 ಕ್ವಿಂಟಲ್ ಕಟ್ಟಿಗೆಗೆ 800 ರೂ. ದರವಿದೆ. ಆದರೆ ಅಡುಗೆ ಮಾಡುವ ಸಿಬ್ಬಂದಿ ಹಿಂದೇಟು ಹಾಕುತ್ತಿದ್ದಾರೆ ಎಂದ ಹೋಟೆಲ್ ಮಾಲೀಕರು ತಿಳಿಸಿದರು.



- ಏಜೆನ್ಸಿಗಳು ವಾಣಿಜ್ಯ ಸಿಲಿಂಡರ್ ಸ್ಥಗಿತ ಮಾಡಿದ ಹಿನ್ನೆಲೆ ಮದುವೆ ಹಾಗೂ ಶುಭ ಸಮಾರಂಭಗಳಿಗೂ ಸಮಸ್ಯೆ
- ಎರಡು ಮೂರು ತಿಂಗಳ ಹಿಂದೆ ಸಮಾರಂಭ ಮಾಡಲು ನಿರ್ಧರಿಸಿದ ಜನರು ಈಗ ಕೊನೆಯ ಕ್ಷಣದಲ್ಲಿ ಪರದಾಡುವಂತಾಗಿದೆ
- ಬಹುತೇಕರು ಖಾಸಗಿ ಏಜೆನ್ಸಿಗಳ ಮೊರೆ ಹೋಗುತ್ತಿದ್ದಾರೆ. ಕೆಲವರು ಗ್ಯಾಜ್ ಏಜೆನ್ಸಿಗಳ ಮುಂದೆ ನಿಲ್ಲುವ ಸ್ಥಿತಿ

> ಸರಿಯಾಗಿ ಸಿಲಿಂಡರ್ ಪೂರೈಕೆ ಆಗದಿರುವುದರಿಂದ ಸೌದೆ ಒಲೆ ಮೇಲೆ ಅಡುಗೆ ಮಾಡಲು ಪ್ರಾರಂಭಿಸಿದ್ದೇವೆ. ಏಜೆನ್ಸಿಗಳು ಗ್ಯಾಸ್ ಸಿಲಿಂಡರ್‌ಗಳ ನೀಡುವುದನ್ನು ಸ್ಥಗಿತ ಮಾಡಿದ್ದಾರೆ. ಖಾಸಗಿ ಗ್ಯಾಸ್ ಏಜೆನ್ಸಿಯವರು 2-3 ಪಟ್ಟು ದರ ಹೆಚ್ಚಿಸಿ ಪೂರೈಕೆ ಮಾಡುತ್ತಿದ್ದಾರೆ. ಪ್ರತಿ ದಿನ 5-6 ಸಿಲಿಂಡರ್ ಖರ್ಚಾಗುತ್ತಿತ್ತು.
>
> ■ **ನವೀನ,** ಕೆನರಾ ಹೋಟೆಲ್‌ನ ಮ್ಯಾನೇಜರ್

ಅಟೋ ಸಂಚಾರ ಸ್ಥಗಿತ

ಎಲ್‌ಪಿಜಿ ಸಿಗದ ಕಾರಣ ನಗರದಲ್ಲಿ ಕೆಲವು ಅಟೋಗಳು ಸಂಚಾರ ಸ್ಥಗಿತವಾಗಿವೆ. ವಾರದ ಹಿಂದಷ್ಟೇ 63ಕ್ಕೆ ದೊರೆಯುತ್ತಿದ್ದ ಒಂದು ಲೀಟರ್ ಎಲ್‌ಪಿಜಿ, ಮಂಗಳವಾರದಿಂದ 75ಕ್ಕೆ ದಿಢೀರ್ ಏರಿಕೆಯಾಗಿದೆ. ಪರಿಣಾಮ ಆಟೋ ಬಾಡಿಗೆ ದರವೂ ಒಮ್ಮೆಲೆ ಹೆಚ್ಚಳವಾಗಿದೆ. ಈಗ ಎಲ್‌ಪಿಜಿ ಸಹ ಸಿಗುತ್ತಿಲ್ಲ ಎಂದು ಆಟೋ ಚಾಲಕರೊಬ್ಬರು ತಿಳಿಸಿದರು. ಚನ್ನಮ್ಮ ವೃತ್ತದಿಂದ ಸಿದ್ಧಾರೂಢಮಠ, ಆನಂದನಗರ, ಗೋಪನಕೊಪ್ಪ ಸೇರಿದಂತೆ ವಿವಿಧೆಡೆ ಒಬ್ಬ ಪ್ರಯಾಣಿಕರಿಂದ 10 ಪಡೆದು ಆಟೊ ಓಡಿಸುತ್ತಿದ್ದರು. ಇದೀಗ 20 ನಿಗದಿಪಡಿಸಲಾಗಿದೆ. ಅನಿವಾರ್ಯವಾಗಿ ಬೇರೆ ಪ್ರದೇಶಗಳಿಗೂ ತೆರಳಲು ಬಾಡಿಗೆ ಹೆಚ್ಚಳ ಮಾಡಲಾಗಿದೆ ಎಂದು ಹೇಳಿದರು.

ವದಂತಿ ನಂಬದಿರಿ



ಧಾರವಾಡ: ಜಿಲ್ಲೆಯ ಸಾರ್ವಜನಿಕರು, ಗೃಹಬಳಕೆ ಅನಿಲ ಗ್ರಾಹಕರು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವದಂತಿಗಳಿಗೆ ಕಿವಿಗೊಡಬಾರದು ಎಂದು ಜಿಲ್ಲಾಧಿಕಾರಿ ಸ್ನೇಹಲ್ ಆರ್. ತಿಳಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ದೇಶಾದ್ಯಂತ ಎಲ್‌ಪಿಜಿ ಉತ್ಪಾದನೆ ಮತ್ತು ಬಾಟಲಿಂಗ್ ಎರಡೂ ಹೆಚ್ಚುವರಿಂದ ಸಾಕಷ್ಟು ಪ್ರಮಾಣದಲ್ಲಿ ಸಿಲಿಂಡರ್ ದಾಸ್ತಾನುಗಳು ಇವೆ ಎಂದು ಹೇಳಿದ್ದಾರೆ.

ಹೆಚ್ಚಿನ ಗ್ರಾಹಕರು ಮುಂಗಡ ಬುಕ್ಕಿಂಗ್ ಮಾಡುತ್ತಿರುವ ಹಿನ್ನೆಲೆ ಐವಿಆರ್‌ಎಸ್, ಮಿಸಡ್ ಕಾಲ್ ಮಾಡುವ ವ್ಯವಸ್ಥೆಯಲ್ಲಿ ಸಂಚಾರ ದಟ್ಟಣೆ ಉಂಟಾಗಿ, ಸಿಸ್ಟಮ್ ಕಾರ್ಯನಿರ್ವಹಿಸುತ್ತಿಲ್ಲ ಎಂದಿದ್ದಾರೆ. ಐಒಸಿಎಲ್, ಎಚ್‌ಪಿಸಿಎಲ್, ಬಿಪಿಸಿಎಲ್, ಎಲ್‌ಪಿಜಿ ಕಂಪನಿಗಳು ಗ್ರಾಹಕರಿಗೆ 6 ಬುಕ್ಕಿಂಗ್ ವಿಧಾನ ಕಲ್ಪಿಸಿವೆ. ಗೃಹಬಳಕೆ ಸಿಲಿಂಡರ್ ಬೇಡಿಕೆಗೆ 25 ದಿನಗಳ ಬಳಿಕ ಬುಕ್ ಮಾಡಲು ತಿಳಿಸಿದ್ದಾರೆ. ಗ್ರಾಹಕರು ಸಮಸ್ಯೆಗೆ ಧಾರವಾಡ ಸಹಾಯಕ ನಿರ್ದೇಶಕರು-9164603114, ಮತ್ತು ಆಹಾರ ನಿರೀಕ್ಷಕ-8296702244, ಧಾರವಾಡ ಗ್ರಾಮೀಣ ಆಹಾರ ಶಿರಸ್ತೇದಾರ-9845202400, ಅಳ್ನಾವರ-9448221892, ಹುಬ್ಬಳ್ಳಿ ನಗರ-9035074105, ಹುಬ್ಬಳ್ಳಿ ಗ್ರಾಮೀಣ-9482532326, ಕಲಘಟಗಿ -6364304842, ಕುಂದಗೋಳ-9448324052, ಅಣ್ಣಿಗೇರಿ-9620734505, ನವಲಗುಂದ-8694971257 ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲೆಯ ಜಂಟಿ ನಿರ್ದೇಶಕರ ಕಚೇರಿಯ ದೂ:0836-2444594ಕ್ಕೆ ಸಂಪರ್ಕಿಸಲು ತಿಳಿಸಿದ್ದಾರೆ.

ನೇಮಕಾತಿ ಆದೇಶ ರದ್ದುಗೊಳಿಸಿ: ಬೊಮ್ಮನಪಾಡ

ಧಾರವಾಡ: ಪರಿಶಿಷ್ಟ ಜಾತಿ ಒಳಮೀಸಲಾತಿ ಜಾರಿಗೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ. ಒಳಮೀಸಲಾತಿ ಗೊಂದಲ ನಿವಾರಿಸದೆ, ಹೊರಡಿಸಿದ 56 ಸಾವಿರ ನೇಮಕಾತಿ ಆದೇಶ ರದ್ದುಗೊಳಿಸಲು ಬಂಜಾರ ಸೇವಾ ಸಂಘದ ಗೌರವ ಅಧ್ಯಕ್ಷ ಸಿ.ಪಿ. ಬೊಮ್ಮನಪಾಡ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಒಳಮೀಸಲಾತಿ ಜಾರಿಗೊಳಿಸಿ, ಈ ಎ,ಬಿ,ಸಿ ಅಡಿ ಮೀಸಲಾತಿ ನೀಡಿ ನೇಮಕಾತಿ ಮಾಡಿದರೆ, ಬಂಜಾರ, ಭೋವಿ, ಕೊರಮ ಮತ್ತು ಕೊರಚ ಸಮುದಾಯಕ್ಕೆ ಅನ್ಯಾಯವಾಗಲಿದೆ ಎಂದು ಅಳಲು ತೋಡಿಕೊಂಡರು.

1978ರಲ್ಲಿಯೇ ಬಂಜಾರ, ಭೋವಿ, ಕೊರಮ ಮತ್ತು ಕೊರಚ ಸಮುದಾಯಕ್ಕೆ ಮೀಸಲಾತಿ ಬಂದರೂ, ಅದರ ಸೌಲಭ್ಯಗಳು ಮಾತ್ರ ದೊರೆತಿಲ್ಲ. ಹೀಗಾಗಿ ಈ ಸಮುದಾಯಗಳು ಇಂದಿಗೂ ಶೈಕ್ಷಣಿಕ, ಆರ್ಥಿಕ, ಸಮಾಜಿಕವಾಗಿ ಹಿಂದುಳಿದಿವೆ ಎಂದರು.

ಸರ್ಕಾರ 1990ರ ರೋಸ್ಟರ್ ಅನುಸಾರ ನೇಮಕಾತಿಗೆ ಮುಂದಾದರೆ, ಕೆಲವು ಸಮುದಾಯಗಳು ಎ,ಬಿ,ಸಿ ಅನುಸಾರ ನೇಮಕಾತಿಗೆ ಒತ್ತಡ ಹಾಕುವುದು ಸಲ್ಲ. ಪರಿಶಿಷ್ಟ ಜಾತಿ ಒಳಮೀಸಲಾತಿ ಇಂದಿಗೂ ಗೊಂದಲದ ಗೂಡಾಗಿದೆ. ಹಳೆಯ ಮಾನದಂಡದಡಿ ಕೈಗೊಂಡ ನೇಮಕಾತಿ ಪ್ರಕ್ರಿಯೆ ಸರಿಯಾಗಿದೆ ಎಂದ ಅವರು, ಶಿಕ್ಷಣ ಹಾಗೂ ಉದ್ಯೋಗಕ್ಕೆ ಒದಗಿಸಿದ ಆಂತರಿಕ ಮೀಸಲಾತಿ ಇತರೆ ಯೋಜನೆಗಳು ಮತ್ತು ಸೌಲಭ್ಯಕ್ಕೂ ವಿತರಿಸಿರುವುದು ಕಾನೂನು ಬಾಹಿರ. ಪರಿಶಿಷ್ಟ ಜಾತಿಗೆ ಎ,ಬಿ,ಸಿ ನಮೂದಿಸಿ ಜಾತಿಪ್ರಮಾಣ ಪತ್ರ ನೀಡುವ ಅಽಸೂಚನೆ ಹಿಂಪಡೆಯಬೇಕು. 56 ಸಾವಿರ ಹುದ್ದೆಗಳನ್ನು ಹಳೆಯ ರೋಸ್ಟರ್ ಅನುಸಾರವೇ ಮಾಡಬೇಕು. ಇಲ್ಲವೇ ನೇಮಕಾತಿ ಆದೇಶ ರದ್ದುಗೊಳಿಸುವಂತೆಯೂ ಸರ್ಕಾರಕ್ಕೆ ಆಗ್ರಹಿಸಿದರು.

ಒಂದು ವೇಳೆ ಸರ್ಕಾರವು ಒತ್ತಡಕ್ಕೆ ಮಣಿದು ಎ.ಬಿ.ಸಿ ಆಧಾರಿಸಿಯೇ 56 ಸಾವಿರ ನೇಮಕಾತಿ ಪ್ರಕ್ರಿಯೆಗೆ ಮುಂದಾದರೆ, ಕಾನೂನು ಹೋರಾಟ ಮಾಡಲಿದೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಆರ್.ಎಲ್. ಚವ್ಹಾಣ, ಶಿವಾನಂದ ಭಜಂತ್ರಿ, ನಾರಾಯಣ ಭಜಂತ್ರಿ, ಕೃಷ್ಣಾ ಪವಾರ, ಸೋಮಶೇಖರ ಕನ್ನಡಿ ಇದ್ದರು.



ಇಂದಿನಿಂದ ಜಂಗಿ ಕುಸ್ತಿ ಸ್ಪರ್ಧೆ: ಅಮೃತ ದೇಸಾಯಿ

ಧಾರವಾಡ: ದೇಶಿ ಕ್ರೀಡೆ ಪ್ರೋತ್ಸಾಹಕ್ಕೆ ಸಂಸದರ ಕ್ರೀಡಾ ಮಹೋತ್ಸವದ ನಿಮಿತ್ತ ತೂಕದ ಆಧಾರದ ಅನ್ವಯ ಜಂಗಿ ಕುಸ್ತಿ ಸ್ಪರ್ಧೆಗಳು ಮಾ.13 ಮತ್ತು 14ರಂದು ಎರಡು ದಿನಗಳು ನಗರದ ಕರ್ನಾಟಕ ಮಹಾವಿದ್ಯಾಲಯದ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ.

ಗುರುವಾರ ಮಾಜಿ ಶಾಸಕ ಅಮೃತ ದೇಸಾಯಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜಂಗಿ ಕುಸ್ತಿ ಸಾಂಪ್ರದಾಯಿಕ ಪಂದ್ಯಾವಳಿ. ಪ್ರಧಾನಿ ಖೇಲೋ ಇಂಡಿಯಾ, ಫಿಟ್ ಇಂಡಿಯಾ ಯೋಜನೆ ಅಡಿಯಲ್ಲಿ ಈ ಕ್ರೀಡಾ ಮಹೋತ್ಸವ ಆಯೋಜಿಸಲಾಗಿದೆ ಎಂದರು. ಈ ಸ್ಪರ್ಧೆಯ ವೇದಿಕೆಯಲ್ಲಿ ಅಂತಾರಾಷ್ಟ್ರೀಯ ಹಾಗೂ ರಾಷ್ಟ್ರೀಯ ಮಟ್ಟದ ಕುಸ್ತಿ ಸ್ಪರ್ಧೆಗಳು ನಡೆಯಲಿದ್ದು, ಕರ್ನಾಟಕ, ಮಹಾರಾಷ್ಟ್ರ, ಹರಿಯಾಣ, ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳಿಂದಲೇ 73 ಜೋಡಿ ಪೈಲ್ವಾನರು ಪಾಲ್ಗೊಳ್ಳುವುದಾಗಿ ತಿಳಿಸಿದರು.

ಅಂತಾರಾಷ್ಟ್ರೀಯ ಕುಸ್ತಿಪಟುಗಳಾದ ಮಿರ್ಜಾ ಇರಾನ್, ಪುಷ್ಪೇಂದ್ರ ಹರಿಯಾಣ, ಶಿವಯ್ಯ ಪೂಜಾರಿ, ಕಾಮೇಶ ಪಾಟೀಲ, ಶಿವಾನಂದ ದಡ್ಡಿ ಹಾಗೂ ಮಹಾರಾಷ್ಟ್ರ ಚಾಂಪಿಯನ್ ಪ್ರದೀಪ ಠಾಕೂರ ಕುಸ್ತಿ ಸ್ಪರ್ಧೆಯ ಪ್ರಮುಖ ಕೇಂದ್ರ ಬಿಂದುಗಳು ಎಂದರು. 17 ವರ್ಷದ ಒಳಗಿನ ಹಾಗೂ ಮೇಲ್ಪಟ್ಟ ಬಾಲಕರ ಮತ್ತು ಬಾಲಕಿಯರ ತೂಕದ ಆಧಾರದಡಿ ಕುಸ್ತಿ ಸ್ಪರ್ಧೆಗಳು ಹಾಗೂ ಪುರುಷರ ಸೀನಿಯರ್ ವಿಭಾಗದ ಕುಸ್ತಿ ಸ್ಪರ್ಧೆಗಳು ಜರುಗಲಿದ್ದು, ಒಟ್ಟು ರೂ.30 ಇನಾಮು ಜೊತೆ ಪದಕ ನೀಡುವುದಾಗಿ ತಿಳಿಸಿದರು.

ಸ್ಪರ್ಧೆಯ ಕೊನೆಯ ದಿನ ಬಹುಮಾನ ವಿತರಣೆಗೆ ಭಾರತ ಸರ್ಕಾರದ ಕೇಂದ್ರ ಯುವಜನ ವ್ಯವಹಾರ ಮತ್ತು ಕ್ರೀಡಾ ಇಲಾಖೆಯ ಸಚಿವ ಮನ್ಸುಖ್ ಮಾಂಡವೀಯ, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಪಾಲ್ಗೊಳ್ಳುವುದಾಗಿಯೂ ಮಾಹಿತಿ ನೀಡಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ನಾಗರಾಜ ಛಬ್ಬಿ, ಪಾಲಿಕೆ ಮೇಯರ್ ಜ್ಯೋತಿ ಪಾಟೀಲ, ಉಪಮಯೇರ್ ಸಂತೋಷ ಚವ್ಹಾಣ, ಸಭಾ ನಾಯಕ ಈರೇಶ ಅಂಚಟಗೇರಿ, ಗ್ರಾಮಾಂತರ ಜಿಲ್ಲಾಧ್ಯಕ್ಷ ನಿಂಗಪ್ಪ ಸುತಗಟ್ಟಿ ಇದ್ದರು.

ಕುಸ್ತಿ ಅಖಾಡಕ್ಕೆ ಪೂಜೆ

ಕರ್ನಾಟಕ ಕಾಲೇಜಿನ ಮೈದಾನದಲ್ಲಿ ಸಿದ್ಧಪಡಿಸಿದ ಜಂಗಿ ಕುಸ್ತಿ ಅಖಾಡಕ್ಕೆ ಮಾಜಿ ಶಾಸಕ ಅಮೃತ ದೇಸಾಯಿ, ಮೇಯರ್ ಜ್ಯೋತಿ ಪಾಟೀಲ, ಸಭಾನಾಯಕ ಈರೇಶ ಅಂಚಟಗೇರಿ, ಮುಖಂಡರು ಪೂಜೆ ನೆರವೇರಿಸಿ, ಪಂದ್ಯಗಳ ಯಶಸ್ವಿಗೆ ಪ್ರಾರ್ಥಿಸಿದರು.



ಹಿಂದು ಸಮ್ಮೇಳನ: ಶೋಭಾಯಾತ್ರೆ

ಅಣ್ಣಿಗೇರಿ: ಹಿಂದೂ ಸಮ್ಮೇಳನದ ಅಂಗವಾಗಿ ಭಾರತಮಾತೆಯ ಭಾವಚಿತ್ರದ ಶೋಭಾಯಾತ್ರೆಯು ನಗರದ ಸ್ವಾಮಿ ವಿವೇಕಾನಂದ ಸರ್ಕಲ್ ನಿಂದ ಗೋಮಾತೆಯ ಪೂಜೆಯೊಂದಿಗೆ ಆರಂಭವಾಗಿ ಚಾಡಗೇರಿ ಓಣಿಯಿಂದ ಅಮೃತೇಶ್ವರ ಮಹಾದ್ವಾರ ವೀರರಾಣಿ ಕಿತ್ತೂರ್ ರಾಣಿ ಚನ್ನಮ್ಮ ವೃತ್ತದ ಮೂಲಕ ನಗರದ ಪ್ರಮುಖ ರಾಜಬೀದಿಗಳಲ್ಲಿ ಸಂಚರಿಸಿ ವಾಲ್ಮೀಕಿ ನಗರದ ರಾಜಯೋಗಿ ತೋಟಪ್ಪ ದೇಸಾಯಿ ವೇದಿಕೆ ಬಳಿ ಕಾರ್ಯಕ್ರಮ ಜರುಗಿತು.

ಶೋಭಾಯಾತ್ರೆಯ ಉದ್ದಕ್ಕೂ ರಂಗೋಲಿ ಬಿಡಿಸಿ ತಳಿರು ತೋರಣ ಕಟ್ಟಿ ಶೃಂಗರಿಸಲಾಗಿತ್ತು. ಭಾರತ ಮಾತೆಯ ಹಾಗೂ ಮಹಾಪುರುಷರ ಭಾವಚಿತ್ರಗಳಿಗೆ ಪುಷ್ಪಾರ್ಪಣೆ ಮಾಡಿದರು. ಮಕ್ಕಳು ವಿವಿಧ ಮಹಾನ್ ದೇಶಭಕ್ತರ ಹಾಗೂ ಮಹಾಪುರುಷರ ವೇಷಧರಿಸಿದ್ದರು. ಡಿವೈಡರ್ ರಸ್ತೆಗೆ ಮತ್ತು ಕಂಬಗಳಿಗೆ ಕೇಸರಿ ಬಣ್ಣದ ಬಟ್ಟೆ ಕಮಾನುಗಳು ಭಗವದ್ವಜ ಹಾಗೂ ಕಟೌಟ್ ಕಟ್ಟಲಾಗಿತ್ತು ಮತ್ತು ಮಕ್ಕಳು ಜೈ ಶ್ರೀ ರಾಮ್ ಜೈ ಜೈ ಶ್ರೀ ರಾಮ್, ಜೈ ಹನುಮಾನ್ ಘೋಷಣೆಗಳ ಕೂಗಿದರು ಭಗತ್ ಸಿಂಗ್ ಛತ್ರಪತಿ ಶಿವಾಜಿ ಮಹಾರಾಜರ,ಕಿತ್ತೂರ್ ರಾಣಿ ಚನ್ನಮ್ಮ, ಡಾ. ಬಿ.ಆರ್. ಅಂಬೇಡ್ಕರ್, ರೇಣುಕಾಚಾರ್ಯರ ಮತ್ತು ವಿವಿಧ ಮಹಾಪುರುಷರ ಭಾವಚಿತ್ರದ ಮೆರವಣಿಗೆ ಅದ್ದೂರಿಯಾಗಿ ನಡೆಯಿತು.



ಶಿವಯೋಗಿ ಸುರಕೋಡ, ಷಣ್ಮುಖ ಗುರಿಕಾರ್, ಚಂಬಣ್ಣ ಸುರಕೋಡ್, ಮಹಾಬಲೇಶ್ವರ ಹೆಬಸೂರ, ಅರ್ಜುನ್ ಕಲಾಲ್, ಶಿವಶಂಕರ್ ಕಲ್ಲೂರ್, ಭರತೇಶ ಜೈನ್, ಅರುಣ್ ಕೊಪ್ಪದ್, ವಿಶ್ವನಾಥ ಶಿರೋಳ, ಮಹೇಶ ಸುಣಗಾರ, ಮುತ್ತು ಕೊಪ್ಪದ್ ಇದ್ದರು. ಇನ್ನು ಅನೇಕ ಹಿಂದೂ ಸಮಾಜದ ಸಂಘ ಸಂಸ್ಥೆಗಳು ಸುತ್ತಮುತ್ತಲಿನ ಗ್ರಾಮಗಳಿಂದ ಆಗಮಿಸಿದ ಹಿಂದೂ ಸಮಾಜದ ಬಂಧುಗಳು ಮೆರವಣಿಗೆಯ ಮಧ್ಯದಲ್ಲಿ ಮಹಾಬಲೇಶ್ವರ ಹೆಬಸೂರ ಮತ್ತು ಅಂಜುಮನ್ ಸಂಸ್ಥೆಯ ವತಿಯಿಂದ ತಂಪು ಪಾನೀಯ ವಿತರಣೆ ಮಾಡಿದರು.

ಮೇ 12ರಿಂದ ಹಿರೇಮಠದ ನೂತನ ಶ್ರೀಗಳ ಪಟ್ಟಾಧಿಕಾರ ಮಹೋತ್ಸವ

ನವಲಗುಂದ: ಪಟ್ಟಣದ ಶ್ರೀ ಸಂಸ್ಥಾನ ಪಂಚಗ್ರಹ ಹಿರೇಮಠದ ನೂತನ ಶ್ರೀಗಳ ಪಟ್ಟಾಧಿಕಾರ ಮಹೋತ್ಸವವನ್ನು ಮೇ 12ಮತ್ತು 13ರಂದು ಜರುಗಿಸಲಾಗುವುದು. ಈ ಕಾರ್ಯಕ್ರಮದಲ್ಲಿ ಪಂಚಪೀಠಾಧೀಶ್ವರರು ಭಾಗಿಯಾಗುವರು ಎಂದು ಷ.ಬ್ರ. ಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಅವರು ಬುಧವಾರ ಜರುಗಿದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಪಟ್ಟಾಧಿಕಾರ ಮಹೋತ್ಸವದ ಮೊದಲು ಮೇ 1ರಿಂದ ಮನಕವಾಡದ ಅಭಿನವ ಮೃತ್ಯುಂಜಯ ಸ್ವಾಮೀಜಿ ಹನ್ನೊಂದು ದಿನಗಳ ಕಾಲ ಪ್ರವಚನ ನಡೆಯುವದು. ಅಲ್ಲದೇ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುವುದು ಎಂದು ತಿಳಿಸಿದರು.

ಇದೇ ವೇಳೆ ಪಟ್ಟಾಧಿಕಾರ ಮಹೋತ್ಸವದ ಪತ್ರಿಕೆ ಹಾಗೂ ದೇಣಿಗೆ ರಸೀದಿ ಬಿಡುಗಡೆ ಮಾಡುವ ಮೂಲಕ ಮಹೋತ್ಸವದ ಕಾರ್ಯಗಳಿಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ನಿಯೋಜಿತ ಉತ್ತರಾಧಿಕಾರಿ ವೀರಬಸವದೇವರು, ಪಾಂಡಪ್ಪ ಕೋನರೆಡ್ಡಿ, ಗಂಗಾಧರ ಹಳ್ಳದ, ಶ್ರೀಶೈಲಯ್ಯ ಮೂಲಿಮನಿ, ಶಿವಾಜಿ ಕಲಾಲ, ಶರ್ಮಾ ಹಿರೇಮಠ, ವೀರೇಶ ಜಾವೂರಮಠ, ಎಂ.ಡಿ.ಕುಲಕರ್ಣಿ, ಕಲ್ಲಯ್ಯ ಹೊಸಮನಿ, ಯಲ್ಲಪ್ಪಗೌಡ ಪಾಟೀಲ, ಕೊಟ್ರೇಶ ಹಿರೇಮಠ, ಶಂಕರಗೌಡ ಪಾಟೀಲ, ಈರಣ್ಣ ಚವಡಿ, ಆರ್.ಎಚ್.ನೇಗಲಿ, ಯಲ್ಲಪ್ಪ ಭೋವಿ, ಮಲ್ಲಿಕಾರ್ಜುನ ಜಲಾಧಿ, ಬಸವರಾಜ ಹಳ್ಳದ, ಬಾಬು ಹುರಕಡ್ಲಿ, ಶಮ್ಸುದ್ದೀನ್ ಕಿರೆಸೂರ, ಬಸಣ್ಣ ಈಟಿ, ಬಸವರಾಜ ಹೂಗಾರ, ಟಿ. ಎಸ್. ಪೂಜಾರ, ಈರಣ್ಣ ಪೂಜಾರ, ಮಲ್ಲು ಸುಬೇಧಾರಮಠ ಸೇರಿದಂತೆ ಅನೇಕರು ಇದ್ದರು.



ಅಧ್ಯಾಪಕರ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮ



ಹುಬ್ಬಳ್ಳಿ: ಕೆಎಲ್‌ಇ ಸೊಸೈಟಿಯ ಶ್ರೀ ಕಾಡಸಿದ್ದೇಶ್ವರ ಕಲಾ ಕಾಲೇಜು ಮತ್ತು ಎಚ್.ಎಸ್.ಕೋತಂಬರಿ ವಿಜ್ಞಾನ ಸಂಸ್ಥೆ ವಿದ್ಯಾನಗರ ಹುಬ್ಬಳ್ಳಿಯಲ್ಲಿ ಅಧ್ಯಾಪಕರಿಗಾಗಿ ವಿಶೇಷವಾದ ಅಧ್ಯಾಪಕರ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಫಲಿತಾಂಶ ಆಧಾರಿತ ಶಿಕ್ಷಣ ಮತ್ತು ಪರಿಣಾಮಕಾರಿ ತರಗತಿ ನಿರ್ವಹಣೆ: ಗುಣಮಟ್ಟದ ಬೋಧನೆಗಾಗಿ ತಂತ್ರಗಳು ಎಂಬ ವಿಷಯದ ಮೇಲೆ ಉಪನ್ಯಾಸ ನಡೆಯಿತು. ಈ ಕಾರ್ಯಕ್ರಮಕ್ಕೆ ಮುಖ್ಯ ಸಂಪನ್ಮೂಲ ವ್ಯಕ್ತಿಯಾಗಿ ಚಾಣಕ್ಯ ವಿಶ್ವವಿದ್ಯಾಲಯದ ಕಲಾ, ಮಾನವೀಯ ಮತ್ತು ಸಮಾಜ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಪ್ರೊ.ಸಂದೀಪ್ ನಾಯರ್ ಭಾಗವಹಿಸಿದ್ದರು. ಕಾಲೇಜಿನ ವಿವಿಧ ವಿಭಾಗಗಳ ಉಪನ್ಯಾಸಕರು ಭಾಗವಹಿಸಿ ಉಪನ್ಯಾಸದಿಂದ ಮಹತ್ವದ ಮಾಹಿತಿಯನ್ನು ಪಡೆದುಕೊಂಡರು. ಸಂಯೋಜಕ ಡಾ. ಸಿದ್ದೇಶ್ ಎಂ. ಬಿ. ಅವರು ನಿರ್ವಹಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಸುಮಂಗಲಾ ಬಿ. ಪಾಟೀಲ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಸಮಾರಂಭಕ್ಕೆ ಶೋಭಾ ಕರಂದ್ಲಾಜೆಗೆ ಆಹ್ವಾನ

ಹುಬ್ಬಳ್ಳಿ: ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಪದಾಧಿಕಾರಿಗಳು ಗುರುವಾರ ಕೇಂದ್ರ ಕಾರ್ಮಿಕ ಸಚಿವೆ ಶೋಭಾ ಕರಂದ್ಲಾಜೆ ಅವರನ್ನು ಭೇಟಿ ಮಾಡಿ ನಗರದಲ್ಲಿ ನಡೆಯುವ ಇನ್‌ಕಾಮೆಕ್ಸ್ ಬೃಹತ್ ಕೈಗಾರಿಕಾ ವಸ್ತು ಪ್ರದರ್ಶನ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲು ಆಹ್ವಾನಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಪದಾಧಿಕಾರಿಗಳು ಇನ್‌ಕಾಮೆಕ್ಸ್-2026 ಪ್ರದರ್ಶನದ ಉದ್ದೇಶಗಳು, ಕೈಗಾರಿಕಾ ವೃದ್ಧಿಗೆ ಅದರ ಮಹತ್ವ, ದೇಶ-ವಿದೇಶದ ಕೈಗಾರಿಕೋದ್ಯಮಿಗಳ ಭಾಗವಹಿಸುವಿಕೆ ಹಾಗೂ ಉತ್ತರ ಕರ್ನಾಟಕದ ಕೈಗಾರಿಕಾ ಅಭಿವೃದ್ಧಿಗೆ ಈ ಪ್ರದರ್ಶನ ನೀಡುವ ಉತ್ತೇಜನ ಕುರಿತು ವಿವರಿಸಿದರು. ಕೆಸಿಸಿಐ ಮನವಿ ಸ್ಪಂದಿಸಿದ ಸಚಿವರು, ಕಾರ್ಯಕ್ರಮಕ್ಕೆ ಆಗಮಿಸಲು ಸಮ್ಮತಿ ಸೂಚಿಸಿದರು. ಜೊತೆಗೆ ತಮ್ಮ ಇಲಾಖೆಯ ವತಿಯಿಂದ ಸಾಧ್ಯವಾದ ಮಟ್ಟಿಗೆ ಸಹಕಾರ ಮತ್ತು ಪ್ರೋತ್ಸಾಹ ನೀಡುವುದಾಗಿ ಭರವಸೆ ನೀಡಿದರು. ಇಂತಹ ಕೈಗಾರಿಕಾ ವಸ್ತು ಪ್ರದರ್ಶನಗಳು ದೇಶದ ಕೈಗಾರಿಕಾ ಬೆಳವಣಿಗೆಗೆ ಮತ್ತು ಉದ್ಯೋಗ ಸೃಷ್ಟಿಗೆ ಮಹತ್ವದ ಪಾತ್ರ ವಹಿಸುತ್ತವೆ ಎಂದರು.

ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಅಧ್ಯಕ್ಷ ಜಿ.ಕೆ.ಆದಪ್ಪಗೌಡರ, ಉಪಾಧ್ಯಕ್ಷ ವೀರಣ್ಣ ಕಲ್ಲೂರ, ಗೌರವ ಕಾರ್ಯದರ್ಶಿ ಉದಯ ರೇವಣಕರ, ಜೊತೆ ಗೌರವ ಕಾರ್ಯದರ್ಶಿ ಪ್ರಕಾಶ ಶೃಂಗೇರಿ ಹಾಗೂ ಇನ್‌ಕಾಮೆಕ್ಸ 2026 ಚೇರಮನ್ ಎಂ.ವಿ.ಕರಮರಿ ಹಾಗೂ ಗೋವಿಂದ ಜೋಶಿ ಇದ್ದರು.



ಕನ್ನಡ ಶಾಲೆಗೆ ಅನುದಾನ ನೀಡಿ



ಧಾರವಾಡ: ಅನುದಾನ ರಹಿತ ಖಾಸಗಿ ಕನ್ನಡ ಶಾಲೆಗಳಿಗೆ ಅನುದಾನ ನೀಡಲು ಆಗ್ರಹಿಸಿ ಅಖಿಲ ಕರ್ನಾಟಕ ಅನುದಾನ ರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಘ ಗುರುವಾರ ಅಪರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದೆ.

30 ವರ್ಷಗಳಿಂದ (1995) ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಕನ್ನಡ ಉಳಿಸಿ, ಬೆಳೆಸುವ ಕೆಲಸ ಮಾಡುವ ಅನುದಾನ ರಹಿತ ಕನ್ನಡ ಶಾಲೆಗಳಿಗೆ ಯಾವುದೇ ಅನುದಾನ ನೀಡಿಲ್ಲ ಎಂದು ದೂರಿದರು.

ಮುಖ್ಯಮಂತ್ರಿಗಳು ಮತ್ತು ಶಿಕ್ಷಣ ಸಚಿವರು ಕಳೆದ ವರ್ಷವೇ ಅನುದಾನ ನೀಡುವ ಭರವಸೆ ನೀಡಿದ್ದರು. ಆದರೆ ಈ ಸಲದ ಬಜೆಟ್‌ನಲ್ಲೂ ಅನುದಾನ ಘೋಷಣೆ ಮಾಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಖಾಸಗಿ ಶಾಲೆಗಳ ಮಾನ್ಯತೆ ನವೀಕರಣ ಪ್ರಕ್ರಿಯೆ ಸರಳೀಕರಣಗೊಳಿಸಬೇಕು. ಕನ್ನಡ ಶಾಲೆಗೆ ಅನುದಾನ, ಶಿಕ್ಷಣ ಹಕ್ಕು ಕಾಯ್ದೆ ಪುನಃ ಜಾರಿಗೆ ತರುವುದು ಸೇರಿ ವಿವಿಧ ಬೇಡಿಕೆ ಈಡೇರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಂಘದ ರಾಜ್ಯಾಧ್ಯಕ್ಷ ರೇವಣಸಿದ್ಧಪ್ಪ, ಗೌರವಾಧ್ಯಕ್ಷ ಮಲ್ಲಿಕಾರ್ಜುನ ಲೋನಿ, ಎಂ.ಮೌಲಾಲಿ, ಡಿ.ಬಿ.ನದಾಫ್, ಕೆ.ಗುರುನಾಥ ರೆಡ್ಡಿ, ಅನೀಲ ಜಾದವ ಇದ್ದರು.

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ಪ್ರಶಸ್ತಿ

ಹುಬ್ಬಳ್ಳಿ: ಇತ್ತೀಚೆಗೆ ದೆಹಲಿ ನಡೆದ 12ನೇ ಪಿಎಸ್‌ಯು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ನವಿನ ಎಚ್‌ಆರ್ ಟೆಕ್ ಅನುಷ್ಠಾನ ವಿಭಾಗದಡಿ ಇ-ಉಗ್ರಾಣ ತಂತ್ರಾಂಶದ ಅಭಿವೃದ್ಧಿ ಹಾಗೂ ಅನುಷ್ಠಾನಕ್ಕಾಗಿ ರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ.

ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿ ಬಸವರಾಜ ಅಮ್ಮನ್ನವರ ಹಾಗೂ ಉಗ್ರಾಣ ಅಧಿಕಾರಿ ರವೀಂದ್ರ ಭಟ್ ಅವರು ಸಮಾರಂಭದಲ್ಲಿ ಭಾಗವಹಿಸಿ ಪ್ರಶಸ್ತಿ ಸ್ವೀಕರಿಸಿದರು.

ತಂತ್ರಾಂಶ ಅಭಿವೃದ್ಧಿ ಮತ್ತು ಅನುಷ್ಠಾನಕ್ಕಾಗಿ ರಾಷ್ಟ್ರಮಟ್ಟದಲ್ಲಿ ಗಮನಾರ್ಹ ಸಾಧನೆ ತೋರಿದ ಸಾರ್ವಜನಿಕ ಸ್ವಾಮ್ಯದ ಸಂಸ್ಥೆಗಳಿಗೆ ಕೊಡಲಾಗುವ ಈ ಪ್ರಶಸ್ತಿಯನ್ನು ಪಡೆದಿರುವುದಕ್ಕೆ ಸಂಸ್ಥೆಯ ಅಧ್ಯಕ್ಷ ಭರಮಗೌಡ (ರಾಜು) ಕಾಗೆ, ಉಪಾಧ್ಯಕ್ಷ ಸುನೀಲ್ ಹಣಮನ್ನವರ ಮತ್ತು ವ್ಯವಸ್ಥಾಪಕ ನಿರ್ದೇಶಕಿ ಪ್ರಿಯಾಂಗಾ.ಎಂ. ಅವರು ಹರ್ಷ ವ್ಯಕ್ತಪಡಿಸಿದ್ದಾರೆ.



ಕಿರುಸುದ್ದಿ

ಇಂದಿನಿಂದ ರಾಷ್ಟ್ರಮಟ್ಟದ ಸಮ್ಮೇಳನ

• **ಜಮಖಂಡಿ:** ಸ್ಥಳೀಯ ಬಾಗಲಕೋಟೆ ವಿಶ್ವವಿದ್ಯಾಲಯದ ಆವರಣದಲ್ಲಿ ವಾಣಿಜ್ಯ ಶಾಸ್ತ್ರ ವಿಭಾಗದಿಂದ ದೇಶದ ಜಿಎಸ್‌ಟಿ ಸುಧಾರಣೆಗಳು ಮತ್ತು ಎಂಎಸ್‌ಎಂಇಗಳ ಪರಿಣಾಮಗಳು ಮತ್ತು ವಿಸ್ತರಿಸುತ್ತಿರುವ ಈ ಕಾಮರ್ಸ್‌ರಿ ವಿಷಯದ ಮೇಲೆ ಮಾ.13ರಿಂದ 14ರ ವರೆಗೆ ಎರಡು ದಿನದ ರಾಷ್ಟ್ರಮಟ್ಟದ ಸಮ್ಮೇಳನ ಆಯೋಜಿಸಲಾಗಿದೆ. ಈ ಸಮ್ಮೇಳನಕ್ಕೆ ಭಾರತೀಯ ಸಾಮಾಜಿಕ ವಿಜ್ಞಾನ ಸಂಶೋಧನಾ ಮಂಡಳಿ ದಕ್ಷಿಣ ಪ್ರಾದೇಶಿಕ ಕೇಂದ್ರ, ಹೈದರಾಬಾದ್ ಪ್ರಾಯೋಜಕತ್ವ ನೀಡಿದೆ. ಅಂದು ವಿಶ್ರಾಂತ ಕುಲಪತಿ ಡಾ.ಮೀನಾ ಚಂದಾವರಕರ, ಬಾಗಲಕೋಟ ವಿವಿ ಕುಲಪತಿ ಪ್ರೊ.ಆನಂದ ದೇಶಪಾಂಡೆ, ಕುಲಸಚಿವ ಸೋಮಲಿಂಗ ಗೆನ್ನೂರ, ಕುಲಸಚಿವೆ ಮೌಲ್ಯಮಾಪನ ಪ್ರೊ.ಲತಾ ಪಿ.ಹಣಕಾಸು ಅಧಿಕಾರಿ ಪ್ರೊ.ಚಿದಾನಂದ ಧವಳೇಶ್ವರ ಆಗಮಿಸಲಿದ್ದಾರೆ. ಮಾ.14ರಂದು ನಡೆಯುವ ಸಮಾರೋಪಕ್ಕೆ ಕೇರಳ ಕಾಸರಗೋಡಿನ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಸಿದ್ದು ಪಿ.ಆಲಗೂರ, ರಾಷ್ಟ್ರೀಯ ಸಮ್ಮೇಳನ ಸಂಚಾಲಕ ಡೀನ ಡಾ.ಮಲ್ಲಿಕಾರ್ಜುನ ಎಂ.ಮರಡಿ, ಸಹಸಂಚಾಲಕ ಪ್ರೊ.ದಯಾನಂದ ಜಿ. ಸಾವಕಾರ ಮತ್ತು ಡಾ.ಚಿದಾನಂದ ಯು. ಧವಳೇಶ್ವರ ಆಗಮಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ಮಾ.15ರಂದು ಕೃತಿ ಲೋಕಾರ್ಪಣೆ

• **ಹುಬ್ಬಳ್ಳಿ:** ನಗರದ ಸಾಹಿತ್ಯ ಪ್ರಕಾಶನ, ಯುವಕ ಸಂಘ ಹಾಗೂ ಸಾವ್ ಎಐ ಸಹಯೋಗದಲ್ಲಿ ಮಾ.15ರಂದು ಸಂಜೆ 5.30ಕ್ಕೆ ಡಾ.ವಿಕ್ರಮ್ ಸಂಪತ ಅವರ ನನ್ನ ಹೆಸರು ಗೌಹರ್ ಜಾನ್ ಸಂಗೀತ ಕಲಾವಿದೆಯೊಬ್ಬರ ಜೀವನ ಹಾಗೂ ಕಾಲಘಟ್ಟ ಕೃತಿ ಲೋಕಾರ್ಪಣೆ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಅತಿಥಿಗಳಾಗಿ ಸಂಸ್ಕಾರ ಭಾರತಿಯ ರಾಷ್ಟ್ರೀಯ ಅಧ್ಯಕ್ಷರಾದ ಡಾ.ಮೈಸೂರ ಮಂಜುನಾಥ ಹಾಗೂ ತಂತ್ರಜ್ಞರಾದ ಡಾ.ರೋಗಿಣಿ ಶ್ರೀವತ್ಸ, ಲೇಖಕ ಡಾ.ವಿಕ್ರಮ್ ಸಂಪತ್, ಸಾವ್ ಎಐ ಸಹ ಸ್ಥಾಪಕ ಸಂದೀಪ ಸಿಂಗ್, ಅನುವಾದಕರಾದ ಗೌರಿ ಜೋಶಿ, ಜಿ.ಎಲ್.ಶೇಖರ್ ಭಾಗವಹಿಸಲಿದ್ದಾರೆ.

ಮೇಟಿ ಕುಟುಂಬದಲ್ಲಿ ಒಡಕಿಲ್ಲ: ಮಲ್ಲಿಕಾರ್ಜುನ ಮೇಟಿ

• **ಬಾಗಲಕೋಟೆ:** ದಿ.ಎಚ್.ವೈ.ಮೇಟಿಯವರು ಕುಟುಂಬದಲ್ಲಿ ಯಾವುದೇ ಒಡಕಿಲ್ಲ. ಕಾಂಗ್ರೆಸ್ ಪಕ್ಷ ನಮ್ಮ ಆಸ್ತಿಯಲ್ಲ, ಪಕ್ಷದ ಟಿಕೆಟ್ ನಮ್ಮ ಆಸ್ತಿಯಲ್ಲ, ಪಕ್ಷದಿಂದ ಯಾರಿಗೆ ಟಿಕೆಟ್ ಕೊಟ್ಟರೂ ನಾವು ಕೆಲಸ ಮಾಡುತ್ತಿವೆ ಎಂದು ಕಾಂಗ್ರೆಸ್ ಯುವ ಮುಖಂಡ ಮಲ್ಲಿಕಾರ್ಜುನ ಮೇಟಿ ತಿಳಿಸಿದರು.



ನವನಗರದ ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ತಂದೆಯವರು ಬಾಗಲಕೋಟೆ ಮತಕ್ಷೇತ್ರದಲ್ಲಿ ಹಾಗೂ ಪಕ್ಷಕ್ಕೆ ಕೆಲಸ ಮಾಡಿದ್ದಾರೆ. ಅವರ ಕಾರ್ಯವನ್ನು ಮೆಚ್ಚಿ ನಮ್ಮ ಕುಟುಂಬಕ್ಕೆ ಟಿಕೆಟ್ ಸಿಗುವ ನಿರೀಕ್ಷೆ ಇದೆ. ಆದರೆ ಟಿಕೆಟ್‌ಗಾಗಿ ಮೇಟಿ ಕುಟುಂಬದಲ್ಲಿ ಗೊಂದಲವಿಲ್ಲ ಎಲ್ಲರೂ ಒಗ್ಗಟ್ಟಾಗಿದ್ದೇವೆ ಎಂದು ಹೇಳಿದರು. ಜಿಲ್ಲಾಧ್ಯಕ್ಷರು ಸೇರಿದಂತೆ ಜಿಲ್ಲೆಯ ಕಾಂಗ್ರೆಸ್ ಪಕ್ಷದ ನಾಯಕರು, ರಾಜ್ಯ ನಾಯಕರು ಯಾರಿಗೆ ಟಿಕೆಟ್ ನೀಡುತ್ತಾರೆ ಅವರ ಪರವಾಗಿ ನಿಂತು ಕೆಲಸ ಮಾಡುತ್ತೇವೆ ಎಂದು ಹೇಳಿದರು. ಮುಖಂಡ ಉಮೇಶ ಮೇಟಿ ಮಾತನಾಡಿ, ನಾವು ಎಲ್ಲಿಯೂ ಟಿಕೆಟ್ ಆಕಾಂಕ್ಷಿ ಎಂದು ಹೇಳಿಕೊಂಡಿಲ್ಲ. ಪಕ್ಷದ ಹೈಕಮಾಂಡ್ ಹಾಗೂ ಜಿಲ್ಲಾ ನಾಯಕರು ಯಾರಿಗೆ ಟಿಕೆಟ್ ಕೊಟ್ಟರೂ ಸಂತೋಷದಿಂದ ಕೆಲಸ ಮಾಡುತ್ತೇವೆ ಎಂದು ಹೇಳಿದರು.

ಗೋವುಗಳ ಸಾಗಾಟ: ಮೂವರು ವಶಕ್ಕೆ

• **ಹುಬ್ಬಳ್ಳಿ:** ತಾಲೂಕಿನ ಸುಳ್ಳ ಹಾಗೂ ಬ್ಯಾಹಟ್ಟಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಅಕ್ರಮವಾಗಿ ಗೋವುಗಳ ಸಾಗಿಸುತ್ತಿದ್ದ ಮೂವರ ವಿರುದ್ಧ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

ಬೈಲಹೊಂಗಲ ಸಂಪಗಾವ ನಿವಾಸಿ ಬಾಬಾಜಾನ ಕುಂಡೆವಾಲಿ, ಶಬ್ಬೀರ ಮತ್ತಿಕೊಪ್ಪ ಹಾಗೂ ದಸ್ತಗೀರಿ ತಾಳಿಕೋಟಿ ಎಂಬುವರ ವಿರುದ್ಧ ದೂರು ದಾಖಲಾಗಿದೆ. ಟಾಟಾ ಗೂಡ್ಸ್ ಕ್ಯಾಂಟರ್ ವಾಹನದಲ್ಲಿ ಬೈಲಹೊಂಗಲದಿಂದ ಹುಬ್ಬಳ್ಳಿಗೆ 23 ವಿವಿಧ ಹಸುಗಳು ಹಾಗೂ ಕರುಗಳ ಅಕ್ರಮವಾಗಿ ಸಾಗಿಸುತ್ತಿದ್ದರು. ಆಗ ಪೊಲೀಸರು ವಾಹನ ಮೇಲೆ ದಾಳಿ ನಡೆಸಿ ಗೋವುಗಳ ರಕ್ಷಿಸಿ, ವಾಹನ ಸಮೇತ ಮೂವರನ್ನು ಆರೋಪಿಗಳ ವಶಕ್ಕೆ ಪಡೆದಿದ್ದಾರೆ.

ಆಳಂದ,ಅಫಜಲಪುರದಲ್ಲಿ ಹೆಚ್ಚು ಸಮಸ್ಯೆ ಸಾಧ್ಯತೆ

286 ಗ್ರಾಮಗಳಿಗೆ ಕುಡಿಯುವ ನೀರಿನ ಸಂಕಷ್ಟದ ಭೀತಿ

▸ ರಾಚಪ್ಪಾ ಜಂಬಗಿ

• **ಕಲಬುರಗಿ:** ಬೇಸಿಗೆ ತೀವ್ರವಾಗುವ ಮುನ್ನವೇ ಕಲಬುರಗಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಆತಂಕ ಮೂಡಿಸಿದೆ. ಜಿಲ್ಲಾಡಳಿತದ ಪ್ರಾಥಮಿಕ ಅಂದಾಜು ಪ್ರಕಾರ ಜಿಲ್ಲೆಯ ಸುಮಾರು 286 ಗ್ರಾಮಗಳಲ್ಲಿ ಈ ಬಾರಿ ಬೇಸಿಗೆಯಲ್ಲಿ ನೀರಿನ ತೊಂದರೆ ಎದುರಾಗುವ ಸಾಧ್ಯತೆ ಇದೆ. ಅಂತರ್ಜಲ ಮಟ್ಟ ಕುಸಿಯುತ್ತಿರುವ ಹಿನ್ನೆಲೆ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿಗಾಗಿ ಪರದಾಟ ಹೆಚ್ಚಾಗುವ ಲಕ್ಷಣಗಳು ಕಂಡುಬರುತ್ತಿವೆ.

ಬಿಸಿಲಿನ ತೀವ್ರತೆಗೆ ಪ್ರಸಿದ್ಧಿ ಪಡೆದಿರುವ ಜಿಲ್ಲೆಯಲ್ಲಿ ಪ್ರತಿ ಬೇಸಿಗೆಯಲ್ಲೂ ಗ್ರಾಮಗಳಲ್ಲಿ ನೀರಿನ ಸಮಸ್ಯೆ ಸಾಮಾನ್ಯವಾಗಿರುತ್ತದೆ. ಈಗಾಗಲೇ ಕೆಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊರತೆ ಕಾಣಿಸಿಕೊಳ್ಳುತ್ತಿದ್ದು, ಜನರು ದೂರದ ಊರುಗಳಿಗೆ ತೆರಳಿ ನೀರು ತರಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಜನರಿಗೆ ಮಾತ್ರವಲ್ಲದೆ ಜಾನುವಾರುಗಳಿಗೆ ಸಹ ನೀರು ಒದಗಿಸುವುದು ದೊಡ್ಡ ಸವಾಲಾಗಿ ಪರಿಣಮಿಸುತ್ತಿದೆ.

ಅಧಿಕಾರಿಗಳ ಲೆಕ್ಕಾಚಾರ ಪ್ರಕಾರ ಮಾರ್ಚ್ ತಿಂಗಳಲ್ಲಿ 102 ಗ್ರಾಮಗಳು, ಏಪ್ರಿಲ್‌ನಲ್ಲಿ 94 ಗ್ರಾಮಗಳು, ಮೇ ತಿಂಗಳಲ್ಲಿ 90 ಗ್ರಾಮಗಳು ನೀರಿನ ಸಮಸ್ಯೆ ಎದುರಿಸುವ ಸಾಧ್ಯತೆ ಇದೆ. ಇದನ್ನು ಗಮನದಲ್ಲಿಟ್ಟುಕೊಂಡು ಸಮಸ್ಯೆ ಉಂಟಾಗುವ ಪ್ರದೇಶಗಳಲ್ಲಿ ಪರ್ಯಾಯ ಜಲಮೂಲಗಳ ಹುಡುಕಾಟಕ್ಕೆ ಅಧಿಕಾರಿಗಳು ಮುಂದಾಗಿದ್ದಾರೆ.



- ನೀರಿನ ಸಮಸ್ಯೆ ಎದುರಾಗುವ ಗ್ರಾಮಗಳು 286
- ಜಿಲ್ಲೆಯ ಒಟ್ಟು ಬೋರ್‌ವೆಲ್‌ಗಳು 1,227
- ಕಾರ್ಯನಿರ್ವಹಿಸುತ್ತಿರುವ ಬೋರ್‌ವೆಲ್‌ಗಳು 754
- ಬಂದ್ ಆಗಿರುವ ಬೋರ್‌ವೆಲ್‌ಗಳು 465
- ಗುರುತಿಸಿದ ಖಾಸಗಿ ಬೋರ್‌ವೆಲ್‌ಗಳು 303

ದಿಗಂತ ವಿಶೇಷ

“ಬೇಸಿಗೆಯಲ್ಲಿ ನೀರಿನ ಸಮಸ್ಯೆ ಎದುರಾಗುವ ಗ್ರಾಮಗಳಿಗೆ ಮುಂಚಿತವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ. ಬೋರ್‌ವೆಲ್‌ಗಳು, ಟ್ಯಾಂಕರ್ ವ್ಯವಸ್ಥೆ ಹಾಗೂ ಖಾಸಗಿ ಬೋರ್‌ವೆಲ್‌ಗಳ ಬಳಕೆಯ ಮೂಲಕ ನೀರು ಪೂರೈಕೆ ಮಾಡುವ ಯೋಜನೆ ಇದೆ. ಇದಕ್ಕಾಗಿ ಸರ್ಕಾರದ ಬಳಿ ಸುಮಾರು 8 ಕೋಟಿ ರೂ.ಅನುದಾನ ಕೇಳಿದ್ದೇವೆ.

■ ಭಂವರ್‌ಸಿಂಗ್ ಮೀನಾ, ಜಿಪಂ ಸಿಇಒ ಕಲಬುರಗಿ

“ಬೇಸಿಗೆ ಬಂದರೆ ನಮ್ಮ ಗ್ರಾಮದಲ್ಲಿ ನೀರಿಗಾಗಿ ಹಾಹಾಕಾರ ಉಂಟಾಗುತ್ತದೆ. ದೂರದ ಊರುಗಳಿಗೆ ಹೋಗಿ ನೀರು ತರಬೇಕಾದ ಪರಿಸ್ಥಿತಿ ಎದುರಾಗುತ್ತದೆ. ಅಧಿಕಾರಿಗಳು ಮುಂಚಿತವಾಗಿಯೇ ಕ್ರಮ ಕೈಗೊಳ್ಳಬೇಕು.

■ ನಾಗೇಶ್ ಪೆಂಚಪಳ್ಳಿ, ಚಿಂಚೋಳಿ ನಿವಾಸಿ

ಬೋರ್‌ವೆಲ್‌ಗಳೇ ಆಧಾರ

ಜಿಲ್ಲೆಯಲ್ಲಿ ಒಟ್ಟು 1,227 ಬೋರ್‌ವೆಲ್‌ಗಳು ಇದ್ದು, ಅವುಗಳಲ್ಲಿ 754 ಮಾತ್ರ ಪ್ರಸ್ತುತ ಕಾರ್ಯನಿರ್ವಹಿಸುತ್ತಿವೆ. ಉಳಿದ 465 ಬೋರ್‌ವೆಲ್‌ಗಳು ಕಾರ್ಯನಿರ್ವಹಿಸದ ಸ್ಥಿತಿಯಲ್ಲಿವೆ. ಈ ಹಿನ್ನೆಲೆಯಲ್ಲಿ ಕೆಲವು ಬೋರ್‌ವೆಲ್‌ಗಳನ್ನು ರೀಬೋರ್ ಮಾಡಿ ಪುನಶ್ಚೇತನಗೊಳಿಸುವ ಕೆಲಸ ಕೈಗೊಳ್ಳಲಾಗಿದೆ. ಜೊತೆಗೆ 308 ಬೋರ್‌ವೆಲ್‌ಗಳನ್ನು ಮರು ಬಳಕೆಗಾಗಿ ಸಿದ್ಧಪಡಿಸಲಾಗಿದ್ದು, ಅಗತ್ಯವಿದ್ದಲ್ಲಿ 303 ಖಾಸಗಿ ಬೋರ್‌ವೆಲ್‌ಗಳನ್ನು ಬಳಸುವ ಯೋಜನೆ ರೂಪಿಸಲಾಗಿದೆ.

ಆಳಂದದಲ್ಲಿ ಹೆಚ್ಚು ಸಮಸ್ಯೆ

ತಾಲೂಕು ಮಟ್ಟದಲ್ಲಿ ನೋಡಿದರೆ ಆಳಂದ ತಾಲೂಕಿನಲ್ಲಿ 72 ಗ್ರಾಮಗಳು ನೀರಿನ ಸಮಸ್ಯೆ ಎದುರಿಸಬಹುದಾದ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿವೆ. ಬಳಿಕ ಅಫಜಲಪುರದಲ್ಲಿ 60 ಗ್ರಾಮಗಳು ಮತ್ತು ಕಲಬುರಗಿ ತಾಲೂಕಿನಲ್ಲಿ 53 ಗ್ರಾಮಗಳು ನೀರಿನ ತೊಂದರೆ ಎದುರಿಸುವ ಸಾಧ್ಯತೆ ಇದೆ. ಉಳಿದಂತೆ ಜೇವರ್ಗಿ, ಸೇಡಂ, ಕಮಲಾಪುರ, ಯಡ್ರಾಮಿ ಸೇರಿದಂತೆ ಇತರೆ ತಾಲೂಕುಗಳಲ್ಲಿಯೂ ಕೆಲ ಗ್ರಾಮಗಳಲ್ಲಿ ನೀರಿನ ಬವಣೆ ಕಂಡುಬರುವ ಸಾಧ್ಯತೆ ಇದೆ.

ಜಲ ಸಂರಕ್ಷಣೆ ಸೇವೆಯಲ್ಲಿ ಅನಿತಾಗೆ ರಾಷ್ಟ್ರಮಟ್ಟದ ಪ್ರಶಸ್ತಿ

▸ ಪುಷ್ಪವತಿ ಜಿಎಂ ಬಸಯ್ಯ

ದಿಗಂತ ವಿಶೇಷ

• **ಕುರುಗೋಡು:** ಸಮೀಪದ ಹಾವಿನಹಾಳು ಗ್ರಾಮದ ಅನಿತಾ ಗ್ರಾಮೀಣ ಕುಡಿಯುವ ನೀರಿನ ವ್ಯವಸ್ಥೆ ನಿರ್ವಹಣೆಯಲ್ಲಿ ನೀಡಿದ ವಿಶಿಷ್ಟ ಸೇವೆಗೆ ರಾಷ್ಟ್ರಮಟ್ಟದ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ನವದೆಹಲಿ ನಗರದ ವಿಜ್ಞಾನ್ ಭವನದಲ್ಲಿ ಬುಧವಾರ ನಡೆದ ರಾಷ್ಟ್ರೀಯ 'ಜಲ ಮಹೋತ್ಸವ' ಕಾರ್ಯಕ್ರಮದಲ್ಲಿ ಭಾರತದ ರಾಷ್ಟ್ರಪತಿ ಅವರಿಂದ ಅನಿತಾ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕೇಂದ್ರ ಸರ್ಕಾರದ ಜಲ್ ಜೀವನ್ ಮಿಷನ್ ಯೋಜನೆಯಡಿ ಗ್ರಾಮೀಣ ಕುಡಿಯುವ ನೀರಿನ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು. ದೇಶದ ವಿವಿಧ ರಾಜ್ಯಗಳಿಂದ ಆಯ್ಕೆಯಾದ ಗ್ರಾಮ ಪಂಚಾಯತ್ ಪ್ರತಿನಿಧಿಗಳು, ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರು ಹಾಗೂ ಜಲ ನಿರ್ವಹಣೆಯಲ್ಲಿ ಮಹತ್ವದ ಪಾತ್ರವಹಿಸಿದ ಕಾರ್ಯಕರ್ತರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಹಾವಿನಹಾಳು ಗ್ರಾಮದ ಅನಿತಾ ಅವರು ಗ್ರಾಮದಲ್ಲಿ ಕೊಳವೆ ಮೂಲಕ ಕುಡಿಯುವ ನೀರಿನ ಸರಬರಾಜು ವ್ಯವಸ್ಥೆಯನ್ನು ಸುಧಾರಿಸುವುದು, ನೀರಿನ ಸಂರಕ್ಷಣೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಹಾಗೂ ನೀರಿನ ಸಮರ್ಪಕ ಬಳಕೆ ಮತ್ತು ನಿರ್ವಹಣೆಗೆ ಮಹಿಳೆಯರನ್ನು ಸಂಘಟಿಸುವ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

ಈ ಸೇವೆ ಪರಿಗಣಿಸಿ 'ಗ್ರಾಮೀಣ ಕೊಳವೆನೀರುಸರಬರಾಜು ನಿರ್ವಹಣೆಗೆ ಅಸಾಧಾರಣ ಕೊಡುಗೆಗಾಗಿ ಸ್ವಸಹಾಯ ಗುಂಪು (ಎಸ್‌ಎಚ್‌ಜಿ) ಪ್ರತಿನಿಧಿ' ವಿಭಾಗದಲ್ಲಿ ಅವರಿಗೆ ರಾಷ್ಟ್ರಮಟ್ಟದ ಪ್ರಶಸ್ತಿ ಲಭಿಸಿದೆ.

ಗ್ರಾಮದಲ್ಲಿ ನೀರಿನ ಸಮರ್ಪಕ ಬಳಕೆ ಮತ್ತು ವ್ಯವಸ್ಥಿತ ನಿರ್ವಹಣೆಗೆ ಅವರು ಕೈಗೊಂಡ ಪ್ರಯತ್ನಗಳು ಗಮನಾರ್ಹವಾಗಿವೆ. ಈ ಸಾಧನೆಯಿಂದ ಹಾವಿನಹಾಳು ಗ್ರಾಮ ಮಾತ್ರವಲ್ಲದೆ ಬಳ್ಳಾರಿ ಜಿಲ್ಲೆಗೆ ಗೌರವ ತಂದಂತಾಗಿದೆ. ಅನಿತಾ ಅವರ ಸಾಧನೆಗೆ ಗ್ರಾಮಸ್ಥರು, ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಅಭಿನಂದನೆ ಸಲ್ಲಿಸಿದ್ದಾರೆ.



ಕುಳಗಿ-ಭಾಗವತಿ ರಸ್ತೆಯಲ್ಲಿ ಆನೆ ಪ್ರತ್ಯಕ್ಷ



• **ದಾಂಡೇಲಿ:** ತಾಲೂಕಿನಕುಳಗಿ-ಭಾಗವತಿ ರಸ್ತೆಯಲ್ಲಿ ಆನೆಯೊಂದು ಪ್ರತ್ಯಕ್ಷವಾದ ಘಟನೆ ಬುಧವಾರ ಸಂಜೆ ನಡೆದಿದೆ.

ಭಾಗವತಿಯಿಂದ ಕುಳಗಿ ಬರುತ್ತಿದ್ದ ಪ್ರಯಾಣಿಕರೊಬ್ಬರೂ ಆನೆ ನಡು ರಸ್ತೆಯಲ್ಲಿ ಸಾಗುತ್ತಿರುವುದನ್ನು ವಿಡಿಯೋ ಮಾಡಿದ್ದಾರೆ. ಇದೀಗ ಆ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲಾಗುತ್ತಿದೆ. ಈ ರಸ್ತೆಯಲ್ಲಿ ಆನೆಗಳು ಸೇರಿದಂತೆ ವನ್ಯಜೀವಿಗಳು ಆಗೊಮ್ಮೆ ಈಗೊಮ್ಮೆ ದರ್ಶನ ನೀಡುತ್ತಿರುವುದು ಸಾಮಾನ್ಯ ಎಂಬಂತಾಗಿದೆ. ಈ ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರು ಬಹಳಷ್ಟು ಎಚ್ಚರಿಕೆ ವಹಿಸಿ ಮುಂದೆ ಸಾಗಬೇಕಾಗಿದೆ.

ಖೇಲೋ ಇಂಡಿಯಾ ಕಿಕ್ ಬಾಕ್ಸಿಂಗ್: ಉತ್ತಮ ಸಾಧನೆ

• **ಭಟ್ಕಳ:** ಬೆಂಗಳೂರಿನಲ್ಲಿ ನಡೆದ ಖೇಲೋ ಇಂಡಿಯಾ ಅಸ್ಮಿತಾ ಕಿಕ್ ಬಾಕ್ಸಿಂಗ್ ಲೀಗ್ ಸ್ಪರ್ಧೆಯಲ್ಲಿ ಇಲ್ಲಿನ ನಾಗಶ್ರೀ ಮಾರ್ಷಲ್ ಆರ್ಟ್ಸ್ ಕಿಕ್ ಬಾಕ್ಸಿಂಗ್ ಮಹಿಳಾ ಪಟುಗಳು ಅತ್ಯುತ್ತಮ ಸಾಧನೆ ಮಾಡಿ ಕೀರ್ತಿ ತಂದಿದ್ದಾರೆ.




ಲಿಖಿತಾ ಶಂಕರ ನಾಯ್ಕ ಜೂನಿಯರ್ ವಿಭಾಗದ -45ಕೆಜಿ ಪಾಯಿಂಟ್ ಫೈಟ್‌ನಲ್ಲಿ ಚಿನ್ನದ ಪದಕ, ಅಖೀಲಾ ಚಂದ್ರಕಾಂತ್ ನಾಯಕ ಸೀನಿಯರ್ ವಿಭಾಗದ -45 ಕೆಜಿ ಪಾಯಿಂಟ್ ಫೈಟ್ ನಲ್ಲಿ ಬೆಳ್ಳಿಯ ಪದಕ, ಸಮೀಕ್ಷಾ ಮಾಸ್ತಿ ಗೊಂಡ ಸಬ್ ಜೂನಿಯರ್ ವಿಭಾಗದ -37ಕೆಜಿ ಲೈಟ್ ಕಾಂಟ್ಯಾಕ್ಟ್ ನಲ್ಲಿ ಕಂಚಿನ ಪದಕ, ಮನಾಲಿ ರಾಜು ನಾಯ್ಕ ಜೂನಿಯರ್ ವಿಭಾಗದ -42ಕೆಜಿ ಲೈಟ್ ಕಾಂಟ್ಯಾಕ್ಟ್ ನಲ್ಲಿ ಕಂಚಿನ ಪದಕ, ಆಶಿತಾ ಉದಯ ನಾಯ್ಕ ಸಬ್ ಜೂನಿಯರ್ ವಿಭಾಗದ -42ಕೆಜಿ ಪಾಯಿಂಟ್ ಫೈಟ್ ನಲ್ಲಿ 5ನೇ ಸ್ಥಾನ ಹಾಗೂ ಪಾಯಿಂಟ್ ಫೈಟ್ ಟೀಮ್ ವಿಭಾಗದಲ್ಲಿ ದ್ವಿತೀಯ ಪಡೆದಿದ್ದಾರೆ.

ನಾಗಶ್ರೀ ನಾಯ್ಕ ಈ ಸ್ಪರ್ಧೆಯಲ್ಲಿ ರೆಫರಿಯಾಗಿ ಕಾರ್ಯನಿರ್ವಹಿಸಿದರು. ಚಿನ್ನದ ಪದಕ ಪಡೆದ ವಿಜೇತರಿಗೆ 8000 ಮತ್ತು ಬೆಳ್ಳಿಯ ಪದಕ ಪಡೆದ ವಿಜೇತರಿಗೆ 6000 ಹಾಗೂ ಕಂಚಿನ ಪದಕ ಪಡೆದ ವಿಜೇತರಿಗೆ 4000 ನಗದು ಬಹುಮಾನಗಳನ್ನು ನೀಡಲಾಯಿತು.

ಪದಕ ಪಡೆದ ವಿಜೇತ ಮಹಿಳಾ ಕ್ರೀಡಾಪಟುಗಳು ಚೆನ್ನೈನಲ್ಲಿ ನಡೆಯುವ ರಾಷ್ಟ್ರೀಯ ಕಿಕ್ ಬಾಕ್ಸಿಂಗ್ ಲೀಗ್‌ಗೆ ಅರ್ಹತೆ ಪಡೆದುಕೊಂಡಿದ್ದಾರೆ. ಉತ್ತಮ ಸಾಧನೆ ಮಾಡಿದ ಮಹಿಳಾಪಟುಗಳಿಗೆ ಉತ್ತರ ಕನ್ನಡ ಜಿಲ್ಲಾ ಕಿಕ್ ಬಾಕ್ಸಿಂಗ್ ಸ್ಪೋರ್ಟ್ಸ್ ಅಸೋಸಿಯೇಷನ್‌ನ ಅಧ್ಯಕ್ಷ ಈಶ್ವರ ನಾಯ್ಕ, ತರಬೇತಿ ನೀಡಿದ ನಾಗಶ್ರೀ ನಾಯ್ಕ, ಕಾನೂನು ಸಲಹೆಗಾರ ಮನೋಜ್ ನಾಯ್ಕ ಮತ್ತು ಉಮೇಶ್ ಮೊಗೇರ್ ಮತ್ತು ಎಲ್ಲಾ ಪದಾಧಿಕಾರಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

ಸಿಲಿಂಡರ್ ಕೊರತೆ ಹಿಂದೆ ರಾಜ್ಯ ಸರ್ಕಾರದ ಕೈವಾಡ: ಆರೋಪ

• **ಗದಗ:** ಮಧ್ಯಪ್ರಾಚ್ಯದಲ್ಲಿ ಯುದ್ಧ ನಡೆದಿರುವುದರಿಂದ ವಿಶ್ವದಾದ್ಯಂತ ಇಂಧನ ಹಾಗೂ ಅಡುಗೆ ಅನಿಲಗಳ ಕೊರತೆ ಸ್ವಾಭಾವಿಕವಾಗಿದ್ದು, ಆದರೂ ಕೂಡ ದೇಶದಲ್ಲಿ ಸಮತೋಲನ ಕಾಯ್ದುಕೊಂಡು ಇಂಧನ ಹಾಗೂ ಅಡುಗೆ ಅನಿಲ ಪೂರೈಸುತ್ತಿರುವುದು ಕೇಂದ್ರ ಸರ್ಕಾರದ ಕಾರ್ಯ ಶ್ಲಾಘನೀಯ ಎಂದು ಜೆಡಿಎಸ್ ಪಕ್ಷದ ರಾಜ್ಯ ವಕ್ತಾರ ವೆಂಕನಗೌಡ ಗೋವಿಂದಗೌಡ್ರ ಹೇಳಿದರು.



ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಯುದ್ಧದಿಂದಾಗಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲಗಳ ಹಾಗೂ ಅಡಿಗೆ ಅನಿಲಗಳ ಬೆಲೆ ಏರಿಕೆಯಿಂದಾಗಿ ಅಡುಗೆ ಅನಿಲಗಳ ಬೆಲೆ ಏರಿಕೆ ಆಗಿದ್ದು ಇದನ್ನು ವಿರೋಧಿಸಿ ಕಾಂಗ್ರೆಸ್ಸಿಗರು ಪ್ರತಿಭಟನೆ ಮಾಡುತ್ತಿರುವುದು ಹಾಸ್ಯಾಸ್ಪದವಾಗಿದೆ. ಅಂತಾರಾಷ್ಟ್ರೀಯ ಸಮಸ್ಯೆಯಿಂದ ಬೆಲೆ ಏರಿಕೆ ಆಗಿದ್ದನ್ನು ರಾಜಕೀಯವಾಗಿ ಬಳಸಿಕೊಳ್ಳಲು ಹೊರಟಿರುವ ಸಿದ್ದರಾಮಯ್ಯ ಸರ್ಕಾರಕ್ಕೆ ಇದು ತಿರುಗುಬಾಣವಾಗಲಿದೆ.

ಹಿಂದೆ ಜಿಎಸ್‌ಟಿ ಕಡಿಮೆ ಮಾಡಿದಾಗ ಎಲ್ಲ ಅಗತ್ಯ ವಸ್ತುಗಳ ಬೆಲೆ ಇಳಿಕೆ ಮಾಡಬೇಕಾಗಿದ್ದ ಸಿದ್ದರಾಮಯ್ಯ ಸರ್ಕಾರ ವಿನಾಕಾರಣ ಹಾಲಿನ ಬೆಲೆಯನ್ನು ಪ್ರತಿ ಲೀಟರ್‌ಗೆ ಒಂದು ರೂಪಾಯಿ ಹಾಗೂ ತುಪ್ಪದ ದರ ಕೆಜಿಗೆ 90 ರೂಪಾಯಿಗಳನ್ನು ಏರಿಕೆ ಮಾಡಿ ಜನರಿಗೆ ತಲುಪಬೇಕಾಗಿದ್ದ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿ ಈಗ ಪೆಟ್ರೋಲಿಯಂ ಬೆಲೆಗಳ ಏರಿಕೆ ವಿರುದ್ಧ ಟೀಕೆ ಮಾಡುವುದು ಹೋರಾಟ ಮಾಡುವುದು ನಾಚಿಕೆಗೇಡಿನ ಸಂಗತಿಯಾಗಿದೆ. ಈ ಗ್ಯಾಸ್ ಕೊರತೆಯ ಹಿಂದೆ ರಾಜ್ಯ ಸರ್ಕಾರದ ಕೈವಾಡ ಎದ್ದು ಕಾಣುತ್ತಿದೆ ಎಂದು ಅವರು ಸಂಶಯ ವ್ಯಕ್ತಪಡಿಸಿದ್ದಾರೆ.

ದೇಶದಲ್ಲಿ ಎಲ್ಲೂ ಇಲ್ಲದ ಗ್ಯಾಸ್ ಕೊರತೆ ಕೇವಲ ಕಾಂಗ್ರೆಸ್ ಆಡಳಿತವಿರುವ ರಾಜ್ಯದಲ್ಲಿ ಮಾತ್ರ ಅಡುಗೆ ಆಗಿರುವುದು ಸಂಶಯಕ್ಕೆ ಎಡೆ ಮಾಡಿಕೊಡುತ್ತದೆ ಎಂದು ರಾಜ್ಯ ಸರ್ಕಾರದ ಈ ಜನ ವಿರೋಧಿ ನೀತಿಯನ್ನು ಕಟುವಾಗಿ ಟೀಕಿಸಿದ್ದಾರೆ.

ಅನೈತಿಕ ಸಂಬಂಧ ಪ್ರಶ್ನಿಸಿದ ಪತಿಯ ಹತ್ಯೆ ಪತ್ನಿ, ಪ್ರಿಯಕರನಿಗೆ ಜೀವಾವಧಿ ಶಿಕ್ಷೆ

• **ವಿಜಯಪುರ:** ಅನೈತಿಕ ಸಂಬಂಧದ ಹಿನ್ನೆಲೆ ಪತಿಯನ್ನೇ ಹತ್ಯೆ ಮಾಡಿದ ಪತ್ನಿ ಹಾಗೂ ಆಕೆಯ ಪ್ರಿಯಕರನಿಗೆ 1ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಜೀವಾವಧಿ ಶಿಕ್ಷೆ ಹಾಗೂ 1.20 ಲಕ್ಷ ರೂ.ಗಳ ದಂಡ ವಿಧಿಸಿ ತೀರ್ಪು ನೀಡಿದೆ.

ಜಿಲ್ಲೆಯ ದೇವರಹಿಪ್ಪರಗಿ ತಾಲೂಕಿನ ಚಟ್ಟರಕಿ ಗ್ರಾಮದ ರಾಜಮಾ ಸೈಫನಸಾಬ ಕೋರಬು, ಅಬ್ಬಾಸಲಿ ಉರ್ಫ್ ಹಮೀದ್ ಭಾವಸಾಬಾ ಚೌಧ್ರಿ ಶಿಕ್ಷೆಗೊಳಗಾದವರು.

ಕಳೆದ ಮೇ 9, 2023ರಂದು ಸೈಫನಸಾಬ ಕೋರಬು ತೋಟಕ್ಕೆ ನೀರುಣಿಸಲು ಹೋಗಿ, ಮರಳಿ ಬಂದಾಗ, ತನ್ನ ಮನೆಯಲ್ಲಿ ಆರೋಪಿಗಳಾದ ರಾಜಮಾ ಹಾಗೂ ಅಬ್ಬಾಸಲಿ ಸಿಕ್ಕಿಬಿದಿದ್ದು, ಅಬ್ಬಾಸಲಿಯ ಅರೆಬರೆ ಬಟ್ಟೆ ಕಂಡು ಕೋಪಗೊಂಡು ಬೈಯ್ದು, ಆರೋಪಿ ಅಬ್ಬಾಸಲಿಗೆ ಹೊಡೆಯಲು ಹೋಗಿದ್ದಾನೆ. ಆಗ ಆರೋಪಿಗಳಾದ ರಾಜಮಾ ಹಾಗೂ ಅಬ್ಬಾಸಲಿ ಈತನಿಗೆ ಹೀಗೆ ಬಿಟ್ಟರೆ ತಮ್ಮ ವಿಷಯ ಎಲ್ಲರಿಗೆ ಹೇಳುತ್ತಾನೆ ಎಂದು ಸಿಟ್ಟಾಗಿ, ಸೈಫನಸಾಬನ ಮೇಲೆ ಹಲ್ಲೆ ಮಾಡಿದ್ದಾರೆ. ಬಳಿಕ ಆತನ ಎದೆಯ ಮೇಲೆ ಕುಳಿತ ಅಬ್ಬಾಸಲಿ, ಕುತ್ತಿಗೆ ಹಿಸುಕು ಕೊಲೆ ಮಾಡಿದ್ದಾನೆ. ಅನಂತರ ಪತ್ನಿ ರಾಜಮಾ ತನ್ನ ಪತಿಗೆ ವಿದ್ಯುತ್ ತಗುಲಿ ಮೃತಪಟ್ಟಿದ್ದಾನೆ ಎಂದು ನಾಟಕವಾಡಿ, ಸಾಕ್ಷಿ ನಾಶಪಡಿಸಿರುವ ಕುರಿತು ದೇವರಹಿಪ್ಪರಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಈ ಪ್ರಕರಣ ಕೈಗೆತ್ತಿಕೊಂಡ 1ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎಚ್.ಎ.ದೋಹನ್ ಅವರು ಅಭಿಯೋಗದ ಪರ ಹಾಜರ್ ಮಾಡಿದ ಸಾಕ್ಷಿ ಪುರಾವೆಗಳನ್ನು ಅವಲೋಕಿಸಿ, ಆರೋಪಿಗಳಾದ ರಾಜಮಾ ಸೈಫನಸಾಬ ಕೋರಬು, ಅಬ್ಬಾಸಲಿ ಉರ್ಫ್ ಹಮೀದ್ ಭಾವಸಾಬ ಚೌಧ್ರಿಗೆ ಜೀವಾವಧಿ ಶಿಕ್ಷೆ ಹಗೂ 1.20 ಲಕ್ಷ ರೂ.ಗಳ ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಅಭಿಯೋಗದ ಪರವಾಗಿ 1ನೇ ಅಧಿಕ ಸರ್ಕಾರಿ ಅಭಿಯೋಜಕಿ ವನಿತಾ ಇಟಗಿ ವಾದ ಮಂಡಿಸಿದ್ದರು. ಪ್ರಕರಣದ ತನಿಖೆ ವಿಜಯಪುರ ಗ್ರಾಮೀಣ ವೃತ್ತ ಸಿಪಿಐ ಆನಂದರಾವ ಎಸ್.ಎನ್. ಅವರು ಕೈಗೊಂಡು ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ಬಿಟಿಡಿಎದಿಂದ ಅನಧಿಕೃತ ಸೈಟ್ ಹಂಚಿಕೆ: ಲೋಕಾ ದಾಳಿ

• **ಬಾಗಲಕೋಟೆ:** ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದಿಂದ ಅನಧಿಕೃತ ಬಾಡಿಗೆದಾರರಿಗೆ ಸೈಟ್ ನೀಡಿದ್ದಾರೆಂದು ಖಾಸಗಿ ವ್ಯಕ್ತಿಯೊಬ್ಬ ನೀಡಿದ ದೂರಿನ ಹಿನ್ನೆಲೆಯಲ್ಲಿ ಲೋಕಾಯುಕ್ತ ಪೊಲೀಸರು ಬಿಟಿಡಿಎ ಕಚೇರಿ ಮೇಲೆ ದಾಳಿ ನಡೆಸಿ ದಾಖಲೆ ಪರಿಶೀಲನೆ ನಡೆಸಿದರು. ಲೋಕಾಯುಕ್ತ ಅಧೀಕ್ಷಕ ಮಹಾಲಿಂಗ ನಂದಗಾವಿ ಮಾರ್ಗದರ್ಶನದಲ್ಲಿ ಡಿವೈಎಸ್ಪಿ ಸುರೇಶ ರಡ್ಡಿ, ಇನ್ಸ್‌ಪೆಕ್ಟರ್ ಆನಂದ ಟೆಕ್ಕನ್ನವರ ಹಾಗೂ ಕಿಲಾರಿ ಸೇರಿದಂತೆ ಸಿಬ್ಬಂದಿ ದಾಳಿಯಲ್ಲಿ ಪಾಲ್ಗೊಂಡು ದಾಖಲೆಗಳ ಪರಿಶೀಲನೆ ನಡೆಸಿದರು. 13 ನಿವೇಶನಗಳನ್ನು ಬಿಟಿಡಿಎ ಅಧಿಕಾರಿಗಳು ಬಾಡಿಗೆದಾರರಲ್ಲದವರಿಗೆ ನೀಡಿದ್ದಾರೆ. ಇದರ ಬಗ್ಗೆ ತನಿಖೆ ನಡೆಸಬೇಕು ಎಂದು ದೂರು ಬಂದಿತ್ತು. ಆ ಹಿನ್ನೆಲೆಯಲ್ಲಿ ದೂರು ದಾಖಲಿಸಿಕೊಂಡು ದಾಖಲೆ ಪರಿಶೀಲನೆ ನಡೆಸಲಾಗುತ್ತಿದೆ. ಈಗ 13 ನಿವೇಶನ ಬಗ್ಗೆ ಮಾತ್ರ ಪರಿಶೀಲನೆ ನಡೆಸುತ್ತಿದ್ದೇವೆ. ಈ ಪರಿಶೀಲನೆ ವೇಳೆ ಇನ್ನೂ ಅನೇಕ ಮಾಹಿತಿಗಳು ಹೊರಬರುತ್ತಿದ್ದು, ಅದರ ತನಿಖೆಯೂ ಮುಂದುವರಿಯಲಿದೆ ಎಂದು ಲೋಕಾಯುಕ್ತರ ಡಿವೈಎಸ್ಪಿ ಸುರೇಶ ರಡ್ಡಿ ತಿಳಿಸಿದರು.

ಸಚಿವ ಡಾ.ಮನ್ಸುಖ್ ನಾಳೆ ಜಿಲ್ಲೆಗೆ

• **ಧಾರವಾಡ:** ಕೇಂದ್ರದ ಯುವಜನ ವ್ಯವಹಾರ ಮತ್ತು ಕ್ರೀಡಾ ಹಾಗೂ ಕಾರ್ಮಿಕ ಮತ್ತು ಉದ್ಯೋಗ ಇಲಾಖೆಯ ಕೇಂದ್ರ ಸಚಿವ ಡಾ. ಮನ್ಸುಖ್ ಮಾಂಡವೀಯ ಮಾ.14ರಂದು ಧಾರವಾಡ ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಅಂದು ಮಧ್ಯಾಹ್ನ 3.30ಕ್ಕೆ ನೂತನ ಕ್ರೀಡಾ ಸಂಕೀರ್ಣ ಮತ್ತು ಅಂತಾರಾಷ್ಟ್ರೀಯ ಈಜುಕೊಳ ಲೋಕಾರ್ಪಣಾ ಮಾಡಲಿದ್ದಾರೆ. ಸಂಜೆ 5.30ಕ್ಕೆ ಕರ್ನಾಟಕ ಕಾಲೇಜು ಮೈದಾನದಲ್ಲಿ ಧಾರವಾಡ ಸಂಸದ ಕ್ರೀಡಾ ಮಹೋತ್ಸವದ ಸಮಾರೋಪದಲ್ಲಿ ಪಾಲ್ಗೊಂಡು, ಪ್ರಶಸ್ತಿ ಪ್ರದಾನ ಮಾಡುವರು ಎಂದು ಸಚಿವರ ಅಧೀನ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಸರ್ಕಾರ ಅನಿಲ ಪೂರೈಸಲು ಹೆಚ್ಚಿನ ಆದ್ಯತೆ ನೀಡಲಿ

• **ಹುಬ್ಬಳ್ಳಿ:** ಇಸ್ರೇಲ್, ಅಮೆರಿಕಾ ಮತ್ತು ಇರಾನ್ ನಡುವೆ ಉಂಟಾಗಿರುವ ಉದ್ವಿಗ್ನ ಪರಿಸ್ಥಿತಿಯಿಂದ ಅಂತರರಾಷ್ಟ್ರೀಯ ವ್ಯಾಪಾರ, ಸಾಗಣೆ ಮತ್ತು ಇಂಧನ ಪೂರೈಕೆಯ ಮೇಲೂ ಪರಿಣಾಮ ಕಾಣಿಸಿಕೊಳ್ಳುತ್ತಿದೆ. ಈಗಾಗಲೇ ಅಡುಗೆ ಅನಿಲದ ಪೂರೈಕೆಯಲ್ಲಿ ವ್ಯತ್ಯಯಗಳು ಉಂಟಾಗುತ್ತಿದ್ದು, ಸರ್ಕಾರ ಅನಿಲ ಪೂರೈಸಲು ಹೆಚ್ಚಿನ ಆದ್ಯತೆ ನೀಡಬೇಕು ಎಂದು ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಅಧ್ಯಕ್ಷ ಜಿ.ಕೆ. ಆದಪ್ಪಗೌಡರ ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ತಿಳಿಸಿದ ಅವರು, ದೇಶದಲ್ಲಿ ಬಹಳಷ್ಟು ವಾಹನಗಳು ಈಗ ಸಿಎನ್‌ಜಿ ಇಂಧನವನ್ನು ಬಳಸುತ್ತಿವೆ. ಆದ್ದರಿಂದ ಇಂಧನ ಪೂರೈಕೆ ವ್ಯತ್ಯಯ ಉಂಟಾದರೆ ಸಾರಿಗೆ ವ್ಯವಸ್ಥೆಗೆ ತೊಂದರೆ ಉಂಟಾಗುವ ಸಾಧ್ಯತೆ ಇದೆ. ಇಂಧನ ಕೊರತೆ ಉಂಟಾಗದಂತೆ ಅಗತ್ಯ ಸಂಗ್ರಹ ವ್ಯವಸ್ಥೆ ಮಾಡುವುದು, ಸರಬರಾಜು ಸರಪಳಿಯನ್ನು ಬಲಪಡಿಸುವುದು ಮತ್ತು ಸಾರ್ವಜನಿಕ ಹಾಗೂ ವಾಣಿಜ್ಯ ವಾಹನಗಳಿಗೆ ನಿರಂತರ ಅನಿಲ ಪೂರೈಕೆ ಇರುವಂತೆ ಕ್ರಮ ಕೈಗೊಳ್ಳುವುದು ಅತ್ಯಂತ ಮುಖ್ಯವಾಗಿದೆ ಎಂದು ತಿಳಿಸಿದ್ದಾರೆ.



ಬ್ಯಾಡಗಿ ಮಾರುಕಟ್ಟೆಗೆ ಬಳ್ಳಾರಿ ಹಾಗೂ ಆಂಧ್ರ ಪ್ರದೇಶ ಸೇರಿದಂತೆ ವಿವಿಧ ಭಾಗಗಳಿಂದ ರೈತರು ಮೆಣಸಿನಕಾಯಿ ಮಾರಾಟಕ್ಕಾಗಿ ತರುತ್ತಾರೆ. ಆದರೆ ರಫ್ತು ವ್ಯವಹಾರ ನಿಂತಿರುವ ಹಿನ್ನೆಲೆಯಲ್ಲಿ ಮಾರುಕಟ್ಟೆಯಲ್ಲಿ ವ್ಯಾಪಾರ ಚಟುವಟಿಕೆ ಕುಂಠಿತಗೊಂಡಿದೆ. ಮೆಣಸಿನಕಾಯಿ ಬೆಲೆಯಲ್ಲಿ ಕುಸಿತ ಸಂಭವಿಸುವ ಸಾಧ್ಯತೆ ಇದೆ. ಇದರಿಂದ ರೈತರು ಮತ್ತು ವ್ಯಾಪಾರಿಗಳಿಗೆ ನಷ್ಟ ಉಂಟಾಗುವ ಭೀತಿ ಎದುರಾಗಿದೆ ಎಂದು ಹೇಳಿದ್ದಾರೆ.

ಹುಬ್ಬಳ್ಳಿ ನಗರವು ದೇಶದಲ್ಲಿಯೇ ವಾಲ್ವ್ ಉತ್ಪಾದನೆಗೆ ಪ್ರಸಿದ್ಧಿಯಾಗಿದೆ. ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ವ್ಯಾಪ್ತಿಯಲ್ಲಿ ಜಿಲ್ಲೆಯಲ್ಲಿ ನೂರಕ್ಕೂ ಹೆಚ್ಚು ವಾಲ್ವ್ ತಯಾರಿಕಾ ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳಿಗೆ ದೇಶದ ಜೊತೆಗೆ ವಿದೇಶಗಳಿಂದಲೂ ಉತ್ತಮ ಬೇಡಿಕೆ ಇದೆ. ಆದರೆ, ಪ್ರಸ್ತುತ ಯುದ್ಧದ ಪರಿಸ್ಥಿತಿಯಿಂದ ರಫ್ತು ವ್ಯವಹಾರದಲ್ಲಿ ಅಡಚಣೆ ಉಂಟಾಗಿ ಉದ್ಯಮಿಗಳು ಸಂಕಷ್ಟಕ್ಕೆ ಸಿಲುಕಿರುವುದು ಗಮನಾರ್ಹವಾಗಿದೆ.

ಇನ್ನೊಂದೆಡೆ ಯುದ್ಧದ ಪರಿಸ್ಥಿತಿಯನ್ನು ನೆಪ ಮಾಡಿಕೊಂಡು ಕೆಲವು ಗ್ಯಾಸ್ ಏಜೆನ್ಸಿಗಳು ಅಡುಗೆ ಅನಿಲ ಸಿಲಿಂಡರ್‌ಗಳ ಕೃತಕ ಅಭಾವ ಸೃಷ್ಟಿಸಿವೆ. ಇದರಿಂದ ಹೊಟೇಲ್ ಉದ್ಯಮಕ್ಕೆ ತೀವ್ರ ಸಂಕಷ್ಟ ಎದುರಾಗಿದ್ದು, ಜೊತೆಗೆ ನಾಗರಿಕರು ಸಿಲಿಂಡರ್ ಪಡೆದುಕೊಳ್ಳಲು ಪರದಾಡುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ಇಬ್ಬರು ಮಕ್ಕಳೊಂದಿಗೆ ಕೆರೆಗೆ ಹಾರಿ ಮಹಿಳೆ ಆತ್ಮಹತ್ಯೆ

• **ಯಲಬುರ್ಗಾ:** ಮಹಿಳೆಯೊರ್ವಳು ಗಂಡನ ಅನೈತಿಕ ಸಂಬಂಧಕ್ಕೆ ಬೇಸತ್ತು ತನ್ನ ಎರಡು ಮಕ್ಕಳೊಂದಿಗೆ ಬುಧವಾರ ರಾತ್ರಿ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ ಘಟನೆ ತಾಲೂಕಿನ ಮಾರನಾಳ ಗ್ರಾಮದ ಹೊರವಲಯದಲ್ಲಿ ಇರುವ ಕೆರೆಯಲ್ಲಿ ನಡೆದಿದ್ದು ಗುರುವಾರ ಬೆಳಕಿಗೆ ಬಂದಿದೆ.

ಮೃತಳನ್ನು ಬಾಳವ್ವ ಗಂಡ ಶರಣಪ್ಪ ಕುರಿ (35) ಹಾಗೂ ಮಕ್ಕಳಾದ ಹುಲಿಗೆವ್ವ ತಂದಿ ಶರಣಪ್ಪ ಕುರಿ (9ವರ್ಷ), ವಿಜಮ್ಮ ತಂದಿ ಶರಣಪ್ಪ ಕುರಿ (8ವರ್ಷ) ಎಂದು ಗುರುತಿಸಲಾಗಿದೆ.

ಘಟನೆ ವಿವರ: ಆಕೆಯ ಗಂಡ ಶರಣಪ್ಪ ಕುರಿ ಬೇರೆ ಮಹಿಳೆಯ ಜತೆ ಅನೈತಿಕ ಸಂಬಂಧ ಹೊಂದಿದ್ದ ಹೀಗಾಗಿ ಮನೆಯಲ್ಲಿ ನಿತ್ಯ ಹೆಂಡತಿ ಮಕ್ಕಳ ಜತೆ ಜಗಳವಾಡುತ್ತಿದ್ದ. ಇದರಿಂದ ಬೇಸತ್ತು ತನ್ನ ಒಟ್ಟು ಮೂರು ಹೆಣ್ಮಕ್ಕಳು ಪೈಕಿ ಹಿರಿಯ ಮಗಳು ವಸತಿ ಶಾಲೆಯಲ್ಲಿ 9ನೇ ತರಗತಿ ಓದುತ್ತಿದ್ದ ಕಾರಣ ಆಕೆ ಉಳಿದಿದ್ದಾಳೆ. ಇಬ್ಬರು ಮನೆಯಲ್ಲಿದ್ದ ಹೆಣ್ಮಕ್ಕಳೊಂದಿಗೆ ತಾಯಿ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ಮೃತಳ ಬಾಳವ್ವನ ತಂದೆ ರೇವಣೆಪ್ಪ ಅವರು ಯಲಬುರ್ಗಾ ಠಾಣೆಯಲ್ಲಿ ತನ್ನ ಅಳಿಯ ಶರಣಪ್ಪ ಕುರಿ ಎನ್ನುವವರ ಮೇಲೆ ದೂರು ದಾಖಲಿಸಿದ್ದು, ಆರೋಪಿ ಶರಣಪ್ಪ ಕುರಿಯನ್ನು ಪೊಲೀಸರು ಬಂಧಿಸಿದ್ದಾರೆ. ಈ ಪ್ರಕರಣ ಯಲಬುರ್ಗಾ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

ಸಲ್ಲೇಖನ ವ್ರತ: ಸಮಾಧಿ ಮರಣ ಹೊಂದಿದ ಆರ್ಯಿಕಾ 105 ಶ್ರೀ ಭಕ್ತಿಭೂಷಣಮತಿ ಮಾತಾ

• **ರಬಕವಿ-ಬನಹಟ್ಟಿ:** ತಾಲೂಕಿನ ಹಳಿಂಗಳಿ ಭದ್ರಗಿರಿ ಬೆಟ್ಟದಲ್ಲಿ ಸಲ್ಲೇಖನ ವ್ರತ ಸ್ವೀಕರಿಸಿದ್ದ ಮಹಾರಾಷ್ಟ್ರ ಮೂಲದ ಜೈಸಿಂಗಪುರದ ನಿವಾಸಿ ಆರ್ಯಿಕಾ 105 ಶ್ರೀ ಭಕ್ತಿಭೂಷಣಮತಿ ಮಾತಾಜಿಯವರು(90) ಗುರುವಾರ ಮಧ್ಯಾಹ್ನ ಸಮಾಧಿ ಮರಣ ಹೊಂದಿದರೆಂದು ಜೈನ ಮುನಿ ಆಚಾರ್ಯ ಶ್ರೀ 108 ಕುಲರತ್ನಭೂಷಣ ಮಹಾರಾಜರು ತಿಳಿಸಿದರು.

ಗುರುವಾರ ಹಳಿಂಗಳಿಯ ಭದ್ರಗಿರಿ ಬೆಟ್ಟದಲ್ಲಿ ಮಾತಾಜಿಯವರ ಸಮಾಧಿ ಮರಣದ ವಿಧಿವಿಧಾನಗಳು ಮುಗಿದ ನಂತರ ಅವರು ಪತ್ರಿಕೆಯೊಂದಿಗೆ ಮಾತನಾಡಿ, ಜೈನ ಮುನಿಗಳು ಮತ್ತು ಆರ್ಯಿಕಾ ಅವರು ಕೈಗೊಳ್ಳುವ ಅತ್ಯಂತ ಕಠಿಣ ವ್ರತ ಯಮ ಸಲ್ಲೇಖನ ವ್ರತವಾಗಿದೆ. ಮೋಕ್ಷ ಅಥವಾ ಸದ್ಗತಿಗಾಗಿ ಶರೀರ ತ್ಯಾಗ ಮಾಡುವುದಕ್ಕಾಗಿ ಈ ನಿರ್ಧಾರ ಕೈಗೊಳ್ಳುತ್ತಾರೆಂದರು.

ಕಳೆದ 8 ದಿನಗಳ ಹಿಂದೆ ಯಮ



ಸಲ್ಲೇಖನ ವ್ರತ ಸ್ವೀಕರಿಸಿ ಗುರುವಾರ ಸಮಾಧಿ ಮರಣ ಹೊಂದಿದ ಆರ್ಯಿಕಾ 105 ಶ್ರೀ ಭಕ್ತಿಭೂಷಣಮತಿಯವರ ಅಂತಿಮ ದಹನಕ್ರಿಯೆ ವಿಧಿವಿಧಾನಗಳು ಜೈನ ಧರ್ಮದ ಸಂಪ್ರದಾಯದಂತೆ ಮೆರವಣಿಗೆ ಮೂಲಕ ಮಾಡಿ ಭದ್ರಗಿರಿ ಬೆಟ್ಟದ ಪ್ರದೇಶದಲ್ಲಿ ನಡೆಸಲಾಯಿತು.

ಕಳೆದ ವರ್ಷವೂ ಕೂಡಾ ಇವರ ಪತಿಯೂ ಸಹ ಇದೇ ಸ್ಥಳದಲ್ಲಿ ಯಮ ಸಲ್ಲೇಖನ ಸ್ವೀಕರಿಸಿ ಇಚ್ಛಾಮರಣ ಹೊಂದಿದ್ದರು.

ಯಾರು ಜೀವನದಲ್ಲಿ ತನ್ನ ಜೀವಿತದ ಎಲ್ಲಾ ಉದ್ದೇಶಗಳನ್ನು ಈಡೇರಿಸಿರುವ ತೃಪ್ತಿ ಹೊಂದಿರುತ್ತಾರೋ, ಇನ್ನು ಈ ದೇಹದ ಮೂಲಕ ಯಾವುದೇ ಉದ್ದೇಶಗಳೂ ಈಡೇರುವ ಅಗತ್ಯವಿಲ್ಲವೆಂದು ಅನಿಸುತ್ತದೋ ಅಂಥವರು ಮಾತ್ರ ಸಂತಾರಾ ಅಥವಾ ಸಲ್ಲೇಖನ ವ್ರತ ಕೈಗೊಳ್ಳುತ್ತಾರೆ. ಈ ಸಂದರ್ಭದಲ್ಲಿ ಕರ್ನಾಟಕ-ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯಗಳಿಂದಲೂ ಜನ ಸಾವಿರಾರು ಸಂಖ್ಯೆಯಲ್ಲಿ ಜೈನ ಧರ್ಮದ ಶ್ರಾವಕ ಶ್ರಾವಕಿಯರು ಹಿರಿಯರು ಭಾಗವಹಿಸಿದ್ದರು.

ಜೀವರಕ್ಷಕ ಔಷಧಿ ಖರೀದಿ: ದಿನೇಶ್ ಗುಂಡೂರಾವ್

• **ವಿಧಾನಸಭೆ:** ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೆ ಅಗತ್ಯ ಜೀವರಕ್ಷಕ ಔಷಧಿಗಳನ್ನು ಖರೀದಿಸಿ, ರೋಗಿಗಳಿಗೆ ಉಚಿತವಾಗಿ ವಿತರಿಸಲು ಅನುವಾಗುವಂತೆ ಕೆಎಸ್‌ಎಂಎಸ್‌ಸಿಎಲ್ ವತಿಯಿಂದ ತ್ವರಿತವಾಗಿ ಖರೀದಿ ಹಾಗೂ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ದೊಡ್ಡನಗೌಡ ಹನುಮಗೌಡ ಪಾಟೀಲ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೆ ಅಗತ್ಯ ಜೀವ ರಕ್ಷಕ ಔಷಧಿಗಳನ್ನು ಖರೀದಿಸಿ, ರೋಗಿಗಳಿಗೆ ವಿತರಿಸಲು ಸರ್ಕಾರದ ವಿವಿಧ ಅನುದಾನಗಳನ್ನು ಬಳಸಿಕೊಳ್ಳಲು ಸೂಚನೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಔಷಧಿ ಕೊರತೆ ಉಂಟಾಗದಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದರು.

ತಾತ್ಕಾಲಿಕವಾಗಿ ಅಗತ್ಯ ಔಷಧಿಗಳನ್ನು ಕೆಎಸ್‌ಎಂಎಸ್‌ಎಲ್ ಬ್ಯಾಂಕ್ ಖಾತೆಯಲ್ಲಿ ಲಭ್ಯವಿರುವ ಅನುದಾನದಲ್ಲಿ ಖರೀದಿಸಿ ಬಳಸಲು ಅನುಮತಿ ನೀಡಿ ಎಲ್ಲಾ ಆರೋಗ್ಯ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ. ರೋಗಿಗಳಿಗೆ ಉಚಿತವಾಗಿ ಔಷಧಿಗಳನ್ನು ವಿತರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು.

ಕುಷ್ಟಗಿ ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಕೆಕೆಆರ್‌ಡಿಬಿ ಅನುದಾನದಡಿ ಸರಬರಾಜಾಗಿರುವ ಸಿ.ಟಿ. ಸ್ಕ್ಯಾನ್ ಕಾರ್ಯನಿರ್ವಹಿಸುತ್ತಿದೆ. ಬಡರೋಗಿಗಳಿಗೆ ಉಚಿತವಾಗಿ ಸೌಲಭ್ಯವನ್ನು ನೀಡಲಾಗುತ್ತಿದ್ದು, ಸಿ.ಟಿ. ಸ್ಕ್ಯಾನ್ ವಿಭಾಗದಲ್ಲಿ ಆಪರೇಟರ್ ಕೊರತೆಯಾಗದಂತೆ ತಂತ್ರಜ್ಞರಿಂದ ಸೇವೆಯನ್ನು ಒದಗಿಸಲಾಗುತ್ತಿದೆ. ಕುಷ್ಟಗಿಯಲ್ಲಿ ತಾಯಿ – ಮಕ್ಕಳ ಆಸ್ಪತ್ರೆ ಉದ್ಘಾಟನೆಯಾಗಿದ್ದು, ಆಸ್ಪತ್ರೆಗೆ ಬೇಕಾದ ಅಗತ್ಯ ಸಿಬ್ಬಂದಿ ನೇಮಕ ಹಾಗೂ ಪರಿಕರಗಳನ್ನು ಒದಗಿಸುವ ವ್ಯವಸ್ಥೆಯಾಗುತ್ತಿದೆ ಎಂದು ವಿವರಿಸಿದರು.

ರಾಮ ಬಾಣ



ವಂಚನೆ ಪ್ರಕರಣದಲ್ಲಿ ವಿದ್ಯಾವಂತರೇ ಹೆಚ್ಚು ಸಂತ್ರಸ್ತರು: ಪರಮೇಶ್ವರ್

• **ವಿಧಾನಪರಿಷತ್:** ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ಸೈಬರ್ ವಂಚನೆಗಳ ಸಂಬಂಧ ನನ್ನ ಬ್ಯಾಂಕ್ ಖಾತೆ ಕೂಡ ಸುರಕ್ಷಿತವಲ್ಲ. ಇಂದಿನ ಯುಗದಲ್ಲಿ ಕಂಪೆನಿಯೊಂದರಲ್ಲಿ ಉನ್ನತ ಸ್ಥಾನದಲ್ಲಿದ್ದ ಪ್ರಮುಖ ಮಹಿಳೆಯೊಬ್ಬರಿಗೆ ಸೈಬರ್ ವಂಚನೆ ಮಾಡಿ 32 ಕೋಟಿ ರೂ. ವಂಚನೆ ಪ್ರಕರಣ ನಡೆದಿದೆ. ವಿದ್ಯಾವಂತರು, ಬುದ್ಧಿವಂತರು ಸಹ ಈ ಜಾಲದಲ್ಲಿ ಸಿಲುಕಿಕೊಂಡ ಪ್ರಕರಣಗಳಿವೆ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ತಿಳಿಸಿದರು.

ಗೋವಿಂದ ರಾಜು ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಕರ್ನಾಟಕದಲ್ಲಿ ಕಳೆದ ಮೂರು ವರ್ಷಗಳಲ್ಲಿ 59,632 ಸೈಬರ್ ಅಪರಾಧ ಪ್ರಕರಣಗಳಲ್ಲಿ ಜನರು 5,473.97 ಕೋಟಿ ರೂ. ಕಳೆದುಕೊಂಡು ವಂಚನೆಗೊಳಗಾಗಿದ್ದಾರೆ ಎಂದರು. ಇದರಲ್ಲಿ ಪೊಲೀಸರು ಒಟ್ಟು 730 ಕೋಟಿ ರೂ. (ಶೇ. 12) ಮಾತ್ರ ಪಡೆಯಲು ಸಾಧ್ಯವಾಗಿದೆ. 2024 ರಲ್ಲಿ 22,483 ಸೈಬರ್ ಪ್ರಕರಣ ದಾಖಲಾಗಿದ್ದು, 2025ರಲ್ಲಿ 14,899 ಪ್ರಕರಣ ದಾಖಲಾಗಿವೆ. 2020–21ರಲ್ಲಿ 446 ಕೋಟಿ ವಂಚನೆಯಾದರೆ ಈ ಪೈಕಿ 97 ಕೋಟಿ ರೂ. ವಾಪಸ್ ಪಡೆಯಲಾಗಿದೆ. 2024ರಲ್ಲಿ 2,399 ಕೋಟಿ ಪೈಕಿ 390 ಕೋಟಿ ರೂ. ವಾಪಸ್ ವಶಕ್ಕೆ ಪಡೆಯಲಾಗಿದೆ. ಅದೇ ರೀತಿ 2025ರಲ್ಲಿ 2,200 ಕೋಟಿಯಲ್ಲಿ 231 ಕೋಟಿ ರೂ. ವಾಪಸ್ ಪಡೆಯಲಾಗಿದೆ ಎಂದು ಸಚಿವರು ತಿಳಿಸಿದರು.

ಡಿಜಿಟಲ್ ಅರೆಸ್ಟ್ ಪ್ರಕರಣಗಳು ಕಡಿಮೆಯಾಗಿದ್ದು, ಕಳೆದ ವರ್ಷ 345 ಪ್ರಕರಣಗಳಲ್ಲಿ 215 ಕೋಟಿ ರೂ. ವಂಚನೆಯಾಗಿದೆ. ಅಮಾಯಕರ ಬ್ಯಾಂಕ್ ಖಾತೆಗಳನ್ನು ಬಳಸಿ ರಾಜ್ಯದಲ್ಲಿ ಸೈಬರ್ ಅಪರಾಧಗಳಿಗೆ ಬಳಸಲಾಗುತ್ತಿದ್ದ ಸುಮಾರು 42 ಸಾವಿರ ಮ್ಯೂಲ್ ಬ್ಯಾಂಕ್ ಖಾತೆಗಳನ್ನು ಪತ್ತೆ ಹಚ್ಚಿದೆ. ಇದುವರೆಗೂ 500ಕ್ಕೂ ಅಧಿಕ ಮಂದಿಯನ್ನು ಬಂಧಿಸಲಾಗಿದೆ ಎಂದು ಹೇಳಿದರು. ಭಾರತದಲ್ಲೇ ಪ್ರಪ್ರಥಮವಾಗಿ ಬೆಂಗಳೂರು ನಗರದಲ್ಲಿ ವಿಶೇಷ 43 ಸೈಬರ್ ಪೊಲೀಸ್ ಠಾಣೆಯನ್ನು ಸ್ಥಾಪಿಸುವ ಮೂಲಕ ರಾಜ್ಯದ ಪೊಲೀಸ್ ಇಲಾಖೆ ಮುಂಚೂಣಿಯಲ್ಲಿದೆ. ಪ್ರತಿದಿನ ದಾಖಲಾಗುವ ಪ್ರಕರಣಗಳನ್ನು ಶೀಘ್ರವಾಗಿ ವಿಚಾರಣೆ ನಡೆಸಲು ರಾಜ್ಯದಲ್ಲಿ ಡಿಜಿಪಿ ಸೈಬರ್ ಕಮಾಂಡ್ ಹುದ್ದೆ ಸೃಜಿಸಲಾಗಿದೆ ಎಂದು ಹೇಳಿದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಸಿದ್ದರಾಮಯ್ಯ ಮಂಡಿಸಿದ ಬಜೆಟ್ ನಲ್ಲಿ ಅಂಕಿ ಅಂಶ ದೊಡ್ಡದಾಗಿದೆ, ಒಳಗೆ ತಿರುಳಿಲ್ಲ
– ಆರ್.ಅಶೋಕ್
– ಪರ್ಸ್ ದೊಡ್ಡದು, ಒಳಗೆ ಪೈಸೆಯೂ ಇಲ್ಲ ಎಂಬಂತೆ!

ದಿನ ಭವಿಷ್ಯ

ಮೇಷ
ಉದ್ಯೋಗ ಬದಲಾವಣೆಗೆ ಈಗ ಕಾಲ ಅಪಕ್ವ. ಆಪ್ತರ ಕುರಿತಂತೆ ಭಾವುಕ ಪ್ರಸಂಗ ಎದುರಿಸುವಿರಿ. ಹಣದ ಬಿಕ್ಕಟ್ಟು ಪರಿಹಾರ.

ವೃಷಭ
ವೃತ್ತಿ ಒತ್ತಡ ಕಡಿಮೆ. ಆದರೆ ಖಾಸಗಿ ಬದುಕಲ್ಲಿ ಹೊಸ ಸವಾಲು ಉದ್ಭವ. ದಿನದಂತ್ಯಕ್ಕೆ ಸಂತೋಷ ಪಡುವ ಬೆಳವಣಿಗೆ. ಆಪ್ತ ಸಂಗದಿಂದ ನೆಮ್ಮದಿ.

ಮಿಥುನ
ಖಾಸಗಿ ಮತ್ತು ವೃತ್ತಿ ಬದುಕಲ್ಲಿ ಪೂರಕ ದಿನ. ಸಂಕೀರ್ಣ ಕಾರ್ಯವನ್ನು ಸುಲಭದಲ್ಲಿ ಮುಗಿಸುವಿರಿ. ವಿವಾಹಿತರ ಪಾಲಿಗೆ ಶುಭ ಬೆಳವಣಿಗೆ ಸಂಭವ.

ಕಟಕ
ಇಂದು ಸಕಾಲದಲ್ಲಿ ಕಾರ್ಯ ಮುಗಿಯದು. ಕೆಲ ವಿದ್ಯಮಾನಗಳಿಗೆ ಭಾವಾವೇಶ ತೋರುವಿರಿ. ಶಾಂತಚಿತ್ತರಾಗಿ ಪ್ರತಿಕ್ರಿಯೆ ತೋರುವುದು ಅವಶ್ಯ.

ಸಿಂಹ
ಎಲ್ಲ ಇದ್ದೂ ಅಸಂತೃಪ್ತಿಯ ಭಾವ. ಕೆಲ ವಿಷಯ ಅಗತ್ಯಕ್ಕಿಂತ ಗಂಭೀರ ತೆಗೆದುಕೊಳ್ಳದಿರಿ. ನೆಮ್ಮದಿ ಕೆಡಿಸಲು ಅವಕಾಶ ಕೊಡದಿರಿ.

ಕನ್ಯಾ
ವಿರಳಿತರಗಳ ದಿನ. ವೃತ್ತಿಯಲ್ಲಿ ಹೊಣೆ ಹೆಚ್ಚು, ಹೊಸ ಉದ್ಯೋಗ ಅವಕಾಶ. ಪ್ರೀತಿಯಲ್ಲಿ ಅಪಸ್ವರ ಎದ್ದೀತು. ವಿವೇಕದಿಂದ ವ್ಯವಹರಿಸಿ.

ತುಲಾ
ಸಂಬಂಧದಲ್ಲಿ ಉಂಟಾಗಿದ್ದ ಸಮಸ್ಯೆ ನಿವಾರಣೆ. ಹಣದ ವಿಚಾರದಲ್ಲಿ ಎಚ್ಚರವಿರಲಿ. ಸಾಲ ನೀಡಿದರೆ ಮರಳಿ ಬಾರದ ಪರಿಸ್ಥಿತಿ.

ವೃಶ್ಚಿಕ
ಇನ್ನಷ್ಟು ವಿಳಂಬ ಬೇಡ, ಪ್ರಮುಖ ನಿರ್ಧಾರ ಇಂದೇ ತಾಳಿ. ಆದರಿಂದ ಉತ್ತಮ ಫಲಿತಾಂಶ. ಹಿರಿಯರಿಗೆ ದೈಹಿಕ ನೋವು.

ಧನು
ವೃತ್ತಿಯ ಒತ್ತಡ ನಿಮ್ಮ ಆರೋಗ್ಯದ ಮೇಲೂ ಪರಿಣಾಮ ಬೀರಬಹುದು. ವೃತ್ತಿ ಮಾತ್ಸರ್ಯ ನೆಮ್ಮದಿ ಕಲಕಬಹುದು.

ಮಕರ
ವೃತ್ತಿಯ ಹೆಚ್ಚುವರಿ ಹೊಣೆಯನ್ನು ಸರಿಯಾಗಿ ನಡೆಸುವಿರಿ. ಶೇರು ವ್ಯವಹಾರ ಲಾಭ ತರಲಿದೆ. ಮನೆಯ ಕಾರ್ಯ ಸುಗಮವಾಗಿ ಸಾಗಲಿದೆ.

ಕುಂಭ
ಪ್ರತಿಯೊಬ್ಬರ ವಿಷಯವನ್ನೂ ನೀವೇ ನಿರ್ಧರಿಸುವವರು ಎಂಬಂತೆ ವರ್ತಿಸದಿರಿ. ನಿಮ್ಮ ನಡೆಗೆ ಕೆಲವರ ವಿರೋಧ ಸಂಭವ.

ಮೀನ
ಪ್ರೀತಿಯಲ್ಲಿ ಗುಣಾತ್ಮಕ ಬೆಳವಣಿಗೆ. ಆತ್ಮೀಯರ ಬೆಂಬಲ. ಮನದ ಒತ್ತಡ ನಿವಾರಣೆ. ವೃತ್ತಿಯಲ್ಲಿ ಇತರರ ಸಹಕಾರ ಪಡೆಯುವಿರಿ.

ರಾಹುಕಾಲ: 10.30-12.00
ಗುಳಿಕಕಾಲ: 7.30-9.00

ಅದೃಷ್ಟ ಸಂಖ್ಯೆ : 3,5,9,2

56,432 ಹುದ್ದೆಗಳ ನೇಮಕಾತಿಯಲ್ಲಿ ತಕ್ಷಣವೇ ಜಾರಿಯಾಗಲಿ
ಒಳ ಮೀಸಲಿಗೆ ಮಾದಿಗರ ಆಗ್ರಹ

• **ಬೆಂಗಳೂರು:** ರಾಜ್ಯದಲ್ಲಿ ಬಾಕಿ ಇರುವ 56,432 ಹುದ್ದೆಗಳ ನೇಮಕಾತಿಯಲ್ಲಿ ತಕ್ಷಣವೇ ಒಳ ಮೀಸಲಾತಿ ಜಾರಿಗೊಳಿಸಬೇಕು ಹಾಗೂ ಈ ಬಗ್ಗೆ ಶುಕ್ರವಾರ ನಡೆಯಲಿರುವ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಅಂತಿಮ ತೀರ್ಮಾನ ಕೈಗೊಳ್ಳಬೇಕೆಂದು ಆಗ್ರಹಿಸಿ ಸಾವಿರಾರು ದಲಿತ ಹೋರಾಟಗಾರರು ಬೃಹತ್ ಪ್ರತಿಭಟನೆ ನಡೆಸಿದರು.

ಒಳಮೀಸಲಾತಿ ಹೋರಾಟ ಸಮಿತಿ ನೇತೃತ್ವದಲ್ಲಿ ಗುರುವಾರ ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ನಡೆದ ಬೃಹತ್ ಪ್ರತಿಭಟನೆಯಲ್ಲಿ ಜಮಾವಣೆಗೊಂಡ ಸಾವಿರಾರು ಜನರು, ರಾಜ್ಯ ಸರಕಾರದ ವಿರುದ್ಧ ಅಸಮಾಧಾನ ಹೊರಹಾಕಿದರು. ಒಳ ಮೀಸಲಾತಿ ಜಾರಿಯಾಗುವವರೆಗೆ ಯಾವುದೇ ನೇಮಕಾತಿ ಪ್ರಕ್ರಿಯೆ ನಡೆಸಬಾರದು ಎಂದು ಪ್ರತಿಭಟನಾಕಾರರು ಪಟ್ಟು ಹಿಡಿದ್ದಿದ್ದರು.

ಒಳಮೀಸಲಾತಿಯನ್ನು ತಪ್ಪಿಸಲು ರಾಜ್ಯ ಸರ್ಕಾರ ವ್ಯವಸ್ಥಿತ ಸಂಚು ರೂಪಿಸುತ್ತಿದೆ. ತರಾತುರಿಯಲ್ಲಿ ಹೊರಡಿಸಿರುವ ನೇಮಕಾತಿ ಆದೇಶಗಳನ್ನು ಹಿಂಪಡೆಯಬೇಕು. ಬಡ್ತಿ, ಬ್ಯಾಕ್ ಲಾಗ್ ಹುದ್ದೆ ಹಾಗೂ ಅನುದಾನಿತ ಸಂಸ್ಥೆಗಳಲ್ಲೂ ಒಳ ಮೀಸಲಾತಿ ಅನ್ವಯಿಸಬೇಕು, ಎಂದು ಹೋರಾಟಗಾರರು ಒತ್ತಾಯಿಸಿದರು. ನ್ಯಾಯಮೂರ್ತಿ ನಾಗಮೋಹನ್ ದಾಸ್ ವರದಿಯಂತೆ ಎಸ್ಸಿ ಮೀಸಲಾತಿಯನ್ನು ಶೇ.17ಕ್ಕೆ ಹೆಚ್ಚಿಸಿರುವುದನ್ನು ಸಂವಿಧಾನದ 9ನೇ ಅನುಸೂಚಿಗೆ ಸೇರಿಸಲು ಕೇಂದ್ರಕ್ಕೆ ಶಿಫಾರಸು ಮಾಡಬೇಕೆಂದು ಆಗ್ರಹಿಸಿದರು.

ತೆಲಂಗಾಣದಲ್ಲಿ ಒಳಮೀಸಲಾತಿ ಅನುಷ್ಠಾನದ ನೇತಾರ, ಮಂದಕೃಷ್ಣ ಮಾದಿಗ ಮಾತನಾಡಿ, ಕಾಂಗ್ರೆಸ್ ಹೈಕಮಾಂಡ್ ಅನ್ನು ನಿಯಂತ್ರಿಸುತ್ತಿರುವ ಮಲ್ಲಿಕಾರ್ಜುನ ಖರ್ಗೆ ಅವರು ಒಳ ಮೀಸಲಾತಿ ಜಾರಿಗೆ ಅಡ್ಡಿಯಾಗಿದ್ದಾರೆ. ತಮಿಳುನಾಡು, ಆಂಧ್ರ ಪ್ರದೇಶಗಳಲ್ಲಿ ಜಾರಿಯಾದರೂ ಕರ್ನಾಟಕದಲ್ಲಿ ಯಾಕೆ ಸಾಧ್ಯವಾಗುತ್ತಿಲ್ಲ? ಎಂದು ಪ್ರಶ್ನಿಸಿದರು.

ಮಾದರ ಚೆನ್ನಯ್ಯ ಸ್ವಾಮೀಜಿ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಕೂಡಲೇ ನಿರ್ಧಾರ ಕೈಗೊಳ್ಳಬೇಕು. ಇಲ್ಲದಿದ್ದರೆ ಹೋರಾಟವು ಫ್ರೀಡಂ ಪಾರ್ಕ್‌ನಿಂದ ವಿಧಾನಸೌಧಕ್ಕೆ ಸ್ಥಳಾಂತರಗೊಳ್ಳಲಿದೆ, ಎಂದು ಎಚ್ಚರಿಕೆ ನೀಡಿದರು.



ಸಚಿವರ ಭರವಸೆ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಸಚಿವರಾದ ಕೆ.ಎಚ್. ಮುನಿಯಪ್ಪ, ಸತೀಶ್ ಜಾರಕಿಹೊಳಿ, ಈಶ್ವರ್ ಖಂಡ್ರೆ, ದಿನೇಶ್ ಗುಂಡೂರಾವ್ ಹಾಗೂ ಮಾಜಿ ಸಚಿವ ಎಚ್. ಆಂಜನೇಯ ಅವರು ಪ್ರತಿಭಟನಾಕಾರರ ಅಹವಾಲು ಸ್ವೀಕರಿಸಿದರು. ಮಾ.27 ರಂದು ನಡೆಯಲಿರುವ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಸಮಗ್ರವಾಗಿ ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು. ಒಳ ಮೀಸಲಾತಿ ಜಾರಿಯಾಗುವವರೆಗೂ ಯಾವುದೇ ಹೊಸ ನೇಮಕಾತಿ ಪ್ರಕ್ರಿಯೆ ನಡೆಸುವುದಿಲ್ಲ, ಎಂಬ ಭರವಸೆಯನ್ನು ಸಚಿವರು ನೀಡಿದರು.

ಪ್ರತಿಭಟನೆಯ ಧಗಧಗ: ರಾಜ್ಯದ ಮೂಲೆ ಮೂಲೆಗಳಿಂದ ಬಂದಿದ್ದ ಸಾವಿರಾರು ಜನರು ಆನಂದ್ ರಾವ್ ವೃತ್ತದಿಂದ ಕೆ.ಆರ್. ವೃತ್ತದವರೆಗೆ ಜಮಾಯಿಸಿದ್ದರಿಂದ ಸಂಚಾರ ದಟ್ಟಣೆ ಉಂಟಾಗಿತ್ತು. ಅಲೆಮಾರಿ ಸಮುದಾಯದವರು ಮೈಮೇಲೆ ಚಾವಟಿಯಿಂದ ಹೊಡೆದುಕೊಂಡು ನ್ಯಾಯಕ್ಕಾಗಿ ಆಗ್ರಹಿಸಿದ ದೃಶ್ಯ ಮನಕಲಕುವಂತಿತ್ತು. ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ. ಮಹದೇವಪ್ಪ ಅವರ ವಿರುದ್ಧವೂ ಅಸಮಾಧಾನ ವ್ಯಕ್ತಪಡಿಸಿದ ಪ್ರತಿಭಟನಾಕಾರರು, ಅವರನ್ನು ತಕ್ಷಣವೇ ಬದಲಾಯಿಸಬೇಕೆಂದು ಘೋಷಣೆ ಕೂಗಿದರು. ಪ್ರತಿಭಟನೆಯಲ್ಲಿ ಮಾದರ ಚೆನ್ನಯ್ಯ ಸ್ವಾಮೀಜಿ, ಮಂದಕೃಷ್ಣ ಮಾದಿಗ, ಮಾರಸಂದ್ರ ಮುನಿಯಪ್ಪ, ಹನುಮೇಗೌಡ ಬೀರರಕಲ್ಲು, ಎಸ್.ಮಾರಪ್ಪ, ಬಸವರಾಜ್ ಕೌತಾಳ್, ಅಂಬಣ್ಣ ಆರೋಲಿಕರ್, ನರಸಪ್ಪ ದಂಡೋರ, ಬಿ.ಆರ್. ಭಾಸ್ಕರ್‌ಪ್ರಸಾದ್, ಹರಿರಾಮ್, ಡಾ. ಪಿ.ಮೂರ್ತಿ ಇದ್ದರು.

ಕ್ರೀಡಾಂಗಣ ನಿರ್ಮಾಣಕ್ಕೆ ಆಡಳಿತಾತ್ಮಕ ಒಪ್ಪಿಗೆ

• **ಬೆಂಗಳೂರು:** ಆನೇಕಲ್ ತಾಲೂಕಿನ ಸೂರ್ಯ ನಗರದಲ್ಲಿ 813 ಕೋಟಿ ರೂ. ವೆಚ್ಚದಲ್ಲಿ ಅಂತಾರಾಷ್ಟ್ರೀಯ ಕ್ರೀಡಾಂಗಣ ನಿರ್ಮಾಣಕ್ಕೆ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಆಡಳಿತಾತ್ಮಕ ಒಪ್ಪಿಗೆ ನೀಡಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಾಲ್ತುಳಿತ ಪ್ರಕರಣದಿಂದ ಕ್ರೀಡಾಂಗಣವನ್ನು ನಗರದಿಂದ ದೂರದಲ್ಲಿ ಹೊಸ ಕ್ರೀಡಾಂಗಣ ನಿರ್ಮಿಸಬೇಕೆನ್ನುವ ಸಲಹೆಗೆ ಸರ್ಕಾರ ಮಣೆ ಹಾಕಿದ್ದು, ಸೂರ್ಯನಗರದಲ್ಲಿ 75 ಎಕರೆ ಜಮೀನಿನಲ್ಲಿ ನೂತನ ಕ್ರೀಡಾಂಗಣ ನಿರ್ಮಾಣವಾಗಲಿದೆ.

ಕ್ರೀಡಾಂಗಣದ ಸುತ್ತ ವಾಣಿಜ್ಯ ಮಳಿಗೆ ಮತ್ತು ಇತರೆ ಕಟ್ಟಡ ಕಾಮಗಾರಿಗಳ ಪರಿಷ್ಕೃತ ವೆಚ್ಚದ ಮಾಹಿತಿ ನೀಡಲು ಸಂಪುಟ ಸಭೆಯು ಸಂಬಂಧಿಸಿದ ಇಲಾಖೆಗೆ ಸೂಚನೆ ನೀಡಿದೆ. ಸೂರ್ಯನಗರದಲ್ಲಿ ಅಂತರರಾಷ್ಟ್ರೀಯ ಮಟ್ಟದ ಕ್ರಿಕೆಟ್ ಸ್ಟೇಡಿಯಂ ಮತ್ತು ಕ್ರೀಡಾ ಸಂಕೀರ್ಣ ನಿರ್ಮಿಸಲು ಕರ್ನಾಟಕ ಗೃಹ ಮಂಡಳಿ ಮುಂದಾಗಿದೆ. ಎಲ್ಲವೂ ಅಂದುಕೊಂಡಂತೆ ಆದರೆ 3 ವರ್ಷಗಳಲ್ಲಿ ಪೂರ್ಣಗೊಳ್ಳಲಿದೆ.

ಮಂಡ್ಯ ವಿಧಾನಸಭಾಕ್ಷೇತ್ರದ 4 ಕಾವೇರಿ ನಾಲೆಗಳಿಗೆ ವಿತರಣಾ ನಾಲೆ ಹಾಗೂ ಪಿಕಪ್ ನಾಲೆಗಳ ಆಧುನೀಕರಣಕ್ಕೆ 100 ಕೋಟಿ ಅನುದಾನ ನೀಡಲು ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದ್ದು, ಕಾವೇರಿ ಶಾಖಾ ನಾಲೆ, ಕೆರೆಗೋಡು ಶಾಖಾ ನಾಲೆ, ಶಿಂಸಾ ಶಾಖಾ ನಾಲೆಗಳ ಆಧುನೀಕರಣಗೊಳ್ಳಲಿವೆ. ಮೈ ಶುಗರ್ ಸಕ್ಕರೆ ಕಾರ್ಖಾನೆ ದುರಸ್ತಿಗೆ ಸಂಪುಟ ಸಭೆಯಲ್ಲಿ ಒಪ್ಪಿಗೆ ಸಿಕ್ಕಿದ್ದು, 5 ಸಾವಿರ ಟಿಸಿಡಿ ಕಬ್ಬು ನುರಿಯುವ ಹೊಸ ಯಂತ್ರೋಪಕರಣ ಅಳವಡಿಕೆಗೆ ಸಂಪುಟ ಅನುಮೋದನೆ ನೀಡಿದೆ.

ಪಬ್ಲಿಕ್ ಶಾಲೆಗಳನ್ನಾಗಿ ಉನ್ನತೀಕರಣ: 683 ಕೋಟಿ ವೆಚ್ಚದಲ್ಲಿ ಕೆಪಿಎಸ್ ಶಾಲೆಗಳನ್ನಾಗಿ ಉನ್ನತೀಕರಿಸಲು ಸಂಪುಟ ಒಪ್ಪಿಗೆ ನೀಡಿದ್ದು, 76 ಮೌಲಾನಾ ಆಝಾದ್ ಆಂಗ್ಲ ಮಾದರಿ ಶಾಲೆಗಳು ಮತ್ತು 41 ಉರ್ದು ಮಾಧ್ಯಮ ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳನ್ನಾಗಿ ಉನ್ನತೀಕರಣಕ್ಕೆ ಸಂಪುಟದಲ್ಲಿ ನಿರ್ಧರಿಸಲಾಗಿದೆ.

ನೂತನ ಜಾಹಿರಾತು ನೀತಿ

ಸರ್ಕಾರಕ್ಕೆ ಆದಾಯ ತರುವ ನಿಟ್ಟಿನಲ್ಲಿ ನೂತನ ಜಾಹಿರಾತು ನೀತಿಗೆ ಸಚಿವ ಸಂಪುಟ ಸಭೆ ಅಸ್ತು ಎಂದಿದ್ದು, ಜಾಹಿರಾತು ನೀತಿ-2026ಕ್ಕೆ ಒಪ್ಪಿಗೆ ಸಿಕ್ಕಿದೆ.

ಭಾರತಕ್ಕೆ ತೈಲ, ಅನಿಲ ಸರಾಗ

ಪುಟ ೧ ➜ ಶೆನ್ ಲಾಂಗ್ ಎಂಬ ಸೂಯೆಜ್‌ಮ್ಯಾಕ್ಸ್ ವರ್ಗದ ಈ ಹಡಗು ಮಾ.1 ರಂದು ಸೌದಿ ಅರೇಬಿಯಾದ ರಾಸ್ ತನುರಾ ಬಂದರಿನಿಂದ ಕಚ್ಚಾ ತೈಲವನ್ನು ಹೊತ್ತು ಭಾರತತ್ತ ಪ್ರಯಾಣ ಆರಂಭಿಸಿತ್ತು. ಇದೇ ಸಮಯದಲ್ಲಿ ಅಮೆರಿಕ ಮತ್ತು ಇಸ್ರೇಲ್ ದಾಳಿಗಳ ಹಿನ್ನೆಲೆಯಲ್ಲಿ ಇರಾನ್ ಹಾರ್ಮುಜ್ ಜಲಸಂಧಿಯನ್ನು ತಾತ್ಕಾಲಿಕವಾಗಿ ಬಂದ್ ಮಾಡಿತ್ತು. ಇದರಿಂದಾಗಿ ಹಡಗು ಕೆಲ ದಿನಗಳು ಸಮುದ್ರದಲ್ಲೇ ನಿಂತಿತ್ತು. ಯುದ್ಧ ಆರಂಭವಾದ ನಂತರವೂ ಹಾರ್ಮುಜ್ ಜಲಮಾರ್ಗದಲ್ಲಿ ಇನ್ನೂ 28 ಭಾರತೀಯ ಧ್ವಜ ಹೊಂದಿರುವ ಹಡಗುಗಳು ಸಿಲುಕಿಕೊಂಡಿವೆ ಎಂದು ಭಾರತದ ಹಡಗು ನಿರ್ದೇಶನಾಲಯದ ಮಹಾನಿರ್ದೇಶಕರು ಮಾಹಿತಿ ನೀಡಿದ್ದಾರೆ.

ಅನುಮತಿ ಪಡೆಯದ ಹಡಗುಗಳಿಗೆ ಎಚ್ಚರಿಕೆ

ಪುಟ ೧ ➜ ಅಮೆರಿಕ ಮತ್ತು ಇಸ್ರೇಲ್ ಜತೆ ಉದ್ವಿಗ್ನತೆ ಹೆಚ್ಚಾದ ನಂತರ, ಇರಾನ್ ಹಾರ್ಮುಜ್ ಜಲಸಂಧಿಯಲ್ಲಿ ಸಾಗುವ ಸಮುದ್ರ ಸಂಚಾರದ ಮೇಲೆ ಕಟ್ಟುನಿಟ್ಟಿನ ನಿಯಂತ್ರಣ ಹೇರಿದೆ. ವಾಷಿಂಗ್ಟನ್ ಅಥವಾ ಟೆಲ್ ಅವೀವ್ ಹಿತಾಸಕ್ತಿಗೆ ಸೇವೆ ಸಲ್ಲಿಸದ ಹಡಗುಗಳು ಸುರಕ್ಷಿತವಾಗಿ ಜಲಸಂಧಿಯನ್ನು ದಾಟಬಹುದು ಎಂದು ಇರಾನ್ ಅಧಿಕಾರಿಗಳು ಸೂಚಿಸಿದ್ದಾರೆ.



ಭಾರತದ ಕಚ್ಚಾತೈಲ ಪೂರೈಕೆ ಸ್ಥಿತಿ ಸುರಕ್ಷಿತವಾಗಿದೆ. ದೇಶಕ್ಕೆ ಅಗತ್ಯ ಶೇ.70 ಕಚ್ಚಾತೈಲ ಸಹಿತ ಆಮದುಗಳನು ಹಾರ್ಮುಜ್ ಜಲಸಂಧಿ ಬಿಟ್ಟು ಬೇರೆ ದಾರಿಯಿಂದ ತರಿಸಿಕೊಳ್ಳಲು ಭಾರತ ಸೂಕ್ತ ವ್ಯವಸ್ಥೆ ಮಾಡಿದೆ.
■ ಹರ್ದೀಪ್ ಸಿಂಗ್ ಪುರಿ, ಕೇಂದ್ರ ಇಂಧನ ಸಚಿವ

ಯುದ್ಧದ ನೆರಳಲ್ಲಿ 'ಕತ್ತಲ ದಾರಿ' ಪಯಣ!

ಪುಟ ೧ ➜ ಆದರೆ ಅಪಾಯಕರ ಪ್ರದೇಶಗಳಲ್ಲಿ ಕೆಲವೊಮ್ಮೆ ಹಡಗುಗಳು ಈ ವ್ಯವಸ್ಥೆಯನ್ನು ಆಫ್ ಮಾಡಿ 'ಡಾರ್ಕ್' ಆಗುತ್ತವೆ. ಅಂದರೆ ರಾಡಾರ್ ಟ್ರ್ಯಾಕಿಂಗ್‌ನಲ್ಲಿ ಕಾಣಿಸಿಕೊಳ್ಳುವುದಿಲ್ಲ. ಈ ಟ್ಯಾಂಕರ್ ಕೂಡ ಹಾರ್ಮುಜ್ ಜಲಸಂಧಿಯಲ್ಲಿ ಪ್ರವೇಶಿಸಿದ ಬಳಿಕ ಎಐಎಸ್ ಸಿಗ್ನಲ್ ನಿಲ್ಲಿಸಿ ಕೆಲವು ಸಮಯ 'ಕಣ್ಮರೆಯಾಯಿತು'. ನಂತರ ಸುರಕ್ಷಿತವಾಗಿ ಮಾರ್ಗ ದಾಟಿದ ಬಳಿಕ ಮತ್ತೆ ಟ್ರ್ಯಾಕಿಂಗ್ ವ್ಯವಸ್ಥೆ ಚಾಲನೆ ಮಾಡಿತು.

ಸಂದರ್ಶನ ದಿನಾಂಕ ಹಿಂಪಡೆದ ಆಯೋಗ

ಪುಟ ೧ ➜ ಅಲ್ಲದೇ, ಮಾ.23ರಿಂದ ಮೇ 4ರವರೆಗೆ ವ್ಯಕ್ತಿತ್ವ ಪರೀಕ್ಷೆ ಹಾಗೂ ದಾಖಲೆ ಪರಿಶೀಲನೆ ನಡೆಸಲು ಮುಂದಾಗಿತ್ತು. ಆದರೆ, ಈ ಮುಖ್ಯ ಪರೀಕ್ಷೆಯಲ್ಲಿ ಒಂದೇ ಕೊಠಡಿಯಲ್ಲಿ 11ಕ್ಕೂ ಹೆಚ್ಚು ಅಭ್ಯರ್ಥಿಗಳು ಪಾಸ್ ಆಗಿದ್ದರು. ಈ ವಿಚಾರ ಸಾಕಷ್ಟು ಅನುಮಾನಗಳಿಗೆ ಎಡೆಮಾಡಿಕೊಟ್ಟಿತ್ತು. ಅಲ್ಲದೇ ಕೆಲವು ಅಭ್ಯರ್ಥಿಗಳು ಮುಖ್ಯ ಪರೀಕ್ಷೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿದ್ದವು. ಅಲ್ಲದೇ ಸಂದರ್ಶನದ ಆಯ್ಕೆ ಪಟ್ಟಿ ವಾಪಸ್ ಪಡೆಯುವಂತೆ ಹಾಗೂ ಇನ್ನೊಮ್ಮೆ ಮುಖ್ಯ ಪರೀಕ್ಷೆ ನಡೆಸುವಂತೆ ಹಾಗೂ ಈ ಬಗ್ಗೆ ತನಿಖೆ ನಡೆಸುವಂತೆ ಆಗ್ರಹಿಸಿದ್ದರು. ಅಲ್ಲದೇ, ಈ ವಿಚಾರ ವಿಧಾನಮಂಡಲ ಅಧಿವೇಶದಲ್ಲಿಯೂ ಪ್ರತಿಧ್ವನಿಸಿತ್ತು. ಅಕ್ರಮದ ಬಗ್ಗೆ ತನಿಖೆಗೆ ವಿಪಕ್ಷಗಳು ಒತ್ತಾಯಿಸಿದ್ದವು. ಈಗ ಕರ್ನಾಟಕ ಲೋಕಸೇವಾ ಆಯೋಗ ಸಂದರ್ಶನ ದಿನಾಂಕ ಹಾಗೂ ದಾಖಲೆ ಪರಿಶೀಲನೆ ವಾಪಸ್ ಪಡೆದಿದ್ದು, ನೂತನ ದಿನಾಂಕವನ್ನು ಮುಂದೆ ತಿಳಿಸಲಾಗುತ್ತೆ ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ಜ್ಯೋತಿ ತಿಳಿಸಿದ್ದಾರೆ.

ಗೊಂದಲ ಬಗೆಹರಿಸಲು ಸರ್ಕಾರಕ್ಕೆ ಒತ್ತಾಯ

• **ವಿಧಾನಸಭೆ:** ಇತ್ತೀಚೆಗೆ ನಡೆದ ಕೆಪಿಎಸ್‌ಸಿ ಪರೀಕ್ಷೆ ಗೊಂದಲಗಳ ಬಗ್ಗೆ ವಿಪಕ್ಷದಿಂದ ಸದನದಲ್ಲಿ ಪ್ರಸ್ತಾಪಿಸಲಾಯಿತು. ಕೆಪಿಎಸ್‌ಸಿ ಪರೀಕ್ಷೆ ಗೊಂದಲ ಕುರಿತು ನಿಯಮ 69ರ ಮೇಲೆ ವಿಷಯ ಪ್ರಸ್ತಾಪಿಸಿ ಮಾತನಾಡಿದ ಶಾಸಕ ಸುನೀಲ್ ಕುಮಾರ್ ಅವರು, ಒಂದೇ ಕೊಠಡಿಯಲ್ಲಿ 11 ಅಭ್ಯರ್ಥಿಗಳು ಆಯ್ಕೆಯಾಗಿರುವ ಬಗ್ಗೆ ಅನುಮಾನ, ಗೊಂದಲಗಳಿದ್ದು, ಇದನ್ನು ಸರ್ಕಾರ ಬಗೆಹರಿಸಬೇಕೆಂದರು ಒತ್ತಾಯಿಸಿದ್ದರು. ಕೆಪಿಎಸ್‌ಸಿ ಗೊಂದಲಗಳಿಗೆ ಕಾರ್ಯದರ್ಶಿ, ಅಧ್ಯಕ್ಷರೆ ಹೊಣೆಗಾರರು ಎಂದು ಗೃಹ ಸಚಿವರು ಹೇಳಿದ್ದು, ಈ ಹೊಣೆಗಾರಿಕೆಗೆ ಸರ್ಕಾರ ಬದ್ಧವಾಗಬೇಕು. ಈ ಕುರಿತು ತನಿಖೆ ಆಗಬೇಕು. ಒಂದು ಪರೀಕ್ಷೆ ಮುಗಿಯುವವರೆಗೆ ಒಬ್ಬ ಕಾರ್ಯದರ್ಶಿ ಇರಬೇಕು, ಕೆಪಿಎಸ್‌ಸಿ ಸುಧಾರಣೆಗೆ ಮುಖ್ಯಮಂತ್ರಿಗಳು ಮಧ್ಯ ಪ್ರವೇಶಿಸಬೇಕು, ಮಾ.23 ರಂದು ನಡೆಯುವ ಸಂದರ್ಶನಕ್ಕೆ ತಡೆಹಿಡಿಯಬೇಕು ಎಂದು ಮನವಿ ಮಾಡಿದ್ದರು. ಶಾಸಕ ಸುರೇಶ್‌ಕುಮಾರ್ ಮಾತನಾಡಿ, ಕೆಪಿಎಸ್‌ಸಿ ಬಗ್ಗೆ ಎಲ್ಲಾ ಪಕ್ಷಗಳು ಆತ್ಮಾವಲೋಕನ ಮಾಡಿಕೊಳ್ಳಬೇಕು. ಕೆಪಿಎಸ್‌ಸಿಯಲ್ಲಿ ರಾಜಕೀಯ ಕುಟುಂಬಸ್ಥರು, ಪ್ರಭಾವಿಗಳ ಸಂಬಂಧಿಕರು ಇದ್ದಾರೆ. ಈ ಸಂಸ್ಥೆ ಶುದ್ಧೀಕರಣ ಆಗಬೇಕು. ಉದ್ಯೋಗಸೌಧ ಈಗ ನಿರುದ್ಯೋಗಸೌಧ ಆಗಿದೆ. ಯುವಕರು ಹತಾಶರಾಗಿದ್ದಾರೆ ಎಂದು ಕಿಡಿಕಾರಿದ್ದರು.



ಹಿರಿಯ ಸಿನಿ ಪತ್ರಕರ್ತ ಕೆ.ಜಿ. ಕುಮಾರ್ ಅಂತ್ಯಕ್ರಿಯೆ

• **ಮೈಸೂರು:** ತೀವ್ರ ಹೃದಯಾಘಾತದಿಂದ ಬುಧವಾರ ಸಂಜೆ ನಿಧನರಾದ ಹಿರಿಯ ಸಿನಿ ಪತ್ರಕರ್ತ ಕೆ.ಜಿ. ಕುಮಾರ್ (74) ಅವರು ಅಂತ್ಯಕ್ರಿಯೆ ಗುರುವಾರ ನಗರದ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಹರಿಶ್ಚಂದ್ರ ಘಾಟ್‌ನಲ್ಲಿ ವಿಧಿವಿಧಾನದಂತೆ ನಡೆಯಿತು. ಇಂದು ಬೆಳಗ್ಗೆ ಮೃತರ ಪಾರ್ಥಿವ ಶರೀರವನ್ನು ಯಾದವಗಿರಿಯ ಎ.ರಾಮಣ್ಣ ವೃತ್ತದಲ್ಲಿರುವ ಅವರ ನಿವಾಸಕ್ಕೆ ತಂದು ಅಂತಿಮ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು. ಹಿರಿಯ ಚಿತ್ರನಟಿ ಭಾರತಿ ವಿಷ್ಣುವರ್ಧನ್, ಅನಿರುದ್ಧ, ಚಿತ್ರ ನಟ ಕೋಮಲ್ ಸೇರಿದಂತೆ ಅನೇಕ ಚಿತ್ರರಂಗದ ಗಣ್ಯರು ಆಗಮಿಸಿ ಕೆ.ಜಿ. ಕುಮಾರ್ ಅವರ ಅಂತಿಮ ದರ್ಶನ ಪಡೆದರು. ರಾಜಕಾರಣಿಗಳು, ಜನಪ್ರತಿನಿಧಿಗಳು ಸೇರಿದಂತೆ ವಿವಿಧ ಪ್ರಮುಖರು ಆಗಮಿಸಿ ಅಂತಿಮ ದರ್ಶನ ಪಡೆದರು. ಬಳಿಕ ಸಂಜೆ ಪಾರ್ಥಿವ ಶರೀರವನ್ನು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಹರಿಶ್ಚಂದ್ರಘಾಟ್‌ಗೆ ತೆಗೆದುಕೊಂಡು ಹೋಗಿ ಅಂತ್ಯಕ್ರಿಯೆಯನ್ನು ನೆರವೇರಿಸಲಾಯಿತು.

30 ಕೈದಿಗಳ ಬಿಡುಗಡೆಗೆ ಒಪ್ಪಿಗೆ

• **ಬೆಂಗಳೂರು:** ರಾಜ್ಯದ ವಿವಿಧ ಕೇಂದ್ರ ಕಾರಾಗೃಹಗಳಲ್ಲಿ ಶಿಕ್ಷೆ ಅನುಭವಿಸುತ್ತಿದ್ದ 30 ಜೀವಾವಧಿ ಬಂಧಿಗಳನ್ನು ಸನ್ನಡತೆಯ ಆಧಾರದ ಮೇಲೆ ಬಿಡುಗಡೆಗೊಳಿಸಿ ರಾಜ್ಯ ಸರ್ಕಾರ ಗುರುವಾರ ಅಧಿಕೃತ ಆದೇಶ ಹೊರಡಿಸಿದೆ. ಭಾರತ ಸಂವಿಧಾನದ ಅನುಚ್ಛೇದ 161ರ ಅಡಿಯಲ್ಲಿ ರಾಜ್ಯಪಾಲರು ನೀಡಿದ ಅನುಮೋದನೆಯ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ. ಬಂದಿಗಳ ಹಾಗೂ ಅವರ ಕುಟುಂಬದ ಪುನರ್ವಸತಿಗೆ ಅವಕಾಶ ಕಲ್ಪಿಸುವ ಸರ್ಕಾರದ ನೀತಿಯಂತೆ, ಒಟ್ಟು 54 ಪ್ರಕರಣಗಳನ್ನು ಎಲ್‌ಸಿಆರ್ ಸಮಿತಿಯು ಕೂಲಂಕುಷವಾಗಿ ಪರಿಶೀಲಿಸಿತ್ತು.

ಬಜೆಟ್ ಸಮಾಧಾನ ತಂದಿಲ್ಲ: ಇಕ್ಬಾಲ್

• **ರಾಮನಗರ:** ರಾಜ್ಯ ಬಜೆಟ್ ನನಗೆ ಸಮಾಧಾನ ತಂದಿಲ್ಲ ಎಂದು ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ತಿಳಿಸಿದರು.

ತಾಲೂಕಿನ ಮೊಟ್ಟೆದೊಡ್ಡಿ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಜೆಟ್ ನನಗೆ ಸಮಾಧಾನ ತಂದಿಲ್ಲ. ನನ್ನ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಸಿಎಂಗೆ ಮನವಿ ಮಾಡಿದ್ದೆ. ಭಕ್ಷಿಕೆರೆ ಒಡೆದು ಪ್ರವಾಹದಿಂದ ಉಂಟಾದ ಸಮಸ್ಯೆ ಬಗ್ಗೆ ಫೋಟೋ ತೋರಿಸಿ ಮಾಹಿತಿ ಕೊಟ್ಟಿದ್ದೆ. ಹಿಂದೆ ಇದ್ದವರು ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಮಾಡಿಲ್ಲ ಎಂದು ತಿಳಿಸಿದರು. ರಸ್ತೆ, ಚರಂಡಿ ಹಾಗೂ ನೀರಾವರಿ ಬಗ್ಗೆ ನಾಲ್ಕೈದು ಬಾರಿ ಮನವಿ ಮಾಡಿದ್ದೆ. ವಿಶೇಷ ಅನುದಾನ ನೀಡುವಂತೆ ಮನವಿ ಮಾಡಿದ್ದೆ. ಆದರೆ ಸಿಎಂ ಏನೂ ಮಾಡಲಿಲ್ಲ, ನನಗೆ ನೋವಾಗಿದೆ. ಪಾರದರ್ಶಕವಾಗಿ ಅನುದಾನ ಕೊಡುತ್ತಾರೆ ಎನ್ನುವ ನಂಬಿಕೆ ಇತ್ತು. ಈಗ ಆ ನಂಬಿಕೆ ಹುಸಿಯಾಗಿದೆ ಎಂದು ತಿಳಿಸಿದರು. ಈಗ ನಾವು ಡಿಸಿಎಂ ಹಿಂದೆಯೇ ಹೋಗಬೇಕು.

ನಮ್ಮ ಕಷ್ಟ-ಸುಖವನ್ನು ಅವರ ಮೇಲೆಯೇ ಹಾಕಬೇಕು. ಹಿಂದೆ ಅವರಿಂದಲೇ ಅಭಿವೃದ್ಧಿ ಕೆಲಸ ಮಾಡಿಸಿಕೊಂಡಿದ್ದೆ. ಇದು ಅವರ ಜಿಲ್ಲೆ, ಮುಂದೆಯೂ ಅವರ ಮೇಲೆಯೇ ಭಾರ ಹಾಕಬೇಕಾಗುತ್ತೆ. ಕ್ಷೇತ್ರದ ಜವಾಬ್ದಾರಿ ಡಿಸಿಎಂ ಅವರ ಮೇಲೂ ಇದೆ ಎಂದರು. ಡಿ.ಕೆ. ಶಿವಕುಮಾರ್ ಸಿಎಂ ಆಗುವ ವಿಚಾರವಾಗಿ ಮಾತನಾಡಿದ ಅವರು, ನಮ್ಮ ಗುರುಗಳು ಜಪದಿಂದ ಇನ್ನೂ ಎದ್ದಿಲ್ಲ ಎಂದರು.

ತುಂಗಭದ್ರಾ ಡ್ಯಾಂಗೆ ಹೊಸ ಕ್ರಸ್ಟ್‌ಗೇಟ್ ಶೀಘ್ರ

ಪುಟ ೧ ➜ ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಡಿ.ಕೆ.ಶಿವಕುಮಾರ್ ಅವರು, ಕ್ರಸ್ಟ್‌ಗೇಟ್‌ಗಳನ್ನು ತುಂಡರಿಸಿದಾಗ, ಅಣೆಕಟ್ಟು ಸಂಪೂರ್ಣ ಅಲ್ಲಾಡಿದಂತೆ ಭಾಸವಾಗಿತ್ತು. ನಾವು ಕೇವಲ 7 ದಿನಗಳಲ್ಲಿ ಸರಿಪಡಿಸಿದ್ದೇವೆ.

ರಾಜ್ಯದ ಎಲ್ಲಾ ಅಣೆಕಟ್ಟುಗಳ ಅಧ್ಯಯನ ನಡೆಸಿ ಹಳೇ ಗೇಟ್‌ಗಳ ಬದಲಾವಣೆಗೆ ತೀರ್ಮಾನ ಮಾಡಿದೆವು. ಮೊದಲ ಹಂತದಲ್ಲಿ ಟಿಬಿ ಡ್ಯಾಂ ಗೇಟ್ ಬದಲಿಸುತ್ತಿದ್ದೇವೆ. ಈಗಾಗಲೇ ಹಲವು ಗೇಟ್‌ಗಳ ಅಳವಡಿಕೆ ಕಾರ್ಯ ನಡೆದಿದೆ. ಈ ಪ್ರಕ್ರಿಯೆ ನಿಗದಿತ ಸಮಯದಲ್ಲಿ ಪೂರ್ಣಗೊಳ್ಳಲಿದೆ ಎಂದು ತಿಳಿಸಿದರು. ಅಣೆಕಟ್ಟಿನ ಎಲ್ಲಾ ಗೇಟ್‌ಗಳ ಬದಲಿಸುವ ತೀರ್ಮಾನ ಮಾಡಲಾಗಿದ್ದು, 19ನೇ ಸ್ಟಾಪ್‌ಲಾಗ್ ಗೇಟ್ ತೆರವುಗೊಳಿಸಿ ಸ್ಟಿಲ್ ಗೇಟ್ ಅಳವಡಿಕೆಗೆ 2025ರ ಏ.24ರಂದು ಅಹಮದಾಬಾದ್‌ನ ಹಾರ್ಡ್‌ವೇರ್ ಟೂಲ್ ಆ್ಯಂಡ್ ಮಷಿನರಿ ಪ್ರಾಜೆಕ್ಟ್ ಸಂಸ್ಥೆ ಜತೆ ಒಪ್ಪಂದ ಮಾಡಿಕೊಳ್ಳಲಾಗಿದೆ. 34.48 ಕೋಟಿ ರೂ. ವೆಚ್ಚದಲ್ಲಿ ಉಳಿದ 32 ಸ್ಟಿಲ್ ವೇ ಗೇಟ್ ಅಳವಡಿಕೆಯನ್ನು 15 ತಿಂಗಳ ಕಾಲಾವಧಿಯಲ್ಲಿ ಪೂರ್ಣಗೊಳಿಸಲು ಇದೇ ಸಂಸ್ಥೆಯೊಂದಿಗೆ 2025ರ ಜೂ.10 ರಲ್ಲಿ ಒಪ್ಪಂದ ಮಾಡಿಕೊಂಡಿದ್ದೇವೆ ಎಂದರು.

ಕಾಳುಮೆಣಸು ಉತ್ಪಾದನೆ ಹೆಚ್ಚಳ: ಕೇಂದ್ರ ಸಚಿವ

ಪುಟ ೧ ➜ ಭಾರತದ ಕಾಳುಮೆಣಸು ರಫ್ತು ಶೇ.14.72 ರಷ್ಟು ಹೆಚ್ಚಾಗಿ 101.45 ಮಿಲಿಯನ್ ಡಾಲರ್ ತಲುಪಿದೆ ಮತ್ತು ಎಸ್‌ಪಿಐಸಿಇಡಿ ಯೋಜನೆಯಲ್ಲಿ ಕಾಳುಮೆಣಸು ಬೆಳೆಗಾರರಿಗೆ ಉಪಕರಣಗಳು, ತರಬೇತಿ ಮತ್ತು ಮಾರುಕಟ್ಟೆ ಸಂಪರ್ಕಗಳೊಂದಿಗೆ ಬೆಂಬಲ ನೀಡಲಾಗುತ್ತಿದೆ. ದೇಶೀಯ ರೈತರನ್ನು ರಕ್ಷಿಸಲು ಕಾಳುಮೆಣಸು ಆಮದಿಗೆ ಪ್ರತಿ ಕೆಜಿಗೆ 500 ರೂ. ಕನಿಷ್ಠ ಆಮದು ಬೆಲೆ ಜಾರಿಯಲ್ಲಿದೆ ಎಂದು ಸಚಿವರು ವಿವರಿಸಿದ್ದಾರೆ.

ಬಡ್ಡಿ ಮನ್ನಾಕ್ಕೆ ಯದುವೀರ್ ಮನವಿ

ಪುಟ ೧ ➜ ಸಣ್ಣ ಕಾಫಿ ಬೆಳೆಗಾರರನ್ನು, ಈ ಪ್ರಮುಖ ಸಹಕಾರಿ ಸಂಸ್ಥೆಯನ್ನು ಸಂರಕ್ಷಿಸುವ ಹಿತದೃಷ್ಟಿಯಿಂದ 2015ರಲ್ಲಿ ನೀಡಿದ ಭರವಸೆಗೆ ಅನುಗುಣವಾಗಿ, ಸಚಿವರು ಮಧ್ಯಪ್ರವೇಶಿಸಿ ಕಾಫಿ ಮಂಡಳಿಗೆ ಸಂಘವು ಪಾವತಿಸಬೇಕಾದ ಬಡ್ಡಿಯನ್ನು ಮನ್ನಾ ಮಾಡಲು ಶಿಫಾರಸು ಮಾಡುವಂತೆ ಅವರು ಕೋರಿದ್ದಾರೆ. ಸಚಿವರ ಸಕಾಲಿಕ ಕ್ರಮವು ಕೊಡಗಿನ ಸಾವಿರಾರು ಕಾಫಿ ಬೆಳೆಗಾರರು ಮತ್ತು ಕಾರ್ಮಿಕರ ಜೀವನೋಪಾಯವನ್ನು ಕಾಪಾಡುತ್ತದೆ, ಸುಮಾರು 7 ದಶಕಗಳಿಂದ ಸಮುದಾಯಕ್ಕೆ ಸೇವೆ ಸಲ್ಲಿಸುತ್ತಿರುವ ಸಹಕಾರಿ ಸಂಸ್ಥೆಯನ್ನು ಉಳಿಸಿಕೊಳ್ಳಲು ಸಹಾಯ ಮಾಡಿದಂತಾಗುತ್ತದೆ ಎಂದು ಯದುವೀರ್ ಗಮನಸೆಳೆದಿದ್ದಾರೆ.

ಸಂತ್ರಸ್ತರಿಗೆ ಪರಿಹಾರ ಪ್ಯಾಕೇಜ್

ಪುಟ ೧ ➜ ನಿಯಮ 330ರ ಅನ್ವಯ ವಿಷಯ ಪ್ರಸ್ತಾಪಿಸಿದ ಬಿಜೆಪಿ ಸದಸ್ಯ ಹಣಮಂತ ನಿರಾಣಿ, ಕೃಷ್ಣಾ ಮೇಲ್ದಂಡೆ ಯೋಜನೆಗೆ ಒಳಪಡುವ ಸಂತ್ರಸ್ತ ರೈತ ಕುಟುಂಬಗಳಿಗೆ ಪುನರ್ ವಸತಿ ಮತ್ತು ಮೂಲಸೌಕರ್ಯವನ್ನು ಒದಗಿಸಲು ಸರ್ಕಾರ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಪ್ರಶ್ನಿಸಿದರು. ಈ ವಿಷಯಕ್ಕೆ ಲಿಖಿತವಾಗಿ ಉತ್ತರಿಸಿದ ಅವರು, ಕೃಷ್ಣಾ ಒಪ್ಪಂದದ ತೀರ್ಪು ರಚಿಸಲು ಏಕರೂಪದ ದರ ನಿಗದಿಗೆ ಆದೇಶಿಸಲಾಗಿದೆ. ಹೊಸ ಭೂ-ಸ್ವಾಧೀನ ನಿಯಮಾವಳಿಯಂತೆ 8 ಪುನರ್ವಸತಿ ಕೇಂದ್ರಗಳಲ್ಲಿ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು ಕುಂದರಗಿ, ಬಾವಲತ್ತಿಗಳಿಗಾಗಿ ಅವಶ್ಯವಿರುವ ಜಮೀನುಗಳ ತೀರ್ಪು ನ್ಯಾಯಾಲಯದಲ್ಲಿ ಅಸಿಂಧುಗೊಂಡಿದೆ. ಇನ್ನು ಬಾಕಿ ಉಳಿದ 13 ಪುನರ್ವಸತಿ ಕೇಂದ್ರಗಳಿಗೆ ಜಮೀನು ಭೂ-ಸ್ವಾಧೀನ ಪ್ರಕ್ರಿಯೆ ವಿವಿಧ ಹಂತಗಳಲ್ಲಿದೆ. ಗದ್ದನಕೇರಿ ಗ್ರಾಮದ ಭೂ-ಸ್ವಾಧೀನ ಪ್ರಕ್ರಿಯೆ ತಾಂತ್ರಿಕವಾಗಿ ಪರಿಶೀಲಿಸಿ ತೀರ್ಮಾನಿಸಬೇಕಿದೆ. ಭೂ-ಸ್ವಾಧೀನ ಪ್ರಕ್ರಿಯೆಯನ್ನು ಒಂದೇ ಹಂತದಲ್ಲಿ ತ್ವರಿತವಾಗಿ ಕೈಗೆತ್ತಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು. ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹಣೆ ಮಟ್ಟವನ್ನು ಆರ್.ಎಲ್. 510.60 ಮೀ.ನಿಂದ 524.256 ಮೀ. ಎತ್ತರಿಸುವಂತೆ ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮ ತೀರ್ಪು ಕೇಂದ್ರ ಸರ್ಕಾರದ ಅಧಿಸೂಚನೆಗೆ ಒಳಪಟ್ಟಿದೆ. ಆದರೆ, ಆಂಧ್ರ ಸರ್ಕಾರವು ಆಲಮಟ್ಟಿ ಜಲಾಶಯ ಎತ್ತರಿಸುವ ಸಂಬಂಧ ಮತ್ತೆ ತಗಾದೆ ತೆಗೆದು ಯಾವುದೇ ಭೂ-ಸ್ವಾಧೀನ, ಪರಿಹಾರ ನೀಡದಂತೆ ಕೇಂದ್ರಕ್ಕೆ ಆಕ್ಷೇಪಣೆ ಸಲ್ಲಿಸಿದೆ.

ಪೊಲೀಸರ ವರ್ಗಾವಣೆ: ಸಚಿವ


ವಿಧಾನಪರಿಷತ್: ಕಳೆದ ಮೂರು ವರ್ಷಗಳಲ್ಲಿ ಒಟ್ಟು 1,189 ಅರ್ಹ ಪೊಲೀಸ್ ಕಾನ್ಸ್ಟೇಬಲ್‌ಗಳನ್ನು ಅಂತರಜಿಲ್ಲಾ ವರ್ಗಾವಣೆ ಮಾಡಲಾಗಿದೆ. ಸೇವಾ ಹಿರಿತನ ಹಾಗೂ ಪತಿ-ಪತ್ನಿ ಪೊಲೀಸ್ ಪ್ರಕರಣಗಳಿಗೆ ವರ್ಗಾವಣೆಗೆ ಮೊದಲ ಆದ್ಯತೆ ನೀಡುತ್ತಿದ್ದು, ಈ ಪ್ರಮಾಣ ಶೇ.15 ರಷ್ಟು ಮೀರದಂತೆ ಎಚ್ಚರ ವಹಿಸಲಾಗಿದೆ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಹೇಳಿದರು.



ಸದಸ್ಯ ಕಿಶೋರ್ ಕುಮಾರ್ ಪುತ್ತೂರ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಸರ್ಕಾರ 56 ಸಾವಿರಕ್ಕಿಂತ ಹೆಚ್ಚು ಹುದ್ದೆಗಳನ್ನು ತುಂಬಲು ತೀರ್ಮಾನಿಸಲಾಗಿದೆ. ಈ ಪೈಕಿ ಪೊಲೀಸ್ ಇಲಾಖೆಯಲ್ಲಿ ಖಾಲಿಯಿರುವ 8 ಸಾವಿರ ಹುದ್ದೆಗಳನ್ನು ತುಂಬಲು ಸರ್ಕಾರ ಅನುಮತಿ ನೀಡಿದೆ. ಈ ಹಿಂದಿನ 545 ಪಿಎಸ್‌ಐ ಅಭ್ಯರ್ಥಿಗಳು ತರಬೇತಿ ಮುಗಿದು ಇನ್ನೊಂದು ವಾರದಲ್ಲಿ ಕರ್ತವ್ಯಕ್ಕೆ ನಿಯೋಜನೆಯಾಗಲಿದ್ದಾರೆ. ಜತೆಗೆ 402 ಪೊಲೀಸ್ ಪಿಎಸ್‌ಐ ಸಹ ಇನ್ನೆರಡು ತಿಂಗಳಿನಲ್ಲಿ ತರಬೇತಿ ಮುಗಿಯಲಿದೆ ಎಂದು ತಿಳಿಸಿದರು. ರಾಜ್ಯ ಪೊಲೀಸ್ ಇಲಾಖೆ (ವರ್ಗಾವಣೆ) ನಿಯಮ ಅಡಿಯಲ್ಲಿ ಕೇಂದ್ರ ಸ್ಥಾನದಿಂದ ಪೊಲೀಸ್ ವರ್ಗಾವಣೆ ಪ್ರಮಾಣ ಶೇ.15 ಕ್ಕಿಂತ ಹೆಚ್ಚಿರಬಾರದು. ಇದಕ್ಕೆ ವಿಶೇಷ ನಿಯಮಗಳನ್ನು ಜಾರಿಗೆ ತರಲಾಗಿದೆ ಎಂದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಗಳಿಗೆ ಅರ್ಜಿ ಸಲ್ಲಿಸುವವರ ಸಂಖ್ಯೆ ಬಹಳ ಕಡಿಮೆ ಇದೆ. ಆದ್ದರಿಂದ ಉತ್ತರ ಕರ್ನಾಟಕದ ಸಿಬ್ಬಂದಿಯನ್ನು ಆ ಜಿಲ್ಲೆಯಲ್ಲಿ ನಿಯೋಜಿಸಲಾಗಿದೆ. ಅವರು ಇಲ್ಲಿ ನಿಯೋಜನೆ ನಂತರ ತುಳು ಭಾಷೆ ಕಲಿಯುವಷ್ಟರಲ್ಲಿ ವರ್ಗಾವಣೆ ಸಿದ್ಧವಾಗಿರುತ್ತದೆ ಎಂದು ಮಾಹಿತಿ ನೀಡಿದರು.

ಈ ಮೊದಲು ಕಿಶೋರ್ ಕುಮಾರ್ ಪುತ್ತೂರ್ ಅವರು, ಮಂಗಳೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈಗಾಗಲೇ ಪೊಲೀಸ್ ಸಿಬ್ಬಂದಿ ಕೊರತೆ ಇದೆ. 63 ಸಿಬ್ಬಂದಿ ವರ್ಗಾವಣೆಗೂ ಡಿಜಿಪಿ ಆದೇಶ ನೀಡಿದ್ದಾರೆ. ಇದರಿಂದ ಶೇ. 22 ರಷ್ಟು ಸಿಬ್ಬಂದಿ ಕೊರತೆ ಇದೆ. ಸರ್ಕಾರ ಕೂಡಲೇ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ಒತ್ತಾಯಿಸಿದರು.



ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್‌ವತಿಯಿಂದ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 15.00 ಕೋಟಿ ರೂ.ಗಳ ಚೆಕ್ ಅನ್ನು ಗಣಿ ಮತ್ತೂ ಭೂ ವಿಜ್ಞಾನ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹಸ್ತಾಂತರಿಸಿದರು. ಶಾಸಕ ಜಿ.ಎಸ್.ಪಾಟೀಲ್, ಇಲಾಖೆ ಕಾರ್ಯದರ್ಶಿ ರೋಹಿಣಿ ಸಿಂಧೂರಿ ಇದ್ದರು.

ಕೃಷ್ಣಾ ಮೇಲ್ದಂಡೆ ಯೋಜನೆ ವಿಚಾರದಲ್ಲಿ ಬಿಜೆಪಿ ನಾಯಕರು ಧ್ವನಿ ಎತ್ತುತ್ತಿಲ್ಲ: ಡಿಕೆಶಿ

ವಿಧಾನಪರಿಷತ್: ಕೃಷ್ಣಾ ಮೇಲ್ದಂಡೆ ಯೋಜನೆ ವಿಚಾರದಲ್ಲಿ ಭೂಸ್ವಾಧೀನ ಪ್ರಕ್ರಿಯೆ ಮಾಡಬಾರದು, ಪರಿಹಾರ ನೀಡಬಾರದು ಎಂದು ಆಂಧ್ರಪ್ರದೇಶ ಕೇಂದ್ರ ಸರ್ಕಾರಕ್ಕೆ ಆಕ್ಷೇಪಣೆ ಸಲ್ಲಿಸಿದೆ. ಆದರೂ ಬಿಜೆಪಿ ನಾಯಕರು ಈ ಬಗ್ಗೆ ಧ್ವನಿ ಎತ್ತುತ್ತಿಲ್ಲ. ನಾನು, ಸಚಿವರಾದ ಹೆಚ್.ಕೆ ಪಾಟೀಲ್ ಹಾಗೂ ಎಂ.ಬಿ. ಪಾಟೀಲ್ ಅವರು ಮಂಗಳವಾರ ದೆಹಲಿಗೆ ಹೋಗುತ್ತಿದ್ದು, ಎಲ್ಲಾ ಸಂಸದರನ್ನು ಭೇಟಿ ಮಾಡಿ ನಮ್ಮ ರಾಜ್ಯದ ವಿಚಾರಗಳನ್ನು ಪ್ರಸ್ತಾಪಿಸುತ್ತೇವೆ ಎಂದು ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ತಿಳಿಸಿದರು.



ವಿಧಾನ ಪರಿಷತ್ತಿನಲ್ಲಿ ನಿಯಮ 330 ಅಡಿಯಲ್ಲಿ ನಡೆದ ಚರ್ಚೆ ವೇಳೆ ಹನುಮಂತ ನಿರಾಣಿ ಅವರು ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಮುಳುಗಡೆಯಾಗುವ 20 ಗ್ರಾಮಗಳ ಪುನರ್ ವಸತಿ ವಿಚಾರವಾಗಿ ಪ್ರಸ್ತಾಪಿಸಿದರು. ಇದಕ್ಕೆ ಪ್ರತಿಕ್ರಿಯೆ ನೀಡಿದ ಶಿವಕುಮಾರ್ ಅವರು, ಈ ಯೋಜನೆ ಭೂ ಸಂತ್ರಸ್ತ ರೈತರಿಗೆ ಪರಿಹಾರ ನೀಡುವ ಬಗ್ಗೆ ಸರ್ಕಾರ ಈಗಾಗಲೇ ತೀರ್ಮಾನ ಮಾಡಿದ್ದು, ಪುನರ್ವಸತಿ ಕಾರ್ಯವನ್ನು ಬಾಕಿ ಉಳಿಸಿದ್ದೇವೆ. ಈ ಯೋಜನೆಗೆ ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಲಿ, ನ್ಯಾಯಬದ್ಧವಾಗಿ ಸಂತ್ರಸ್ತರಿಗೆ ಪರಿಹಾರ ನೀಡಲಾಗುವುದು ಎಂದು ಉತ್ತರಿಸಿದರು. ಆಂಧ್ರಪ್ರದೇಶದವರು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಭೂಸ್ವಾಧೀನ ಪ್ರಕ್ರಿಯೆ ಮಾಡಬಾರದು, ಪರಿಹಾರ ನೀಡಬಾರದು ಎಂದು ಆಕ್ಷೇಪಣೆ ಹಾಕಿದ್ದಾರೆ. ನಿಮ್ಮೆಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈ ವಿಚಾರವಾಗಿ ಪರಿಹಾರ ಕಂಡುಕೊಳ್ಳಲಾಗುವುದು ಎಂದು ತಿಳಿಸಿದರು. ಪ್ರಶೋತ್ತರ ವೇಳೆಯಲ್ಲಿ ಕಾಂಗ್ರೆಸ್ ಸದಸ್ಯರಾದ ತಿಪ್ಪಣ್ಣ ಕಮಕನೂರು ಅವರು ನ್ಯಾಯಾಲಯದ ತೀರ್ಪಿನಿಂದ ಸರ್ಕಾರಕ್ಕೆ ಸುಮಾರು 10 ಸಾವಿರ ಕೋಟಿ ರೂ. ಉಳಿತಾಯವಾಗಿದ್ದು, ಇದನ್ನು ಎತ್ತಿನಹೊಳೆ, ಕೃಷ್ಣಾ ಮೇಲ್ದಂಡೆ ಯೋಜನೆಗೆ ವಿನಿಯೋಗಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ಎಂದು ಕೇಳಿದರು, ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ನಾನು ನೀರಾವರಿ ಸಚಿವನಾದ ಬಳಿಕ ರಾಜ್ಯದ ಹಿತದೃಷ್ಟಿಯಿಂದ ನ್ಯಾಯಾಲಯದಲ್ಲಿ ಎರಡು ಪ್ರಮುಖ ತೀರ್ಪುಗಳು ಸಿಕ್ಕಿವೆ ಎಂದು ತಿಳಿಸಿದರು.

ಕಿರುಸುದ್ದಿ

ಯುವಜನತೆಗೆ ಹೆಚ್ಚಿನ ಉದ್ಯೋಗಾವಕಾಶ

ವಿಧಾನಪರಿಷತ್: ಬೆಳಗಾವಿಯನ್ನು ರಾಜ್ಯದ ಪ್ರಮುಖ ತಂತ್ರಜ್ಞಾನ ಮತ್ತು ನಾವೀನ್ಯತೆ ಕೇಂದ್ರವನ್ನಾಗಿ ರೂಪಿಸಲು ಹಾಗೂ ಉತ್ತರ ಕರ್ನಾಟಕದ ಯುವಜನತೆಗೆ ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸಲು ಸರ್ಕಾರವು ಹಲವಾರು ಮಹತ್ವದ ಯೋಜನೆಗಳನ್ನು ಜಾರಿಗೆ ತರುತ್ತಿದೆ ಎಂದು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು. ನಿಯಮ 72 ರ ಅಡಿ ಸದಸ್ಯ ಎಂ. ನಾಗರಾಜ್ ಅವರ ಗಮನ ಸೆಳೆಯುವ ಸೂಚನೆ ಮೇರೆಗೆ ಉತ್ತರಿಸಿದ ಅವರು, ಬೆಳಗಾವಿಯಲ್ಲಿ ತಕ್ಷಣದ ಬೇಡಿಕೆ ಪೂರೈಸಲು ಕಲಾ ಮಂದಿರದಂತಹ ಸ್ಥಳಗಳಲ್ಲಿ ಐಟಿ ಪ್ಲಗ್-ಆ್ಯಂಡ್-ಪ್ಲೇ ಕೇಂದ್ರಗಳನ್ನು ಸ್ಥಾಪಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯನ್ನು ಬಲಪಡಿಸಲು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಕೆಎಲ್‌ಇ ಟೆಕ್ನಾಲಾಜಿಕಲ್ ಯೂನಿವರ್ಸಿಟಿ ಮತ್ತು ಮರಾಠ ಮಂಡಲ್ ಇಂಜನಿಯರಿಂಗ್ ಕಾಲೇಜುಗಳಲ್ಲಿ ಮೂರು ಟೆಕ್ನಾಲಜಿ ಬಿಸಿನೆಸ್ ಇನ್ಕ್ಯುಬೇಟರ್‌ಗಳನ್ನು ಸ್ಥಾಪಿಸಲಾಗಿದೆ ಎಂದು ಹೇಳಿದರು. ವಿದ್ಯಾರ್ಥಿಗಳಲ್ಲಿ ಉದ್ಯಮಶೀಲತೆ ಬೆಳೆಸಲು ಕೆಎಲ್‌ಇ ಫಾರ್ಮಸಿ ಕಾಲೇಜು ಮತ್ತು ಎಸ್‌ಜಿ ಬಾಳೆಕುಂದ್ರಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗಳಲ್ಲಿ ನ್ಯೂ ಏಜ್ ಇನ್ನೋವೇಶನ್ ನೆಟ್ವರ್ಕ್ ಕೇಂದ್ರಗಳನ್ನು ಆರಂಭಿಸಲಾಗಿದೆ. ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಇದೇ ಮೊದಲ ಬಾರಿಗೆ ಬೃಹತ್ ತಂತ್ರಜ್ಞಾನ ಶೃಂಗಸಭೆ ಟೆಕ್ಸಲರೇಷನ್-2025 ಅನ್ನು ಆಗಸ್ಟ್‌ನಲ್ಲಿ ಆಯೋಜಿಸಲಾಗಿದೆ. ಈ ಶೃಂಗಸಭೆಯಲ್ಲಿ 700ಕ್ಕೂ ಹೆಚ್ಚು ಪ್ರತಿನಿಧಿಗಳು ಮತ್ತು ವಿದೇಶಿ ನಿಯೋಗಗಳು ಭಾಗವಹಿಸಿದ್ದವು ಎಂದು ಮಾಹಿತಿ ನೀಡಿದರು.



ಬಿಯರ್ ಮಾರಾಟದಲ್ಲಿ ಕುಸಿತ

ವಿಧಾನಪರಿಷತ್: ಆಂಧ್ರ ಪ್ರದೇಶದ ನೂತನ ಅಬಕಾರಿ ನೀತಿಯಿಂದಾಗಿ ಆಂಧ್ರ ಪ್ರದೇಶದ ಗಡಿ ಭಾಗಕ್ಕೆ ಹೊಂದಿಕೊಂಡಿರುವ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಹೊರ ರಾಜ್ಯದ ಗ್ರಾಹಕರು ನಮ್ಮ ರಾಜ್ಯದ ಮದ್ಯವನ್ನು ಖರೀದಿಸಲು ಬರುವುದು ಕಡಿಮೆಯಾಗಿದೆ. ಇದರಿಂದ ಬಿಯರ್ ಮಾರಾಟ ಕುಸಿತವಾಗಿದೆ ಎಂದು ಸರ್ಕಾರ ಹೇಳಿದೆ.

ಸದಸ್ಯ ಎಂ. ನಾಗರಾಜ್ ಯಾದವ್ ಅವರ ಪ್ರಶ್ನೆಗೆ ಅಬಕಾರಿ ಸಚಿವರ ಪರವಾಗಿ ಸಭಾನಾಯಕ ಭೋಸರಾಜು ಪ್ರತಿಕ್ರಿಯಿಸಿದರು. ಕಳೆದ ವರ್ಷಕ್ಕೆ ಹೋಲಿಸಿದ್ದಲ್ಲಿ 2025-26ರ ಜನವರಿ ಅಂತ್ಯಕ್ಕೆ ಬಿಯರ್ ಮಾರಾಟ ಶೇ. 14.59 ಕಡಿಮೆಯಾಗಿದೆ. ಕೆಲವು ಜಿಲ್ಲೆಗಳಲ್ಲಿ ಅತಿವೃಷ್ಟಿಯಿಂದಾಗಿ ಮತ್ತು ಹವಾಮಾನ ಬದಲಾವಣೆಯಿಂದಾಗಿ ಅತಿ ಹೆಚ್ಚು ಶೀತದ ವಾತಾವರಣ ಇದ್ದುದ್ದರಿಂದ ಬಿಯರ್ ಮಾರಾಟದಲ್ಲಿ ಕುಸಿತ ಉಂಟಾಗಿದೆ ಎಂದು ಸಚಿವರು ತಿಳಿಸಿದರು. ಗೋವಾ ರಾಜ್ಯದಿಂದ ಅಕ್ರಮವಾಗಿ ರಾಜ್ಯಕ್ಕೆ ಮದ್ಯ ತರುವುದನ್ನು ನಿರ್ಬಂಧಿಸಲು ಕ್ರಮ ಕೈಗೊಳ್ಳಲಾಗಿದೆ. ಅಬಕಾರಿ ಇಲಾಖೆಯಿಂದ ಗಡಿಭಾಗದಲ್ಲಿ 3 ಖಾಯಂ ಅಬಕಾರಿ ತನಿಖಾ ಠಾಣೆಗಳನ್ನು ಸ್ಥಾಪಿಸಲಾಗಿದ್ದು, ತನಿಖಾ ಠಾಣೆಗಳಲ್ಲಿರುವ ಸಿಬ್ಬಂದಿಯನ್ನು 15 ದಿನಗಳಿಗೊಮ್ಮೆ ಸರದಿ ಆಧಾರದಲ್ಲಿ ಬದಲಾಯಿಸಲಾಗುತ್ತದೆ ಎಂದು ತಿಳಿಸಿದರು. ರಾಜ್ಯದಲ್ಲಿ ನಿಷೇಧವಿರುವ ಈ ವಸ್ತು ಯಾವ ರೀತಿಯಿಂದಲೂ ನಮ್ಮ ರಾಜ್ಯಕ್ಕೆ ಪೂರೈಕೆಯಾಗದಂತೆ ತಡೆಯಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದ್ದು, 2 ವರ್ಷಗಳ ಅವಧಿಯಲ್ಲಿ ಸಿ.ಎಚ್. ಪೌಡರ್ ಸಾಗಾಟಕ್ಕೆ ಸಂಬಂಧಿಸಿದಂತೆ 1,117 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದ್ದು, 771 ಆರೋಪಿಗಳನ್ನು ಬಂಧಿಸಲಾಗಿದೆ.

ಬಜೆಟ್‌ನಲ್ಲಿ ಜನರ ನಿರೀಕ್ಷೆಗಳು ಹುಸಿ: ಬಿ.ವೈ.ವಿಜಯೇಂದ್ರ

ಆರ್ಥಿಕ ದಿವಾಳಿ ಪ್ರದರ್ಶನ

ವಿಧಾನಸಭೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ 2026-27ನೇ ಸಾಲಿನ ಬಜೆಟ್‌ನಲ್ಲಿ ಜನರ ನಿರೀಕ್ಷೆಗಳನ್ನು ಹುಸಿಗೊಳಿಸಿದ್ದಾರೆ. ಈ ಆಯವ್ಯಯದಲ್ಲಿ ಆರ್ಥಿಕ- ಬೌದ್ಧಿಕ ದಿವಾಳಿತನವು ಕೂಡ ಪ್ರದರ್ಶನಗೊಂಡಿದೆ ಎಂದು ಬಿಜೆಪಿ ಶಾಸಕ ಬಿ.ವೈ.ವಿಜಯೇಂದ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಈ ಬಜೆಟ್ ಗಮನಿಸಿದರೆ ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿಗಳು ತಮ್ಮ ರಾಜಕೀಯ ಸಂಧ್ಯಾಕಾಲದಲ್ಲಿರುವ ಈ ಸಂದರ್ಭದಲ್ಲಿ 17ನೇ ಬಜೆಟ್ ಮಂಡಿಸಿದ್ದಾರೆ. ಅವರಿಗೆ ಒಂದು ಸುವರ್ಣಾವಕಾಶ ಇತ್ತು. ತಮ್ಮ ರಾಜಕೀಯ ಜೀವನದ ಸುದೀರ್ಘ ಅನುಭವದ ಆಧಾರದ ಮೇಲೆ ರಾಜ್ಯದ ಸಂಕಷ್ಟಗಳಿಗೆ ನಾಡಿನ ಜನರ ಅಪೇಕ್ಷೆಗೆ ತಕ್ಕಂತೆ ಉತ್ತರ ಕಂಡುಕೊಳ್ಳುವ ಅವಕಾಶ ಇತ್ತು. ಆದರೆ, ಈ ಬಜೆಟ್ ನೋಡಿದಾಗ ಅಸಹಾಯಕರಾಗಿ ಕೈಚೆಲ್ಲಿದ್ದಾರೆಂಬ ಭಾವನೆ ರಾಜ್ಯದ ಜನರಲ್ಲಿ ಮೂಡಿದೆ ಎಂದು ವಿಶ್ಲೇಷಿಸಿದರು.

ಒಟ್ಟಾರೆಯಾಗಿ ಈ ಮುಂಗಡ ಪತ್ರದಲ್ಲಿ ಸಿಎಂ ಅವರು, ತಮ್ಮ ವೈಫಲ್ಯಗಳನ್ನು ಮುಚ್ಚಿ ಹಾಕಿಕೊಳ್ಳಲು ಕೇಂದ್ರದ ಮೇಲೆ ಆರೋಪ ಮಾಡಿ ಕೈ ತೊಳೆದುಕೊಳ್ಳುವ ಕುತಂತ್ರಕ್ಕೆ ಸೀಮಿತ ಮಾಡಿದ್ದಾರೆ ಎನ್ನುವುದು ಮೇಲ್ನೋಟಕ್ಕೆಗೊತ್ತಾಗುತ್ತದೆ. ಆದಾಯ ಸಂಗ್ರಹದಲ್ಲಿ ರಾಜ್ಯ ಸರಕಾರ ವಿಫಲವಾಗಿದೆ. ಅತಿ ಹೆಚ್ಚು ಸಾಲ ಮಾಡುವ ಮೂಲಕ ಈ ನಾಡಿನ ಜನರನ್ನು ಸಾಲದ ಸುಳಿಗೆ ಸಿಲುಕಿ ಹಾಕಿಸಿರುವುದು ಸುಳ್ಳಲ್ಲ ಎಂದರು.

ಪದೇಪದೇ ಬೆಲೆ ಏರಿಕೆಯ ಬ್ರಹ್ಮಾಸ್ತ್ರ: ಸಾಲದ ಭಾರ ಒಂದು ಕಡೆಯಾದರೆ, ಅಸಲು,ಬಡ್ಡಿಕಟ್ಟುವುದೇ ರಾಜ್ಯಕ್ಕೆ ದೊಡ್ಡ ಹೊರೆಯಾಗಿದೆ. ವಿತ್ತೀಯ ಕೊರತೆ ಹೆಚ್ಚಾಗಿ ರಾಜ್ಯದ ಜನರ ಮೇಲೆ ಪದೇಪದೇ ಬೆಲೆ ಏರಿಕೆಯ ಬ್ರಹ್ಮಾಸ್ತ್ರವನ್ನು ರಾಜ್ಯ ಸರಕಾರ ಪ್ರಯೋಗ ಮಾಡುತ್ತಿರುವುದು ಈ ನಾಡಿನ ದುರಂತ ಎಂದರು. ಸಿಎಂ ಅವರು ಬಜೆಟ್‌ನ್ನು ಸುದೀರ್ಘವಾಗಿ ಓದುತ್ತಿರುವಾಗ ಆಡಳಿತ ಪಕ್ಷದ ಸದಸ್ಯರನ್ನು ಗಮನಿಸುತ್ತಿದ್ದೆ. ಆಡಳಿತ ಪಕ್ಷದ ಸದಸ್ಯರಿಗೂ ಈ ಬಜೆಟ್ ಬಗ್ಗೆ ಆಸಕ್ತಿ ಇರಲಿಲ್ಲ; ಅವರು ಅಸಹಾಯಕರಾಗಿ ಸದನದಿಂದ ಹೊರಹೋದ ಘಟನೆಯನ್ನೂ ನಾನು ಗಮನಿಸಿದ್ದೇನೆ ಎಂದು ತಿಳಿಸಿದರು.

ಈ ಬಜೆಟ್ ಹಸಿ ಸುಳ್ಳಿನಿಂದ ಕೂಡಿದೆ: ಬಜೆಟ್ ಮಂಡಿಸಿದ ಈ ಆಯವ್ಯಯವು ನಾಡಿನ ರೈತರು, ದಮನಿತರ, ಮಹಿಳೆಯರ, ಅಶಕ್ತರ, ಅಲ್ಪಸಂಖ್ಯಾತರ, ವಿದ್ಯಾರ್ಥಿ ಯುವಜನರ, ವ್ಯಾಪಾರ ಮತ್ತು ಕೈಗಾರಿಕೋದ್ಯಮದಲ್ಲಿ ತೊಡಗಿಕೊಂಡವರ ಕನಸನ್ನು ಮತ್ತು ಆತ್ಮವಿಶ್ವಾಸವನ್ನು ಪ್ರತಿನಿಧಿಸುವ ಜೀವಂತ ದಾಖಲೆ ಆಗಿದೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದರೆ, ಈ ಬಜೆಟ್ ಹಸಿ ಸುಳ್ಳಿನಿಂದ ಕೂಡಿದೆ. ಸರಕಾರಿ ಹುದ್ದೆಗಳನ್ನು ಭರ್ತಿ ಮಾಡುವುದರ ಜೊತೆಯಲ್ಲಿ ರಾಜ್ಯದ ರಸ್ತೆ, ಸೇತುವೆ, ಕಟ್ಟಡ ನಿರ್ಮಾಣಕ್ಕೂ ನಮ್ಮ ಸರಕಾರ ಆದ್ಯತೆ ನೀಡಿದೆ ಎಂದಿದ್ದಾರೆ. ಹಾಗಿದ್ದರೆ, ಕಳೆದ 3 ವರ್ಷದಲ್ಲಿ ಈ ಸರಕಾರ ಎಷ್ಟು ರಸ್ತೆಗಳನ್ನು ಮಾಡಿದೆ? ಎಷ್ಟು ಸೇತುವೆಗಳನ್ನು ಕಟ್ಟಿದೆ? ಎಷ್ಟು ಸರಕಾರಿ ಹುದ್ದೆಗಳನ್ನು ನೇಮಕ ಮಾಡಿದ್ದಾರೆ ಎಂದು ಪ್ರಶ್ನಿಸಿದರು.

ಒಂದು ರೀತಿ ಕಟ್ಟುಕಥೆ



ವಸತಿರಹಿತರಿಗೆ ಮನೆಗಳು, ನಿರುದ್ಯೋಗಿ ಯುವಕರಿಗೆ ಸ್ವಯಂ ಉದ್ಯೋಗಗಳನ್ನು ಕಲ್ಪಿಸಿಕೊಡಲು ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದ್ದೇವೆ ಎಂದು ಇನ್ನೊಂದು ಸುಳ್ಳು ಹೇಳುತ್ತಾರೆ. ಬಜೆಟ್ಟನ್ನು ಸಂಪೂರ್ಣವಾಗಿ ನೋಡುತ್ತ ಹೋದರೆ ಒಂದು ರೀತಿ ಕಟ್ಟುಕಥೆ, ಸುಳ್ಳಿನ ಅಂಶಗಳಿಂದ ಇದು ಕೂಡಿದೆ ಎಂದು ಗಮನ ಸೆಳೆದರು. ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು ಅತಿ ಹೆಚ್ಚು ಆದಾಯ ನೀಡುವ ರಾಜ್ಯಗಳಾಗಿದ್ದರೂ ಇಲ್ಲಿ ಬರುವ ಆದಾಯವನ್ನು ಕೇಂದ್ರ ಸರಕಾರದ ಮೂಲಕ ಇತರ ರಾಜ್ಯಗಳು ಅತಿ ಹೆಚ್ಚು ಜನಸಂಖ್ಯೆ ಇರುವ- ಅತಿ ಹೆಚ್ಚು ಹಿಂದುಳಿದ ರಾಜ್ಯಗಳಿಗೆ ಇದರ ಹಣವನ್ನು ಸದ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಭಾರತ ಮುಂಚೂಣಿಯಲ್ಲಿ ಬರಲು ಎಲ್ಲ ರಾಜ್ಯಗಳು ಕೂಡ ಅಭಿವೃದ್ಧಿಯ ಪಥದಲ್ಲಿ ಮುಂದೆ ಸಾಗಬೇಕಿದೆ ಎಂದು ವಿಜಯೇಂದ್ರ ಹೇಳಿದರು.

ಗೃಹ ಬಳಕೆ ಸಿಲಿಂಡರ್ ಅಭಾವವಿಲ್ಲ: ಮುನಿಯಪ್ಪ

ವಿಧಾನಪರಿಷತ್: ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಉಂಟಾಗಿರುವ ಯುದ್ಧ ಪರಿಸ್ಥಿತಿಯಿಂದಾಗಿ ಕರ್ನಾಟಕ ಮಾತ್ರವಲ್ಲದೇ ದೇಶಾದ್ಯಂತ ಅಡುಗೆ ಅನಿಲಅಭಾವಉಂಟಾಗಿದೆ. ಆದರೆ, ಗೃಹ ಬಳಕೆ ಸಿಲಿಂಡರ್‌ಗಳಿಗೆ ರಾಜ್ಯದಲ್ಲಿ ಕೊರತೆಯಿಲ್ಲ. 10-12 ದಿನಗಳಲ್ಲಿ ವಾಣಿಜ್ಯ ಸಿಲಿಂಡರ್‌ಗಳೂ ಪೂರೈಕೆಯಾಗಲಿವೆ. ರಾಜ್ಯದ ಜನತೆ ಆತಂಕ ಪಡುವ ಅಗತ್ಯವಿಲ್ಲ ಎಂದು ಆಹಾರ ಮತ್ತು ನಾಗರಿಕ ಸಬರಾಜು ಇಲಾಖೆ ಸಚಿವ ಕೆ.ಎಚ್.ಮುನಿಯಪ್ಪ ಅವರು ಹೇಳಿದರು.



ವಿಧಾನ ಪರಿಷತ್‌ನಲ್ಲಿ ನಿಯಮ 330ರ ಅಡಿಯಲ್ಲಿ ಸದಸ್ಯರಾದ ರಮೇಶ್ ಬಾಬು, ಐವನ್ ಡಿಸೋಜಾ, ಶಿವಕುಮಾರ್ ಕೆ. ಪ್ರಸ್ತಾಪಿಸಿದ ಸಿಲಿಂಡರ್ ಸಮಸ್ಯೆ ಕುರಿತು ಪ್ರಶ್ನೆಗೆ ಉತ್ತರಿಸಿದ ಸಚಿವರು, ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿ.(ಐಓಸಿಎಲ್) ಮಾಹಿತಿ ಪ್ರಕಾರ ದೇಶದ ಒಟ್ಟಾರೆ ಬೇಡಿಕೆಯಲ್ಲಿ ಶೇ.70 ರಷ್ಟು ವಿದೇಶದಿಂದ ಆಮದು ಮಾಡಿಕೊಳ್ಳಲಾಗುತ್ತಿದ್ದು, ಶೇ.30 ರಷ್ಟು ಭಾರತದಲ್ಲೇ ಗ್ಯಾಸ್ ಉತ್ಪಾದಿಸಲಾಗುತ್ತದೆ. ದೇಶದಲ್ಲಿ ಉತ್ಪಾದನೆಯಾಗುವ ಎಲ್‌ಪಿಜಿಯನ್ನು ಗೃಹ ಬಳಕೆಗೆ ಪೂರೈಸಲು ಯಾವುದೇ ಸಮಸ್ಯೆಯಿಲ್ಲ ಎಂದರು.

ಸದ್ಯ ವಾಣಿಜ್ಯ ಉದ್ದೇಶಗಳಿಗೆ ಬಳಕೆಯಾಗುವ ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಆದರೆ, ವಿದೇಶಾಂಗ ಸಚಿವಾಲಯದ ಮಾಹಿತಿ ಪ್ರಕಾರ ಹಾರ್ಮುಜ್ ಕಣಿವೆಯಲ್ಲಿ ಸಿಲುಕಿದ್ದ ಹಡಗುಗಳ ಪೈಕಿ ಭಾರತಕ್ಕೆ ಅನಿಲ ಪೂರೈಸುವ ಎರಡು ಹಡಗುಗಳಿಗೆ ಇರಾನ್ ಅವಕಾಶ ಕಲ್ಪಿಸಿದೆ ಎಂದು ಹೇಳಿದರು.

ಕೇಂದ್ರ ಸರ್ಕಾರದ ವೈಫಲ್ಯ: ಆರೋಪ

ಬಳಿಕ ಮಾತನಾಡಿದ ಕಾಂಗ್ರೆಸ್ ಸದಸ್ಯರು ದೇಶದಲ್ಲಿ ಅಡುಗೆ ಅನಿಲ ಕೊರತೆಯಾಗಿರುವುದು ಕೇಂದ್ರ ಸರ್ಕಾರದ ವೈಫಲ್ಯ ಎಂದು ಟೀಕಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಭಾರತಿ ಶೆಟ್ಟರ್, ಬೋಜೇಗೌಡ ಅವರು ಮೋದಿ ಹೈ ತೋ ಸಬ್ಕುಚ್ ಹೈ ಎಂದು ತಿರುಗೇಟು ನೀಡಿದರು. ಈ ವೇಳೆ ಸದನದಲ್ಲಿ ಗದ್ದಲ ಉಂಟಾಗಿದ್ದರಿಂದ ಸಭಾಪತಿಗಳು 15 ನಿಮಿಷ ಕಲಾಪವನ್ನು ಮುಂದೂಡಿದರು.

ಆದ್ಯತಾ ಕುಟುಂಬಗಳಿಗಿರುವ ಮಿತಿ ಮತ್ತೊಮ್ಮೆ ಸರ್ಕಾರ ಪರಿಶೀಲನೆ

ವಾರ್ಷಿಕ ಆದಾಯ ಮಿತಿ 3 ಲಕ್ಷಕ್ಕೆ ಹೆಚ್ಚಳ?

ವಿಧಾನಸಭೆ: ರಾಜ್ಯದಲ್ಲಿ ಆದ್ಯತಾ ಕುಟುಂಬಗಳಿಗೆ (ಪಿಎಚ್‌ಎಚ್) ನೀಡಲಾಗುವ ಪಡಿತರ ಚೀಟಿಗಳ ವಾರ್ಷಿಕ ಆದಾಯ ಮಿತಿಯನ್ನು ಪ್ರಸ್ತುತ ಇರುವ 1.20 ಲಕ್ಷ ರೂ.ಗಳಿಂದ 3 ಲಕ್ಷ ರೂ.ಗಳಿಗೆ ಹೆಚ್ಚಿಸಲು ರಾಜ್ಯ ಸರ್ಕಾರ ಪರಿಶೀಲನೆ ನಡೆಸುತ್ತಿದೆ ಎಂದು ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.



ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರ ಪ್ರಶ್ನೆಗೆ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವ ಕೆ.ಎಚ್.ಮುನಿಯಪ್ಪ ಪರವಾಗಿ ಅವರು ಉತ್ತರಿಸಿದರು.

ಡಾ. ಅಶ್ವತ್ಥನಾರಾಯಣ ವಿಷಯ ಪ್ರಸ್ತಾಪಿಸಿ, ಪ್ರಸ್ತುತ ಜಾರಿಯಲ್ಲಿರುವ ಆದಾಯ ಮಿತಿಯು ಎಂಟು ವರ್ಷಗಳಷ್ಟು ಹಳೆಯದಾಗಿದೆ. ಕಳೆದ ಎಂಟು ವರ್ಷಗಳಲ್ಲಿ ಜನರ ಜೀವನ ವೆಚ್ಚ ಮತ್ತು ಆದಾಯದ ಪ್ರಮಾಣದಲ್ಲಿ ಗಣನೀಯ ಏರಿಕೆಯಾಗಿದೆ. ಹಳೆಯ ಮಾನದಂಡಗಳನ್ನೇ ಇಂದಿಗೂ ಮುಂದುವರಿಸುವುದು ವೈಜ್ಞಾನಿಕವಲ್ಲ. ಅಲ್ಲದೆ, ನಗರ ಮತ್ತು ಗ್ರಾಮೀಣ ಭಾಗಗಳಿಗೆ ಒಂದೇ ರೀತಿಯ ಆದಾಯ ಮಿತಿಯನ್ನು ನಿಗದಿಪಡಿಸಿರುವುದು ಸರಿಯಾದ ಕ್ರಮವಲ್ಲ ಎಂದು ಹೇಳಿದರು.

ಬಿಜೆಪಿ ಶಾಸಕ ಗೋಪಾಲಯ್ಯ ಅವರು, ಪಡಿತರ ಚೀಟಿಗಳ ರದ್ದತಿಯಿಂದಾಗುತ್ತಿರುವ ಅನ್ಯಾಯವಾಗಲಿದೆ. ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು 8-10 ಸಾವಿರ ಬಿಪಿಎಲ್ ಕಾರ್ಡ್‌ಗಳನ್ನು ರದ್ದುಗೊಳಿಸಲಾಗಿದೆ. ಯಾವುದೇ ಮನೆಮನೆ ಸಮೀಕ್ಷೆ ನಡೆಸದೆ ಏಕಾಏಕಿ ಕಾರ್ಡ್‌ಗಳನ್ನು ರದ್ದುಗೊಳಿಸುವುದು ಬಡವರಿಗೆ ಮಾಡುತ್ತಿರುವ ಅನ್ಯಾಯ. ತಾಂತ್ರಿಕ ಕಾರಣಗಳನ್ನು ನೀಡಿ ಬಡವರ ಅನ್ನವನ್ನು ಕಸಿದುಕೊಳ್ಳಬಾರದು ಎಂದು ಆಗ್ರಹಿಸಿದರು.

ಇದಕ್ಕೆ ಧ್ವನಿಗೂಡಿಸಿದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ ಬಾಬು, ಪಡಿತರ ಚೀಟಿಯು ಕೇವಲ ಅಕ್ಕಿ ಪಡೆಯಲು ಮಾತ್ರ ಸೀಮಿತವಾಗಿಲ್ಲ. ಚಾಲಕ ವೃತ್ತಿ ಮಾಡುವವರು ಅಥವಾ ಸಣ್ಣ ಪುಟ್ಟ ಕೆಲಸ ಮಾಡುವವರ ಆದಾಯ ಹೆಚ್ಚಿಲ್ಲದಿದ್ದರೂ ಅವರ ಕಾರ್ಡ್‌ಗಳನ್ನು ರದ್ದು ಮಾಡಲಾಗುತ್ತಿದೆ. ಬಿಪಿಎಲ್ ಕಾರ್ಡ್ ಕೇವಲ ಆಹಾರಕ್ಕಷ್ಟೇ ಅಲ್ಲದೆ, ಉಚಿತ ಆರೋಗ್ಯ ಸೇವೆಗಳು ಮತ್ತು ಮಕ್ಕಳ ಶಿಕ್ಷಣ ಸೇರಿದಂತೆ ಸರ್ಕಾರದ ವಿವಿಧ ಸೌಲಭ್ಯಗಳನ್ನು ಪಡೆಯಲು ಅತ್ಯಗತ್ಯವಾಗಿದೆ ಎಂದರು.

ಸಚಿವ ದಿನೇಶ್ ಗುಂಡೂರಾವ್, ಹಿರಿಯ ಸದಸ್ಯ ಆರ್.ವಿ. ದೇಶಪಾಂಡೆ ಅಧ್ಯಕ್ಷತೆಯ ಆಡಳಿತ ಸುಧಾರಣಾ ಆಯೋಗವು ಈ ಕುರಿತು ಈಗಾಗಲೇ ವರದಿ ನೀಡಿದೆ. ಆ ವರದಿಯಲ್ಲಿ ಬಿಪಿಎಲ್ ಕಾರ್ಡ್ ಪಡೆ ಯಲು ಇರುವ ವಾರ್ಷಿಕ ಆದಾಯದ ಮಿತಿಯನ್ನು 3 ಲಕ್ಷ ರೂ.ಗೆ ಏರಿಸಬೇಕು ಎಂದು ಶಿಫಾರಸು ಮಾಡಲಾಗಿದೆ. ಈ ಶಿಫಾರಸ್ಸನ್ನು ಸರ್ಕಾರವು ಸಕಾರಾತ್ಮಕವಾಗಿ ಪರಿಶೀಲಿಸುತ್ತಿದೆ ಎಂದರು.

ಬಡವರಿಗೆ ಸಿಗದ ಪಡಿತರ

ಕೇಂದ್ರ ಸರ್ಕಾರದ ಆಹಾರ ಭದ್ರತಾ ಕಾಯ್ದೆಯ ನಿಯಮಗಳ ಪ್ರಕಾರ, ಗ್ರಾಮೀಣ ಭಾಗದಲ್ಲಿ ಶೇ.75 ರಷ್ಟು ಮತ್ತು ನಗರ ಪ್ರದೇಶದಲ್ಲಿ ಶೇ.50 ರಷ್ಟು ಬಿಪಿಎಲ್ ಕಾರ್ಡ್‌ಗಳನ್ನು ಹೊಂದಲು ಅವಕಾಶವಿದೆ. ಆದರೆ, ಪ್ರಸ್ತುತ ನಗರ ಪ್ರದೇಶಗಳಲ್ಲಿ ಅರ್ಹ ಬಡವರಿಗೆ ಆದ್ಯತಾ ಪಡಿತರ ಚೀಟಿಗಳು ಸಿಗುತ್ತಿಲ್ಲ ಎಂಬ ಆತಂಕವನ್ನು ಡಾ. ಅಶ್ವತ್ಥನಾರಾಯಣ ವ್ಯಕ್ತಪಡಿಸಿದರು.

ಆರೋಗ್ಯ ತುರ್ತು ಪರಿಸ್ಥಿತಿ: ಆಕ್ರೋಶ

ವಿಧಾನಸಭೆ: ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ, ಔಷಧಿಗಳ ಅಭಾವ ಹಾಗೂ ಆ್ಯಂಬುಲೆನ್ಸ್ ಸೇವೆಗಳ ವೈಫಲ್ಯದಿಂದಾಗಿ ರಾಜ್ಯದಲ್ಲಿ ಆರೋಗ್ಯ ತುರ್ತು ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಪ್ರತಿಪಕ್ಷದ ಸದಸ್ಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಗುರುವಾರ ಕಲಾಪದಲ್ಲಿ ಪ್ರಶ್ನೋತ್ತರ ಅವಧಿ ಮುಗಿಯುತ್ತಿದ್ದಂತೆಯೇ ಪ್ರತಿಪಕ್ಷ ನಾಯಕ ಆರ್. ಅಶೋಕ, ರಾಜ್ಯದ ಆರೋಗ್ಯ ಇಲಾಖೆಯು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳ ಬಗ್ಗೆ ನಿಲುವಳಿ ಸೂಚನೆಯ ಅಡಿಯಲ್ಲಿ ಚರ್ಚೆಗೆ ಅವಕಾಶ ನೀಡಬೇಕು ಎಂದು ಸಭಾಧ್ಯಕ್ಷ ಯು.ಟಿ. ಖಾದರ್ ಅವರಿಗೆ ಮನವಿ ಮಾಡಿದರು.

ಸಾರ್ವಜನಿಕವಾಗಿ ಅತ್ಯಂತ ಮಹತ್ವದ ಮತ್ತು ತುರ್ತು ಚರ್ಚೆಯ ಅಗತ್ಯವಿರುವ ವಿಷಯಗಳನ್ನು ನಿಲುವಳಿ ಸೂಚನೆಯ ಅಡಿಯಲ್ಲೇ ಚರ್ಚಿಸಬೇಕು. ಆದರೆ, ಇತ್ತೀಚಿನ ದಿನಗಳಲ್ಲಿ ಇಂತಹ ಗಂಭೀರ ವಿಷಯಗಳನ್ನು ಏಕಾಏಕಿ ಸಾರ್ವಜನಿಕ ಮಹತ್ವದ ವಿಚಾರವನ್ನಾಗಿ (ನಿಯಮ 69ರ ಅಡಿ) ಪರಿವರ್ತಿಸಲಾಗುತ್ತಿದೆ. ಹೀಗೆ ಮಾಡುವುದರಿಂದ ವಿಷಯದ ತೀವ್ರತೆ ಮತ್ತು ಗಂಭೀರತೆ ಕಡಿಮೆಯಾಗುತ್ತದೆ. ಮುಖ್ಯಮಂತ್ರಿಯವರು ಅಥವಾ ಸಂಬಂಧಪಟ್ಟ ಸಚಿವರು ಯಥಾರೀತಿ ಉತ್ತರ ನೀಡಿ ಹೋಗುತ್ತಾರೆ. ಇದರಿಂದ ಬಡವರಿಗೆ ಯಾವುದೇ ನ್ಯಾಯ ಸಿಗುವುದಿಲ್ಲ ಎಂದವರು ಅಸಮಾಧಾನ ವ್ಯಕ್ತಪಡಿಸಿದರು.

ರಾಜಕೀಯ ಪ್ರೇರಿತ ಅಥವಾ ಒತ್ತಡದ ವಿಚಾರಗಳಿದ್ದರೆ ಬೇಕಿದ್ದರೆ ಅಂತಹವುಗಳನ್ನು ಪರಿವರ್ತನೆ ಮಾಡಿ. ಆದರೆ, ಬಡವರ ಪ್ರಾಣಕ್ಕೆ ಸಂಬಂಧಿಸಿದ, ಆರೋಗ್ಯ ಇಲಾಖೆಯ ಹದಗೆಟ್ಟ ಸ್ಥಿತಿಯಂತಹ ಜನರ ನೇರ ಸಮಸ್ಯೆಗಳಿದ್ದಾಗ ಅದನ್ನು ಪ್ರಾಥಮಿಕ ವಿಷಯ ಮಂಡನೆಗೆ ಅವಕಾಶ ಮಾಡಿಕೊಡಿ, ಎಂದು ಕೋರಿದರು. ಇಂದು ರಾಜ್ಯದ ಯಾವುದೇ ಸರ್ಕಾರಿ ಆಸ್ಪತ್ರೆಗೆ ಹೋದರೂ ಅಲ್ಲಿ ಅಗತ್ಯ ಔಷಧಿಗಳು ಸಿಗುತ್ತಿಲ್ಲ. ವೈದ್ಯರ ಕೊರತೆ ಎದ್ದುಕಾಣುತ್ತಿದೆ. ಕೇವಲ ಪ್ರತಿಪಕ್ಷದವರು ಮಾತ್ರವಲ್ಲ, ಸ್ವತಃ ವೈದ್ಯಕೀಯ ಸಂಘದ ಪದಾಧಿಕಾರಿಗಳೇ ಔಷಧಿಗಳ ಕೊರತೆ ಇರುವುದನ್ನು ಬಹಿರಂಗವಾಗಿ ಒಪ್ಪಿಕೊಂಡಿದ್ದಾರೆ. ಆಸ್ಪತ್ರೆಗಳಲ್ಲಿ ಪ್ಯಾರಸಿಟಮಾಲ್‌ನಂತಹ ಪ್ರಾಥಮಿಕ ಮಾತ್ರೆಗಳಿಗೂ ರೋಗಿಗಳು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ ಎಂದು ದೂರಿದರು.

ಸಕಾಲಕ್ಕಿಲ್ಲ ಆ್ಯಂಬುಲೆನ್ಸ್ ಸೇವೆ

ಬಿಜೆಪಿಯ ಶಾಸಕ ಡಾ. ಸಿ.ಎನ್. ಅಶ್ವತ್ಥನಾರಾಯಣ ಮಾತನಾಡಿ, ರಾಜ್ಯದಲ್ಲಿ ಪ್ರಸ್ತುತ ಆರೋಗ್ಯ ತುರ್ತು ಪರಿಸ್ಥಿತಿ ನಿರ್ಮಾಣವಾಗಿದೆ. ಆ್ಯಂಬುಲೆನ್ಸ್ ಸೇವೆಗಳು ಸಕಾಲಕ್ಕೆ ಸಿಗುತ್ತಿಲ್ಲ, ಡಯಾಲಿಸಿಸ್ ಕೇಂದ್ರಗಳಲ್ಲಿ ಸಮಸ್ಯೆಗಳಿವೆ ಮತ್ತು ಆಸ್ಪತ್ರೆಗಳ ನಿರ್ವಹಣೆಗೆ ಅನುದಾನದ ಕೊರತೆಯಿದೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸದಿದ್ದರೆ ಸಾವು-ನೋವುಗಳ ಸಂಖ್ಯೆ ಹೆಚ್ಚಾಗಲಿದೆ, ಎಂದು ಆತಂಕ ವ್ಯಕ್ತಪಡಿಸಿದರು. ಪ್ರತಿಪಕ್ಷಗಳ ವಾಗ್ದಾಳಿಗೆ ಉತ್ತರಿಸಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಸರ್ಕಾರವು ಈ ವಿಷಯದ ಬಗ್ಗೆ ಚರ್ಚೆ ನಡೆಸಲು ಯಾವುದೇ ಸಮಯದಲ್ಲೂ ಸಿದ್ಧವಿದೆ. ಇಲಾಖೆಯಲ್ಲಿ ಆಗಿರುವ ಸುಧಾರಣೆಗಳು ಮತ್ತು ಎದುರಿಸುತ್ತಿರುವ ಸವಾಲುಗಳ ಬಗ್ಗೆ ನಾವು ಮುಕ್ತವಾಗಿ ಮಾತನಾಡುತ್ತೇವೆ. ಈ ವಿಷಯದ ಗಂಭೀರತೆಯನ್ನು ಗಮನಿಸಿ ಪ್ರತ್ಯೇಕವಾಗಿ ಸುದೀರ್ಘ ಚರ್ಚೆಗೆ ಸಮಯ ನಿಗದಿಪಡಿಸುವಂತೆ ಸಭಾಧ್ಯಕ್ಷರಲ್ಲಿ ಮನವಿ ಮಾಡಿದರು.



ಹಾಸನದಲ್ಲಿ ಗರಿಷ್ಠ 788 ಮಾದರಿಗಳಲ್ಲಿ ಪತ್ತೆ

ಕೆಲವು ಡೇರಿಗಳಲ್ಲಿ ಹಾಲು ಕಲಬೆರಕೆ

ವಿಧಾನಪರಿಷತ್: ಒಂದು ವರ್ಷದಲ್ಲಿ ಡೇರಿಗಳಿಗೆ ಪೂರೈಕೆಯಾದ ಹಾಲಿನ ಘಟಕಗಳ 15,15,575 ಮಾದರಿಗಳನ್ನು ಪರೀಕ್ಷಿಸಲಾಗಿದೆ. ಅದರಲ್ಲಿ 3,049 ಮಾದರಿಗಳಲ್ಲಿ ಮಾತ್ರ ಕಲಬೆರಕೆ ಕಂಡುಬಂದಿದೆಎಂದುಸಭಾನಾಯಕ ಭೋಸರಾಜು ತಿಳಿಸಿದರು.



ಪ್ರಶ್ನೋತ್ತರ ಕಲಾಪದಲ್ಲಿ ಮಧು ಜಿ. ಮಾದೇ ಗೌಡ ಕೇಳಿದ ಪ್ರಶ್ನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರವಾಗಿ ಉತ್ತರಿಸಿದ ಅವರು, ಹಾಸನದಲ್ಲಿ ರಾಜ್ಯದಲ್ಲೇ ಗರಿಷ್ಠ 788 ಮಾದರಿಗಳಲ್ಲಿ ಕಲಬೆರಕೆ ಪತ್ತೆಯಾಗಿದೆ. ಉಳಿದಂತೆ ಬಳ್ಳಾರಿಯಲ್ಲಿ - 588, ಶಿವಮೊಗ್ಗ- 434, ಮಂಡ್ಯ -418 ಮತ್ತು ಕಲಬುರಗಿ -315 ಯಲ್ಲಿ ಹೆಚ್ಚು ಕಲಬೆರಕೆ ಪತ್ತೆಯಾಗಿದೆ. ಇನ್ನು ಹಾಲಿನಲ್ಲಿ ಕಲಬೆರಕೆ ಅಂಶ ಪತ್ತೆ ಹಚ್ಚಲು ಎಲ್ಲ ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಅಡಲ್ಟರೇಷನ್ ಟೆಸ್ಟ್ ಕಿಟ್ (ಸಕ್ಕರೆ, ಉಪ್ಪು ಇ, ನ್ಯೂಟ್ರಲೈಸರ್, ಯೂರಿಯಾ ಇತ್ಯಾದಿ) ಅನ್ನು ಒದಗಿಸಲಾಗಿದ್ದು, ಕಲಬೆರಕೆ ಅಂಶವನ್ನು ಪರೀಕ್ಷಿಸಲಾಗುತ್ತಿದೆ ಹಾಗೂ ಸಂಘಗಳಲ್ಲಿ ಸ್ವೀಕರಿಸಿದ ಹಾಲನ್ನು ಡೇರಿ ಹಂತದಲ್ಲಿಯೂ ಸಹ ಎಲ್ಲ ರೀತಿಯ ಪರೀಕ್ಷೆಗೊಳಪಡಿಸಿ ಸ್ವೀಕರಿಸಲಾಗುತ್ತಿದೆ. ಇದರೊಂದಿಗೆ ಡೋಡ್ಲಾ ಕಂಪನಿಯ ಹಾಲಿನಲ್ಲೂ ಕಲಬೆರಕೆ ಅಂಶ ಪತ್ತೆಯಾಗಿದೆ ಎಂದು ಸದನಕ್ಕೆ ಮಾಹಿತಿ ನೀಡಿದರು. ಇದೇ ವೇಳೆ ಕೋಲಾರ, ಚಿಕ್ಕಬಳ್ಳಾಪುರ, ದಕ್ಷಿಣ ಕನ್ನಡ, ನಂದಿನಿ ಹೈಟೆಕ್ ಪ್ರಾಡಕ್ಟ್ ಪ್ಲಾಂಟ್ ಚನ್ನರಾಯಪಟ್ಟಣ, ನಂದಿನಿ ಹೈಟೆಕ್ ಮೆಗಾ ಪೌಡರ್ ಪ್ಲಾಂಟ್, ಕಣ್ವ ರಾಮನಗರ ಮತ್ತು ಮರ್ದ ಡೇರಿಯಲ್ಲಿ ಕಲಬೆರಕೆಯ ಒಂದೇ ಒಂದು ಪ್ರಕರಣ ಪತ್ತೆಯಾಗಿಲ್ಲ ಎಂದು ತಿಳಿಸಿದರು.

ಉತ್ಪಾದಕರಿಗೆ ಅರಿವು ಮೂಡಿಸಿ

ಜಿಲ್ಲಾ ಹಾಲು ಒಕ್ಕೂಟಗಳ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಪೂರೈಸುವ ಹಾಲಿನಲ್ಲಿ ಕಲಬೆರಕೆ ಅಂಶ ಕಂಡುಬಂದರೆ ಆ ಹಾಲನ್ನು ತಿರಸ್ಕರಿಸಿ, ಉತ್ಪಾದಕರಿಗೆ ಅರಿವು ಮೂಡಿಸಿ, ಸಂಘದ ಕಾರ್ಯಕಾರಿ ಮಂಡಳಿ ಹಾಗೂ ಸಿಬ್ಬಂದಿಗೆ ಕಲಬೆರಕೆ ಮತ್ತೆ ಈ ರೀತಿಯಾಗದಂತೆ ಎಚ್ಚರಿಕೆ ನೀಡಲಾಗಿದೆ ಎಂದು ಭರವಸೆ ನೀಡಿದ್ದಾರೆ.

ಜನರ ಅಮೂಲ್ಯ ಜೀವ ರಕ್ಷಣೆ ನಿಟ್ಟಿನಲ್ಲಿ ಕ್ರಮ: ಸಚಿವ ಈಶ್ವರ ಖಂಡ್ರೆ

ಕಾಡು ಪ್ರಾಣಿಗಳ ಸಂಘರ್ಷ ತಡೆಗೆ ಸಫಾರಿ ಸ್ಥಗಿತ

ವಿಧಾನಸಭೆ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ 314 ಕಿ.ಮೀ. ಗಡಿ ಇದೆ. ಅದರಲ್ಲಿ 100 ಕಿಮೀ ಗಡಿ ಹೆಚ್ಚಿನ ಸಂಘರ್ಷ ಪ್ರದೇಶವಾಗಿದೆ ಎಂದು ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಪ್ರತಿಪಕ್ಷ ನಾಯಕ ಆರ್. ಅಶೋಕ ಅವರು, ಸಫಾರಿ ಸ್ಥಗಿತಗೊಳಿಸಿದ್ದರಿಂದ 4 ಸಾವಿರಕ್ಕೂ ಹೆಚ್ಚು ಜನರು ಉದ್ಯೋಗ ಕಳೆದುಕೊಂಡಿದ್ದರು. ಸಫಾರಿ ದೇಶಾದ್ಯಂತ ಹಲವು ವರ್ಷದಿಂದ ನಡೆಯುತ್ತಿದೆ. ಒಂದು ಸಮೀಕ್ಷೆಯನ್ನೂ ನಡೆಸದೆ ಏಕಾಏಕಿ ಸಫಾರಿ ನಿಲ್ಲಿಸಿದ್ದು ಮತ್ತು ಪುನರ್ ಆರಂಭಿಸಿದ್ದು ಸರಿಯಲ್ಲ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಸಫಾರಿಯನ್ನು ಏಕಾಏಕಿ ನಿಲ್ಲಿಸಲಿಲ್ಲ. ಕಳೆದ ನವೆಂಬರ್ ತಿಂಗಳಲ್ಲಿ 15 ದಿನಗಳ ಅಂತರದಲ್ಲಿ ಮೂರು ಜೀವಹಾನಿಯಾಗಿತ್ತು, ಒಬ್ಬರು ಶಾಶ್ವತವಾಗಿ ಅಂಗವಿಕಲರಾದರು. ಹುಲಿಗಳು ಕಾಡಿನಿಂದ ಹೊರಗೆ ಬಂದು ದಾಳಿ ಮಾಡುತ್ತಿದ್ದವು. ಜನರ ಅಮೂಲ್ಯ ಜೀವ ರಕ್ಷಣೆ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಯಿತು ಎಂದು ಸ್ಪಷ್ಟಪಡಿಸಿದರು. ನವೆಂಬರ್‌ನಲ್ಲಿ ತಾವು ಚಾಮರಾಜನಗರದಲ್ಲಿ ಈ ಸಂಬಂಧ ಸಭೆ ನಡೆಸಿದಾಗ ಹಲವು ರೈತ ಸಂಘಟನೆಗಳು ಸಫಾರಿ ರಾತ್ರಿಯವರೆಗೂ ನಡೆಯುತ್ತಿದೆ. ಹೆಚ್ಚಿನ ವಾಹನಗಳ ಸಂಚಾರ ವಿದೆ. ಹೆಚ್ಚು ಪ್ರವಾಸಿಗರು ಆಗಮಿಸುತ್ತಿದ್ದಾರೆ ಎಂದರು.

ಕುಮಾರ ಪರ್ವತ ಚಾರಣಕ್ಕೆ ಆನ್‌ಲೈನ್ ಟಿಕೆಟ್

ವಿಧಾನಸಭೆ: ಕುಕ್ಕೆ ಸುಬ್ರಹ್ಮಣ್ಯ ಬಳಿಯ ಕುಮಾರ ಪರ್ವತ ಚಾರಣಕ್ಕೆ ಆಗಮಿಸುವವರು ಕಡ್ಡಾಯವಾಗಿ ಆನ್‌ಲೈನ್ ಮೂಲಕ ಮಾತ್ರ ಟಿಕೆಟ್ ಖರೀದಿಸಬೇಕಾಗುತ್ತದೆಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು.



ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಭಾಗೀರಥಿ ಮುರುಳ್ಯ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಒಂದೇ ದಿನ 2-3 ಸಾವಿರ ಜನರು ಒಂದೇ ಕಡೆ ಸೇರಿದರೆ ಸಮಸ್ಯೆ ಆಗುತ್ತದೆ. ಆದ್ದರಿಂದ ನಿಯಂತ್ರಣ ಕ್ರಮ ಕೈಗೊಂಡು ಪ್ರತಿನಿತ್ಯ 150 ಜನರಿಗೆ ಮಾತ್ರ ಚಾರಣಕ್ಕೆ ಅವಕಾಶ ನೀಡಲಾಗುತ್ತಿದೆ. ಮಳೆಗಾಲದಲ್ಲಿ ಜಾರುವ ಹಾಗೂ ಬೇಸಗೆಯಲ್ಲಿ ಕಾಡ್ಗಿಚ್ಚಿನ ಭೀತಿ ಎದುರಾಗುವ ಕಾರಣ ಚಾರಣ ಇರುವುದಿಲ್ಲ ಎಂದು ವಿವರಿಸಿದರು. ಸುಬ್ರಹ್ಮಣ್ಯದಿಂದ ಕುಮಾರ ಪರ್ವತಕ್ಕೆ 24 ಕಿ.ಮೀ. ಚಾರಣ ಪಥವಿದ್ದು, ಅಲ್ಲಿ ಹೋಗಿ, ಮರಳಿ ಬರಲು 2 ದಿನ ಆಗುತ್ತಿತ್ತು. ರಾತ್ರಿ ಅಲ್ಲೇ ಉಳಿಯಬೇಕಿತ್ತು ಎಂದು ಹೇಳಿದರು.

ಬಂಡೀಪುರದಲ್ಲಿವೆ 175 ಹುಲಿಗಳು

1972ರಲ್ಲಿ ಬಂಡೀಪುರದಲ್ಲಿ ಕೇವಲ 12 ಹುಲಿಗಳಿದ್ದವು. ಕಳೆದ 3 ವರ್ಷದ ಹಿಂದೆ ಗಣತಿ ನಡೆದಾಗ ಅಲ್ಲಿ 150 ಹುಲಿ ಇದ್ದವು. ಈಗ ಹುಲಿಗಳ ಸಂಖ್ಯೆ 175 ಹುಲಿ ಇವೆ. ಕಾಡಿನ ಧಾರಣಾ ಸಾಮರ್ಥ್ಯ ತಿಳಿಯಲು ತಜ್ಞರ ಸಮಿತಿಯಿಂದ ವರದಿ ತರಿಸಿಕೊಳ್ಳುತ್ತಿದ್ದೇವೆ. ಕಾಡು ಹೆಚ್ಚುತ್ತಿಲ್ಲ, ಬದಲಾಗಿ ಕ್ಷೀಣಿಸುತ್ತಿದೆ. ಸಫಾರಿ ಮತ್ತೆ ಆರಂಭಿಸಿದ ನಂತರ ಪ್ರತಿಷ್ಠಾನಕ್ಕೆ ಸಫಾರಿಯಿಂದ ಬರುವ ಆದಾಯದಲ್ಲಿ ಶೇ.35 ರಷ್ಟನ್ನು ಕಾಡಿನಂಚಿನ ಗ್ರಾಮದಲ್ಲಿ ಜನಸಂಪರ್ಕ ಸಭೆ ಮಾಡಲು, ಶಿಕ್ಷಣ, ಮೂಲ ಸೌಕರ್ಯ ಹೆಚ್ಚಳಕ್ಕೆ, ಉದ್ಯೋಗ ಸೃಷ್ಟಿಗೆ ಬಳಸಲು ಸೂಚಿಸಲಾಗಿದೆ ಎಂದರು.

ಸಂಪಾದಕೀಯ

ಎರಡು ತೈಲ ಹಡಗುಗಳ ಆಗಮನ ಸ್ವಾಗತಾರ್ಹ

ಮಧ್ಯಪ್ರಾಚ್ಯದ ಯುದ್ಧದ ನೆರಳಲ್ಲೇ, ಹಾರ್ಮುಜ್ ಜಲಸಂಧಿಯಿಂದ ಭಾರತ ಕಚ್ಚಾ ತೈಲ ಹೊತ್ತ ಎರಡು ಹಡಗುಗಳನ್ನು ತರಿಸಿಕೊಳ್ಳಲು ಯಶಸ್ವಿಯಾಗಿದ್ದು, ಈ ಮೂಲಕ ದೇಶದಲ್ಲಿ ಹೆಚ್ಚುತ್ತಿರುವ ಎಲ್‌ಪಿಜಿ ಮತ್ತು ತೈಲ ಕೊರತೆ ವದಂತಿಗಳನ್ನು ನಿವಾರಿಸಲು ಮುಂದಾಗಿದೆ.

ಈಗಾಗಲೇ ಪ್ರಧಾನಿ ನರೇಂದ್ರ ಮೋದಿ, ಪೆಟ್ರೋಲಿಯಂ ಸಚಿವರು ಮತ್ತು ತೈಲ ಕಂಪನಿಗಳೂ ತೈಲ ಮತ್ತು ಎಲ್‌ಪಿಜಿಯ ಯಾವುದೇ ಸಮಸ್ಯೆ ಇಲ್ಲ, ನಮ್ಮಲ್ಲಿ ಕೊರತೆಯುಂಟಾಗಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಜತೆಗೆ, ದೇಶದ ಶೇ.70ರಷ್ಟು ತೈಲವನ್ನು ಹಾರ್ಮುಜ್ ಜಲಸಂಧಿಯಿಂದ ಹೊರತಾದ ಬೇರೆ ಮಾರ್ಗಗಳಿಂದ ತರಿಸಿಕೊಳ್ಳುತ್ತಿದ್ದೇವೆ ಎಂದೂ ಸ್ಪಷ್ಟವಾಗಿ ಕೇಂದ್ರ ಸರ್ಕಾರ ಹೇಳಿದೆ. ಇರಾನ್‌ನ ವಿದೇಶಾಂಗ ಸಚಿವ ಮತ್ತು ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಸತತವಾಗಿ ದೂರವಾಣಿ ಮೂಲಕ ಮಾತುಕತೆ ನಡೆಸುತ್ತಿದ್ದು, ಭಾರತದ ಹಡಗುಗಳಿಗೆ ಅವಕಾಶ ಮಾಡಿಕೊಡುವ ಬಗ್ಗೆ ಒಂದು ನಿರ್ಧಾರಕ್ಕೆ ಬರಲಿದ್ದಾರೆ. ಇದರ ಮೊದಲ ಹಂತವಾಗಿ ತೈಲ ಹೊತ್ತ ಎರಡು ಹಡಗುಗಳು, ಹಾರ್ಮುಜ್ ಜಲಸಂಧಿಯಿಂದಲೇ ರಹಸ್ಯವಾಗಿ ಹೊರಟು, ಮುಂಬೈಗೆ ಬಂದಿವೆ. ಇದೊಂದು ರೀತಿಯಲ್ಲಿ ದೊಡ್ಡ ರಹಸ್ಯ ಕಾರ್ಯಾಚರಣೆಯಂತೆಯೇ ನಡೆದಿದ್ದು, ದೇಶದ ಜನರ ಹಿತಾಸಕ್ತಿಗಾಗಿ ದೊಡ್ಡ ಮಟ್ಟದ ಅಪಾಯವನ್ನೇ ತೆಗೆದುಕೊಂಡಿದೆ. ಹೀಗಾಗಿ ಮುಂದಿನ ದಿನಗಳಲ್ಲೂ ಯಾವುದೇ ಕಾರಣಕ್ಕೂ ತೈಲ ಮತ್ತು ಎಲ್‌ಪಿಜಿ ಕೊರತೆಯಾಗಲು ಬಿಡುವುದಿಲ್ಲ ಎಂದು ಕೇಂದ್ರ ಸರ್ಕಾರವೂ ಹೇಳುತ್ತಿದ್ದು, ಇದನ್ನು ಎಲ್ಲರೂ ಒಪ್ಪಿಕೊಳ್ಳಲೇಬೇಕಾಗಿದೆ.

ಈ ಮೊದಲೇ ಹೇಳಿದಂತೆ ಯುದ್ಧ ಕಾಲದಲ್ಲಿ ಎಲ್ಲವೂ ಸರಾಗವಾಗಿ ನಡೆಯಬೇಕು ಎಂದು ಆಶಿಸುವುದು ತಪ್ಪಾಗುತ್ತದೆ. ಕೆಲವೊಮ್ಮೆ ದೂರದಲ್ಲಿ ಎಲ್ಲೋ ನಡೆಯುವ ಯುದ್ಧಗಳು ನಮ್ಮ ಮೇಲೆ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಹೊಡೆತ ನೀಡಬಹುದು. ಆದರೆ, ಈಗ ಯುದ್ಧದಲ್ಲಿ ಭಾಗಿಯಾಗಿರುವ ಎಲ್ಲ ದೇಶಗಳೂ ಒಂದಲ್ಲ, ಒಂದು ನಿಟ್ಟಿನಲ್ಲಿ ಭಾರತದ ಜತೆ ಉತ್ತಮ ಸಂಬಂಧ ಹೊಂದಿವೆ. ಹೀಗಾಗಿ, ಕೆಲ ಮಟ್ಟಿಗೆ ಗೊಂದಲಗಳಿದ್ದರೂ ಸಹನೆಯಿಂದ ಕಾಯಬೇಕಾದ ಅನಿವಾರ್ಯತೆಯೂ ಜನರಿಗೆ ಇದೆ. ಈಗ ಸರ್ಕಾರವೂ ಕಣ್ಣು ಮುಚ್ಚಿ ಕುಳಿತಿಲ್ಲ, ತನ್ನ ಎಲ್ಲ ಲಭ್ಯ ಮಾರ್ಗಗಳ ಮೂಲಕ ದೇಶದಲ್ಲಿ ಯಾವುದೇ ವಸ್ತುಗಳಿಗೆ ಕೊರತೆಯಾಗದಂತೆ ನೋಡಿಕೊಳ್ಳಲು ಶ್ರಮಿಸುತ್ತಿದೆ. ಇದು ಮುಂಬೈ ಬಂದರಿಗೆ ಬಂದ ಹಡಗುಗಳಿಂದಲೇ ಸಾಬೀತಾಗಿದೆ. ಇಂಥ ಹೊತ್ತಲ್ಲಿ ನಾವು ರಾಜಕೀಯದ ದಾಳಗಳಿಗೆ ಬಲಿಯಾಗದೆ, ವ್ಯವಸ್ಥೆಯ ಜತೆಗೆ ನಿಲ್ಲಬೇಕಾದ ಜವಾಬ್ದಾರಿಯನ್ನೂ ಹೊಂದಿದ್ದೇವೆ. ಇದರಲ್ಲಿ ನಾವು ಮಾಡಬೇಕಾಗಿರುವುದು, ಸರ್ಕಾರದ ಮೇಲೆ ನಂಬಿಕೆ ಇಟ್ಟು, ಯಾವುದೇ ಕಾರಣಕ್ಕೂ ಗಾಬರಿಗೆ ಅಥವಾ ಆತಂಕಕ್ಕೆ ಬೀಳದೇ ಸಮಚಿತ್ತದಿಂದ ಇರಬೇಕು. ಆಗಷ್ಟೇ ಎಲ್ಲ ಗೊಂದಲಗಳು, ಸಮಸ್ಯೆಗಳನ್ನು ನಿವಾರಿಸಲು ಸಾಧ್ಯವಾಗುತ್ತದೆ. ಯುದ್ಧದ ಹೊತ್ತಲ್ಲಿ ನಮ್ಮ ಸಮಚಿತ್ತದ ನಡೆಗಳು,ಅಪಾರವಾದ ಅನುಕೂಲ ಮಾಡಿಕೊಡುತ್ತವೆ ಎಂಬುದನ್ನು ಮರೆಯಬಾರದು.

ಗುರುಗಳ ಮಾರ್ಗದರ್ಶನ ಬೇಕು

ಶ್ಲೋಕ ಸಾಗರ



ಡಾ. ಸೋಂದಾ ಭಾಸ್ಕರ ಭಟ್

ಗುರೂಣಾಂ ವಚನಂ ಗ್ರಾಹ್ಯಂ ಪ್ರಾಪ್ಯೇ ಲಕ್ಷ್ಯೇ ತು ದೂರತಃ।
ಸಮೀಪಸ್ಥಂ ತು ಯತ್ ಕಿಂಚಿತ್ ಸ್ವಯಂ ಪ್ರಾಪ್ನೋತಿ ಮಾನವಃ॥ -ಸುವಚನಶತಕಂ

ದೂರದಲ್ಲಿರುವ ಲಕ್ಷ್ಯವನ್ನು ಭೇದಿಸಲು ಗುರುಗಳ ಮಾರ್ಗದರ್ಶನದ ಮಾತು ಬೇಕು. ಹತ್ತಿರದಲ್ಲೇ ಇರುವುದನ್ನು ಮನುಷ್ಯನು ತಾನೇ ಪಡೆಯಬಹುದು – ಎಂಬುದು ಶ್ಲೋಕಾರ್ಥ.

ಸನಾತನ ಪರಂಪರೆಯಲ್ಲಿ ಗುರುವಿಗಿರುವ ಅತ್ಯಂತ ಮಹತ್ವದ ಸ್ಥಾನ. ಯಾವುದೇ ಕೆಲಸವನ್ನು ಆರಂಭಿಸುವ ಪೂರ್ವದಲ್ಲಿ ಗುರುವನ್ನು ನೆನಪಿಸಬೇಕು. ಧಾರ್ಮಿಕ ಪೂಜಾದಿಗಳಲ್ಲಂತೂ ಗುರು-ಗಣಪತಿಯರನ್ನು ಪೂಜಿಸಿ ಮುಂದಿನ ವಿಧಿ ವಿಧಾನವನ್ನು ನೆರವೇರಿಸುತ್ತಾರೆ. ಗುರುವಿಲ್ಲದೇ ಬದುಕು ಸಾಗುವುದಿಲ್ಲ. ಇಹಪರಗಳ ಸಾಧನೆಯಲ್ಲೂ ಗುರುವಿಗೆ ಪ್ರಥಮ ಪ್ರಾಶಸ್ತ್ಯ. ಇದನ್ನೆ 'ಗುರುವಿನ ಗುಲಾಮ ನಾಗುವ ತನಕ ದೊರೆಯದಣ್ಣ ಮುಕುತಿ' ಎಂದು ದಾಸವಾಣಿ ಎಚ್ಚರಿಸುತ್ತದೆ. "ಹರ ಮುನಿದರೂ ಗುರು ಕಾಯ್ವ" ಎಂಬ ನುಡಿಗಟ್ಟು ಗುರುವಿನ ಗುರುತ್ವಕ್ಕೆ ಹಿಡಿದ ಕನ್ನಡಿ.

ಆದ್ದರಿಂದಲೇ ಉಪನಿಷತ್ತು ತಾಯಿತಂದೆಯರ ಅನಂತರ "ಆಚಾರ್ಯ ದೇವೋಭವ" ಎಂದು ಗುರುವಿನ ಹಿರಿಮೆಯನ್ನು ಸಾರಿದೆ. ಗುರು ವ್ಯಕ್ತಿಯೇ ಆಗಬೇಕಿಲ್ಲ, ಸಂಕೇತವೂ ಆಗುತ್ತದೆ. ಪ್ರಕೃತಿಯಲ್ಲಿರುವ ವಿವಿಧ ವಸ್ತುಗಳೂ ಗುರುವಾಗುತ್ತವೆ. ಏಕಲವ್ಯನಿಗೆ ದ್ರೋಣರ ಮೃಣ್ಮಯ ಮೂರ್ತಿ ಪ್ರೇರಣೆ ನೀಡಿ ಅಸದೃಶ ಬಿಲ್ಲಾಳುವನ್ನಾಗಿ ರೂಪಿಸಿತು.

ಶ್ರೀಮದ್ ಭಾಗವತದಲ್ಲಿ ಬರುವ ಉದ್ಧವಗೀತೆ ಪ್ರಕೃತಿಯಲ್ಲಿರುವ ಒಂದೊಂದು ವಸ್ತುವೂ ಗುರುವಾಗಬಲ್ಲದು, ನಿಂತು ಧೈರ್ಯ ತುಂಬಿಸು ಎಂಬ ವಿಚಾರ ವಿಸ್ತೃತವಾಗಿ ನಿರೂಪಿಸಲ್ಪಟ್ಟಿದೆ. ಪ್ರತಿಯೊಬ್ಬರಿಗೂ ಗುರಿತಲುಪಲು ಗುರುಬೇಕು. ಗುರುತ್ರಿಮೂರ್ತಿ ಸ್ವರೂಪಿಯಾಗಿ ತಾನೊಬ್ಬನೇ ತ್ರಿಮೂರ್ತಿಗಳ ಕೆಲಸ ಮಾಡುವ, ಬ್ರಹ್ಮನು ಸೃಷ್ಟಿ ಕಾರ್ಯ ಮಾಡುವಂತೆ ಗುರುವು ಹೊಸ ಬಗೆಯ ಚಿಂತನೆಯ ಹುಟ್ಟಿಗೆ ಕಾರಣನಾಗಿ ಬ್ರಹ್ಮನಾಗುತ್ತಾನೆ. ಒಳ್ಳೆಯತನವನ್ನು ಉಳಿಸಿ ಬೆಳೆಸಿಕೊಳ್ಳುವ ಸಂದರ್ಭದಲ್ಲಿ ವಿಷ್ಣುವಾಗಿ ಸ್ಥಿತಿ ಕೆಲಸ ಮಾಡುವ, ಜನರಲ್ಲಿರುವ ಅಜ್ಞಾನವನ್ನು, ದೋಷವನ್ನು ದೂರೀಕರಿಸಿ (ನಾಶಪಡಿಸಿ) ಮಹೇಶ್ವರನಾಗಿ ಸ್ಥಾನವನ್ನು ಧರಿಸುವ, ಒಂದು ಪರಿಪೂರ್ಣ ವ್ಯಕ್ತಿತ್ವ ಅರಳುವಲ್ಲಿ ಗುರುವಿನ ಪಾತ್ರ ಅತ್ಯಂತ ಮಹತ್ವದ್ದು.

ಎಲ್ಲ ಸಂದರ್ಭದಲ್ಲಿಯೂ ಗುರು ಅನುಗ್ರಹ ಬೇಕೇಬೇಕು. ಗುರುವಿನ ಅನುಗ್ರಹ ಸಿಗದಿದ್ದರೆ ಬದುಕು ಸಹ್ಯವೆನಿಸದು. ಆದ್ದರಿಂದಲೇ ಗುರುಗಳ ಪಾದಗಳಿಗೆರಗಿ ಆಶೀರ್ವಚನವನ್ನು, ಅನುಗ್ರಹ ಮಂತ್ರಾಕ್ಷತೆಯನ್ನು ಪಡೆಯಲು ಹಂಬಲಿಸುತ್ತೇವೆ.

ಹೆಚ್ಚಿನ ಸಂದರ್ಭದಲ್ಲಿ ವಿವೇಕದಿಂದ ವ್ಯವಹರಿಸಿ ತನ್ನ ಹತ್ತಿರದಲ್ಲಿ, ಸುತ್ತುಮುತ್ತಲಿನ ಜ್ಞಾನವನ್ನು ತಾನೇ ಪಡೆಯಬಹುದು. ಲಕ್ಷ್ಯವನ್ನು ಒರೆಗೆ ಹಚ್ಚಿ ತೊಡಗಿಕೊಂಡರೆ ಇದು ಸಾಧ್ಯ. ಪ್ರಯತ್ನದಿಂದ ಪಡೆದುಕೊಳ್ಳಬಹುದು. ಸುಲಭವಾದುದನ್ನು ತಾನೇ ಓದಿ ಜ್ಞಾನವನ್ನು ಪಡೆದುಕೊಳ್ಳಬಹುದು. ಆದರೆ ದೂರದ ಲಕ್ಷ್ಯವನ್ನು ಭೇದಿಸಲು ಗುರೂಪದೇಶ ಬೇಕು, ಗುರುವಿನ ಮಾರ್ಗದರ್ಶನ ಬೇಕು. ದೂರದ ಲಕ್ಷ್ಯವನ್ನು ಭೇದಿಸುವ ಸಾಮರ್ಥ್ಯವನ್ನು ಉಪಾಯವನ್ನು ಗುರುವು ಹೊಂದಿರುತ್ತಾನೆ. ಅದನ್ನು ನಮ್ಮದಾಗಿಸಿಕೊಳ್ಳಲು ಗುರುವಿನ ಸಹಕಾರ ಬೇಕೇಬೇಕು. ಕಠಿಣ ವಿಷಯವನ್ನು, ಗೊಂದಲಮಯ ವಿಚಾರವನ್ನು, ರಹಸ್ಯ ನಿರೂಪಣೆಯನ್ನು ತಿಳಿಯಲು ಗುರು ಬೇಕಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರ ಜೀವನದಲ್ಲಿಯೂ ಗುರುವಿನ ಪಾತ್ರ ದೊಡ್ಡದಿರುತ್ತದೆ. ಈ ಕಾರಣಕ್ಕಾಗಿಯೇ ಗುರುವನ್ನು ಗೌರವಿಸುವ, ಗುರುಸೇವೆ ಮಾಡುವ, ಪದ್ಧತಿ ನಮ್ಮ ಸಮಾಜದಲ್ಲಿ ಅನುಸ್ಯೂತವಾಗಿ ಸಾಗಿ ಬಂದಿದೆ. ಇದನ್ನು ಸರಿಯಾಗಿ ಅರಿತು ನಮ್ಮದಾಗಿಸಿಕೊಳ್ಳಬೇಕು.

ಯುದ್ಧಕಾಲದಲ್ಲೊಂದು ಅಕಾಲಿಕ ಚಿಂತೆ!

ಉಘೇ ವೀರಭೂಮಿಗೆ

• ಸಂತೋಷ್ ತಮ್ಮಯ್ಯ
santoshthammaiah@gmail.com



ಇದು ಅರೇಬಿಯನ್ ನೈಟ್ಸ್ ಕತೆಯಲ್ಲ. ಆದರೆ ಹೆಚ್ಚುಕಡಿಮೆ ಹಾಗೆಯೇ ಇದೆ.

ಒಂಬತ್ತನೆಯ ಶತಮಾನದ ಇಥಿಯೋಪಿಯಾದಲ್ಲಿ ಕಲ್ದಿ ಎಂಬ ಕುರಿಗಾಹಿಯಿದ್ದ. ಒಂದು ದಿನ ಆತ ಪೊದೆಯಂತಿದ್ದ ಗಿಡವೊಂದರಲ್ಲಿ ಹೊಳೆಯುತ್ತಿದ್ದ ಹಣ್ಣನ್ನು ಕಂಡು ಕುತೂಹಲಗೊಂಡು ಕಿತ್ತು ತಿಂದ. ವಿಚಿತ್ರ ರುಚಿಯ ಹಣ್ಣು ಕಲ್ದಿಗೆ ಚೈತನ್ಯದಾಯಕ ಅನುಭವವನ್ನು ನೀಡಿತು. ಆ ಗಿಡ ಮುಸ್ಲಿಂ ಮತಪ್ರಚಾರಕ ಸಂತನ ಸುಪರ್ದಿಯಲ್ಲಿತ್ತು. ಇನ್ನೊಂದಿಷ್ಟು ಹಣ್ಣುಗಳನ್ನು ಕಿತ್ತುಕೊಂಡ ಕಲ್ದಿ ಅದನ್ನು ಮನೆಗೆ ಕೊಂಡೊಯ್ಯಲು ಆತನ ಅನುಮತಿ ಕೇಳಿದ. ಅನುಮತಿ ನಿರಾಕರಿಸಿದ ಮುದುಕ ಸಂತ ಕಲ್ದಿಯ ಕೈಯಲ್ಲಿದ್ದ ಹಣ್ಣುಗಳನ್ನು ಕಿತ್ತು ಬೆಂಕಿಗೆಸೆದ. ಸುಡತೊಡಗಿದ ಹಣ್ಣುಗಳು ಆಕರ್ಷಕ ಸುವಾಸನೆಯನ್ನು ಬೀರತೊಡಗಿತು. ಅದರ ಪರಿಮಳಕ್ಕೆ ಅಕ್ಕಪಕ್ಕದಲ್ಲಿದ್ದವರು ನೆರೆದರು. ಸುಟ್ಟ ಬೀಜಗಳನ್ನು ಬೆಂಕಿಯಿಂದ ಹೆಕ್ಕಿ ತೆಗೆದರು. ಕಚ್ಚಿ ನೋಡಿದರು. ಏನನ್ನಿಸಿತೋ ಏನೋ ಸುಟ್ಟಬೀಜಗಳನ್ನು ಪುಡಿಮಾಡಿ ನೀರಿನಲ್ಲಿ ಕರಗಿಸಿ ಕುಡಿದರು. ಕುಡಿದವರಿಗೆ ಆ ಕಷಾಯ ಮುದ ನೀಡಿತು.

ಜಗತ್ತಿನ ಮೊದಲ ಕಾಫಿ ಹೀಗೆ ತಯಾರಾಯಿತು ಎಂದು ಈ ದಂತಕತೆ ಹೇಳುತ್ತದೆ. ಇದರ ಸತ್ಯಾಸತ್ಯತೆಯ ಬಗ್ಗೆ ಅನೇಕ ಸಂಶೋಧನೆಗಳಾಗಿವೆ. ಕೊನೆಗೆ ಇಂಥ ಕತೆಗಳು ಅರಬ್ ನೆಲದ ಅಲ್ಲಲ್ಲಿ, ಬೇರೆಬೇರೆ ಸ್ವರೂಪದಲ್ಲಿ ಆಚರಣೆಯಲ್ಲಿರುವುದರಿಂದ ಅವು apocryphal ಆಗಿರಬಹುದು, 1671ಕ್ಕೆ ಮುನ್ನ ಇಂಥ ಯಾವ ಕತೆಗಳೂ ಅಸ್ತಿತ್ವದಲ್ಲಿರಲಿಲ್ಲ ಎಂದು ತೀರ್ಮಾನಿಸಿದ ವಿದ್ವಾಂಸರು ಚರ್ಚೆಯನ್ನು ಕೊನೆಗೊಳಿಸಿದರು. ಆದರೆ ಹೀಗೆ ತೀರ್ಮಾನಿಸಿದ ದೊಡ್ಡದೊಡ್ಡ ಸಂಶೋಧಕರು ದಂತಕತೆಗಳಲ್ಲಿ ಉಲ್ಲೇಖಿತ ಕಾಫಿಯ ಸ್ವಾದದ ಬಗ್ಗೆ ಮಾತ್ರ ಎಲ್ಲೂ ಅನುಮಾನ ವ್ಯಕ್ತಪಡಿಸಲಿಲ್ಲ. ಕಾಫಿ ಇತಿಹಾಸದ ಆರಂಭದ ಕಾಲದ ಈ ಗೊಂದಲಗಳನ್ನು ಬಿಟ್ಟರೆ ಈ ಕ್ಷಣದವರೆಗೆ ಜಗತ್ತು ಕಾಫಿಯಿಂದ ಹೇಗೆ ಅವಲಂಬಿತವಾಗಿದೆ, ಪ್ರೇರಿತವಾಗಿದೆ ಮತ್ತು ನಾಗರಿಕತೆಯಲ್ಲಿ ಕಾಫಿ ಹೇಗೆ ಪ್ರಭಾವ ಬೀರಿದೆ ಎನ್ನುವುದರ ಸಂಪೂರ್ಣ ಮಾಹಿತಿಯನ್ನು ಜಗತ್ತು ಅಧಿಕೃತವಾಗಿ ದಾಖಲಿಸಿದೆ. ಅದನ್ನು ಪಾನೀಯವೊಂದಕ್ಕೆ ಕೊಟ್ಟ ಪ್ರಾಮುಖ್ಯತೆ ಎನ್ನಬೇಕೋ ಅಥವಾ ನಾಗರಿಕತೆಗೆ ಸಲ್ಲಿಸುವ ಕೃತಜ್ಞತೆ ಎನ್ನಬೇಕೋ ತಿಳಿಯದು. ಆದರೆ ಆ ಸ್ವಾದದ ಮೂಲಕ ಕಾಫಿ ಇಂದು ಇಡೀ ಜಗತ್ತಿನ ಬಹುತೇಕ ಎಲ್ಲಾ ದೇಶಗಳ ಮೇಲೆ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಪ್ರಭಾವ ಬೀರಿದೆ ಎನ್ನುವುದಂತೂ ಸತ್ಯ.

ದೇಶದಲ್ಲಿ ಅತಿ ಹೆಚ್ಚು ಕಾಫಿ ಬೆಳೆಯುವ ಕರ್ನಾಟಕದ ಕೊಡಗು-ಚಿಕ್ಕಮಗಳೂರಿನ ಕಾಫಿ ತೋಟಗಳಲ್ಲೀಗ ಕಾಫಿ ಕುಯ್ಲು ಮುಗಿದು, ಗಿಡಗಳು ಹೂವು ಬಿಟ್ಟಿವೆ. ಇಲ್ಲಿ ಹೂವು ಬಿಡುವುದಕ್ಕೂ ದೂರದ ಮಧ್ಯಪ್ರಾಚ್ಯದಲ್ಲಿ ಕದನವಾದನ ತಾರಕಕ್ಕೇರುವುದಕ್ಕೂ ಸರಿಹೋಗಿದೆ. ಹಾಗಾಗಿ ಕಾಫಿ ಹೂವಿನ ಪರಿಮಳಕ್ಕಿಂತ ದಟ್ಟವಾಗಿ ಕಾಫಿ ಬೆಲೆಯ ಚರ್ಚೆಯಾಗುತ್ತಿದೆ. ಹಡಗುಗಳು ಸಂಚರಿಸದೆ ಕಾಫಿ ಹೊರದೇಶಕ್ಕೆ ಸಾಗುವುದು ಹೇಗೆ? ಇದರಿಂದ ಬೆಲೆ ಏರಬಹುದೇ ಅಥವಾ ಇಳಿಯಬಹುದೇ ಎಂಬಿತ್ಯಾದಿ ಚರ್ಚೆಗಳು ಬೆಳೆಗಾರರಲ್ಲಿ ನಡೆದು ಖಮೇನಿಯ ಹತ್ಯೆಯೇ ಮರೆತುಹೋಗಿದೆ! ಯುದ್ಧವು ಅಡುಗೆಮನೆಯ ಅನಿಲ ಸಿಲಿಂಡರ್ ಮೇಲೆ ಪರಿಣಾಮ ಬೀರುವುದಾದರೆ ಕಾಫಿ ಬೆಲೆಯ ಮೇಲೆ ಬೀರಲಾರದೆ ಎಂಬ ಪ್ರಶ್ನೆ ಬೆಳೆಗಾರರನ್ನು ಕಾಡುತ್ತಿದೆ. ಯುದ್ಧಕ್ಕೆ ಯಾವುದೇ ರಾಜಕೀಯ ಕಾರಣಗಳನ್ನು ನೀಡಲಾಗಿದ್ದರೂ, ಮೂಲ ಕಾರಣ ಯಾವಾಗಲೂ ಆರ್ಥಿಕವಾಗಿರುತ್ತದೆ ಎಂಬುದೆಷ್ಟು ನಿಜವೋ ತಿಳಿಯದು. ಆದರೆ ಎಲ್ಲಾ ಯುದ್ಧಗಳ ಅಂತಿಮ ಪರಿಣಾಮ ಆರ್ಥಿಕತೆಯ ಮೇಲಾಗುತ್ತದೆ ಎಂಬುದು ಮಾತ್ರ ಸತ್ಯ. ಜಗತ್ತಿಗೆ ತೈಲೋತ್ಪನ್ನಗಳ ಕೊರತೆಯ ಭೀತಿ ಹುಟ್ಟಿರುವುದೇ ಅದಕ್ಕೆ ಸಾಕ್ಷಿ. ಪ್ರತಿ ಕದನವಿರಾಮಗಳ ನಂತರ ಯುದ್ಧಗ್ರಸ್ಥ, ಯುದ್ಧಸಂತ್ರಸ್ಥ ಮತ್ತು ಯುದ್ಧದಿಂದ ದೂರ ಉಳಿದ ದೇಶಗಳೆಲ್ಲವೂ ಒಂದಲ್ಲಾ ಒಂದು ಸ್ಥಿತ್ಯಂತರಕ್ಕೆ ಒಳಗಾಗುತ್ತವೆ. ಯುದ್ಧದ ನಂತರ ಯಾವುದೋ ಒಂದು ಪಾಠವನ್ನು ಪ್ರತೀ ದೇಶವೂ ಕಲಿಯುತ್ತದೆ. ಆದ್ದರಿಂದ ಯುದ್ಧಾನಂತರದ ಇತಿಹಾಸವನ್ನು ಗಮನಿಸಿದರೆ ಅನೇಕ ಕುತೂಹಲಕರ ಸಂಗತಿಗಳು ಇಣುಕುತ್ತವೆ. ಯುದ್ಧ ಯಾವುದೇ ಕಾರಣಕ್ಕಾಗಿ ನಡೆದಿರಲಿ, ಕೆಲವು ಸಂಗತಿಗಳು ಯುದ್ಧದ ಹೊರತಾಗಿಯೂ ಎದ್ದು ಕಾಣುತ್ತವೆ. ಯುದ್ಧಕಾಲದ ಚಿಂತನೆಗಳು ಭ್ರಮೆಯೂ ಆಗಬಹುದೆಂಬುದನ್ನು ತೋರಿಸುತ್ತವೆ.

ಅದಕ್ಕೆ ಕಾಫಿಗಿಂತ ಉತ್ತಮ ಉದಾಹರಣೆ ಬಹುಶಃ ಬೇರೆ ಇಲ್ಲ. ಬೆಲೆಯಲ್ಲಿ ವ್ಯತ್ಯಾಸವಾಗಬಹುದೇ ಎಂಬ ಪ್ರಶ್ನೆ ಬೆಳೆಗಾರರ ಕುತೂಹಲವೇ ಇರಬಹುದು. ಆದರೆ ಕಾಫಿ ಸಹಿತ ಎಲ್ಲಾ ವ್ಯವಹಾರಗಳು ಯುದ್ಧದಿಂದ ಒಂದು ಕ್ಷಣ ಗೊಂದಲಗೊಂಡಿರುವುದಂತೂ ಸತ್ಯ. ಅದು ಶಾಶ್ವತ ಸ್ಥಿತಿಯಲ್ಲ. ಕಾಫಿ ಸಾಗಿಸುವ ಹಡಗು ನಿಂತಂತೆ ಕಾಂಡೋಮ್ ಸಾಗಿಸುವ ಹಡಗೂ ಇಂಥ ಸ್ಥಿತಿಯಲ್ಲಿ ನಿಲ್ಲಲೇಬೇಕು! ಕಾಫಿ ಜಗತ್ತಿನ ಜೀವನಾವಶ್ಯಕ ಸರಕೇನಲ್ಲ. ಆದರೆ ಶತಮಾನದಿಂದಲೂ ಜಗತ್ತು ಕಠಿಣ ಪರಿಸ್ಥಿತಿಗಳಲ್ಲಿ ಕಾಫಿಯನ್ನು ಬಿಟ್ಟು ಬದುಕಿಲ್ಲ. ಪರಿಸ್ಥಿತಿ ಮತ್ತು ಮನುಷ್ಯನ ಚಟದ ಕಾರಣಗಳೆರಡಕ್ಕೂ ಕಾಫಿಯನ್ನು ಹೊತ್ತ ಹಡಗುಗಳು ಲಂಡನ್, ನ್ಯೂಯಾರ್ಕಿಗೆ ಶೀಘ್ರ ಸಂಚರಿಸಲೇಬೇಕು! ಒಂದು ವೇಳೆ ಕಾಫಿಯ ಆಮದು-ರಫ್ತು, ಯುದ್ಧ-ಕ್ರಾಂತಿಗಳಿಗೆ ನೇರಾನೇರ ಪರಿಣಾಮ ಬೀರುವುದಾಗಿದ್ದರೆ ಕಾಫಿ ಸರ್ವನಾಶವಾಗಿ ಅದೆಷ್ಟೋ ಶತಮಾನಗಳಾಗಿರುತ್ತಿತ್ತು. ಇಂಥ ಎಷ್ಟೋ ಯುದ್ಧ-ಕ್ರಾಂತಿಗಳನ್ನು ನೋಡಿದ ಕಾಫಿ ಈಗಿನ ಮಧ್ಯಪ್ರಾಚ್ಯದ ಯುದ್ಧಕ್ಕೂ ಹೆದರುವುದಿಲ್ಲ. ಅಷ್ಟೇಕೆ ಕಾಫಿ ಮಾರ್ಗಕ್ಕೂ ಮಧ್ಯಪ್ರಾಚ್ಯ ಯುದ್ಧದಿಂದ ಸ್ತಬ್ಧವಾಗಿರುವ ಸಮುದ್ರಮಾರ್ಗಕ್ಕೂ ಏನೇನೂ ಸಂಬಂಧವಿಲ್ಲ. ಹರ್ಮುಜ್ ಜಲಸಂಧಿ, ಪರ್ಷಿಯನ್ ಕೊಲ್ಲಿಯಲ್ಲೆಂದೂ ಭಾರತದ ಕಾಫಿ ಸಾಗಿಲ್ಲ. ಅಲ್ಲದೆ ಜಗತ್ತಿನಲ್ಲಿ ಸಂಘರ್ಷಗಳೆಷ್ಟೇ ಸಂಭವಿಸಿದರೂ ಕಾಫಿ ಎಂದೂ ಸೋತಿಲ್ಲ. ಗಡಿಗಳು ಬದಲಾದರೂ ಕಾಫಿಯ ಹುಚ್ಚು ಬಿಟ್ಟಿಲ್ಲ. ಯಾವ ಬಾಂಬುಗಳೂ ಕಾಫಿಯನ್ನು ಕದಲಿಸಿಲ್ಲ. ಕ್ಷಿಪಣಿಗಳು ಕಾಫಿಗೆ ಭಯ ತರಿಸಿಲ್ಲ. ಕಾಫಿಯ ಇತಿಹಾಸವನ್ನು ನೋಡಿದರೆ ಯುದ್ಧ ಕಾಲದಲ್ಲೇ ಕಾಫಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡಿದೆ.

1526ರಲ್ಲಿ ಹಂಗೇರಿಯ ರಾಜ ಎರಡನೆಯ ಲೂಯಿಸ್ ಮತ್ತು ಒಟ್ಟೋಮನ್ ಸುಲೈಮಾನ್ ನಡುವೆ ನಡೆದ ಐತಿಹಾಸಿಕ 'ಮೊಹಾಕ್ಸ್ ಯುದ್ಧ'ದಲ್ಲಿ ಒಟ್ಟೋಮನ್ನರು ಹಂಗೇರಿಯನ್ನು ಆಕ್ರಮಿಸಿಕೊಂಡರು. ಗೆದ್ದ ಒಟ್ಟೋಮನರು ಹಂಗೇರಿಯಲ್ಲಿ ಕಾಫಿಯನ್ನು ಪರಿಚಯಿಸಿದರು. ಕೆಲವೇ ಸಮಯದಲ್ಲಿ ಹಂಗೇರಿಯಲ್ಲಿ ಕಾಫಿ ಜನಪ್ರಿಯವಾಯಿತು ಮತ್ತು ಹಂಗೇರಿಯ ಮೂಲಕ ಇಡೀ ಯುರೋಪಿಗೆ ಹರಡಿತು. ಆ ಮೂಲಕ ಕಾಫಿಯ ವಾಣಿಜ್ಯೀಕರಣದ ಹೊಸ ಶಕೆ ಆರಂಭವಾಯಿತು. 1529ರಲ್ಲಿ ಅದೇ ಒಟ್ಟೋಮನ್ನರು ಆಸ್ಟ್ರೀಯಾದ ರಾಜಧಾನಿ ವಿಯೆನ್ನಾಕ್ಕೆ ಮುತ್ತಿಗೆ ಹಾಕಿದರು. ಇಲ್ಲಿ ಒಟ್ಟೋಮನ್ ಟರ್ಕರು ಗೆಲ್ಲದಿದ್ದರೂ ಅವರ ಕಾಫಿ ವಿಯೆನ್ನಾದಲ್ಲಿ ಗೆದ್ದಿತು. ಆಸ್ಟ್ರಿಯಾದ ಜನ ಕಾಫಿಯನ್ನು ಯುದ್ಧದ ಕೊಡುಗೆ ಎಂದು ಸ್ವಾಗತಿಸಿ ಕಾಫಿ ಸಂಸ್ಕೃತಿಯನ್ನು ಬೆಳೆಸಿದರು. ಆಸ್ಟ್ರೀಯಾದ ಮೂಲಕ ಜರ್ಮನಿ, ಫ್ರಾನ್ಸ್‌ಗಳಿಗೂ ಹರಡಿತು. 1565ರಲ್ಲಿ ಇದೇ ಟರ್ಕರು ಮಾಲ್ಟಾ ದ್ವೀಪಗಳ ಮೇಲೆ ದಂಡೆತ್ತಿಹೋದಾಗಲೂ ಕಾಫಿ ಬೀಜಗಳನ್ನು ಕೊಂಡೊಯ್ದರು. ಗುಲಾಮರಿಂದ ಕಾಫಿ ತೋಟಗಳನ್ನು ನಿರ್ಮಿಸಿದರು. ಇದೇ ರೀತಿ ವೆನಿಸ್ ಗಣರಾಜ್ಯ, ಉತ್ತರ ಆಫ್ರಿಕಾ, ಈಜಿಪ್ಟ್‌ಗೂ ಕಾಫಿ ಆಕ್ರಮಕರಿಂದಲೇ ಸಾಗಿತು. ಕ್ರಮೇಣ ಅವೆಲ್ಲವೂ ಕಾಫಿ ಬೆಳೆಯುವ ದೇಶಗಳಾಗಿ ರಫ್ತುಮಾಡುವ ದೇಶಗಳೂ ಆದವು. ಯುದ್ಧದ ಕಾರಣದಿಂದ ಪರಿಚಯವಾದ ಕಾಫಿ ಸಂತ್ರಸ್ಥ ದೇಶಗಳಿಗೆ ಆರ್ಥಿಕ ಮೂಲವಾದ ಕೌತುಕ ಕಾಫಿ ಬಿಟ್ಟರೆ ಬೇರೆ ಬೆಳೆಗಳಲ್ಲಿ ಕಾಣದು. 19ನೇ ಶತಮಾನದಲ್ಲಿ ಕಾಫಿ ಸಂಸ್ಕೃತಿ ಮಧ್ಯ ಯುರೋಪಿನಾದ್ಯಂತ ಹರಡಿ ಕವಿ-ಸಾಹಿತಿಗಳು, ಕಲಾವಿದರು, ಬುದ್ಧಿಜೀವಿಗಳು ಕಾಫಿಯ ನೆಪದಿಂದ ಭೇಟಿಯಾಗಲಾರಂಭಿಸಿದರು. ಕಾಫಿ ಹೌಸ್‌ಗಳು ನಿರ್ಮಾಣಗೊಂಡವು. ಬ್ರಿಟಿಷ್, ಡಚ್, ಫ್ರೆಂಚರ ಪ್ರಭಾವದಿಂದ ಕಾಫಿ ಸೇವನೆ ಪ್ರತಿಷ್ಠೆಯ ಸಂಕೇತವಾಯಿತು. ಇದರಿಂದ ಯುರೋಪಿನಲ್ಲಿ ಕಾಫಿ ಕುಡಿಯುವವರ ಮೇಲೆ ಹೆಚ್ಚುವರಿ ತೆರಿಗೆ ವಿಧಿಸುವ ನಿಯಮಗಳೂ ಬಂದವು. ಮುಂದೆ ಐರೋಪ್ಯರು ತಮ್ಮ ವಸಾಹತುಗಳಿಗೆ ಸಸ್ಯಶಾಸ್ತ್ರಜ್ಞರನ್ನು ಅಟ್ಟಿ ಕಾಫಿ ಬೆಳೆಯ ಸಾಧ್ಯತೆಯನ್ನು ಪರಿಶೀಲಿಸತೊಡಗಿದರು. ಭಾರತದಲ್ಲಿ ಕಾಫಿ ವಾಣಿಜ್ಯ ಬೆಳೆಯಾಗಿ ಆರಂಭವಾಗಿದ್ದು ಇದೇ ಅವಧಿಯಲ್ಲಿ. ಭಾರತದಲ್ಲಿಂದು ವಸಾಹತುಶಾಹಿಯ ಅಂಶಗಳು ಒಂದೊಂದಾಗಿ ಕಳಚುತ್ತಿವೆ. ಆದರೆ ಕಾಫಿ ಸ್ವದೇಶಿಯಾಗಿ ಬದಲಾಗಿದೆ! ಇಂದು ಜಗತ್ತಿನ ಬಹುಪಾಲು ದೇಶಗಳು ಒಂದೋ ಕಾಫಿ ಬೆಳೆಗಾರ ದೇಶವಾಗಿದೆ ಅಥವಾ ಕಾಫಿಯ ಗ್ರಾಹಕನಾಗಿದೆ. ಅಂಥ ಕಾಫಿ ಯುದ್ಧದ ಕಾರಣಕ್ಕೆ ಕುಗ್ಗುವುದೆಂದರೇನು?

ಹದಿನಾರನೇ ಶತಮಾನದ ಇಸ್ಲಾಮಿಕ್ ಔಷಧ ತಜ್ಞರು ಕಾಫಿಯ ಪರಿಣಾಮವು ಹಶಿಶ್ ಅಥವಾ ಆಲ್ಕೋಹಾಲ್‌ನಂತಿದೆ ಎಂದು ಸಾರಿದ್ದರು. ಅದನ್ನು ನಂಬಿದ ಮತೀಯ ನಾಯಕರು ಅಮಲು ಪದಾರ್ಥವಿರುವ ಕಾಫಿ ಇಸ್ಲಾಮಿನ ತತ್ತ್ವದರ್ಶಗಳಿಗೆ ವಿರುದ್ಧವಾದದ್ದು ಎಂದು ಫತ್ವಾಗಳನ್ನು ಹೊರಡಿಸಲಾರಂಭಿಸಿದರು. ಆ ಹೊತ್ತಿಗಾಗಲೇ ಇಸ್ಲಾಮಿನ ಪ್ರಮುಖ ಕ್ಷೇತ್ರಗಳಾದ ಮೆಕ್ಕಾ, ಯೆಮೆನ್ ಮತ್ತು ಕೈರೋದಲ್ಲಿನ ಕಾಫಿಹೌಸ್‌ಗಳು ಜನಪ್ರಿಯಗೊಂಡಿದ್ದವು. ಈ ಕಾಫಿಹೌಸ್‌ಗಳು ಮದರಸಾಗಳಂತೆ ಕಾರ್ಯನಿರ್ವಹಿಸುತ್ತಿದ್ದವು. ಸಂಪ್ರದಾಯಸ್ಥ ಮತಗುರುಗಳಿಗೆ ಇದು ಹಿಡಿಸಲಿಲ್ಲ. ಇಸ್ಲಾಂ ಸಂಸ್ಕೃತಿ ಕಾಫಿ ಸಂಸ್ಕೃತಿಯಾಗಿ ಬದಲಾಗುವ ಮುನ್ನ ಎಚ್ಚರ ವಹಿಸುವುದು ಸೂಕ್ತವೆಂದು ಕಾಫಿ ಮತ್ತು ಕಾಫಿ ಹೌಸ್‌ಗಳ ಮೇಲೆ ಕಠಿಣ ಕ್ರಮಗಳನ್ನು ಕೈಗೊಳ್ಳಲಾಯಿತು. ಹಲವು ದೇಶಗಳಲ್ಲಿ ಕಾಫಿಯನ್ನೂ ನಿಷೇಧಿಸಲಾಗಿತ್ತು! 1511ರಲ್ಲಿ ಮೆಕ್ಕಾದ ದೇವತಾಶಾಸ್ತ್ರದ ನ್ಯಾಯಾಲಯದಲ್ಲಿ ಸಂಪ್ರದಾಯವಾದಿ ಇಮಾಮ್‌ಗಳು ಕಾಫಿಯನ್ನು ನಿಷೇಧಿಸಿದ್ದರು. ಮುಂದೆ 1524ರಲ್ಲಿ ಒಟ್ಟೋಮನ್ ಒಂದನೆಯ ಸುಲೇಮಾನ್ ಆದೇಶದ ಮೇರೆಗೆ ಮುಫ್ತಿ ಮೆಹ್ಮೆತ್ ಎಬುಸ್ಸುದ್ ಎಲ್-ಇಮಾದಿ ಆ ನಿಷೇಧವನ್ನು ರದ್ದುಗೊಳಿಸಿದರು. 1532ರಲ್ಲಿ ಕೈರೋ ಕೂಡ ಕಾಫಿಯನ್ನು ನಿಷೇಧಿಸಿತು. ಕಾಫಿ ಬೀಜಗಳನ್ನು ಹೊಂದಿರುವ ಕಾಫಿಹೌಸ್‌ಗಳು ಮತ್ತು ಗೋದಾಮುಗಳ ಪರವಾನಗಿಯನ್ನು ರದ್ದುಗೊಳಿಸಿತು. 1532ರಿಂದ 1533ರ ನಡುವೆ ಕಟ್ಟರ್ ಇಸ್ಲಾಮಿಕ್ ಸಾಮ್ರಾಜ್ಯವಾಗಿದ್ದ ಸಫಾವಿಡ್ ಕೂಡ ಕಾಫಿಯು ತಂಬಾಕು ಮತ್ತು ಮದ್ಯಕ್ಕಿಂತ ಭಿನ್ನವಲ್ಲ ಎಂದು ಕಾಫಿಯ ವಿರುದ್ಧ ಫತ್ವಾ ಹೊರಡಿಸಿತು. ಇಸ್ಲಾಂ ಮತಗುರುಗಳಿಂದ ಬಿದ್ದ ಈ ಯಾವ ಫತ್ವಾಗಳು ಹೆಚ್ಚು ಕಾಲ ಬಾಳಿಕೆ ಬರಲಿಲ್ಲ. ಕಾಫಿ ಫತ್ವಾವನ್ನೂ ಮೀರಿ ಬೆಳೆಯಿತು. ಇಸ್ಲಾಮಿನಿಂದ ನಿಷೇಧಕ್ಕೊಳಗಾದ ಕಾಫಿಯನ್ನು ಕ್ರೈಸ್ತ ಮತಗುರುಗಳೂ ನಿಷೇಧಿಸಿದರು. ಇಟಲಿಯಲ್ಲಿ ಕಾಫಿ ಪರಿಚಯವಾದ ಆರಂಭದ ದಿನಗಳಲ್ಲಿ ಕ್ಯಾಥೋಲಿಕ್ ಚರ್ಚ್ ಅದನ್ನು ವಿರೋಧಿಸಿತು. ಪಾದ್ರಿಗಳು ಅದನ್ನು 'ಸೈತಾನನ ಪಾನೀಯ' ಎಂದು ಕರೆದರು. ಆದರೆ ಚರ್ಚ್ ಸಮಾಜದ ವಿರೋಧವನ್ನು ಎದುರಿಸಬೇಕಾಯಿತು. ಒತ್ತಡಕ್ಕೆ ಮಣಿದ ಪೋಪ್ ಎಂಟನೇ ಕ್ಲೆಮೆಂಟ್ ಸ್ವತಃ ಕಾಫಿಯನ್ನು ಸವಿದು ಪರೀಕ್ಷಿಸಿ ''ಈ ಸೈತಾನನ ಪಾನೀಯವು ತುಂಬಾ ರುಚಿಕರವಾಗಿದೆ. ನಾಸ್ತಿಕರಿಗೆ ಮಾತ್ರ ಇದನ್ನು ಬಳಸಲು ಬಿಡುವುದು ವಿಷಾದಕರ'' ಎಂದು ಘೋಷಿಸಿದರು. 1675ರಲ್ಲಿ ಕಾಫಿ ಹೌಸ್‌ಗಳು ರಾಜಕೀಯ ವಿಮರ್ಶೆಯ ಕೇಂದ್ರಗಳೆಂದು ಇಂಗ್ಲೆಂಡಿನ ಎರಡನೆಯ ಚಾರ್ಲ್ಸ್ ಕಾಫಿಯನ್ನು ನಿಷೇಧಿಸಿದ! ನಂತರ ಒತ್ತಡಕ್ಕೆ ಸಿಲುಕಿ ನಿಷೇಧ ರದ್ದುಗೊಳಿಸಿದ. 1777ರಲ್ಲಿ ಪ್ರಷ್ಯಾ ಕಾಫಿಯಿಂದ ಜನರಲ್ಲಿ ಬೀಯರ್ ಕುಡಿಯುವ ಪ್ರವೃತ್ತಿ ಕಡಿಮೆಯಾಗುತ್ತಿದೆ ಎಂಬ ಕಾರಣ ನೀಡಿ ಕಾಫಿಯನ್ನು ನಿಷೇಧಿಸಿತು. ಹಿಂದೆ ಮತೀಯ ಕಾರಣಕ್ಕೆ ಕಾಫಿಯನ್ನು ನಿಷೇಧಿಸಿದ್ದ ಟರ್ಕಿ 1640ರಲ್ಲಿ ಕಾಫಿ ಕೇಂದ್ರಗಳು ಅರಸೊತ್ತಿಗೆ ವಿರೋಧಿ ಯೋಜನೆಯನ್ನು ಹಾಕಬಹುದೆಂಬ ಕಾರಣಕ್ಕೆ ನಿಷೇಧಿಸಿತು. 1750ರಿಂದ 1820ರವರೆಗೆ ಸ್ವೀಡನ್, ಕಾಫಿ ಹೌಸ್‌ಗಳು ರಾಜಕೀಯ ಹುನ್ನಾರದ ತಾಣವಾಗುತ್ತಿವೆ ಮತ್ತು ಜನರ ಆರೋಗ್ಯವನ್ನು ಕೆಡಿಸುತ್ತಿವೆ ಎಂಬ ಕಾರಣ ನೀಡಿ ನಿಷೇಧಿಸಿತು. ಆದರೆ ಕೆಲವೇ ದಿನಗಳಲ್ಲಿ ನಿಷೇಧ ತೆರವಾಯಿತು. ಇಷ್ಟೆಲ್ಲಾ ನಿಷೇಧಗಳ ತರುವಾಯ ಕಾಫಿ ಉಳಿಯಿತು, ಮಾತ್ರವಲ್ಲ ಜಗತ್ತಿನಾದ್ಯಂತ ಜನಪ್ರಿಯವೂ ಆಯಿತು. 1674ರಲ್ಲಿ ಲಂಡನಿನ ಮಹಿಳೆಯರು, ಕಾಫಿಯು ಪುರುಷರ ಲೈಂಗಿಕ ಶಕ್ತಿಯನ್ನು ಕಡಿಮೆ ಮಾಡುತ್ತದೆ, ಇದು ಬಲಹೀನ ಇಂಗ್ಲೆಂಡಿನ ಸೃಷ್ಟಿಗೆ ಕಾರಣವಾಗುತ್ತದೆ ಎಂದು ಅಭಿಯಾನವನ್ನೇ ಕೈಗೊಂಡರು (The Women's Petition Against Coffee). ನಂತರ ಮಹಿಳೆಯರಿಗೂ ಕಾಫಿಯ ರುಚಿ ಹತ್ತಿತು. ಹೀಗೆ ಹಲವು ಬಾರಿ ಹಲವು ಕಾರಣಗಳಿಂದ ಜಗತ್ತಿನ ನಾನಾ ಮೂಲೆಗಳಲ್ಲಿ ಸಂಕಷ್ಟಕ್ಕೊಳಗಾದರೂ ಕಾಫಿ ನಾಶವಾಗಲಿಲ್ಲ, ರಫ್ತು ನಿಲ್ಲಲಿಲ್ಲ, ಎರಡೆರಡು ಮಹಾಯುದ್ಧಗಳ ಗದ್ದಲದಲ್ಲೂ ವಿಶ್ವದ ಕಾಫಿ ವಹಿವಾಟು ಸರಾಗವಾಗಿ ನಡೆಯಿತೆಂದರೆ ಈ ಮಧ್ಯಪ್ರಾಚ್ಯದ ಯುದ್ಧ ಕಾಫಿಗ್ಯಾವ ಲೆಕ್ಕ?

ಇಂದು ಯಾವುದೋ ಸಮುದ್ರದಲ್ಲಿ ನಾಲ್ಕು ಹಡಗುಗಳು ನಿಂತ ಮಾತ್ರಕ್ಕೆ ಕಾಫಿಯ ಬೆನ್ನುಮೂಳೆಯೇನೂ ಮುರಿಯುವುದಿಲ್ಲ. ಯುದ್ಧಗ್ರಸ್ಥ ದೇಶಗಳೂ ಕಾಫಿ ಇಲ್ಲದೆ ಬದುಕುವುದಿಲ್ಲ. ಆರ್ಥಿಕ ವಹಿವಾಟಿನಲ್ಲೂ ಕಾಫಿಯದ್ದು ರಕ್ಕಸಗಾತ್ರ. ಅಷ್ಟರಮಟ್ಟಿಗೆ ಕಾಫಿ ಜಗತ್ತನ್ನಾಳುತ್ತಿದೆ. ಆದರೆ ಅತ್ತ ಯುದ್ಧ, ಇತ್ತ ಅಂಗಳಕ್ಕೆ ಬಂದುಬಿದ್ದ ಕಾಫಿ, ಹರಡುತ್ತಿರುವ ಗಾಳಿಸುದ್ದಿಗಳು ಬೆಳೆಗಾರನನ್ನು ಸಹಜವಾಗಿ ಹೆದರಿಸುತ್ತವೆ. ಜೊತೆಗೆ ಬೆಲೆಗಳ ಏರಿಳಿತ ಗಾಳಿಸುದ್ದಿಗಳಿಗೆ ರೆಕ್ಕೆಪುಕ್ಕಗಳನ್ನು ಮೂಡಿಸುತ್ತವೆ. ಇತರ ಸರಕುಗಳ ಬೆಲೆ ವೈಪರೀತ್ಯಕ್ಕೆ ಏನು ಕಾರಣಗಳಿರುತ್ತವೋ ಕಾಫಿಗೂ ಅಂಥದ್ದೇ ಕಾರಣಗಳಿರುತ್ತವೆಯೇ ಹೊರತು ಯುದ್ಧ ಕಾಫಿಯನ್ನು ಸರ್ವನಾಶವನ್ನಂತೂ ಮಾಡುವುದಿಲ್ಲ. ಕಾಫಿ ಸಾಗಿಸುವ ಹಡಗುಗಳು ಯುದ್ಧಕ್ಕೆ ಹೆದರಿ ದೀರ್ಘಾವಧಿಯವರೆಗೆ ಲಂಗರು ಹಾಕುವುದಿಲ್ಲ.

ಸರಕಾರದ ವಿರುದ್ಧ ಸೋನಿಯಾ ಟೀಕೆಗೆ ಅರ್ಥವಿಲ್ಲ

▸ ರಾಮ್ ಮಾಧವ್

ಇರಾನಿನ ಮುಖಂಡ ಅಯತೊಲ್ಲಾ ಖಮೇನಿ ಹತರಾದುದಕ್ಕೆ ಭಾರತವು ಖಂಡಿಸಲಿಲ್ಲವೇಕೆ ಎಂದು ಟೀಕಿಸಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಲೇಖನವೊಂದನ್ನು ಬರೆದಿದ್ದಾರೆ. 'ನಿಷ್ಪಕ್ಷಪಾತತನ'ವನ್ನು ಭಾರತ ತ್ಯಜಿಸಿದೆ ಎಂದು ಆರೋಪಿಸಿದ ಅವರು, ದೇಶದ ವಿದೇಶಾಂಗ ನೀತಿಯ ವಿಶ್ವಾಸಾರ್ಹತೆ ಮತ್ತು ಅದು ಸಾಗುತ್ತಿರುವ ದಿಕ್ಕನ್ನು ಪ್ರಶ್ನಿಸಿದ್ದಾರೆ.

ಆದರೆ ಇರಾನ್ ಸಂಘರ್ಷವನ್ನು ಇಂತಹ ಸಂಕುಚಿತ ಮಾದರಿಯಲ್ಲಿ ವಿಶ್ಲೇಷಿಸುವ ಬದಲಾಗಿ ವಿಸ್ತರಿತ ಆಯಾಮದಲ್ಲಿ ವಿಶ್ಲೇಷಿಸಬೇಕಾಗಿದೆ. ವಾಸ್ತವಾಂಶಗಳನ್ನು ಅರಿತುಕೊಂಡು ಪ್ರತಿಕ್ರಿಯಿಸಬೇಕಾಗುತ್ತದೆ. ಹಲವು ಪ್ರಸಂಗಗಳಲ್ಲಿ ಭಾರತವು ಉದ್ವಿಗ್ನತೆಯನ್ನು ಹೆಚ್ಚಿಸುವ ಬದಲಿಗೆ ಸಂಧಾನ ಮತ್ತು ರಾಜತಾಂತ್ರಿಕ ಕ್ರಮದಿಂದ ಪರಿಸ್ಥಿತಿ ನಿಭಾಯಿಸಬೇಕೆಂದು ಕರೆ ಕೊಟ್ಟಿತ್ತು. ಭಾರತ ಮತ್ತು ಇರಾನ್ ಸರಕಾರಿ ಮಟ್ಟದಲ್ಲಿ ಹಾಗೂ ಜನರ ಮಟ್ಟದಲ್ಲಿ ಸೌಹಾರ್ದ ಸಂಬಂಧ ಹೊಂದಿದೆ. ಆದರೆ ಭಾವನೆಗಳಿಗೆ ದಾಸರಾಗಿ ಹಿತಾಸಕ್ತಿಗಳನ್ನು ಬಲಿಕೊಡಲಾಗುವುದಿಲ್ಲ. ಇರಾನ್‌ನ ಆಡಳಿತವು ಜಗತ್ತು ಕಂಡಿರುವ ಆಡಳಿತ ವ್ಯವಸ್ಥೆಗಿಂತ ಭಿನ್ನವಾದ ವ್ಯವಸ್ಥೆಯನ್ನು ಹೊಂದಿದೆ. ಅಲ್ಲಿ ಇರುವುದು ವಿಭಿನ್ನ ರೀತಿಯ ಧಾರ್ಮಿಕ ಪ್ರಭುತ್ವ. 9ನೇ ಶತಮಾನದ ವಿಲಾಯತ್-ಇ-ಫಕಿ ಮಾದರಿಯನ್ನು ಅಲ್ಲಿ ಅನುಸರಿಸಲಾಗುತ್ತದೆ. 1979ರಲ್ಲಿ ಇರಾನಿನಲ್ಲಿ ಇಸ್ಲಾಮಿಕ್ ಕ್ರಾಂತಿ ನಡೆದ ಬಳಿಕ ಅಯತೊಲ್ಲಾ ಖೊಮೇನಿ ತಮ್ಮನ್ನು ವಲಿ-ಇ-ಫಕಿ ಎಂದು ಘೋಷಿಸಿಕೊಂಡರು ಹಾಗೂ ಈ ವ್ಯವಸ್ಥೆಯನ್ನು ಸಂವಿಧಾನದಲ್ಲಿ ಅಡಕಗೊಳಿಸಿದರು. ಇದರ ಪ್ರಕಾರ ಎಲ್ಲಾ ಅಧಿಕಾರಗಳು ಸರ್ವೋಚ್ಚ ನಾಯಕನ ಕೈಯಲ್ಲಿದ್ದು, ಚುನಾಯಿತ ಸರಕಾರವು ಅವರ ಅಧೀನದಲ್ಲಿರುತ್ತದೆ. 1989ರಲ್ಲಿ ಖೊಮೇನಿ ನಿಧನಾನಂತರ ಅವರ ಪುತ್ರ ಖಮೇನಿ ಈ ಹುದ್ದೆಗೇರಿದರು.

ಈ ಆಡಳಿತ ಮಾದರಿಯು ಅಸಹಜವಾಗಿದ್ದು, ಕೆಲವು ಸಂದರ್ಭಗಳಲ್ಲಿ ರಾಜತಾಂತ್ರಿಕ ಬಿಕ್ಕಟ್ಟುಗಳನ್ನು ಸೃಷ್ಟಿಸುತ್ತವೆ. ಖಮೇನಿಯವರ ಸ್ಥಾನಮಾನವನ್ನು ಗಮನಿಸಿದರೆ ಸೋನಿಯಾ ಗಾಂಧಿಯವರು ಅವರನ್ನು ಇರಾನಿನ ಆಡಳಿತದ ಮುಖ್ಯಸ್ಥ ಎಂದು ಬಣ್ಣಿಸುವುದು ಸರಿ ಕಾಣುವುದಿಲ್ಲ. ಇಬ್ಬರು ಪರಮೋಚ್ಚ ನಾಯಕರೂ (ಖೊಮೇನಿ ಮತ್ತು ಖಮೇನಿ) ಧಾರ್ಮಿಕ ಮುಖಂಡರಾಗಿದ್ದು, ತಮ್ಮ ದೇಶದಿಂದ ಹೊರಗೆ ಪ್ರಯಾಣ ಮಾಡಿದವರೇ ಅಲ್ಲ. ವಿದೇಶಗಳಲ್ಲಿ ಇರಾನನ್ನು ಪ್ರತಿನಿಧಿಸುವುದು ಇರಾನಿನ ಅಧ್ಯಕ್ಷರು. ಇರಾನಿನ ಅಧ್ಯಕ್ಷರು ವಿದೇಶಗಳಿಗೆ ಭೇಟಿ ಮಾಡಿದಾಗ ಅವರಿಗೆ ಒಬ್ಬ ರಾಷ್ಟ್ರ ಮುಖಂಡನಿಗೆ ನೀಡುವ ಗೌರವಾದರಗಳನ್ನು ಸಲ್ಲಿಸಲಾಗುತ್ತದೆ. ಇರಾನಿನ ಮೂವರು ರಾಷ್ಟ್ರಾಧ್ಯಕ್ಷರು ಭಾರತಕ್ಕೆ ಭೇಟಿ ನೀಡಿದಾಗ (ಮೊಹಮ್ಮದ್ ಕಟಾನಿ 2003, ಅಹಮದಿ ನೇಜಾದ್ 2008, ಹಸನ್ ರೌಹಾನಿ 2018) ಭಾರತವು ಅವರಿಗೆ ರಾಷ್ಟ್ರದ ಒಬ್ಬ ಮುಖಂಡರಿಗೆ ಸಲ್ಲಬೇಕಾದ ರೀತಿಯ ಗೌರವ ಸಲ್ಲಿಸಿದೆ. ಎಲ್ಲಾ ಬಗೆಯ ಶಿಷ್ಟಾಚಾರಗಳನ್ನು ಪಾಲಿಸಿದೆ. ಈ ಬಾರಿ ಖಮೇನಿ ನಿಧನರಾದಾಗ ಭಾರತದ ಸಂತಾಪವನ್ನು ಸೂಚಿಸಲು ಇರಾನ್ ರಾಯಭಾರ ಕಚೇರಿಗೆ ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಶ್ರಿ ಅವರನ್ನು ಕಳಿಸಿರುವುದು ಅದಕ್ಕಾಗಿಯೇ.

ಇರಾನ್ ಓಐಸಿಯಲ್ಲಿ ಕಾಶ್ಮೀರ ವಿರೋಧಿ ನಿರ್ಣಯವನ್ನು ಬೆಂಬಲಿಸಲಿಲ್ಲ ಹಾಗೂ ವಿಶ್ವಸಂಸ್ಥೆ ಮಾನವ ಹಕ್ಕುಗಳ ಮಂಡಳಿಯಲ್ಲಿ ಅಂತಹ ನಿರ್ಣಯವನ್ನು ವಿರೋಧಿಸಿತ್ತು ಎಂದು ಸೋನಿಯಾಗಾಂಧಿ ಹೇಳಿರುವುದು ನಿಜ. ಇರಾನ್ ಸರಕಾರವು ಪಾಕಿಸ್ತಾನಿ ಪ್ರಯೋಜಿತ ಕಾಶ್ಮೀರದ ಮೇಲಿನ ನಿರ್ಣಯವನ್ನು ಬೆಂಬಲಿಸದಿರಲು ತನ್ನದೇ ಆದ ಭೌಗೋಳಿಕ ಮತ್ತು ಆರ್ಥಿಕ ಕಾರಣಗಳಿದ್ದವು. ಆದರೆ ಇರಾನ್ ಸರಕಾರದ ನಿಲುವನ್ನು ಅಲ್ಲಿನ ಪರಮೋಚ್ಚ ನಾಯಕ ಖಮೇನಿ ಕೂಡಾ ಪಾಲಿಸಿದ್ದಾರೆ ಎಂದು ಹೇಳಲು ಬರುವುದಿಲ್ಲ. ಕಳೆದ 10 ವರ್ಷಗಳಲ್ಲಿ ಖಮೇನಿ ಹಲವಾರು ಸಂದರ್ಭಗಳಲ್ಲಿ ಕಾಶ್ಮೀರಕ್ಕೆ ಸಂಬಂಧಿಸಿ ಮತ್ತು ಮುಸ್ಲಿಮರಿಗೆ ಸಂಬಂಧಿಸಿ ಭಾರತವನ್ನು ಟೀಕಿಸಿದ್ದಾರೆ.

ಜಮ್ಮು-ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುವ ಸಂವಿಧಾನದ 370ನೇ ವಿಧಿ ರದ್ದುಪಡಿಸಿದಾಗ ಖಮೇನಿ ಅದನ್ನು ವಿರೋಧಿಸಿ ಟ್ವೀಟ್ ಮಾಡಿದ್ದರು. 2020ರಲ್ಲಿ ಸಿಎಎ ವಿರೋಧಿಸಿ ದಿಲ್ಲಿಯಲ್ಲಿ ಪ್ರತಿಭಟನೆ ನಡೆದಾಗಲೂ ಭಾರತವು ಮುಸ್ಲಿಮರ ನರಮೇಧ ನಡೆಸುತ್ತದೆ ಎಂದು ಆರೋಪಿಸಿದ್ದರು. ಭಾರತವು ತನ್ನ ಉಗ್ರವಾದಿ ಹಿಂದುಗಳನ್ನು ನಿಯಂತ್ರಿಸಬೇಕು, ಇಲ್ಲದಿದ್ದರೆ ಇಸ್ಲಾಮಿಕ್ ಜಗತ್ತು ಭಾರತವನ್ನು ನಿಷೇಧಿಸಲಿದೆ ಎಂದು ಅವರು ಬೆದರಿಸಿದ್ದರು. 2024ರಲ್ಲಿ ಭಾರತವನ್ನು ಗಾಝಾ ಮತ್ತು ಮ್ಯಾನ್ಮಾರ್‌ನೊಂದಿಗೆ ಸಮೀಕರಿಸಿದ್ದ ಖಮೇನಿ, ಮ್ಯಾನ್ಮಾರ್, ಗಾಝಾ ಮತ್ತು ಭಾರತದಲ್ಲಿ ಮುಸ್ಲಿಮರನ್ನು ಶೋಷಿಸಲಾಗುತ್ತಿದೆ ಎಂದಿದ್ದರು. ಭಾರತವು ಇದನ್ನು ತನ್ನ ಆಂತರಿಕ ವಿಷಯದಲ್ಲಿ ಹಸ್ತಕ್ಷೇಪ ಎಂದು ಬಣ್ಣಿಸಿ ಇಂತಹ ಅಪಪ್ರಚಾರವು ಸ್ವೀಕಾರಾರ್ಹವಲ್ಲ ಎಂದು ಪ್ರತಿಕ್ರಿಯಿಸಿತ್ತು.

ವಿವಾದವೆಂಬುದು ಖಮೇನಿಗೆ ಹೊಸದೇನೂ ಅಲ್ಲ. 2015ರಲ್ಲಿ ಅವರು ಸೌದಿ ಅರೇಬಿಯಾ ಜನಾಂಗ ನಾಶದಲ್ಲಿ ತೊಡಗಿದೆ ಎಂದು ಆರೋಪಿಸಿದ್ದರು. ಇದು ಸೌದಿಗೆ ರೋಷ ಬರಿಸಿತ್ತು. ಅದೇ ಖಮೇನಿಯವರು ಇಸ್ರೇಲ್ ಮತ್ತು ಅಮೆರಿಕಗಳ ನಾಶಕ್ಕೂ ಆಗಾಗ ಕರೆ ಕೊಟ್ಟಿದ್ದರು. ಟ್ರಂಪ್‌ರನ್ನು ಹತ್ಯೆ ಮಾಡುವಂತೆಯೂ ಕರೆ ನೀಡಿದ್ದರು. ಖಮೇನಿ ಹತ್ಯೆಯಾದಾಗ ಸಂತಾಪ ಸೂಚಿಸದಿರುವುದು ಭಾರತವಷ್ಟೇ ಅಲ್ಲ. ಹಲವಾರು ರಾಷ್ಟ್ರಗಳು ಸಂತಾಪ ಸೂಚಿಸದೆ ಉಳಿದಿವೆ. ಜಿ-7 ರಾಷ್ಟ್ರಗಳು, ಯುಎಇ, ಸೌದಿ ಅರೇಬಿಯಾ, ಈಜಿಪ್ಟ್, ಬಹ್ರೇನ್, ಮೊರಾಕ್ಕೊ ಮತ್ತು ಇಂಡೋನೇಷಿಯಾ ಸೇರಿದಂತೆ ಹಲವಾರು ಇಸ್ಲಾಮಿಕ್ ದೇಶಗಳು ಸಂತಾಪ ಸೂಚಿಸಲಿಲ್ಲ. ಹಲವಾರು ಪ್ರಚೋದನಾ ಹೇಳಿಕೆಗಳ ಹೊರತಾಗಿಯೂ ಭಾರತ ಸರಕಾರವು ಇರಾನ್‌ನೊಂದಿಗೆ ಸೌಹಾರ್ದ ಸಂಬಂಧವನ್ನೇ ಕಾಯ್ದುಕೊಂಡು ಬಂದಿತ್ತು. ಇರಾನಿನ ಅಧ್ಯಕ್ಷ ಇಬ್ರಾಹಿಂ ರೈಸಿ ಹೆಲಿಕಾಪ್ಟರ್ ದುರಂತದಲ್ಲಿ ಮೃತಪಟ್ಟಾಗ ಭಾರತವು ಒಂದು ದಿನದ ಶೋಕಾಚರಣೆ ಘೋಷಿಸಿತ್ತು. ಹಾಗಾಗಿ ಭಾರತ ಸರಕಾರವು ತನ್ನ ಪರಂಪರೆಯನ್ನು ಮುರಿದಿದೆ ಎಂಬ ಸೋನಿಯಾ ಅವರ ಟೀಕೆಗೆ ಆಧಾರವಿಲ್ಲ. ಹೆಚ್ಚೆಂದರೆ ಅವರ ಲೇಖನವು ಕಾಂಗ್ರೆಸ್ ಪಕ್ಷದ ಅಲ್ಪಸಂಖ್ಯಾತ ಓಲೈಕೆ ರಾಜಕಾರಣದ ಚಾಳಿಯನ್ನು ಮತ್ತೊಮ್ಮೆ ಬಹಿರಂಗಗೊಳಿಸಿದೆಯಷ್ಟೆ.

ಪತ್ರ ಮಿತ್ರ

ನಾಯಕತ್ವ ಗುಣ ಹೀಗಿದ್ದರೇ ಚೆನ್ನ

ತಂಡವೊಂದರ ನಾಯಕ ಅನಿಸಿಕೊಂಡವನಿಗೆ ತನ್ನ ತಂಡದ ಸದಸ್ಯರೆಲ್ಲರಲ್ಲಿ ಹುದುಗಿರುವ ಶಕ್ತಿಯ ಪರಿಚಯ ಇರಲೇ ಬೇಕು. ಒಬ್ಬಾತ ಕೆಲವೊಮ್ಮೆ ಪರಿಸ್ಥಿತಿಯ ಒತ್ತಡ ಅಥವಾ ಇನ್ನಾವುದೋ ಕಾರಣಗಳಿಂದ ನಾಯಕ ನಿರೀಕ್ಷಿಸಿದ ಫಲಿತಾಂಶ ನೀಡಲು ಶಕ್ಯನಾಗದೇ ಇರಲೂಬಹುದು. ಹಾಗಂತ, ಆ ವ್ಯಕ್ತಿಯ ಶಕ್ತಿಯೇ ಕುಂದಿ ಹೋಗಿದೆ ಅಂದುಕೊಂಡು, ಅವಕಾಶಗಳನ್ನೇ ಕಲ್ಪಿಸದೇ ಇದ್ದರೆ, ಬಹು ದೊಡ್ಡ ನಷ್ಟ ಆಗುವ ಸಾಧ್ಯತೆಗಳೇ ಹೆಚ್ಚು.

ಈ ಮಾತಿಗೆ ತಾಜಾ ಉದಾಹರಣೆ ಕ್ರಿಕೆಟಿಗ ಅಭಿಷೇಕ್ ಶರ್ಮಾ. ಟಿ20 ವಿಶ್ವಕಪ್‌ನ ಕೆಲ ಪಂದ್ಯಗಳಲ್ಲಿ ಅತ್ಯಂತ ಕಳಪೆ ಪ್ರದರ್ಶನ ನೀಡಿದ್ದರಿಂದ ತಂಡದಲ್ಲಿ ಆತ ತನ್ನ ಸ್ಥಾನವನ್ನೇ ಕಳೆದುಕೊಂಡುಬಿಟ್ಟ ಅಂದವರೇ ಹೆಚ್ಚು. ಫೈನಲ್‌ನ ಮುನ್ನಾ ದಿನದ 'ಸಂಭಾವ್ಯರ' ಪಟ್ಟಿಯಲ್ಲೂ ಆತನ ಹೆಸರು ಇದ್ದಿರಲಿಲ್ಲ. ಆದರೂ ನಾಯಕ ಸೂರ್ಯಕುಮಾರ್‌ಗೆ ಅಭಿಷೇಕ್ ಮೇಲಿನ ವಿಶ್ವಾಸ ಕುಂದಿರದಿದ್ದ ಕಾರಣ, ಅಂತಿಮ ಪಂದ್ಯದಲ್ಲೂ ಅವಕಾಶ ಕೊಟ್ಟ ಪರಿಣಾಮವನ್ನು ನಾವೆಲ್ಲ ಕಂಡಿದ್ದೇವೆ. ಕೇವಲ 21 ಎಸೆತಗಳಲ್ಲಿ 52 ರನ್ ಗಳಿಸಿ, ತಂಡದ ಗೆಲುವಿಗೆ ಸಹಕಾರಿಯಾಗಿದ್ದನ್ನು ಯಾರೂ ಮರೆಯಲಾರರು. ಅಭಿಷೇಕ್‌ನ ಹಿಂದಿನ ವೈಫಲ್ಯವನ್ನೇ ಮುಖ್ಯವಾಗಿರಿಸಿಕೊಳ್ಳದೆ, ಆತನಲ್ಲೂ ಆತ್ಮ ವಿಶ್ವಾಸ ಹೆಚ್ಚಿಸುವ ಕೆಲಸ ಮಾಡಿ, ಮತ್ತೆ ಅವಕಾಶ ಕೊಟ್ಟದ್ದು ನಾಯಕನ ಗುಣ.

ಇದು ನಮ್ಮ ಮನೆಗಳಲ್ಲೂ ನಿಜ. ಯಜಮಾನ ಎಂದುಕೊಂಡವ ತನ್ನ ಕುಟುಂಬದ ಸದಸ್ಯರೆಲ್ಲರ ಗುಣ, ಅವರಲ್ಲಿರುವ ವಿಶೇಷ ಅಭಿರುಚಿ, ತಾಕತ್ತು ಇವೆಲ್ಲವುಗಳ ಸಂಪೂರ್ಣ ಪರಿಚಯ ಉಳ್ಳವನಾದಾಗ, ಕುಟುಂಬದ ಸಣ್ಣ- ಪುಟ್ಟ ಅಡೆತಡೆಗಳನ್ನು ಅತ್ಯಂತ ಸಲೀಸಾಗಿ ನಿಭಾಯಿಸಿಕೊಂಡು ಹೋಗಬಹುದು.

ಈ ಗುಣ, ರಾಜಕಾರಣದಲ್ಲಂತೂ ಸದಾ ಕೆಲಸ ಮಾಡುವಂತಹುದು. ಕೆಲವು ಮುಖಂಡರು ಎಷ್ಟೇ ಬುದ್ಧಿಮತ್ತೆ, ಜ್ಞಾನ, ತಿಳುವಳಿಕೆ ಇದ್ದರೂ, ಕೆಲವೊಮ್ಮೆ ಪರಿಸ್ಥಿತಿಯ ಒತ್ತಡದಿಂದಾಗಿ ಅತ್ಯಂತ ನೇರ, ನಿಷ್ಠುರ ಮಾತುಗಳಿಂದ ತನ್ನ ಪಕ್ಷಕ್ಕೇ ಮುಜುಗರ ತಂದೊಡ್ಡುತ್ತಾರೆ. ಹಾಗಂತ ಅವರನ್ನು ತಕ್ಷಣ ಮೂಲೆಗುಂಪು ಮಾಡುವುದು ಸರಿಯೆನಿಸದು. ತಪ್ಪು ಸಂಭವಿಸಿದೆ ಅಥವಾ ಸಂಭವಿಸಲಿದೆ ಎಂಬುದು ತಿಳಿದಾಕ್ಷಣ, ಹತ್ತಿರ ಕರೆದು ತಿಳಿಹೇಳುವ ಪ್ರಯತ್ನ ಮಾಡಬೇಕು. ಇಲ್ಲೂ ಪಕ್ಷದ ಅಧ್ಯಕ್ಷ ಅಥವಾ ಮುಖ್ಯಮಂತ್ರಿಯೋ ಅಥವಾ ಪ್ರಧಾನಿಯೋ, ಮಾತಲ್ಲಿ ಹಿಡಿತ ತಪ್ಪುತ್ತಿದ್ದವರನ್ನು ತಮ್ಮ ಹಿಡಿತಕ್ಕೆ ತಂದು ಅವರನ್ನು ಸುಧಾರಿಸಿದಲ್ಲಿ ಎಲ್ಲವೂ ಸರಿಯಾಗಿ ನಡೆದೀತು. ನಿರ್ಲಕ್ಷ್ಯಕ್ಕೆ ಒಳಗಾದ ವ್ಯಕ್ತಿಗೂ, ಮುಂದೊಂದು ದಿನ ಮತ್ತೆ ಅವಕಾಶ ಕೊಡುವ ಸಂದರ್ಭ ಬರಲೂ ಬಹುದು ಎಂಬುದೂ ಗೋಚರವಾಗುತ್ತಿದೆ. ಹೀಗಾಗಿ, ಗುಂಪಿನ ನಾಯಕ ಅತ್ಯಂತ ಕಾಳಜಿಯಿಂದ ವ್ಯವಹರಿಸಲೇ ಬೇಕು. ಇದೇ ಅಲ್ಲವೇ ನಾಯಕತ್ವ? ಇಲ್ಲವೆಂದರೆ ಯಾರು ಬೇಕಾದರೂ ನಾಯಕರಾಗಬಹುದಿತ್ತು.

ಈ ವರ್ಷದ ಕ್ರಿಕೆಟ್ ಮತ್ತು ಕೆಲ ರಾಜಕೀಯ ಬೆಳವಣಿಗೆಗಳು ಒಬ್ಬ ನಾಯಕ ಹೇಗಿದ್ದರೆ ಚೆನ್ನ ಎಂಬುದನ್ನು ಸ್ಪಷ್ಟಪಡಿಸಿದಂತಿದೆ !

-ಶಂಕರನಾರಾಯಣ ಭಟ್, ಮಾಡಗೇರಿ

ಡೇಟಾ ಸೆಂಟರ್‌ಗಳ ಸ್ಥಾಪನೆಗೆ ಹಿಂಜರಿಕೆ ಬೇಕಿಲ್ಲ

ಇತ್ತೀಚೆಗೆ ವಿಧಾನ ಸಭೆಯ ಕಲಾಪದಲ್ಲಿ ಮಾತನಾಡಿದ ಐಟಿ ಬಿಟಿ ಸಚಿವ ಪ್ರಿಯಾಂಕ್ ಖರ್ಗೆಯವರು ಪ್ರಮುಖ ಎಐ ಸಂಸ್ಥೆಯಾದ ಚಾಟ್‌ಜಿಪಿಟಿಯಲ್ಲಿ ಐದು ಪ್ರಶ್ನೆ ಕೇಳಿದರೆ ಸುಮಾರು ಅರ್ಧ ಲೀಟರ್ ನೀರಿನ ಬಳಕೆಯಾಗುತ್ತದೆ ಎಂದು ಹೇಳಿದರು. ಚಾಟ್ ಜಿಪಿಟಿಯಲ್ಲಿ ಪ್ರಶ್ನೆ ಕೇಳುವುದು ಸುಲಭ. ಅದರ ಹಿಂದೆ ಇಂಥದೊಂದು ಗಂಭೀರ ನೀರಿನ ಸಮಸ್ಯೆ ಇದೆಯೆಂದು ಗೊತ್ತಿರಲಿಲ್ಲ. ಆದರೆ ಸಚಿವರು ಡೇಟಾ ಸೆಂಟರ್‌ಗಳ ಬಳಕೆಗೆ ನೀರು ಮತ್ತು ಇಂಧನ ಬಳಕೆಯಾಗುತ್ತದೆಯೆಂಬುದರ ಬಗ್ಗೆ ವಿವರಣೆ ನೀಡುವಾಗ ಐದು ಪ್ರಶ್ನೆಗಳಿಗೆ ಅರ್ಧ ಲೀಟರ್ ನೀರಿನ ಬಳಕೆಯಾಗುತ್ತದೆ ಎಂಬುದು ತೀರಾ ಉತ್ಪ್ರೇಕ್ಷೆಯ ಮಾತೆನ್ನಿಸಿತು.

ಈ ಬಗ್ಗೆ ಚಾಟ್‌ಜಿಪಿಟಿಯನ್ನೇ ಪ್ರಶ್ನೆ ಮಾಡಿದಾಗ ಬಂದ ಉತ್ತರ, ಚಾಟ್‌ಜಿಪಿಟಿಯು ಪ್ರಶ್ನೆಗೆ ಉತ್ತರ ನೀಡುವಾಗ ಬಳಕೆಯಾಗುವ ನೀರಿನ ಮೊತ್ತ 0.000085 ಗ್ಯಾಲನ್, ಅಂದರೆ ಒಂದು ಸಣ್ಣ ಚಮಚದ 15 ನೆಯ ಒಂದು ಭಾಗ ! ಇದು ಎಐನ ಸಂಕೀರ್ಣತೆಯ ಮೇಲೂ ಅವಲಂಬಿತವಾಗಿದೆ. ಇದು ಯೂಟ್ಯೂಬ್‌ನ ಒಂದು ವಿಡಿಯೋ ನೋಡಲು ಬಳಕೆಯಾಗುವ ನೀರು ಹಾಗೂ ಇಂಧನದ ನೂರಾರು ಪಟ್ಟು ಕಡಿಮೆ! ಆದರೂ ದೊಡ್ಡ ಪ್ರಮಾಣದಲ್ಲಿ ಡೇಟಾ ಸೆಂಟರ್‌ಗಳನ್ನು ಸ್ಥಾಪಿಸಿದಾಗ ಬಿಲಿಯನ್ ಲೀಟರ್ ಗಟ್ಟಲೆ ನೀರು ಬೇಕಾಗುತ್ತದೆ. ಅದಕ್ಕಾಗಿಯೇ ಆದಷ್ಟು ತಂಪು ಪ್ರದೇಶದಲ್ಲಿ ಡೇಟಾಸೆಂಟರ್‌ಗಳನ್ನು ಸ್ಥಾಪಿಸಬೇಕಾಗುತ್ತದೆ. ಅಲ್ಲದೆ ಕೂಲಿಂಗ್ ಪರ್ಯಾಯಗಳಾದ ಏರ್ ಕೂಲಿಂಗ್ ಹಾಗೂ ನೀರಿನ ಮರುಬಳಕೆಯಿಂದ ನೀರಿನ ಉಳಿತಾಯ ಮಾಡಬಹುದಾಗಿದೆ.

ಜಗತ್ತು ಈಗ ಕೃತಕ ಬುದ್ಧಿಮತ್ತೆಯತ್ತ ಹೊರಟಿದೆ ಎಂಬುದೇನೋ ನಿಜ. ಈಗಾಗಲೇ ಖಾಸಗಿ ಡೇಟಾಸೆಂಟರ್‌ಗಳು ಸಾಕಷ್ಟು ಇವೆ. ಸರ್ಕಾರದ ವತಿಯಿಂದ ಇವುಗಳ ಸ್ಥಾಪನೆ ಮಾಡಬೇಕಾದರೆ ಡೇಟಾಸೆಂಟರ್‌ಗಳಿಗೆ ವ್ಯಾಪಕ ಭೂಮಿ, ನೀರು, ಇಂಧನ ಬೇಕು. ಅವುಗಳನ್ನು ಒದಗಿಸುವುದು ಸರ್ಕಾರದ ಕರ್ತವ್ಯ. ಡೇಟಾಸೆಂಟರ್‌ಗಳಿಂದ ಯುವ ಸಮೂಹಕ್ಕೆ ಹೊಸ ಉದ್ಯೋಗಾವಕಾಶಗಳು ಸಿಗುತ್ತವೆ. ಜಾಗತಿಕ ಮಟ್ಟದಲ್ಲಿ ಕರ್ನಾಟಕವನ್ನು ನೋಡುವ ದೃಷ್ಟಿಯೇ ಬದಲಾಗುತ್ತದೆ. ಆದರೆ ಸಚಿವರು ಡೇಟಾಸೆಂಟರ್‌ಗಳ ಸ್ಥಾಪನೆಗೆ ನೀರು, ಇಂಧನದಂಥ ಮೂಲಭೂತ ಬೇಡಿಕೆಗಳ ನೆಪವಿಟ್ಟು ನಕಾರಾತ್ಮಕತೆ ಹರಡುವುದು ಸಲ್ಲದು.

ವಿದ್ಯುತ್ತನ್ನು ಅಯೋಗ್ಯರಿಗೆ ಉಚಿತವಾಗಿ ನೀಡಲಾಗುತ್ತಿದೆ, ವಿದ್ಯುತ್ ಕಳ್ಳತನವಾಗುತ್ತಿದೆ, ನೀರನ್ನು ಪೋಲು ಮಾಡಲಾಗುತ್ತಿದೆ, ಉಳ್ಳವರು, ಭ್ರಷ್ಟ ರಾಜಕಾರಣಿಗಳು ಸಾವಿರಾರು ಎಕರೆ ಪ್ರದೇಶವನ್ನು ತಮ್ಮ ಹೆಸರಿಗೆ ಬರೆಸಿಕೊಂಡು ಮೆರೆಯುತ್ತಿದ್ದಾರೆ. ಸಚಿವರಿಗೆ ಪ್ರಾಮಾಣಿಕ ಕಾಳಜಿ ಇದ್ದರೆ ಇದೆಲ್ಲವನ್ನೂ ತಡೆದು ರಾಜ್ಯದಲ್ಲಿ ಡೇಟಾಸೆಂಟರ್‌ಗಳನ್ನು ಸ್ಥಾಪಿಸಿ ರಾಜ್ಯದ ಹಿತವನ್ನು ಕಾಪಾಡಬಹುದಾಗಿದೆ.

-ಉಮೇಶ ಬೆಳಕೂಡ, ಮೂಡಲಗಿ

(ಲೇಖನಗಳನ್ನು ಕಳಿಸುವವರು ಮತ್ತು ಪತ್ರ ಮಿತ್ರಕ್ಕೆ ಬರೆಯುವವರು hosavishesha@gmail.com **ಕ್ಕೆ ಮೇಲ್ ಮಾಡಿರಿ)**



ಕಚ್ಚಾತೈಲ ಪೂರೈಕೆ ವ್ಯವಸ್ಥೆ ಸುರಕ್ಷಿತ

ಚರಿತ್ರೆಯಲ್ಲಿ ಇದೇ ಮೊದಲು

ಹಾರ್ಮುಜ್ ಜಲಸಂಧಿ ವಾಣಿಜ್ಯಿಕ ನೌಕಾಯಾನಕ್ಕೆ ನಿರ್ಬಂಧಿಸಲ್ಪಟ್ಟದ್ದು ದಾಖಲಿತ ಚರಿತ್ರೆಯಲ್ಲಿ ಇದೇ ಮೊದಲು. ಆಧುನಿಕ ಇಂಧನ ಇತಿಹಾಸದಲ್ಲೇ ಜಗತ್ತು ಈ ಪರಿ ವಿದ್ಯಮಾನ ಎದುರಿಸಿದ್ದಿಲ್ಲ ಎಂದು ಸಚಿವ ಪುರಿ ಹೇಳಿದರು.

ರಷ್ಯಾ,ನಾರ್ವೆ, ಸೇರಿ ಇತರ ದೇಶಗಳಿಂದ ಎಲ್‌ಪಿಜಿ ಆಮದು

ಹಾರ್ಮುಜ್ ಬದಲು ಪರ್ಯಾಯ ವ್ಯವಸ್ಥೆ

• ಹೊಸದಿಲ್ಲಿ: ಭಾರತದ ಕಚ್ಚಾತೈಲ ಪೂರೈಕೆ ಸ್ಥಿತಿ ಸುರಕ್ಷಿತವಾಗಿದೆ. ದೇಶಕ್ಕೆ ಅಗತ್ಯ ಶೇ.70 ಕಚ್ಚಾತೈಲ ಸಹಿತ ಆಮದುಗಳನ್ನು ಹಾರ್ಮುಜ್ ಜಲಸಂಧಿ ಬಿಟ್ಟು ಬೇರೆ ದಾರಿಯಿಂದ ತರಿಸಿಕೊಳ್ಳಲು ಭಾರತ ಸೂಕ್ತ ವ್ಯವಸ್ಥೆ ಮಾಡಿದೆ. ಎಲ್ಲಾ ಇಂಧನ ಪೂರೈಕೆ ವ್ಯವಸ್ಥೆಗಳು ಸುರಕ್ಷಿತವಾಗಿವೆ. ಹಾರ್ಮುಜ್ ಜಲಸಂಧಿ ಮೂಲಕ ಸರಬರಾಜಾಗಲಿದ್ದ ಪ್ರಮಾಣವನ್ನು ಮೀರಿದ ಪ್ರಮಾಣದ ಕಚ್ಚಾತೈಲವನ್ನು ಸರಕಾರ ಈಗಾಗಲೆ ತರಿಸಿಕೊಂಡಿದೆ ಎಂದು ತೈಲ ಸಚಿವ ಹರ್ದೀಪ್ ಪುರಿ ಲೋಕಸಭೆಗೆ ಮಾಹಿತಿ ನೀಡಿದ್ದಾರೆ. ಪಶ್ಚಿಮ ಏಷ್ಯಾ ಸಂಘರ್ಷದಿಂದ ಜಾಗತಿಕ ಇಂಧನ ಸರಬರಾಜು ವ್ಯವಸ್ಥೆ ಅಸ್ತವ್ಯಸ್ತಗೊಂಡು ಇಂದಿಗೆ 13ದಿನಗಳಾಗುತ್ತಿರುವಂತೆ , ಸಚಿವರು ದೇಶದ ಕಚ್ಚಾತೈಲ ಪೂರೈಕೆ ವ್ಯವಸ್ಥೆ ಸುರಕ್ಷಿತವಾಗಿರುವುದನ್ನು ಸದನದಲ್ಲಿ ದೃಢೀಕರಿಸಿದ್ದಾರೆ.

ಪೆಟ್ರೋಲ್, ಡೀಸೆಲ್ ಲಭ್ಯತೆಯೂ ಸುರಕ್ಷಿತ: ಹಾರ್ಮುಜ್ ತಪ್ಪಿಸಿ ಅನ್ಯ ದಾರಿಯಿಂದ ಸರಬರಾಜಾಗಿರುವ ಒಟ್ಟು ಸರಕುಗಳ ಪ್ರಮಾಣ ಶೇ.70ನ್ನು ಮೀರಿದೆ. ದೇಶದ ರಿಫೈನರಿಗಳು ಅತ್ಯಧಿಕ ಸಾಮರ್ಥ್ಯ ಬಳಕೆ ನೆಲೆಯಲ್ಲಿ ಕಾರ್ಯತತ್ಪರವಾಗಿವೆ ಮತ್ತು ಪೆಟ್ರೋಲ್, ಡೀಸೆಲ್‌ಗಳ ಲಭ್ಯತೆ ಕೂಡ ತುಂಬು ಸುರಕ್ಷಿತವಾಗಿದೆ ಎಂದು ಹೇಳಿದ್ದಾರೆ.

ರಷ್ಯಾ, ನಾರ್ವೆ, ಅಮೆರಿಕಗಳಿಂದ ಎಲ್‌ಪಿಜಿ ಆಮದು: ಭಾರತವೀಗ ಅಮೆರಿಕ, ರಷ್ಯಾ, ನಾರ್ವೆ, ಕೆನಡಾ, ಅಲ್ಜೀರಿಯಾಗಳಿಂದ ಎಲ್‌ಪಿಜಿ ಆಮದು ಮಾಡಿಕೊಳ್ಳತೊಡಗಿದೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

ಪಿಎಂ ನರೇಂದ್ರ ಮೋದಿ ರಾಜತಾಂತ್ರಿಕ ದೂರದರ್ಶಿತ್ವ

ಸಂಘರ್ಷಕ್ಕೆ ಮುನ್ನ ಭಾರತದ ಶೇ.25ರಷ್ಟು ಕಚ್ಚಾತೈಲ ಸರಕು ದೇಶಕ್ಕೆ ಸರಬರಾಜಾಗುತ್ತಿದ್ದುದು ಹಾರ್ಮುಜ್ ಜಲಸಂಧಿ ಮೂಲಕವಾಗಿದೆ. ಈ ಜಲಸಂಧಿ ಮುಚ್ಚಿದ ನೆಲೆಯಲ್ಲಿ ,ಕೇಂದ್ರ ಸರಕಾರ ಪೂರೈಕೆ ಹಾದಿಯನ್ನೇ ಬದಲಿಸುವ ಕ್ರಾಂತಿಕಾರಿ ನಿಲುವು ತಳೆದಿದೆ ಮತ್ತು ಹೊರ್ಮುಜ್ ಯೇತರ ಪರ್ಯಾಯ ಮಾರ್ಗಗಳಿಂದ ಇದುವರೆಗೆ ಶೇ.70 ಆಮದುಗಳನ್ನು ನಿರ್ವಹಿಸಲಾಗಿದೆ. ಭಾರತವು ಮಿಂಚಿನ ಗತಿಯಲ್ಲಿ ಕಚ್ಚಾತೈಲ ಖರೀದಿ-ಪೂರೈಕೆ ಹಾದಿ ಬದಲಿಸಿಕೊಳ್ಳಲು ಪ್ರಧಾನಿ ನರೇಂದ್ರ ಮೋದಿ ಅವರ ಅಸಾಧಾರಣ ರಾಜತಾಂತ್ರಿಕ ದೂರದರ್ಶಿತ್ವ ಪ್ರಧಾನ ಕಾರಣವೆಂದು ಸಚಿವ ಪುರಿ ಪ್ರಶಂಸಿಸಿದ್ದಾರೆ.

ಅಸಾಧಾರಣ ರಾಜತಾಂತ್ರಿಕ ದೂರದರ್ಶಿತ್ವ ಮೆರೆದ ಪ್ರಧಾನಿ ಮೋದಿ ಅವರಿಗೆ ಕೃತಜ್ಞತೆಗಳು. ಪ್ರಧಾನಿ ಮೋದಿ ಅವರ ದೂರದರ್ಶಿತ್ವದಿಂದಾಗಿ , ಹೊರ್ಮುಜ್ ಜಲಸಂಧಿ ಮುಖೇನ ತರಿಸಬಹುದಿದ್ದ ಪ್ರಮಾಣವನ್ನು ಬಹುಪಟ್ಟು ಮೀರಿದ ಪ್ರಮಾಣದಲ್ಲಿ ಕಚ್ಚಾತೈಲವನ್ನು ಭಾರತ ಅನ್ಯ ಮಾರ್ಗಗಳಿಂದ ತರಿಸಿಕೊಳ್ಳಲು ಸಾಧ್ಯವಾಗಿದೆ ಎಂದು ಸಚಿವ ಪುರಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಜಗತ್ತಿನ ಅಂದಾಜು ಶೇ.20ರಷ್ಟು ತೈಲ ಮತ್ತು ಶೇ.20ರಷ್ಟು ನೈಸರ್ಗಿಕ ಅನಿಲ ನಿತ್ಯ ಸರಬರಾಜಾಗುತ್ತಿದ್ದುದು ಇರಾನ್, ಅರೇಬಿಯನ್ ದ್ವೀಪ ನಡುವಣ ಇಕ್ಕಟ್ಟಾದ ಜಲಮಾರ್ಗ ಹಾರ್ಮುಜ್ ಜಲಸಂಧಿ ಮುಖೇನವಾಗಿ. ಇರಾನ್, ಇಸ್ರೇಲ್ ,ಅಮೆರಿಕಗಳ ಸಂಘರ್ಷದಿಂದಾಗಿ ಈ ಜಲಸಂಧಿಯೀಗ ವಾಣಿಜ್ಯಿಕ ನೌಕಾಯಾನಕ್ಕೆ ಮುಚ್ಚುಗಡೆಯಾಗಿ ಬರೋಬ್ಬರಿ 13ದಿನಗಳಾದುವು. ಜಾಗತಿಕವಾಗಿ ಕಚ್ಚಾತೈಲ ಉತ್ಪಾದನೆಯಲ್ಲಿ ಮಹತ್ವದ ಪಾಲು ಹೊಂದಿರುವ ಸೌದಿ ಅರೇಬಿಯಾ, ಇರಾಕ್, ಯುಎಇ, ಕುವೈತ್ ಹಾಗೂ ಸ್ವತ: ಇರಾನ್‌ಗೂ ಹಾರ್ಮುಜ್ ಜಲಸಂಧಿ ಪ್ರಮುಖ ರಫ್ತು ಮಾರ್ಗವಾಗಿದೆ. ಹಾರ್ಮುಜ್ ಮುಚ್ಚುಗಡೆಯಿಂದಾಗಿ ಏಷ್ಯಾದ್ಯಂತ ತೈಲ ಆಮದನ್ನು ನೆಚ್ಚಿಕೊಂಡಿರುವ ರಾಷ್ಟ್ರಗಳು ತುಂಬು ಸಂಕಷ್ಟಕ್ಕೆ ಸಿಲುಕಿವೆ.



ಇಬ್ಬರು ಭಾರತೀಯರ ಸಾವು ಓರ್ವ ನಾಪತ್ತೆ

ಯುಎಇಯಿಂದ ಭಾರತಕ್ಕೆ ಆಗಮಿಸುತ್ತಿದ್ದ ಥಾಯ್-ಧ್ವಜದ ಕಾರ್ಗೋ ಹಡುಗಿನ ಮೇಲೆ ಹಾರ್ಮುಜ್ ಜಲಸಂಧಿ ಬಳಿ ಇರಾನ್‌ನ ದಾಳಿಯಲ್ಲಿ ಇಬ್ಬರು ಭಾರತೀಯರು ಮೃತಪಟ್ಟಿದ್ದು, ಮತ್ತೋರ್ವ ಕಾಣೆಯಾಗಿದ್ದಾರೆ. ಅದೇರೀತಿ ಹಡಗಿನಲ್ಲಿದ್ದ ಇಪ್ಪತ್ತು ನಾವಿಕರನ್ನು ರಕ್ಷಿಸಲಾಗಿದೆ.ಇರಾನ್ ಈ ದಾಳಿಯ ಹೊಣೆ ಹೊತ್ತುಕೊಂಡಿದೆ.

ಅಡುಗೆ ಅನಿಲ: ಕಾಳಸಂತೆ ವಿರುದ್ಧ ಕಠಿಣ ಕ್ರಮಕ್ಕೆ ಸೂಚನೆ

ಅನಿಲ ಸಿಲಿಂಡರ್ ಕೊರತೆಯ ಆತಂಕದ ಮಧ್ಯೆ, ಅಡುಗೆ ಅನಿಲ ಸಿಲಿಂಡರ್‌ಗಳ ಸಂಗ್ರಹಣೆ ಅಥವಾ ಕಾಳಸಂತೆಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಾಗ ಎಲ್‌ಪಿಜಿ ಸ್ಥಾವರಗಳು, ವಿತರಣಾ ಜಾಲಗಳು ಮತ್ತು ಸಾರಿಗೆ ವ್ಯವಸ್ಥೆಗಳಲ್ಲಿ ಭದ್ರತೆ ಬಿಗಿಗೊಳಿಸುವಂತೆ ಕೇಂದ್ರ ಗೃಹ ಸಚಿವಾಲಯವು (ಎಂಎಚ್‌ಎ) ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶನ ನೀಡಿದೆ. ಕೇಂದ್ರ ಗೃಹ ಕಾರ್ಯದರ್ಶಿ ಗೋವಿಂದ್ ಮೋಹನ್ ಅವರು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳು ಮತ್ತು ಡಿಜಿಪಿಗಳೊಂದಿಗೆ ಎರಡು ಗಂಟೆಗಳ ಕಾಲ ಸಭೆ ನಡೆಸಿ ಸನ್ನದ್ಧತೆಯನ್ನು ಪರಿಶೀಲಿಸಿದರು. ನಿರಂತರ ದೇಶೀಯ ಎಲ್‌ಪಿಜಿ ಪೂರೈಕೆಯನ್ನು ಖಚಿತಪಡಿಸಿಕೊಂಡರು. ಸಭೆಯಲ್ಲಿ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಮಾಹಿತಿ ಮತ್ತು ಪ್ರಸಾರ ಮತ್ತು ಗ್ರಾಹಕ ವ್ಯವಹಾರಗಳ ಕಾರ್ಯದರ್ಶಿಗಳು ಸೇರಿದಂತೆ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಯುದ್ಧ ನಿಲ್ಲಿಸಲು ಷರತ್ತು ವಿಧಿಸಿದ ಇರಾನ್

ಅಮೆರಿಕ ಮತ್ತು ಇಸ್ರೇಲ್ ಜತೆಗಿನ ಪ್ರಸ್ತುತ ಯುದ್ಧವನ್ನು ಕೊನೆಗೊಳಿಸಲು ಇರಾನ್ ನಾಲ್ಕು ಪ್ರಮುಖ ಷರತ್ತುಗಳನ್ನು ವಿಧಿಸಿದೆ. ತನ್ನ ಹಕ್ಕುಗಳ ಮಾನ್ಯತೆ, ಯುದ್ಧದ ನಷ್ಟ ಪರಿಹಾರ ಪಾವತಿ ಮತ್ತು ಭವಿಷ್ಯದಲ್ಲಿ ದಾಳಿ ನಡೆಯದಂತೆ ಖಾತರಿ ನೀಡಬೇಕೆಂದು ಇರಾನ್ ಷರತ್ತು ವಿಧಿಸಿದೆ.

ಕದನ ವಿರಾಮದ ಷರತ್ತುಗಳು : ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡೊರುವ ಪೋಸ್ಟ್‌ನಲ್ಲಿ, ಎಕ್ಸ್ ನಲ್ಲಿ ಈ ಷರತ್ತುಗಳನ್ನು ಹಂಚಿಕೊಂಡಿದ್ದಾರೆ. ಯಾವುದೇ ಶಾಂತಿ ಒಪ್ಪಂದ ಇರಾನ್‌ನ ಕಾನೂನುಬದ್ಧ ಹಕ್ಕುಗಳನ್ನು ಅಂಗೀಕರಿಸಬೇಕು, ಯುದ್ಧದಿಂದ ಉಂಟಾದ ಹಾನಿಗೆ ಪರಿಹಾರ ನೀಡಬೇಕು ಮತ್ತು ಭವಿಷ್ಯದಲ್ಲಿ ಮತ್ತೆ ಆಕ್ರಮಣ ನಡೆಯದಂತೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬಲವಾದ ಖಾತರಿ ನೀಡಬೇಕ ಎಂದು ಅವರು ತಿಳಿಸಿದ್ದಾರೆ. ಪ್ರಾದೇಶಿಕ ಶಾಂತಿಗೆ ಇರಾನ್ ಬದ್ಧವಾಗಿದೆ ಎಂದು ಪುನರುಚ್ಚರಿಸಲಾಗಿದೆ.

ತೈಲ ಟ್ಯಾಂಕರ್‌ಗೆ ದಾಳಿ ಭಾರತೀಯ ಸಿಬ್ಬಂದಿ ಸಾವು

• ಹೊಸದಿಲ್ಲಿ: ಇರಾಕ್‌ನ ಬಸ್ರಾ ಬಳಿ ಅಮೆರಿಕ ಒಡೆತನ ಹಡಗಿನ ಮೇಲೆ ಇರಾನ್ ನೀರೊಳಗಿನ ಡ್ರೋನ್ ದಾಳಿಯಲ್ಲಿ ಭಾರತೀಯ ಸಿಬ್ಬಂದಿಯೊಬ್ಬರು ಮೃತಪಟ್ಟಿದ್ದಾರೆ. ಇರಾಕ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಈ ಸಾವನ್ನು ದೃಢಪಡಿಸಿದ್ದು, ಹಡಗಿನಲ್ಲಿದ್ದ ಇತರ 15 ಭಾರತೀಯ ಸಿಬ್ಬಂದಿಯನ್ನು ಸ್ಥಳಾಂತರಿಸಲಾಗಿದೆ ಎಂದು ಹೇಳಿದೆ. ಪರ್ಷಿಯನ್ ಕೊಲ್ಲಿಯಲ್ಲಿನ ವಾಣಿಜ್ಯ ಹಡಗುಗಳನ್ನು ಕಳೆದ ಕೆಲವು ದಿನಗಳಿಂದ ಇರಾನಿನ ಸೇನೆಯು ಗುರಿಯಾಗಿಸಿಕೊಂಡಿದೆ. ಇರಾಕ್‌ನ ಪ್ರಾದೇಶಿಕ ಜಲಪ್ರದೇಶದಲ್ಲಿ ದಾಳಿಗೆ ಒಳಗಾದ ನಂತರ ಪರ್ಷಿಯನ್ ಕೊಲ್ಲಿಯಲ್ಲಿ ಮತ್ತೊಂದು ತೈಲ ಟ್ಯಾಂಕರ್‌ಗೆ ಬೆಂಕಿ ಹೊತ್ತಿಕೊಂಡಿದೆ. ಇರಾನ್ ದಾಳಿ ಹೊಣೆ ಹೊತ್ತುಕೊಂಡಿದ್ದು, ನೀರೊಳಗಿನ ಡ್ರೋನ್ ದಾಳಿಯು ಪರ್ಷಿಯನ್ ಕೊಲ್ಲಿಯಲ್ಲಿ ಎರಡು ತೈಲ ಟ್ಯಾಂಕರ್‌ಗಳನ್ನು ಸ್ಫೋಟಿಸಿದೆ ಎಂದು ಇರಾನಿನ ರಾಜ್ಯ ಪ್ರಸಾರಕ ಐಆರ್‌ಐಬಿ ತಿಳಿಸಿದೆ. ನೀರೋಳಗಿನ ಡ್ರೋನ್ ದಾಳಿಗಳು ಮಾನವರಹಿತ ಅಂಡರ್‌ವಾಟರ್ ವಾಹನಗಳ (ಯುಯುವಿಗಳು) ಬಳಕೆ ಒಳಗೊಂಡಿರುತ್ತವೆ. ಈ ಡ್ರೋನ್‌ಗಳು ಮಾನವ ನಿರ್ವಾಹಕರಿಲ್ಲದೆ ಕಾರ್ಯನಿರ್ವಹಿಸುತ್ತವೆ.

500ಕ್ಕೂ ಹೆಚ್ಚು ಭಾರತೀಯರ ಸ್ಥಳಾಂತರ

ಕತಾರ್‌ನಲ್ಲಿ ಸಿಲುಕಿರುವ 500ಕ್ಕೂ ಹೆಚ್ಚು ಭಾರತೀಯರನ್ನು ದಿಲ್ಲಿ ಮತ್ತು ಇತರ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ ಎಂದು ಭಾರತೀಯ ನಿಯೋಗ ಮಾಹಿತಿ ನೀಡಿದೆ. ತಮ್ಮ ಸಮಸ್ಯೆ ಗೊಂದಲಗಳ ಬಗ್ಗೆ ಪ್ರಶ್ನಿಸಲು, ಭಾರತೀಯ ಸಮುದಾಯಕ್ಕೆ ಸಹಾಯವಾಣಿಗಳು ಲಭ್ಯವಿರಲಿದೆ ಎಂದು ಆಯೋಗ ಹೇಳಿದೆ. ಭಾರತೀಯ ಪ್ರಜೆಗಳಿಗೆ ಪಾಸ್‌ಪೋರ್ಟ್ ತ್ವರಿತ ವಿತರಣೆಗೆ ವಿಶೇಷ ಗಮನ ನೀಡುತ್ತಿದೆ ಎಂದು ಹೇಳಿದೆ. ಪ್ರಸ್ತುತ ಪರಿಸ್ಥಿತಿಯಿಂದಾಗಿ, ನಾವು ವಾರದ ಎಲ್ಲಾ ದಿನಗಳಲ್ಲೂ ಪಾಸ್‌ಪೋರ್ಟ್ ಅರ್ಜಿಗಳನ್ನು ತೆಗೆದುಕೊಳ್ಳಲು ಮುಕ್ತರಾಗಿದ್ದೇವೆ. 1-2 ದಿನಗಳಲ್ಲಿ ತತ್ಕಾಲ್ ಪಾಸ್‌ಪೋರ್ಟ್ ವಿತರಿಸಲಾಗುತ್ತಿದೆ ಎಂದು ಹೇಳಿದೆ.

ಓಮಾನ್‌ನಿಂದ ಅನಿಲ ಖರೀದಿಸಿದ ಗೈಲ್

ದೇಶದಲ್ಲಿ ಹೆಚ್ಚುತ್ತಿರುವ ನೈಸರ್ಗಿಕ ಅನಿಲದ ಬೇಡಿಕೆಯನ್ನು ತಲುಪಲು ಮತ್ತು ಪೂರೈಕೆಯನ್ನು ಸುಸ್ಥಿತಿಯಲ್ಲಿಡಲು ಸರ್ಕಾರಿ ಸ್ವಾಮ್ಯದ ಗೈಲ್ (ಜಿಎಐಎಲ್) ಸಂಸ್ಥೆ, ಓಮಾನ್‌ನಿಂದ ಲಿಕ್ವಿಫೈಡ್ ನ್ಯಾಚುರಲ್ ಗ್ಯಾಸ್ (ಎಲ್‌ಎನ್‌ಜಿ) ಖರೀದಿಸಿದೆ. ಹಾರ್ಮುಜ್ ಜಲಸಂಧಿಯಲ್ಲಿನ ಸಂಘರ್ಷ ಮತ್ತು ಕತಾರ್‌ನಿಂದ



ಪೂರೈಕೆಯಲ್ಲಿ ಆಗಿರುವ ಅಡೆತಡೆಗಳಿಂದಾಗಿ ಸೃಷ್ಟಿಯಾಗಿರುವ ಕೊರತೆ ನೀಗಿಸಲು ಈ ಕ್ರಮ ಕೈಗೊಳ್ಳಲಾಗಿದೆ. ಯುರೋಪಿಯನ್ ವ್ಯಾಪಾರಿಯೊಬ್ಬರ ಮೂಲಕ ಪ್ರತಿ ಮಿಲಿಯನ್ ಬ್ರಿಟಿಷ್ ಥರ್ಮಲ್ ಯೂನಿಟ್‌ಗೆ (ಎಂಎಂಬಿಟಿಯು) ಸುಮಾರು 17-20 ರಷ್ಟು ಸ್ಥಿರ ಬೆಲೆಯಲ್ಲಿ ಈ ಅನಿಲವನ್ನು ಖರೀದಿಸಲಾಗಿದೆ. ಓರಿಯನ್ ಹ್ಯೂಗೋ ಎಂಬ ಹಡಗಿನ ಮೂಲಕ ಸಾಗಿಸಲಾಗುತ್ತಿರುವ ಈ ಸರಕು ಮಾರ್ಚ್ 15 ರ ಸುಮಾರಿಗೆ ಭಾರತ ತಲುಪುವ ನಿರೀಕ್ಷೆಯಿದೆ. ಕೊರತೆಯನ್ನು ಸರಿದೂಗಿಸಲು ಕೇಂದ್ರ ಸರ್ಕಾರ ಅಗತ್ಯ ವಸ್ತುಗಳ ಕಾಯ್ದೆಯಡಿ ತುರ್ತು ಅಧಿಕಾರ ಬಳಸಿಕೊಂಡಿದೆ. ಆದ್ಯತೆಯಲ್ಲದ ಕೈಗಾರಿಕೆಗಳಿಗೆ ನೀಡಲಾಗುತ್ತಿದ್ದ ಅನಿಲವನ್ನು ಈಗ ಅಗತ್ಯ ಸೇವೆಗಳಿಗೆ ವರ್ಗಾಯಿಸಲಾಗುತ್ತಿದೆ. ಮನೆಬಳಕೆಯ ಅಡುಗೆ ಅನಿಲ (ಎಲ್‌ಪಿಜಿ), ಸಾರಿಗೆ ಇಂಧನ (ಸಿಎನ್‌ಜಿ) ಮತ್ತು ಆಸ್ಪತ್ರೆಗಳಂತಹ ತುರ್ತು ಸೇವೆಗಳಿಗೆ ಶೇ. 100ರಷ್ಟು ಅನಿಲ ಪೂರೈಕೆಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರ ಮುಂದಾಗಿದೆ.



ಸರ್ವೋಚ್ಚ ನಾಯಕನ ಮೊದಲ ಸಂದೇಶ

ಇರಾನ್‌ನ ಸರ್ವೋಚ್ಚ ನಾಯಕನಾಗಿ ಅಧಿಕಾರ ವಹಿಸಿಕೊಂಡ ನಂತರ ತನ್ನ ಮೊದಲ ಸಾರ್ವಜನಿಕ ಸಂದೇಶದಲ್ಲಿ, ಮೊಜ್ತಾಬಾ ಖಮೇನಿ ಸರಣಿ ದಾಳಿ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ. ಇತ್ತೀಚಿನ ದಾಳಿಗಳಲ್ಲಿ ಮೃತಪಟ್ಟ ಇರಾನಿಯನ್ನರ ಸಾವಿಗೆ ಪ್ರತೀಕಾರ ತೀರಿಸಿಕೊಳ್ಳಲಾಗುತ್ತದೆ. ಇರಾನ್ ತನ್ನ ಮೃತರ ರಕ್ತದ ಸೇಡು ತೀರಿಸಿಕೊಳ್ಳುವುದರಿಂದ ಹಿಂದೆ ಸರಿಯುವುದಿಲ್ಲ. ಇದು ದೇಶಕ್ಕೆ ಪ್ರಮುಖ ಆದ್ಯತೆಯಾಗಿ ಉಳಿದಿದೆ ಎಂದು ಖಮೇನಿ ಹೇಳಿದ್ದಾರೆ. ಖಮೇನಿ ತಮ್ಮ ಹೇಳಿಕೆಯಲ್ಲಿ, ಹಾರ್ಮುಜ್ ಜಲಸಂಧಿಯನ್ನು ಮುಚ್ಚುವ ಒತ್ತಡವನ್ನು ಸಹ ಉಲ್ಲೇಖಿಸಿದ್ದಾರೆ.

ಕಿರುಸುದ್ದಿ

ಫಾರೂಕ್ ಅಬ್ದುಲ್ಲಾ ಹತ್ಯೆಗೆ ಯತ್ನ!

• ಶ್ರೀನಗರ: ಜಮ್ಮು-ಕಾಶ್ಮೀರದ ವಿಹಾಹ ಸಮಾರಂಭವೊಂದರಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಜಮ್ಮು-ಕಾಶ್ಮೀರ ಮಾಜಿ ಮುಖ್ಯಮಂತ್ರಿ ಫಾರೂಕ್ ಅಬ್ದುಲ್ಲಾ ಅದೃಷ್ಟವಶಾತ್ ಅಪಾಯದಿಂದ ಪಾರಾಗಿದ್ದಾರೆ. ದೇವರೇ ನನ್ನನ್ನು ಬದುಕಿಸಿದ್ದಾರೆಂದು ಘಟನೆ ಬಳಿಕ ಫಾರೂಕ್ ಅಬ್ದುಲ್ಲಾ ಅವರು ಹೇಳಿದ್ದಾರೆ. ದಾಳಿಕೋರ ಕಮಲ್ ಸಿಂಗ್ ಜಮ್ವಾಲ್ ನಗರದ ಹೊರವಲಯದದಲ್ಲಿರುವ ಗ್ರೇಟರ್ ಕೈಲಾಶ್ ಪ್ರದೇಶದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಬ್ದುಲ್ಲಾ ಅವರನ್ನು ಗುರಿಯಾಗಿಸಿಕೊಂಡಿದ್ದಾನೆ ಎಂದು ಆರೋಪಿಸಲಾಗಿದೆ.

ಅನಿಲ್ ಅಂಬಾನಿ ಒಡೆತನದ 581 ಕೋಟಿ. ರೂ ಆಸ್ತಿ ಜಪ್ತಿ

ಮುಂಬೈ: ರಿಲಯನ್ಸ್ ಸಮೂಹದ ಅಧ್ಯಕ್ಷ ಅನಿಲ್ ಅಂಬಾನಿಯವರ ಕಂಪನಿಗಳಾದ ಆರ್‌ಎಚ್‌ಎಫ್ ಎಲ್ ಮತ್ತು ಆರ್‌ಸಿಎಫ್‌ಎಲ್‌ನ 581 ಕೋಟಿ ರೂ. ಗೂ ಹೆಚ್ಚು ಮೌಲ್ಯದ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿರುವುದಾಗಿ ಜಾರಿ ನಿರ್ದೇಶನಾಲಯ ತಿಳಿಸಿದೆ. ಗೋವಾ, ಕೇರಳ, ಕರ್ನಾಟಕ, ಪಂಜಾಬ್, ತಮಿಳುನಾಡು, ಉತ್ತರ ಪ್ರದೇಶ, ಹರಿಯಾಣ, ಜಾರ್ಖಂಡ್, ಮಹಾರಾಷ್ಟ್ರ, ದಿಲ್ಲಿ ಸೇರಿ ಇತರ ಪ್ರದೇಶದಲ್ಲಿರುವ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಆದೇಶ ಹೊರಡಿಸಲಾಗಿದೆ.

ದಶಕಗಳಿಂದ ಉಗ್ರವಾದ ಪೋಷಿಸುತ್ತಿರುವ ಪಾಕ್

• ಹೊಸದಿಲ್ಲಿ: ಗಡಿಯಾಚೆಯ ಭಯೋತ್ಪಾದನೆ ವಿಚಾರದಲ್ಲಿ ಪಾಕ್ ಶೂನ್ಯ ವಿಶ್ವಾಸಾರ್ಹತೆ ಹೊಂದಿದೆ ಎಂದು ಭಾರತ ಪಾಕಿಸ್ತಾನವನ್ನು ಕಟುವಾಗಿ ತರಾಟೆಗೆತ್ತಿಕೊಂಡಿದೆ. ಭಾರತ ಭಯೋತ್ಪಾದನೆಯನ್ನು ಪ್ರಾಯೋಜಿಸುತ್ತಿದೆ ಎಂಬ ಪಾಕ್‌ನ ಮಿಥ್ಯಾರೋಪಕ್ಕೆ ಭಾರತತಕ್ಕ ತಿರುಗೇಟು ನೀಡಿದೆ. ದಶಕಗಳಿಂದ ಪಾಕಿಸ್ತಾನ ಭಯೋತ್ಪಾದನೆಯನ್ನು ಪ್ರಚೋದಿಸುತ್ತಿರುವುದು ಟ್ರ್ಯಾಕ್ ರೆಕಾರ್ಡ್. ವಸ್ತುಸ್ಥಿತಿ ಇದಾಗಿರುವಾಗ ಭಾರತದ ವಿರುದ್ಧ ಆರೋಪ ಮಾಡುವ ಮುಖೇನ ಪಾಕಿಸ್ತಾನ ಯಾರನ್ನೂ ಮೂರ್ಖರಾಗಿಸಲು ಸಾಧ್ಯವಿಲ್ಲ. ಪಾಕ್‌ನ ಆರೋಪಗಳನ್ನು ಭಾರತ ಸಾರಾಸಗಟಾಗಿ ತಿರಸ್ಕರಿಸುತ್ತದೆ ಎಂದು ಭಾರತದ ವಿದೇಶ ವ್ಯವಹಾರಗಳ ಖಾತೆ ಪ್ರತಿಕ್ರಿಯಿಸಿದೆ. ಇಂತಹ ಆಧಾರ ರಹಿತ ಆರೋಪಗಳನ್ನು ನಾವು ತಿರಸ್ಕರಿಸುತ್ತೇವೆ. ತನ್ನದೇ ತಪ್ಪುಗಳಿಗೆ ,ಹೊಣೆಗೇಡಿತನಕ್ಕೆ ಭಾರತದ ವಿರುದ್ಧ ಆರೋಪ ಹೊರಿಸುವುದು ಪಾಕಿಸ್ತಾನದ ದ್ವಿತೀಯ ಸ್ವಭಾವವಾಗಿದೆ. ಪಾಕಿಸ್ತಾನ ಏನೇ ಕಥೆ ಹೇಳಿದರೂ, ದಶಕಗಳಿಂದ ಪಾಕಿಸ್ತಾನ ಗಡಿಯಾಚೆಯ ಭಯೋತ್ಪಾದನೆಗೆ ಪ್ರಚೋದನೆ ನೀಡುತ್ತಿರುವ ವಸ್ತುಸ್ಥಿತಿಯನ್ನು ಬದಲಿಸಲಾಗದು ಎಂದು ವಿದೇಶ ವ್ಯವಹಾರಗಳ ಖಾತೆ ವಕ್ತಾರ ರಣಧೀರ್ ಜೈಸ್ವಾಲ್ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ. ತಾನು ನೆರೆರಾಷ್ಟ್ರದೊಂದಿಗೆ ಸಂಘರ್ಷದಲ್ಲಿದ್ದು, ಗಡಿ ವಿಚಾರದಲ್ಲೂ ಸಂಕಷ್ಟಗಳನ್ನು ಎದುರಿಸುತ್ತಿರುವಾಗ , ಭಾರತವು ಅಫ್ಘಾನ್ ನೆಲವನ್ನು ಬಳಸಿಕೊಂಡು ನಡೆಯುವ ಭಯೋತ್ಪಾದಕ ಚಟುವಟಿಕೆಗಳಿಗೆ ಕುಮ್ಮಕ್ಕೀಯುತ್ತಿದೆ ಎಂದು ಪಾಕಿಸ್ತಾನ ನಿರಂತರವಾಗಿ ಆರೋಪಿಸಿದೆ.

16 ದೇಶಗಳ ವಿರುದ್ಧ ಸೆಕ್ಷನ್ 301 ತನಿಖೆ ಪ್ರಾರಂಭ

• ವಾಷಿಂಗ್ಟನ್: ಭಾರತ, ಚೀನಾ ಮತ್ತು ಯುರೋಪಿಯನ್ ಯೂನಿಯನ್ ಸೇರಿದಂತೆ 16 ಪ್ರಮುಖ ಆರ್ಥಿಕತೆಗಳ ವಿರುದ್ಧ ಟ್ರಂಪ್ ಆಡಳಿತ 1974ರ ವ್ಯಾಪಾರ ಕಾಯ್ದೆಯ ಸೆಕ್ಷನ್ 301 ಅನ್ವಯದಲ್ಲಿ ಹೊಸ ವ್ಯಾಪಾರ ತನಿಖೆ ಪ್ರಾರಂಭಿಸಿದೆ.ಅಮೆರಿಕದ ಸುಪ್ರೀಂ ಕೋರ್ಟ್ ಇತ್ತೀಚೆಗೆ ಟ್ರಂಪ್ ಅವರ ಪರಸ್ಪರ ಸುಂಕ ನೀತಿ ರದ್ದುಗೊಳಿಸಿದ ಬೆನ್ನಲ್ಲೇ ಈ ಕ್ರಮ ಕೈಗೊಳ್ಳಲಾಗಿದೆ.

ಕಾನೂನು ತಂತ್ರ?: ವಿದೇಶಿ ವ್ಯಾಪಾರ ನೀತಿಗಳು



ಅಮೆರಿಕದ ವ್ಯವಹಾರಗಳಿಗೆ ಅನ್ಯಾಯವಾಗಿ ಅನಾನುಕೂಲವನ್ನು ಉಂಟುಮಾಡುತ್ತಿವೆಯೇ ಎಂದು ಪರೀಕ್ಷಿಸಲು ಈ ತನಿಖೆಯನ್ನು ಪ್ರಬಲ ಕಾನೂನು ಪರ್ಯಾಯವಾಗಿ ಬಳಸಲಾಗುತ್ತಿದೆ. ತನಿಖೆ ಭಾಗವಾಗಿ ಲಿಖಿತ ಸಲ್ಲಿಕೆಗಳನ್ನು ಸಂಗ್ರಹಿಸಲಾಗುತ್ತದೆ ಮತ್ತು ಸಾರ್ವಜನಿಕ ವಿಚಾರಣೆಗಳನ್ನು ನಡೆಸಲಾಗುತ್ತದೆ. ಒಂದು ವೇಳೆ ತಾರತಮ್ಯದ ಪದ್ಧತಿಗಳು ಕಂಡುಬಂದಲ್ಲಿ, ಪ್ರತೀಕಾರವಾಗಿ ಹೆಚ್ಚಿನ ಸುಂಕ ಅಥವಾ ಸೇವಾ ಶುಲ್ಕಗಳನ್ನು ವಿಧಿಸುವ ಸಾಧ್ಯತೆಯಿದೆ.

ಭಾರತದ ಮೇಲೆ ಗಮನ: ಭಾರತದ ಮೇಲಿರುವ ಹೆಚ್ಚಿನ ಆಮದು ಸುಂಕಗಳು, ಸ್ಥಳೀಯ ಮೂಲದ ನಿಯಮಗಳು ಮತ್ತು ಔಷಧ ವಲಯದಲ್ಲಿನ ಬೆಲೆ ನಿಯಂತ್ರಣದ ಕುರಿತಾದ ದೀರ್ಘಕಾಲದ ಕಳವಳಗಳಿಂದಾಗಿ ಭಾರತವನ್ನು ಈ ಪಟ್ಟಿಗೆ ಸೇರಿಸಲಾಗಿದೆ. ಸದ್ಯಕ್ಕೆ ಯಾವುದೇ ತಕ್ಷಣದ ಸುಂಕ ವಿಧಿಸದಿದ್ದರೂ, ಐಟಿ, ಹಾರ್ಡ್‌ವೇರ್ ಜವಳಿ ಮತ್ತು ಆಟೋ ಬಿಡಿಭಾಗಗಳಂತಹ ಭಾರತದ ಪ್ರಮುಖ ರಫ್ತು ವಲಯಗಳು ಈಗ ತೀವ್ರ ನಿಗಾದಲ್ಲಿರಲಿವೆ.

ಸಿಇಸಿ ಜ್ಞಾನೇಶ್ ಪದಚ್ಯುತಿಗೆ ವಿಪಕ್ಷದ 200 ಸಂಸದರ ಸಹಿ

• ಹೊಸದಿಲ್ಲಿ: ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರ ಪದಚ್ಯುತಿ ಕೋರುವ ಐತಿಹಾಸಿಕ ನೋಟಿಸ್‌ಗೆ ಉಭಯ ಸದನಗಳ ಸುಮಾರು 200 ಸಂಸದರು ಗುರುವಾರ ಸಹಿ ಹಾಕಿದ್ದಾರೆ. ಭಾರತದ ಸಂಸದೀಯ ಇತಿಹಾಸದಲ್ಲಿ ಮುಖ್ಯ ಚುನಾವಣಾ ಆಯುಕ್ತರ ವಿರುದ್ಧ ಇಂತಹ ಕ್ರಮ ಕೈಗೊಳ್ಳುತ್ತಿರುವುದು ಇದೇ ಮೊದಲು. ಲೋಕಸಭೆಯ 130 ಮತ್ತು ರಾಜ್ಯಸಭೆಯ 63 ಸದಸ್ಯರ ಬೆಂಬಲವಿರುವ ಈ ನೋಟಿಸ್‌ನಲ್ಲಿ ಒಟ್ಟು ಏಳು ನಿರ್ದಿಷ್ಟ ಆರೋಪಗಳನ್ನು ಪಟ್ಟಿ ಮಾಡಲಾಗಿದೆ. ಪಕ್ಷಪಾತದ ನಡವಳಿಕೆ, ಚುನಾವಣಾ ವಂಚನೆ ತನಿಖೆಗೆ ಉದ್ದೇಶಪೂರ್ವಕ ಅಡ್ಡಿ ಮತ್ತು ಬೃಹತ್ ಪ್ರಮಾಣದಲ್ಲಿ ಮತದಾನದ ಹಕ್ಕು ಕಸಿದುಕೊಳ್ಳುವುದು ಈ ಪ್ರಮುಖ ಆರೋಪಗಳಾಗಿವೆ. ಪ್ರಸ್ತುತ ನಡೆಯುತ್ತಿರುವ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಆಡಳಿತ ಪಕ್ಷಕ್ಕೆ ಅನುಕೂಲವಾಗುವಂತೆ ಇದೆ ಎಂದು ಇಂಡಿ ಕೂಟ ಮತ್ತು ಆಮ್ ಆದ್ಮಿ ಪಾರ್ಟಿಯ ಸಂಸದರು ಆರೋಪಿಸಿದ್ದಾರೆ.

ಮುಂದಿನಪ್ರಕ್ರಿಯೆ: ಮುಖ್ಯ ಚುನಾವಣಾ ಆಯುಕ್ತರ ಪದಚ್ಯುತಿ ಪ್ರಕ್ರಿಯೆ, ಸುಪ್ರೀಂ ಕೋರ್ಟ್ ನ್ಯಾಯಾಧೀಶರ ಪದಚ್ಯುತಿಗೆ ಅನುಸರಿಸುವ ಕಟ್ಟುನಿಟ್ಟಿನ ಮಾನದಂಡಗಳನ್ನೇ ಹೊಂದಿರುತ್ತದೆ. ದೋಷಾರೋಪಣೆ ಸಾಬೀತಾಗಲು ಅಸಭ್ಯ ನಡವಳಿಕೆ ಅಥವಾ ಅಸಮರ್ಥತೆಯನ್ನು ಸಾಬೀತುಪಡಿಸಬೇಕಾಗುತ್ತದೆ. ನೋಟಿಸ್ ಸಲ್ಲಿಸಿದ ನಂತರ, ಎರಡು ಸದನಗಳಲ್ಲಿಯೂ ಈ ಪ್ರಸ್ತಾವನೆಯನ್ನು ಅಂಗೀಕರಿಸಿದರೆ, ಸ್ಪೀಕರ್ ಮತ್ತು ಅಧ್ಯಕ್ಷರು ಜಂಟಿ ಸಮಿತಿಯನ್ನು ರಚಿಸಬಹುದು. ಈ ಪ್ರಸ್ತಾವನೆ ಯಶಸ್ವಿಯಾಗಲು ಸಂಸತ್ತಿನಲ್ಲಿ ವಿಶೇಷ ಬಹುಮತದ (ಮೂರನೇ ಎರಡರಷ್ಟು) ಅಗತ್ಯವಿರುತ್ತದೆ.

ಇಂದು ಮೋದಿ ಅಸ್ಸಾಂಗೆ: ಹಲವು ಯೋಜನೆಗೆ ಚಾಲನೆ

• ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರದಿಂದ ಎರಡು ದಿನಗಳ ಭೇಟಿಗೆ ಅಸ್ಸಾಂ ಆಗಮಿಸಲಿದ್ದು, ಈ ವೇಳೆ ಅವರು ಕೊಕ್ರಾಝಾರ್, ಗುವಾಹಟಿ ಮತ್ತು ಸಿಲ್ಚಾರ್‌ನಲ್ಲಿ 47,800 ಕೋಟಿ ರೂ.ಗೂ ಹೆಚ್ಚು ಮೌಲ್ಯದ ಅನೇಕ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿ ಹಲವು ಯೋಜನೆಗಳಿಗೆ ಹಸಿರು ನಿಶಾನೆ ತೋರಿಸಲಿದ್ದಾರೆ. ಶುಕ್ರವಾರ ತಮ್ಮ ಭೇಟಿಯ ಮೊದಲ ದಿನದಂದು, ಮೋದಿ ಮಧ್ಯಾಹ್ನ 1:30ರ ಸುಮಾರಿಗೆ ಕೊಕ್ರಾಝಾರ್ ನಲ್ಲಿ ಭೂಮಿ ಪೂಜೆ ನೆರವೇರಿಸಲಿದ್ದಾರೆ. 4,570 ಕೋಟಿ ರೂ. ಮೌಲ್ಯದ ಯೋಜನೆಗಳಿಗೆ ಹಸಿರು ನಿಶಾನೆ ತೋರಿಸಲಿದ್ದಾರೆ. ಬಳಿಕ ಸಂಜೆ 5 ಗಂಟೆಗೆ ಗುವಾಹಟಿಯಲ್ಲಿ ಅವರು ಭೂಮಿ ಪೂಜೆ ನೆರವೇರಿಸಿ, ಸುಮಾರು 19,680 ಕೋಟಿ ರೂ. ಮೌಲ್ಯದ ಹಲವಾರು ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಲಿದ್ದಾರೆ. ಮಾರ್ಚ್ 14ರಂದು ಬೆಳಗ್ಗೆ ಸುಮಾರು 1 ಗಂಟೆಗೆ ಪ್ರಧಾನಮಂತ್ರಿಯವರು ಸಿಲ್ಚಾರ್‌ನಲ್ಲಿ ಭೂಮಿ ಪೂಜೆ ನೆರವೇರಿಸಲಿದ್ದು, ಸುಮಾರು 23,550 ಕೋಟಿ ರೂ. ಮೌಲ್ಯದ ವಿವಿಧ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ.

ಲಿಂಗಾಧಾರಿತ ಅಂತರ, ನ್ಯೂನತೆಗಳ ನಿವಾರಣೆಗೆ ಸಂಘಟಿತ ಕ್ರಮ ಅಗತ್ಯ

ಸಾಧಕ ಮಹಿಳಾ ರೈತರಿಗೆ ಪ್ರಚಾರ ಅಗತ್ಯ: ಮುರ್ಮು

• ಹೊಸದಿಲ್ಲಿ: ಕೃಷಿ ಮತ್ತು ಕೃಷಿ-ಆಹಾರ ರಂಗಗಳಲ್ಲಿ ಕಾಯಕ ನಿರತ ಮಹಿಳೆಯರು ನೀತಿ ನಿರೂಪಣೆ, ನಿರ್ಧಾರ ಕೈಗೊಳ್ಳುವಿಕೆ, ನಾಯಕತ್ವ ಸ್ಥಾನವನ್ನೂ ಹೊಂದುವ ಮೂಲಕ ಮಹತ್ವದ ಪಾತ್ರ ವಹಿಸಬೇಕೆಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಕರೆ ನೀಡಿದ್ದಾರೆ. ಮೌಲ್ಯ ಸರಪಳಿಯಾದ್ಯಂತ ಇರುವ ಲಿಂಗಾಧಾರಿತ ಅಂತರ, ನ್ಯೂನತೆಗಳ ನಿವಾರಿಸಲು ಸಂಘಟಿತ ಕ್ರಮ ಅಗತ್ಯವೆಂದು ಅವರು ಪ್ರತಿಪಾದಿಸಿದ್ದಾರೆ.

ಕೃಷಿರಂಗದಲ್ಲಿ ಯಶಸ್ವಿಯಾಗಿರುವ ಮಹಿಳೆಯರ ಕೊಡುಗೆಗಳ ಬಗ್ಗೆ ಪ್ರಕಟಣೆ-ಪ್ರಚಾರ ಮಾಡುವುದರಿಂದ , ಹೆಚ್ಚೆಚ್ಚು ಜನರಿಗೆ ಈ ಸಾಧಕ ಮಹಿಳೆಯರ ಯಶೋಗಾಥೆಯ ಅರಿವಾಗುತ್ತದೆ. ಮಹಿಳಾ ನೇತೃತ್ವದಲ್ಲಿ ಅಭಿವೃದ್ಧಿ ಸಾಕಾರಗೊಳಿಸುವ ಭಾರತ ಸರಕಾರದ ವ್ಯೂಹಾತ್ಮಕ ಆಯ್ಕೆಯನ್ನು ಪ್ರಶಂಸಿಸಿ, ಕೃಷಿ ರಂಗದ ಎಲ್ಲಾ ಸ್ತರಗಳಲ್ಲೂ ಬೃಹತ್ ಸಂಖ್ಯೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯು ಲಿಂಗಸಮಾನತೆ-ಎಲ್ಲರ ಒಳಗೊಳ್ಳುವಿಕೆಯ ಕೃಷಿ ಬೆಳವಣಿಗೆಗೆ ಉತ್ತೇಜನವೀಯುವುದು ಎಂದು ರಾಷ್ಟ್ರಪತಿ ಮುರ್ಮು ಹೇಳಿದರು. ಕೃಷಿ-ಆಹಾರ



ವ್ಯವಸ್ಥೆಗಳಲ್ಲಿ ಮಹಿಳೆ ಕುರಿತ ಮೂರು ದಿನಗಳ ಜಾಗತಿಕ ಸಮಾವೇಶದಲ್ಲಿ ರಾಷ್ಟ್ರಪತಿ ಪಾಲ್ಗೊಂಡರು.

ಮಹಿಳಾ ಕೃಷಿಕರಿಗೆ ಬೆಂಬಲ ಅಗತ್ಯ: ಭೂಮಿಯ ಒಡೆತನ-ಹಕ್ಕುಪತ್ರಕ್ಕೆ ಸಂಬಂಧಿತ ವಿವಾದಗಳು, ತಂತ್ರಜ್ಞಾನದಲ್ಲಿ ತಜ್ಞತೆ, ಸಾಂಸ್ಥಿಕ ಹಣಕಾಸು ಸೌಲಭ್ಯ ಪಡೆಯುವುದೇ ಇತ್ಯಾದಿ ವಿಚಾರಗಳಲ್ಲಿ ಮಹಿಳಾ ಕೃಷಿಕರಿಗೆ ಅಗತ್ಯ ಬೆಂಬಲ ನೀಡಬೇಕೆಂದು ರಾಷ್ಟ್ರಪತಿ ಮುರ್ಮು ಸಲಹೆಯಿತ್ತರು. ಕೃತಕ ಬುದ್ಧಿಮತ್ತೆಯು ಮಹಿಳಾ ಕೃಷಿಕರಿಗೆ ಅದ್ಯಾವ ರೀತಿ ಹೊಸ ಅವಕಾಶಗಳ ಕಲ್ಪಿಸುತ್ತಿದೆ ಎಂಬುದಕ್ಕೆ, ಸರಕಾರದ ಜಾನುವಾರುಗಳ ಪೋಷಣೆಯ ದೃಷ್ಟಿಕೋನದಿಂದ ಪ್ರೇರಿತ ಎಐ ಆಧಾರಿತ ಯೋಜನೆ ಸರ್ಲಾಬೆನ್ ಸೂಕ್ತ ನಿದರ್ಶನವಾಗಿದೆ.

ನ್ಯೂನತೆ ನಿವಾರಣೆಗೆ ನೀಡಿದ ಕರೆಯಾಗಿದೆ: ವಿಶ್ವಸಂಸ್ಥೆ 2026ನ್ನು ಅಂತಾರಾಷ್ಟ್ರೀಯ ಮಹಿಳಾ ರೈತರ ವರ್ಷವೆಂದು ಘೋಷಿಸಿರುವುದು ಶ್ಲಾಘನೀಯ. ಇದು ಕೃಷಿ-ಆಹಾರ ರಂಗದಲ್ಲಿನ ಮಹಿಳಾ ರೈತರಿಗೆ ನಾಯಕತ್ವ ಪಾತ್ರವನ್ನೂ ನೀಡಬೇಕು ಮತ್ತು ಆಹಾರ-ಕೃಷಿ ಮೌಲ್ಯ ಸರಪಳಿಯಲ್ಲಿನ ಲಿಂಗಾಧಾರಿತ ನ್ಯೂನತೆ, ಅಂತರಗಳ ನಿವಾರಿಸಲು ನೀಡಿದ ಕರೆಯಾಗಿದೆ ಎಂದು ವಿಶ್ಲೇಷಿಸಿದರು.

ಜನ ಧನ್ ಖಾತೆಗಳಲ್ಲೂ ಮಹಿಳೆಯರ ಮೇಲುಗೈ: ವಿಶ್ವದ ಬೃಹತ್ ಕಾರ್ಯಕ್ರಮ ಖ್ಯಾತಿಯ ಜನ ಧನ್ ಯೋಜನೆಯಡಿ 570ಮಿಲಿಯನ್ ಖಾತೆಗಳು ತೆರೆಯಲ್ಪಟ್ಟಿವೆ ಮತ್ತು ಇದರಲ್ಲಿ ಶೇ.56ಖಾತೆದಾರರು ಮಹಿಳೆಯರು. ಮುದ್ರಾ ಸಾಲ ಫಲಾನುಭವಿಗಳಲ್ಲೂ ಶೇ.68ರಷ್ಟು ಮಹಿಳೆಯರಿದಾರೆ. ಭಾರತದ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯಗಳು ಬಹುಸಂಖ್ಯೆಯಲ್ಲಿ ಜನರನ್ನು ತಲುಪಿರುವುದನ್ನು ಇದು ಪ್ರತಿಫಲಿಸಿದೆ ಎಂದು ಹೆಮ್ಮೆ ವ್ಯಕ್ತಪಡಿಸಿದರು.

ಪ್ರಾಮಾಣಿಕತೆಯಿಂದ ಕಲಾಪ ನಿರ್ವಹಿಸಲಿದ್ದೇನೆ: ಸಭಾಪತಿ ಓಂ ಬಿರ್ಲಾ

ನಿಯಮಾನುಸಾರ ಲೋಕಸಭೆ ಕಾರ್ಯನಿರ್ವಹಣೆ

• ಹೊಸದಿಲ್ಲಿ: ಲೋಕಸಭೆಯ ಸಭಾಪತಿಪೀಠ ಯಾರೇ ಒಬ್ಬ ವ್ಯಕ್ತಿಗೆ ಸೇರಿದ್ದಲ್ಲ. ಇದು ಸದನದ ಘನತೆಯ ದ್ಯೋತಕವಾಗಿದೆ. ಸದನವು ನಿಯಮಗಳಿಗೆ ಅನುಸಾರ ಕಾರ್ಯ ನಿರ್ವಹಿಸುತ್ತದೆ. ಯಾರೇ ಸದಸ್ಯರಿಗೆ ತಮಗೆ ಬೇಕೆನಿಸಿದ ಸಮಯದಲ್ಲಿ ತಮಗೆ ಬೇಕಾದ ವಿಚಾರದಲ್ಲಿ ಸ್ವೇಚ್ಛೆಯಿಂದ ಮಾತನಾಡುವ ಹಕ್ಕಿಲ್ಲ ಎಂದು ಸಭಾಪತಿ ಓಂ ಬಿರ್ಲಾ ಹೇಳಿದ್ದಾರೆ. ಸಭಾಪತಿಗಳ ವಿರುದ್ಧ ವಿಪಕ್ಷೀಯರು ಮಂಡಿಸಿದ್ದ ಅವಿಶ್ವಾಸ ನಿರ್ಣಯ ತಿರಸ್ಕಾರಗೊಂಡ ಬೆನ್ನಲ್ಲೇ , ಸಭಾಪತಿಗಳು ಸಂಸತ್ತಿನ ನಿಯಮಾವಳಿಗಳನ್ನು ಸದಸ್ಯರಿಗೆ ಮತ್ತೆ ಸ್ಪಷ್ಟ ಮನವರಿಕೆ ಮಾಡಿದ್ದಾರೆ.

ನಿಯಮಗಳ ಮೀರಿ ಮಾತನಾಡುವ ಹಕ್ಕಿಲ್ಲ: ಯಾರೇ ಸದಸ್ಯರಿಗೆ ಇಷ್ಟವಾಗುತ್ತದೋ ಇಲ್ಲವೋ, ಲೋಕಸಭಾ ಕಲಾಪಗಳಂತು ಅಸ್ತಿತ್ವದಲ್ಲಿರೋ ನಿಯಮಗಳು ಹಾಗೂ ಕಾರ್ಯ ವಿಧಾನ ಪ್ರಕಾರವೇ ನಡೆಯುತ್ತದೆ. ತಾನು ಪ್ರಾಮಾಣಿಕತೆಯಿಂದ ನ್ಯಾಯೋಚಿತವಾಗಿ ಕಲಾಪಗಳ ನಿರ್ವಹಿಸಲಿದ್ದೇನೆ. ಈ ನಿಯಮಗಳ ಚೌಕಟ್ಟನ್ನು ಮೀರಿ ಮಾತನಾಡುವ ಹಕ್ಕನ್ನು



ಸದನದ ಯಾರೇ ಸದಸ್ಯರು ಹೊಂದಿಲ್ಲ ಎಂದು ಬಿರ್ಲಾ ಸದನದ ನಿಯಮಗಳ ಪಾವಿತ್ರ್ಯವನ್ನು ಎತ್ತಿಹಿಡಿದರು. ಆಳುವ ಪಕ್ಷೀಯರು ಮೇಜು ಬಡಿದು ಸಭಾಪತಿಗಳ ಹೇಳಿಕೆಯನ್ನು ಬೆಂಬಲಿಸಿದರು.

ಸಭಾಪತಿಗಳ ಸಮ್ಮತಿ ವಿನಾ ಮಾತನಾಡಲಾಗದು: ಎರಡು ದಿನಗಳ ಚರ್ಚೆ ಸಂದರ್ಭ ನನ್ನ ಮೇಲೆ ವಿಶ್ವಾಸವಿರಿಸಿದ ಸಮಸ್ತರಿಗೂ ತಾನು ಕೃತಜ್ಞನಾಗಿರುವೆ. ಹಾಗೆಯೇ ತನ್ನ ಪರವಾಗಿ ಹಾಗೂ ವಿರೋಧವಾಗಿ ಮಾತನಾಡಿದ ಎಲ್ಲರಿಗೂ ಕೃತಜ್ಞತೆಗಳು. ವಿಪಕ್ಷ ನಾಯಕ ರಾಹುಲ್ ಗಾಂಧಿಗೆ ಮಾತನಾಡಲು ಸಾಕಷ್ಟು ಅವಕಾಶ ನೀಡಿಲ್ಲ. ಅವರಿಗೆ ಯಾವುದೇ ಸಂದರ್ಭ ಯಾವುದೇ ವಿಷಯವಾಗಿ ಮಾತನಾಡಲು ಅವಕಾಶ ಕೊಡಬೇಕೆಂದು ಕೆಲವು ಸದಸ್ಯರು ಚರ್ಚೆ ಸಂದರ್ಭ ಆಗ್ರಹಿಸಿದ್ದರು ಎಂದು ಉಲ್ಲೇಖಿಸಿದ ಸಭಾಪತಿ ಬಿರ್ಲಾ, ಪ್ರತಿಯೋರ್ವ ಸದಸ್ಯರಿಗೂ ಸದನದಲ್ಲಿ ಮಾತನಾಡುವ ಹಕ್ಕಿದೆ ಖಂಡಿತ, ಆದರೂ ಯಾರೇ ಸದಸ್ಯರೂ ಸದನದ ನಿಯಮ, ನಿಬಂಧನೆಗಳಿಗೆ ಬದ್ಧವಾಗಿ ಮಾತನಾಡಬೇಕು. ದೇಶದ ಪ್ರಧಾನಿ ಅಥವಾ ಯಾವುದೇ ಸಚಿವರ ಸಹಿತ ಯಾರೇ ಸದಸ್ಯರು ಸಭಾಪತಿಗಳ ಸಮ್ಮತಿ ಪಡೆಯದೆ ಮಾತನಾಡುವ ಹಾಗಿಲ್ಲ. ಸದನದ ಯಾರೇ ಸದಸ್ಯರಿಗೂ ತಮಗೆ ಬೇಕಾದ ಸಮಯದಲ್ಲಿ ಬೇಕಾದ ವಿಚಾರವಾಗಿ ಸ್ವೇಚ್ಛೆಯಿಂದ ಮಾತನಾಡುವ ಹಕ್ಕಿಲ್ಲ. ಸಭಾಪತಿಗಳು ಅವಕಾಶ ಕೊಟ್ಟಾಗಲೇ ಮಾತನಾಡಬಹುದು. ಸದನದಲ್ಲಿ ಭಾಷಣ ಮಾಡಲು ಸಂಸದರಿಗೆ ಸ್ವಾತಂತ್ರ್ಯವಿದೆ ಖಂಡಿತ, ಆದರೆ ನಿಯಮಗಳಿಗೆ ಬದ್ಧವಾಗೇ ಮಾತನಾಡಬೇಕು ಎಂದು ಪುನರುಚ್ಚರಿಸಿದರು.

ಇಂದಿನ ಉತ್ಪನ್ನವಾರು ದರ — ಹುಬ್ಬಳ್ಳಿ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಅಲಸಂದೆ ಕಾಳು	1225	5000
ಕಡಲೆಕಾಳು	1889	5284
ಉದ್ದಿನಬೇಳೆ	9310	9350
ಉದ್ದಿನಕಾಳು	4969	6325
ಚಪ್ಪರದವರೆ	1319	6531
ತೆಂಗಿನಕಾಯಿ	20000	20000
ಧನಿಯಾ	8925	11915
ಒಣ ಮೆಣಸಿನಕಾಯಿ	39000	39000
ಹೆಸರುಬೇಳೆ	9000	9025
ಬಟಾಣಿ	5650	6050
ಹೆಸರುಕಾಳು	570	6321
ನೆಲಗಡಲೆ (ಶೇಂಗಾ)	5561	7276
ಹುರುಳಿ ಕಾಳು	3214	3214
ಬೆಲ್ಲ	5100	5100
ಜೋಳ	1110	3775
ಮೆಕ್ಕೆಜೋಳ	1450	1775
ಮಡಿಕೆ (ಮಟಕಿ)	5555	13321
ಸಾಸುವೆ	5321	5506
ಈರುಳ್ಳಿ	500	2200
ಆಲೂಗಡ್ಡೆ	1200	1700
ಅಕ್ಕಿ	5467	8200
ಸಾಮೆ/ಸಾವಿ	4186	4186
ಸೋಯಾಬಿನ್	4610	5511
ಸೂರ್ಯ ಕಾಂತಿ	5001	5056
ತೊಗರಿ	2300	3500
ತೊಗರಿ ಬೇಳೆ	6800	11501
ಗೋಧಿ	1700	4386

ಜೆ,ಎಂ,ಎಫ್,ಸಿ. ಮತ್ತು ಸಿವ್ಹಿಲ್ ಜಡ್ಜ ಶಿಗ್ಗಾಂವ ಇವರ ನ್ಯಾಯಾಲಯಕ್ಕೆ ಸಾ॥ ಶಿಗ್ಗಾಂವ
ಕ್ರಿಮಿನಲ್ ಮಿಸ್ ನಂ: 68/2026

ಅರ್ಜಿದಾರರು : 1) ಶ್ರೀ ಶಂಕರ ತಂದೆ ಚನ್ನಪ್ಪ ಬಳಿಗಾರ

ವಿರುದ್ಧ

ಎದುರುಗಾರರು : 1) ಮೆ॥ ತಹಶೀಲ್ದಾರ ಶಿಗ್ಗಾಂವ

ಪತ್ರಿಕಾ ಪ್ರಕಟಣೆ

ಇದರಲ್ಲಿ ಚನ್ನಪ್ಪ ತಂದೆ ಚನ್ನಬಸಪ್ಪ ಬಳಿಗಾರ ಇವರು ದಿನಾಂಕ: 11/02/2020 ಶಿಗ್ಗಾಂವ ತಾಲೂಕ ಅಂದಲಗಿ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ, ಹಾಗೂ ಆ ಕುರಿತು ಮರಣ ಪ್ರಮಾಣ ಪತ್ರ ಪಡೆಯುವ ಸಲುವಾಗಿ ಸದರಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು ಇದ್ದು ಆ ಕುರಿತು ಈ ನ್ಯಾಯಾಲಯದವರು ದಿನಾಂಕ: 28-04-2026 ರಂದು ಮುದ್ದತ್ತು ನೇಮಿಸಿದ್ದು ಇದ್ದು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರಾದರೂ ಆಸಕ್ತಿಯುಳ್ಳವರು ಮೇಲಿನ ದಿನಾಂಕದಂದು ಈ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಕರಾರು ವಗೈರೆ ಇದ್ದರೆ ಸಲ್ಲಿಸತಕ್ಕದ್ದು ತಪ್ಪಿದಲ್ಲಿ ಏಕತರ್ಫಿಯಾಗಿ ಮುಂದಿನ ಆದೇಶ ಮಾಡಲಾಗುವುದು ಅಂತಾ ಕೊಟ್ಟ ಪತ್ರಿಕಾ ಪ್ರಕಟಣೆ.
ನ್ಯಾಯಾಲಯದ ಆದೇಶ ಹಾಗೂ ಮೊಹರನೊಂದಿಗೆ ಹೊರಡಿಸಲಾಗಿತು.

ಶಿಗ್ಗಾಂವ
ದಿನಾಂಕ: 11-03-2026

ಶಿರಸ್ತೇದಾರ
ಜೆ.ಎಮ್.ಎಫ್.ಸಿ. ನ್ಯಾಯಾಲಯ ಶಿಗ್ಗಾಂವ್
ಅರ್ಜಿದಾರರ ಪರ ವಕೀಲರು
ಶ್ರೀಮತಿ ಕೆ.ಎನ್.ಭಾರತಿ ವಕೀಲರು, ಶಿಗ್ಗಾಂವ

ಕ್ರಿಮಿನಲ್ ಮಿಸ್ಕಲೇನಿಯಸ್ , ನಂ. 721/2025
ಮಾ॥ ಪ್ರಧಾನ ದಿವಾಣಿ ನ್ಯಾಯಾಧೀಶರ ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ ಬಾಗಲಕೋಟ ಇವರ ನ್ಯಾಯಾಲಯದಲ್ಲಿ,

ಅರ್ಜಿದಾರರು :1. ಹನಮಂತ ತಂ.ಯಲ್ಲಪ್ಪ ಕಮತಗಿ ಹಾಗೂ ಇತರರು.

ವಿರುದ್ಧ

ಎದುರುದಾರರು :1. ಮೇ॥ ತಹಶೀಲ್ದಾರರು.(ಜನನ ಮತ್ತು ಮರಣ ನೋಂದಣಾಧಿಕಾರಿಗಳು) ನವನಗರ, ಬಾಗಲಕೋಟ

ಸಾರ್ವಜನಿಕ ಜಾಹೀರಾತು ಪ್ರಕಟಣೆ
ಆರ್ಡರ್ ಕ್ರಮಾದೇಶ 5 ನಿಯಮ 20(ಎ) ಸಿ.ಪಿ.ಸಿ. ಅಡಿಯಲ್ಲಿ
ಕೋರ್ಟ ಸಮನ್ಸ

ಸದರ ಪ್ರಕರಣದಲ್ಲಿ ಅರ್ಜಿದಾರರು ಎದುರುದಾರರ ವಿರುದ್ಧ ಅರ್ಜಿದಾರ ನಂ.1ರ ಹೆಂಡತಿಯಾದ ಹಾಗೂ ಅರ್ಜಿದಾರ ನಂ.2-4ರ ತಾಯಿಯಾದ ಶ್ರೀಮತಿ ರುಕ್ಮಿಣಿ ಗಂ/ ಹನಮಂತ ಕಮತಗಿ ಇವರು ದಿನಾಂಕ 13-02-2010 ರಂದು ಬಾಗಲಕೋಟ ತಾಲೂಕಾ ಪೈಕಿ ಚಿಕ್ಕಶೆಲ್ಲಿಕೇರಿ ಗ್ರಾಮದಲ್ಲಿ ಇರುವ ತಮ್ಮ ವಾಸದ ಮನೆಯಲ್ಲಿ ಮೃತವಾಗಿದ್ದು ಇದರ ಬಗ್ಗೆ ಮೇ॥ನ್ಯಾಯಲಯದಿಂದ ಎದುರುದಾರರಿಗೆ ಮರಣ ವಿವರವನ್ನು ಮರಣ ರಜಿಸ್ಟರದಲ್ಲಿ ದಾಖಲು ಮಾಡಿಕೊಳ್ಳಲು ಮೇ॥ ನ್ಯಾಯಾಲಯದಿಂದ ಎದುರುದಾರರಿಗೆ ನಿರ್ದೇಶನ ನೀಡುವ ಕುರಿತು ಸದರಿ ಅರ್ಜಿಯನ್ನು ಮಾಡಿರುತ್ತಾರೆ. ಆದರೆ ಸದರಿ ಪ್ರಕರಣದಲ್ಲಿ ಮೃತಳ ಹಿತಾಸಕ್ತಿ ಉಳ್ಳವರು ಇದ್ದಲ್ಲಿ ದಿನಾಂಕ: 7/4/2026 ರಂದು ಮಾ॥ ಪ್ರಧಾನ ದಿವಾಣಿ ನ್ಯಾಯಾಧೀಶರ ಹಾಗೂ ಜೆ ಎಮ್ ಎಫ್ ಸಿ ನ್ಯಾಯಾಲಯ ಬಾಗಲಕೋಟ, ಇವರ ನ್ಯಾಯಾಲಯದ ಮುಂದೆ ಹಾಜರಿದ್ದು ತಮ್ಮ ತಕರಾರನ್ನು ಸಲ್ಲಿಸತಕ್ಕದ್ದು, ಅದಕ್ಕೆ ತಪ್ಪಿದ್ದಲ್ಲಿ ಯಾರದೂ ಏನು ತಕರಾರು ಇರುವುದಿಲ್ಲ ಅಂತಾ ಪರಿಗಣಿಸಿ ಮೇ॥ ರವರು ಮುಂದಿನ ವಿಚಾರಣೆಯನ್ನು ಕೈಗೊಳ್ಳುತ್ತಾರೆ, ಅಂತಾ ನೀಡಿದ ಸಾರ್ವಜನಿಕ ನೋಟಿಸು.
ಸದರಿ ನೋಟೀಸ್ ಅನ್ನು ಇವತ್ತು ದಿನಾಂಕ : 11/3/2026 ರಂದು ಮೆ॥ ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ಕೊಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೇದಾರರು
ಮಾ॥ ಪ್ರಧಾನ ದಿವಾಣಿ ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ ಬಾಗಲಕೋಟ
ಸಹಿ/- S. R. Meti
ಅರ್ಜಿದಾರರ ಪರ ವಕೀಲರು

IN THE COURT OF THE SENIOR CIVIL JUDGE AT SIRUGUPPA

EP NO: 349 OF 2023 (OS No. 217 of 2019)

BETWEEN:Sri. S Mohammed Hussian & others.....Decree Holders

AND

Mrs.Mahabuni &others ...Judgment Debtors

To.

Judgment Debtor No.19(a). Mohammed Hanif S/O Sheksha vali, Aged about 45 years. Occ. Private Service. R/o Karkhanna pet, Adoni Town, Karnool District, A.P. Judgment Debtor No.19(b). Chand Basha S/o Sheksha vali, Aged about 40 years. Occ. Private Service, R/o Karkhanna pet, Adoni Town, Karnool District, A.P.Judgment Debtor No.19(c). Sharif S/o Sheksha vali, Aged about 38 years. Occ. Private Service, R/o Karkhanna pet, Adoni Town, Karnool District, A.P. Judgment Debtor No.19(d). Farooq S/o Sheksha vali, Aged about 45 years. Occ. Private Service, R/o Karkhanna pet, Adoni Town, Karnool District, A.P.

Judgment Debtor No.20(a). Mrs. Ghous Maa W/o Baig, aged about 40 years, Occ, R/o Karkhanna pet, Adoni Town, Karnool District, A.P.

Judgment Debtor No.21. Mrs.Jaibun bi W/o Allabaksh, aged about 46 years, Occ, House Wife, R/o Gokhar Jhanda, Adoni, Town, Karnool, Andrapradesh.

Judgment Debtor No.22. Mr.Syed Hussain S/o Syed Mohammed Hussain, aged about 55 years, Occ, Private work, R/o NGO Colony, 1st ward, Barpet, Adoni Town, Karnool District, A.P.

Judgment Debtor No.23. Syed Rasool Sab S/o Syed Mohammed Hussain, aged about 48 years, Occ, Private work, R/o NGO Colony, 1st ward, Barpet, Adoni Town, Karnool dist, A.P.

Judgment Debtor No.24. Mr. Nazeer Ahamed S/o Mohammed Hussain, aged about 46 years, Occ, Private work, R/o NGO Colony, 1st ward, Barpet, Adoni Town, Karnool dist, A.P.

Judgment Debtor No.25. Mr. Moiniuddin S/o Syed Mohammed Hussain, aged about 44 years, Occ, Private work, R/o NGO Colony, 1st ward, Barpet, Adoni Town, Karnool dist, A.P.

Judgment Debtor No.26. Mr. Khasim S/o Syed Mohammed Hussain, aged about 44 years, Occ, Private work, R/o NGO Colony, 1st ward, Barpet, Adoni Town, Karnool dist, A.P.

: NOTICE:

WHEREAS, the above named plaintiff has filed the above suit against you and another defendant seeking for declaration and transfer of mutation in respect to plaint schedule property.

You are hereby summoned to appear before this Hon'ble court in person or by pleader duly instructed and able to answer all material questions relating to the suit or who shall be instructed and able to answer all such question on the day of 18/04/2026, at about 11:00 "O" clock in the forenoon to answer the claim and further you are hereby directed to file on that day your objections and to produce on the said day all documents in your possession or power upon which, you base your defence or claim for set off or counter claim in support of your defence.

Given under my hand and seal of the court on this 27th February 2026.

By order of the Court
Chief Ministerial officer,
Senoir Civil Judge, Siruguppa Ballari district, Karnataka st.

Mohammed Abra
Advocate for plaintiff

ಕ್ರಿಮಿನಲ್ ಮಿಸಲೇನಿಯಸ್ ನಂ. 91/2025
ಮಾನ್ಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಕಿತ್ತೂರ ಇವರ ನ್ಯಾಯಾಲಯದಲ್ಲಿ

1) ಶ್ರೀ ಮಹ್ಮದಉಮರ ತಂದೆ ಫಕ್ರುದ್ದೀನ ಹವಾಲ್ದಾರ, --ಅರ್ಜಿದಾರರು

ವಿರುದ್ಧ

1) ಮೇ॥ ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯತ ಚ.ಕಿತ್ತೂರ --ಎದುರುಗಾರರು

ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20ರ ಮೇರೆಗೆ ನೋಟಿಸು

ಪ್ರಸ್ತುತ ಪ್ರಕರಣದಲ್ಲಿ ಅರ್ಜಿದಾರರ ಪರ ವಕೀಲರು ಕೊಡುವ ಸಾರ್ವಜನಿಕ ಪ್ರಕಟಣೆ ಏನೆಂದರೆ, ಅರ್ಜಿದಾರನು ಮಾನ್ಯ ನ್ಯಾಯಾಲಯದಲ್ಲಿ ಪ್ರಸ್ತುತ ಪ್ರಕರಣವನ್ನು ದಾಖಲ ಮಾಡಿಕೊಂಡು ಅರ್ಜಿದಾರನ ತಾಯಿಯಾದ ಶ್ರೀಮತಿ ಜೈಬುನಬಿ ಕೋಂ ಫಕ್ರುದ್ದೀನ ಹವಾಲ್ದಾರ ಇವರು ದಿ: 17/06/2016 ರಂದು ಕಿತ್ತೂರ ತಾಲೂಕಿನ ಕಿತ್ತೂರ ಪಟ್ಟಣದಲ್ಲಿ ಮೃತರಾಗಿರುತ್ತಾರೆ. ಕಾರಣ ಅರ್ಜಿದಾರನು ಮೃತರ ಮರಣ ಪ್ರಮಾಣ ಪತ್ರವನ್ನು ಪೂರೈಸುವ ಸಲುವಾಗಿ ಈ ಅರ್ಜಿಯನ್ನು ಮಾಡಿಕೊಂಡಿದ್ದು, ಸದರಿ ಮೃತರ ಮರಣದ ಬಗ್ಗೆ ಎದುರುಗಾರರ ಮರಣ ರಜಿಸ್ಟರದಲ್ಲಿ ದಾಖಲಿಸಿಕೊಳ್ಳುವ ಕುರಿತು ಕನ್ನಡ ದಿನಪತ್ರಿಕೆಯಲ್ಲಿ ಸಾರ್ವಜನಿಕ ಪ್ರಕಟಣೆ ಮಾಡುವುದಕ್ಕೆ ಪ್ರಸ್ತುತ ಅರ್ಜಿಯನ್ನು ದಾಖಲಮಾಡಿಕೊಂಡಿರುತ್ತಾನೆ.

ಈ ಸದರಿ ಪ್ರಕರಣವು ಮಾನ್ಯ ನ್ಯಾಯಾಲಯದ ಮುಂದೆ ದಿನಾಂಕ 18/03/2026 ರಂದು ನಿಗದಿಯಾಗಿರುತ್ತದೆ. ಕಾರಣ ಸದರಿ ಪ್ರಸ್ತುತ ಪ್ರಕರಣದಲ್ಲಿ ಯಾರಾದರೂ ಹಿತಾಸಕ್ತಿಯುಳ್ಳ ವ್ಯಕ್ತಿಗಳು ಇದ್ದರೆ ದಿನಾಂಕ 18/03/26 ರಂದು ಮುಂಜಾನೆ 11.00 ಕ್ಕೆ ಮಾನ್ಯ ನ್ಯಾಯಾಲಯದ ಮುಂದೆ ಸ್ವತಃ ಆಗಲೀ ಅಥವಾ ತಮ್ಮ ನ್ಯಾಯವಾದಿಗಳ ಮುಖಾಂತರ ಆಗಲಿ ಹಾಜರಾಗಬೇಕು. ಇಲ್ಲದಿದ್ದರೆ ಅರ್ಜಿದಾರರ ಮಾಗಣಿಯ ಪ್ರಕಾರ ಪ್ರಸ್ತುತ ಅರ್ಜಿಯನ್ನು ಕಾನೂನು ರೀತ್ಯ ನಿರ್ಣಯಿಸಲಾಗುವದು.. ಅಂತಾ ಕೊಟ್ಟ ಸಾರ್ವಜನಿಕ ನೋಟಿಸ್.

ಈ ದಿನಾಂಕ:21/02/2026 ರಂದು ನ್ಯಾಯಾಲಯದ ಮುದ್ರೆ ಮತ್ತು ನನ್ನ ಸಹಿಯೊಂದಿಗೆ ನೀಡಲಾಯಿತು.

ಸ್ಥಳ: ಕಿತ್ತೂರ ದಿನಾಂಕ: 21/02/2026
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- (ಜೆ.ಎಮ್.ಕಂಬಾರ)
ಶಿರಸ್ತೆದಾರ ಮಾನ್ಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಕಿತ್ತೂರು
ಸಹಿ/- (ಆರ್.ಎಮ್.ಜವಳಿ)
(ಬೆಂಚ್ ಕ್ಲರ್ಕ)
ಸಹಿ/- ಎಮ್.ಎಸ್.ಸಾಣಿಕೊಪ್ಪ
(ಅರ್ಜಿದಾರ ಪರ ವಕೀಲರು)

ಕರ್ನಾಟಕ ತಂಡ ರನ್ನರ್ ಅಫ್



•**ಲೋಕಾಪುರ:** ಪ್ಯಾರಾ ವಾಲಿಬಾಲ್ ಫೆಡರೇಶನ್ ಆಫ್ ಇಂಡಿಯಾ ಹಾಗೂ ಪ್ಯಾರಾ ಒಲಿಪಿಂಕ್ ಕಮಿಟಿ ಆಫ್ ಇಂಡಿಯಾ ಮೀರತ್ ವಿಶ್ವವಿದ್ಯಾಲಯದಲ್ಲಿ ನಡೆಸಿದ 4 ದಿನಗಳ 14ನೇ ಹಿರಿಯ ಪುರುಷ ಮತ್ತು ಮಹಿಳೆಯರ ಪ್ಯಾರಾ ಸಿಟ್ಟಿಂಗ್ ವಾಲಿಬಾಲ್ ನ್ಯಾಷನಲ್ ಚಾಂಪಿಯನ್‌ಶಿಪ್‌ನ ಆಂಧ್ರಪ್ರದೇಶ ವಿರುದ್ದದ ಫೈನಲ್‌ನಲ್ಲಿ ಕರ್ನಾಟಕ ವಿಶೇಷ ಚೇತನರ ವಾಲಿಬಾಲ್ ತಂಡವನ್ನು ಪಟ್ಟಣದ ಪ್ರತಿಭೆ ಲೋಕಣ್ಣ ಪರಣ್ಣವರ ಪ್ರತಿನಿಧಿಸಿದರು. ಕರ್ನಾಟಕ ತಂಡ ರನ್ನರ್ ಅಫ್ ಸ್ಥಾನ ಪಡೆದುಕೊಂಡು ಬೆಳ್ಳಿ ಪದಕ ಪಡೆದಿದೆ.

ರಸ್ತೆ ಅಪಘಾತ: ಅಜ್ಜ, ಮೊಮ್ಮಗಳ ಸಾವು

•**ಕೂಡ್ಲಿಗಿ:** ಲಾರಿ ಹರಿದು ಅಜ್ಜ, ಮೊಮ್ಮಗಳು ಮೃತಪಟ್ಟ ಘಟನೆ ತಾಲೂಕಿನ ಕ್ಯಾಸನಕೆರೆ ಬಳಿ ರಾಷ್ಟ್ರೀಯ ಹೆದ್ದಾರಿ-50ರಲ್ಲಿ ಗುರುವಾರ ಮಧ್ಯಾಹ್ನ ನಡೆದಿದೆ.

ಈಶ್ವರಪ್ಪ (55) ಹಾಗೂ ಅವರ ಮೊಮ್ಮಗಳು ಸೃಷ್ಟಿ (14) ಮೃತರು. ತಾಲೂಕಿನ ಕೆಳಗಿನ ಕರ್ನಾರ್ ಹಟ್ಟಿ ಗ್ರಾಮದ ಸೃಷ್ಟಿ ಕೂಡ್ಲಿಗಿ ಪಟ್ಟಣದಲ್ಲಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ 8ನೇ ತರಗತಿ ಓದುತ್ತಿದ್ದಳು. ಗುರುವಾರ ವಾರ್ಷಿಕ ಪರೀಕ್ಷೆ ಮುಗಿದ ಕಾರಣ ಈಶ್ವರಪ್ಪ ಅವರು ಸೃಷ್ಟಿಯನ್ನು ಬೈಕ್‌ನಲ್ಲಿ ಕರೆದುಕೊಂಡು ತಮ್ಮ ಸ್ವಗ್ರಾಮಕ್ಕೆ ಹೊರಟಿದ್ದರು.

ಕ್ಯಾಶನಕೆರೆ ಬಳಿ ಬೈಕ್ ಬಂದಾಗ ಹೆದ್ದಾರಿಯಲ್ಲಿ ಹಾಕಿದ್ದ ರಾಗಿ ಮೇಲೆ ಬೈಕ್ ಹೋದಾಗ ಬೈಕ್ ನಿಯಂತ್ರಣ ತಪ್ಪಿ ಹೆದ್ದಾರಿಗೆ ಉರುಳಿ ಬಿದ್ದಿದೆ. ಇದೇ ವೇಳೆ ಹಿಂದಿನಿಂದ ಬಂದ ಲಾರಿ ಇಬ್ಬರ ಮೇಲೆ ಹರಿದಿದೆ. ಇದರಿಂದ ತೀವ್ರವಾಗಿ ಗಾಯಗೊಂಡ ಅಜ್ಜ ಮೊಮ್ಮಗಳು ಸ್ಥಳದಲ್ಲೇ ಮೃತಪಟ್ಟರು ಎಂದು ಪೊಲೀಸರು ತಿಳಿಸಿದ್ದಾರೆ. ಈ ಕುರಿತು ಕುಡ್ಲಿಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

CHANGE OF NAME

I, **BI BI AYEESHA SIDDIQA (Old Name)** R/o # 1st Cross, Kulkarni Hakkal, Hubli, Dist : Dharwad, Karnataka-580020 have changed my name to **BI BI AYESHA SHAIKH (New Name)** Vide Affidavit Sworn Before Notary Patil V.H. on 12-03-2026

CHANGE OF NAME

I, **SAYEED AHMED BEEDIWALE (Old Name)** R/o # Ganeshpeth, Mukkeri Oni, Hubli, Dist ; Dharwad, Karnataka-580020 have changed my name to **SAYEED AHMED BIDIWALE (New Name)** Vide Affidavit Sworn Before Notary Patil V.H. on 12-03-2026

ಕೃಷಿ ಮಾರಾಟ ಇಲಾಖೆ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ತಾಳಿಕೋಟೆ

ಕ್ರ.ಸಂ:ಕೃಮಾಇ/ಕೃಉಮಾಸ/ತಾ/ಅಬಿವಿ/497/2025-26 ದಿನಾಂಕ:07.03.2026

ಇ-ಟೆಂಡರ್ ಪ್ರಕಟಣೆ

ಕಾಮಗಾರಿಯ ಹೆಸರು: ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ತಾಳಿಕೋಟೆ ವತಿಯಿಂದ 2025-26 ನೇ ಸಾಲಿನ RIDF-31 ಯೋಜನೆಯಡಿಯಲ್ಲಿ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಸಿ.ಸಿ. ರಸ್ತೆ ಮತ್ತು ಚರಂಡಿ ನಿರ್ಮಿಸುವ ಕಾಮಗಾರಿ.

ಟೆಂಡರಗಿಟ್ಟ ಮೊತ್ತ ರೂ. 4,15,53,781/- (GST ಪ್ರತ್ಯೇಕ)
ಇಎಂಡಿ ಮೊತ್ತ ರೂ. 6,24,000/-

ಮೇಲ್ಕಂಡಂತೆ 2025-26 ನೇ ಸಾಲಿನ RIDF-31 ಯೋಜನೆಯಡಿಯಲ್ಲಿ ಅಭಿವೃದ್ಧಿ ಕಾಮಗಾರಿಯನ್ನು (E-Portal) ಮೂಲಕ ಟೆಂಡರ ಹೊರಡಿಸಲಾಗಿದ್ದು, ಭರ್ತಿ ಮಾಡಿದ ಟೆಂಡರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:15.04.2026 ರ ಸಾಯಂಕಾಲ 5.30 ಗಂಟೆಗೆ ನಿಗಧಿಪಡಿಸಿದ್ದು, ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಹಾಗೂ https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/- ಕಾರ್ಯದರ್ಶಿ, ಕೃಉಮಾಸ, ತಾಳಿಕೋಟೆ
ಸಹಿ/- ಆಡಳಿತಾಧಿಕಾರಿಗಳು, ಕೃಉಮಾಸ, ತಾಳಿಕೋಟೆ

ವಾಸಾಸಂಇ/ವಿಜಯಪುರ/794/ಕೆಎಸ್‌ಎಂಸಿಎ/2025-26

CHANGE OF NAME

I, **PREETI HABIB (OLD NAME)** Before Marriage, and I, R/O. Belagavi-590006, have changed my name as **PREETI MAHESH CHOUDHARI (NEW NAME)** After Marriage. Henceforth I will be called and recognised by my **NEW NAME** for all Purposes, Vide Affidavit Sworn Before Notary V.H.Patil at Hubballi on 11/03/2026

CHANGE OF NAME

I, **MEHRUNNISA ABDUR RAHMAN BELHARI (Old Name)** R/o # Kulakarni Hakkala, Near Madani Masjid, Hubli, Dist ; Dharwad, Karnataka-580020 have changed my name to **MAHARUNNISA BALLARI (New Name)** Vide Affidavit Sworn Before Notary Patil V.H. on 12-03-2026

ಕರ್ನಾಟಕ ಸರ್ಕಾರ
ಜಿಲ್ಲಾ ಅಂಧತ್ವ ನಿವಾರಣ ಕಾರ್ಯಕ್ರಮಾಧಿಕಾರಿಗಳ ಕಾರ್ಯಾಲಯ, ವಿಜಯನಗರ. Telephone: 9449842086
E-mail: dlovijayanagara@gmail.com

ಸಂಖ್ಯೆ:ಜಿಅನಿಕಾ/ವಿ.ನ/249/2025-26 ದಿನಾಂಕ:11.03.2026

ಇ-ಟೆಂಡರ್ ಪ್ರಕಟಣೆ

ಜಿಲ್ಲಾ ಅಂದತ್ವ ನಿಯಂತ್ರಣ ಅಧಿಕಾರಿಗಳ ಕಛೇರಿ ವಿಜಯನಗರ ಇದರ ಅಧಿನದ ವಿಜಯನಗರ ಜಿಲ್ಲೆಯ ಹಡಗಲಿ ತಾಲೂಕು ಆಸ್ಪತ್ರೆಯ ನೇತ್ರಾಚಿಕಿತ್ಸಾ ವಿಭಾಗಕ್ಕೆ ಅವಶ್ಯವಿರುವ ವಿವಿದ ವೈದ್ಯಕೀಯ ಉಪಕರಣಗಳನ್ನು 2025-26 ನೇ ಸಾಲಿನ ಎನ್.ಹೆಚ್.ಎಮ್ ಅನುದಾನದಡಿಯಲ್ಲಿ ಸರಬರಾಜು ಮಾಡಲು ಇ-ಸಂಗ್ರಹಣ ಕೋಶದ ವೆಬ್‌ಸೈಟ್ (https://kppp.karnataka.gov.in) ಮೂಲಕ ದ್ವಿ-ಲಕೋಟೆ ಪದ್ದತಿಯಲ್ಲಿ ಇ-ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ಟೆಂಡರ್ ದಾರರು ದಿನಾಂಕ:11-03-2026 ರಿಂದ ದಿನಾಂಕ:26-03-2026 ರ ಸಮಯ ಸಾಯಂಕಾಲ 05:00 ಗಂಟೆಯವರೆಗೆ ಟೆಂಡರನ್ನು ಅಪ್‌ಲೋಡ್ ಮಾಡಬಹುದಾಗಿದೆ. (ಟೆಂಡರ್ ಮೊತ್ತ ರೂ.8.50ಲಕ್ಷ)

ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ: 9449842086 ಕಛೇರಿ ಅವಧಿಯಲ್ಲಿ ಸಂಪರ್ಕಿಸಬಹುದಾಗಿದೆ ಅಥವಾ ಮುದ್ದಾಂ ಪಡೆಯಬಹುದಾಗಿದೆ.

ಸಹಿ/-ಜಿಲ್ಲಾ ಅಂಧತ್ವ ನಿವಾರಣಾ
ಕಾರ್ಯಕ್ರಮಾಧಿಕಾರಿಗಳ ಕಾರ್ಯಾಲಯ, ವಿಜಯನಗರ

ವಾ.ಸಾ.ಸಂ.ಇ/ವಿಜಯನಗರ/2025-26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/586

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ಸರಕಾರ
ತಾಲೂಕಾ ಆರೋಗ್ಯಾಧಿಕಾರಿಗಳ ಕಾರ್ಯಾಲಯ ಬೆಳಗಾವಿ, ಜಿ:ಬೆಳಗಾವಿ-590006
ದೂರವಾಣಿ ಸಂಖ್ಯೆ:0831-2482778 E-mail:thobelagavi2024@gmail.com

ಕ್ರ.ಸಂ: ತಾಆಕ/ಬೆ/ಟೆಂಡರ/ 942 /2025-26 ದಿನಾಂಕ: 11.03.2026.

ಅಲ್ಪಾವಧಿ Manual- ಟೆಂಡರ್ ಪ್ರಕಟಣೆ

ತಾಲೂಕಾ ಆರೋಗ್ಯಾಧಿಕಾರಿಗಳ ಕಾರ್ಯಾಲಯ ಬೆಳಗಾವಿ ಅಧೀನದ ಆಸ್ಪತ್ರೆಗಳಿಗೆ ಅವಶ್ಯವಿರುವ ಈ ಕೆಳಗಿನಂತೆ ಔಷಧಿಗಳ ಸಂಗ್ರಹಣೆಗಾಗಿ ದ್ವಿ- ಲಕೋಟೆ ಪದ್ಧತಿಯಲ್ಲಿ ಮ್ಯಾನುವೆಲ್ ಟೆಂಡರ್ ಆಹ್ವಾನಿಸಲಾಗಿದೆ. ಆಹ್ವಾನಿಸಲಾದ ಟೆಂಡರಗಳ ದಾಸ್ತಾವೇಜುಗಳು ಮತ್ತು ಟೆಂಡರ್ ತಾಂತ್ರಿಕ ವೈಶಿಷ್ಟ್ಯಗಳ ವಿವರಗಳುಳ್ಳ ಪುಸ್ತಕವನ್ನು ಈ ಕಚೇರಿ ವೇಳೆಯಲ್ಲಿ ಪ್ರತಿ ಟೆಂಡರ್ ಫಾರ್ಮಗೆ ರೂ. 500.00 ಶುಲ್ಕ ಪಾವತಿಸುವ ಮೂಲಕ ದಿ:12.03.2026 ರಿಂದ ಪಡೆಯಬಹುದು.

ಅ. ನಂ	ಟೆಂಡರ್ ಪ್ರಕಟಣೆ ಸಂ	ಸಂಗ್ರಹಣೆಗಾಗಿ ಅಪೇಕ್ಷಿತ ಔಷಧಿಗಳ ವಿವರ	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂಗಳಲ್ಲಿ)	ಭರ್ತಿ ಮಾಡಿದ ಟೆಂಡರ ಫಾರ್ಮಗಳನ್ನು ಸಲ್ಲಿಸಲು ಕೊನೆಯ ದಿನಾಂಕ
01	ಕ್ರ.ಸಂ:ತಾಆ/ಬೆ/942/2025-26	PHC DRUGS	4.95 ಲಕ್ಷ	12375.00	18.03.2026
02	ಕ್ರ.ಸಂ:ತಾಆ/ಬೆ/943/2025-26	PHC DRUGS	4.965 ಲಕ್ಷ	12375.00	18.03.2026
03	ಕ್ರ.ಸಂ:ತಾಆ/ಬೆ/944/2025-26	PHC DRUGS	4.97 ಲಕ್ಷ	12375.00	18.03.2026
04	ಕ್ರ.ಸಂ:ತಾಆ/ಬೆ/945/2025-26	PHC DRUGS	4.975 ಲಕ್ಷ	12375.00	18.03.2026

ಭರ್ತಿ ಮಾಡಿದ ಟೆಂಡರ ಫಾರ್ಮಗಳನ್ನು ನಿಗದಿಪಡಿಸಿದ ದಿನಾಂಕ ಮತ್ತು ಸಮಯದ ಒಳಗಾಗಿ ಈ ಕಚೇರಿಗೆ ಖುದ್ದಾಗಿ ಶೀಲು ಮಾಡಿದ ಲಕೋಟೆಯಲ್ಲಿ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳನ್ನು ತಾಲೂಕಾ ಆರೋಗ್ಯಾಧಿಕಾರಿಗಳ ಕಾರ್ಯಾಲಯ ಬೆಳಗಾವಿ ಇವರಲ್ಲಿ ಕೆಲಸದ ದಿನಗಳಂದು ಮಾಹಿತಿ ಪಡೆಯಬಹುದು.

ತಾಲೂಕಾ ಆರೋಗ್ಯಾಧಿಕಾರಿಗಳು
ಬೆಳಗಾವಿ

ಕರ್ನಾಟಕ ಸರಕಾರ
ತಾಲೂಕಾ ಆರೋಗ್ಯಾಧಿಕಾರಿಗಳ ಕಾರ್ಯಾಲಯ ಬೆಳಗಾವಿ, ಜಿ:ಬೆಳಗಾವಿ-590006
ದೂರವಾಣಿ ಸಂಖ್ಯೆ:0831-2482778 E-mail:thobelagavi2024@gmail.com

ಕ್ರ.ಸಂ: ತಾಆಕ/ಬೆ/ಟೆಂಡರ/ 946 /2025-26 ದಿನಾಂಕ: 11.03.2026.

ಅಲ್ಪಾವಧಿ Manual- ಟೆಂಡರ್ ಪ್ರಕಟಣೆ

ತಾಲೂಕಾ ಆರೋಗ್ಯಾಧಿಕಾರಿಗಳ ಕಾರ್ಯಾಲಯ ಬೆಳಗಾವಿ ಅಧೀನದ ಆಸ್ಪತ್ರೆಗಳಿಗೆ ಅವಶ್ಯವಿರುವ ಈ ಕೆಳಗಿನಂತೆ ಔಷಧಿಗಳ ಸಂಗ್ರಹಣೆಗಾಗಿ ದ್ವಿ- ಲಕೋಟೆ ಪದ್ಧತಿಯಲ್ಲಿ ಮ್ಯಾನುವೆಲ್ ಟೆಂಡರ್ ಆಹ್ವಾನಿಸಲಾಗಿದೆ. ಆಹ್ವಾನಿಸಲಾದ ಟೆಂಡರಗಳ ದಾಸ್ತಾವೇಜುಗಳು ಮತ್ತು ಟೆಂಡರ್ ತಾಂತ್ರಿಕ ವೈಶಿಷ್ಟ್ಯಗಳ ವಿವರಗಳುಳ್ಳ ಪುಸ್ತಕವನ್ನು ಈ ಕಚೇರಿ ವೇಳೆಯಲ್ಲಿ ಪ್ರತಿ ಟೆಂಡರ್ ಫಾರ್ಮಗೆ ರೂ. 500.00 ಶುಲ್ಕ ಪಾವತಿಸುವ ಮೂಲಕ ದಿ:12.03.2026 ರಿಂದ ಪಡೆಯಬಹುದು.

ಅ. ನಂ	ಟೆಂಡರ್ ಪ್ರಕಟಣೆ ಸಂ	ಸಂಗ್ರಹಣೆಗಾಗಿ ಅಪೇಕ್ಷಿತ ಔಷಧಿಗಳ ವಿವರ	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂಗಳಲ್ಲಿ)	ಭರ್ತಿ ಮಾಡಿದ ಟೆಂಡರ ಫಾರ್ಮಗಳನ್ನು ಸಲ್ಲಿಸಲು ಕೊನೆಯ ದಿನಾಂಕ
01	ಕ್ರ.ಸಂ:ತಾಆ/ಬೆ/946/2025-26	SUB CENTRE DRUGS	4.98 ಲಕ್ಷ	12450.00	18.03.2026
02	ಕ್ರ.ಸಂ:ತಾಆ/ಬೆ/948/2025-26	SUB CENTRE DRUGS	4.985 ಲಕ್ಷ	12463.00	18.03.2026
03	ಕ್ರ.ಸಂ:ತಾಆ/ಬೆ/949/2025-26	SUB CENTRE DRUGS	4.99 ಲಕ್ಷ	12475.00	18.03.2026
04	ಕ್ರ.ಸಂ:ತಾಆ/ಬೆ/945/2025-26	SUB CENTRE DRUGS	4.995 ಲಕ್ಷ	12488.00	18.03.2026

ಭರ್ತಿ ಮಾಡಿದ ಟೆಂಡರ ಫಾರ್ಮಗಳನ್ನು ನಿಗದಿಪಡಿಸಿದ ದಿನಾಂಕ ಮತ್ತು ಸಮಯದ ಒಳಗಾಗಿ ಈ ಕಚೇರಿಗೆ ಖುದ್ದಾಗಿ ಶೀಲು ಮಾಡಿದ ಲಕೋಟೆಯಲ್ಲಿ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳನ್ನು ತಾಲೂಕಾ ಆರೋಗ್ಯಾಧಿಕಾರಿಗಳ ಕಾರ್ಯಾಲಯ ಬೆಳಗಾವಿ ಇವರಲ್ಲಿ ಕೆಲಸದ ದಿನಗಳಂದು ಮಾಹಿತಿ ಪಡೆಯಬಹುದು.

ತಾಲೂಕಾ ಆರೋಗ್ಯಾಧಿಕಾರಿಗಳು
ಬೆಳಗಾವಿ

ಕ್ರಿ. ಮಿ. ನಂ: 209/2026.
ರಾಣೇಬೆನ್ನೂರ 2ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಹೆಚ್ಚುವರಿ ಜೆ ಎಮ್ ಎಫ್ ಸಿ ಇವರ ನ್ಯಾಯಲಯದಲ್ಲಿ

ಅರ್ಜಿದಾರರು :1) ಶ್ರೀ ವೀರಭದ್ರಪ್ಪ ತಂದೆ ನಾಗಪ್ಪ ಕೊಳಗಿ, ಸಾ:ಚಿಕ್ಕಬ್ಬೂರ, ಪೋಸ್ಟ: ತಲ್ಲೂರ, ಹಾಗೂ ಇತರರು.

ವಿರುದ್ಧ.

ಎದುರುಗಾರರು:ಜನನ ಮತ್ತು ಮರಣ ನೋಂದಣಾಧಿಕಾರಿಗಳು,ನಗರ ಸಭೆ. (ಸಿ.ಎಂ.ಸಿ) ರಾಣೇಬೆನ್ನೂರ ತಾಲೂಕ : ರಾಣೇಬೆನ್ನೂರ. ಜಿಲ್ಲಾ: ಹಾವೇರಿ.

ಇಸ್ತಿಯಾರ-ನಾಮಾ

ಸದರ ಮೇಲ್ಕಂಡ ಪ್ರಕರಣದಲ್ಲಿನ ಅರ್ಜಿದಾರರ ತಾಯಿಯವರಾದ ಅಕ್ಕನಾಗಮ್ಮ ಕೋಂ ನಾಗಪ್ಪ ಕೊಳಗಿ, ಇವರು ದಿನಾಂಕ: 17-09-2022 ರಂದು 3ನೇ ಅರ್ಜಿದಾರಳು ವಾಸವಿರುವ ರಾಣೇಬೆನ್ನೂರ ಶಹರದಲ್ಲಿರುವ ಮನೆಯಲ್ಲಿ ಮರಣವಾಗಿದ್ದರ ಕುರಿತು ಜನನ ಮತ್ತು ಮರಣ ನೋಂದಣಾ ಅಧಿಕಾರಿಗಳಾದ ಎದುರುಗಾರರು ತಮ್ಮ ಕಛೇರಿಯ ರಜಿಸ್ಟರದಲ್ಲಿ ಮರಣದ ನೋಂದಣಿ ಮಾಡಿಸಿಕೊಂಡು, ಮರಣ ಪ್ರಮಾಣ ಪತ್ರ ಪಡೆಯಲು ಅರ್ಜಿ ಸಲ್ಲಿಸಿದ್ದು ಅದೆ.
ಕಾರಣ ಸದರ ಕೇಸದಲ್ಲಿ ಹಿತಾಸಕ್ತಿವುಳ್ಳವರು ದಿನಾಂಕ: 17/04/2026 ರಂದು ಮುಂಜಾನೆ 10-30 ಗಂಟೆ-ಗೆ ನೀವಾಗಲಿ ಅಥವಾ ವಕೀಲರ ಮೂಲಕವಾಗಲಿ ಹಾಜರು ಆಗತಕ್ಕದ್ದು. ಇದ್ದಕ್ಕೆ ತಪ್ಪಿದಲ್ಲಿ ತಮ್ಮ ಗೈರುಹಾಜರಾತಿಯಲ್ಲಿ ಮಾನ್ಯ ನ್ಯಾಯಾಲಯದವರು ಮುಂದಿನ ಹುಕುಂ ಮಾಡುವರು ತಿಳಿಯಿರಿ.
ಇಂದು ದಿನಾಂಕ: 11/03/2026 ರಂದು ಮೇ: ಮೊಹರು ಹಾಗೂ ನನ್ನ ಸಹಿಯೊಂದಿಗೆ ಕೊಡಲ್ಪಟ್ಟಿದೆ.
ಸ್ಥಳ: ರಾಣೇಬೆನ್ನೂರ.
ದಿನಾಂಕ: 11/03/2026.

ನ್ಯಾಯಾಲಯದ ಆದೇಶದ ಮೇರೆಗೆ:
ಸಹಿ/-ಶಿರಸ್ತೇದಾರರು.
ಮೆ: 2ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್ ಸಿ ನ್ಯಾಯಾಲಯ, ರಾಣೇಬೆನ್ನೂರ
ಅರ್ಜಿದಾರರ ಪರ ವಕೀಲರು,
ಸಹಿ/- [ಶ್ರೀ ಹೆಚ್.ಎನ್. ಬೆಳವಿಗಿ.]ವಕೀಲರು, ರಾಣೇಬೆನ್ನೂರ

IN THE COURT OF CIVIL JUDGE & JMFC AT SIRUGUPPA
Criminal. Misc. Case No: 208/2026

Between:Kanekallu Banu ... Petitioner.

V/s

To,
The Tahasildar - Cum- Birth and Deaths Registrar Taluk Office Siruguppa.
.... Respondents.

TO WHOM SO EVER IT MAY CONCERN
NOTICE

Whereas above named petitioner here in have instituted above petition under section 13(3) of birth and death Acts 1969 against the respondents for purpose of seeking death certificate of petitioners Father by name Honnur Sab S/o Nabi Sab Who was expired on 15-06-1983 at the residence of the petitioner. Any person interested are here by summoned to appear before this court in person or by pleader duly instructed and able to answer all material questions relating to the petition on 16-04-2026 at 11.00 am before this court. In default of your appearance on the date/ day of above petition will be heard and determined as "Ex-parte"

Given under my hand & seal of the court this 12th day of MARCH-2026

By Order of the court,
Sd/- Chief ministrial officer,
Civil judge & JMFC Court Siruguppa.

Sd/- K.Raghavendra
Smt. Sumalatha Advocates Siruguppa,

ಕ್ರಿ ಮಿ. ನಂ : 383/2026
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು :1. ರತ್ನಮ್ಮ ಕೋಂ ನಿಂಗಪ್ಪ ಪಾರಿ & ಇತರರು

ವಿರುದ್ಧ

ಎದುರುಗಾರರು:ತಹಶೀಲ್ದಾರ, ರಾಣೇಬೆನ್ನೂರು & ಇನ್ನೊಬ್ಬರು

:-ಇಸಿಯಾರ ನಾಮಾ-:

ಇದರಲ್ಲಿ 1&8ನೇ ಅರ್ಜಿದಾರರ ಅತ್ತೆ, 6, 7, 13 & 14 ನೇ ಅರ್ಜಿದಾರರ ತಾಯಿ, 2,3, 4, 5, 9, 10, 11, 12 ನೇ ಅರ್ಜಿದಾರರ ಅಜ್ಜಿಯಾದ ನಾಗವ್ವ ಕೋಂ ಗುಡ್ಡಪ್ಪ ಪಾರಿ, ಇವರು ದಿ: 12-10-2014 ರಂದು ರಾಣೇಬೆನ್ನೂರು ತಾಲೂಕ ವೈ.ಟಿ.ಹೊನ್ನತ್ತಿ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ. ಸದರ 1 & 8 ನೇ ಅರ್ಜಿದಾರರ ಅತ್ತೆ, 6, 7, 13 & 14 ನೇ ಅರ್ಜದಾರರ ತಾಯಿ, 2, 3, 4, 5, 9, 10, 11, 12 ನೇ ಅರ್ಜದಾರರ ಅಜ್ಜಿಯ ಮರಣ ದಿನಾಂಕವನ್ನು ಎದುರುಗಾರರ ಕಛೇರಿಯ ಜನನ-ಮರಣ ನೋಂದಣಿ ದಾಖಲಾತಿಯಲ್ಲಿ ನೋಂದಣಿ ಮಾಡಿಸಿಕೊಳ್ಳುವದು ಅತೀ ಅವಶ್ಯ ಇದ್ದು ಇದರ ಬಗ್ಗೆ ಸಾರ್ವಜನಿಕರ ಯಾವದೇ ತಂಟೆ ವ ತಕರಾರು ಇದ್ದಲ್ಲಿ ದಿ:15-4-2626ರಂದು ಬೆಳಗ್ಗೆ 11.00 ಗಂಟೆಗೆ ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಮಾನ್ಯ ನ್ಯಾಯಾಲಯದವರು ಮುಂದಿನ ಆದೇಶವನ್ನು ಮಾಡುತ್ತಾರೆ ಅಂತಾ ಕೊಟ್ಟ ಸಾರ್ವಜನಿಕ ತಿಳುವಳಿಕೆ ನೋಟೀಸು.
ಮಾನ್ಯ ನ್ಯಾಯಾಲಯದ ಮೊಹರಿನೊಂದಿಗೆ ಇಂದು ದಿ: 11-3-2026 ರಂದು ನೀಡಿದೆ.
ಸ್ಥಳ: ರಾಣೇಬೆನ್ನೂರು
ದಿನಾಂಕ : 2-3-26

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೆದಾರರು
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ.ಎಂ.ಎಫ್.ಸಿ, ರಾಣೇಬೆನ್ನೂರು ಇವರ ನ್ಯಾಯಾಲಯ
ಸಹಿ/- ಶ್ರೀ ಎಂ.ಬಿ.ಗುದಿಗೇರ
ಅರ್ಜಿದಾರರ ಪರ ವಕೀಲರು

ಕ್ರಿ ಮಿ. ನಂ :382/2026
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು : 1. ರತ್ನಮ್ಮ ಕೋಂ ನಿಂಗಪ್ಪ ಪಾರಿ & ಇತರರು

ವಿರುದ್ಧ

ಎದುರುಗಾರರು: ತಹಶೀಲ್ದಾರ, ರಾಣೇಬೆನ್ನೂರು & ಇನ್ನೊಬ್ಬರು

:-ಇಸ್ತಿಯಾರ ನಾಮಾ-:

ಇದರಲ್ಲಿ 1&8ನೇ ಅರ್ಜಿದಾರರ ಭಾವ, 6, 7, 13 & 14 ನೇ ಅರ್ಜಿದಾರರ ಸಹೋದರ,2, 3, 4, 5, 9, 10, 11, 12 ನೇ ಅರ್ಜಿದಾರರ ದೊಡ್ಡಪ್ಪನಾದ ಮಲ್ಲಪ್ಪ ತಂದೆ ಗುಡ್ಡಪ್ಪ ಪಾರಿ,ಇವರು ದಿ: 31-08-2012 ರಂದು ರಾಣೇಬೆನ್ನೂರು ತಾಲೂಕ ವೈ.ಟಿ.ಹೊನ್ನತ್ತಿ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ. ಸದರ 1 & 8ನೇ ಅರ್ಜಿದಾರರ ಭಾವ, 6, 7, 13 & 14ನೇ ಅರ್ಜಿದಾರರ ಸಹೋದರ, 2, 3, 4, 5, 9, 10, 11, 12 ನೇ ಅರ್ಜಿದಾರರ ದೊಡ್ಡಪ್ಪನ ಮರಣ ದಿನಾಂಕವನ್ನು ಎದುರುಗಾರರ ಕಛೇರಿಯ ಜನನ-ಮರಣ ನೋಂದಣಿ ದಾಖಲಾತಿಯಲ್ಲಿ ನೋಂದಣಿ ಮಾಡಿಸಿಕೊಳ್ಳುವದು ಅತೀ ಅವಶ್ಯ ಇದ್ದು ಇದರ ಬಗ್ಗೆ ಸಾರ್ವಜನಿಕರ ಯಾವದೇ ತಂಟೆ ವ ತಕರಾರು ಇದ್ದಲ್ಲಿ ದಿ: 15-04-2026 ರಂದು ಬೆಳಗ್ಗೆ 11.00 ಗಂಟೆಗೆ ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಮಾನ್ಯ ನ್ಯಾಯಾಲಯದವರು ಮುಂದಿನ ಆದೇಶವನ್ನು ಮಾಡುತ್ತಾರೆ ಅಂತಾ ಕೊಟ್ಟ ಸಾರ್ವಜನಿಕ ತಿಳುವಳಿಕೆ ನೋಟೀಸು. ಮಾನ್ಯ ನ್ಯಾಯಾಲಯದ ಮೊಹರಿನೊಂದಿಗೆ ಇಂದು ದಿ: 10-3-2026 ರಂದು ನೀಡಿದೆ.
ಸ್ಥಳ: ರಾಣೇಬೆನ್ನೂರು
ದಿನಾಂಕ : 7/3/26

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೆದಾರರು
ಪಧಾನ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ.ಎಂ.ಎಫ್.ಸಿ, ರಾಣೇಬೆನ್ನೂರು ಇವರ ನ್ಯಾಯಾಲಯ
ಸಹಿ/-
ಶ್ರೀ ಎಂ.ಬಿ.ಗುದಿಗೇರ, ಅರ್ಜಿದಾರರ ಪರ ವಕೀಲರು

ನಗರ ಯೋಜನಾ ಪ್ರಾಧಿಕಾರ, ರಬಕವಿ-ಬನಹಟ್ಟಿ
ಕದಂ ಕಟ್ಟಡ ಬನಹಟ್ಟಿ ಬಸ್ಸ್ ನಿಲ್ದಾನ ಎದುರಗಡೆ-587311
ದೂರವಾಣಿ ಸಂಖ್ಯೆ: 08353-231411 Email:msplanningrabakavi-banahatti@gmail.com
ವೆಬಸೈಟ್ :www.rabavi-banahatti.tpa.gov.in

ತಾಲ್ಲೂಕ: ರಬಕವಿ-ಬನಹಟ್ಟಿ ಜಿಲ್ಲೆ: ಬಾಗಲಕೋಟೆ

ಸಂಖ್ಯೆ:ನಯೋಪಾರಬ್ರ/ಪ-ಪ್ರಕಟಣೆ/2025-26/ ದಿನಾಂಕ:-13-3-2026

-: ಸಾರ್ವಜನಿಕ ಪ್ರಕಟಣೆ :-

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಅ) ರ ಪ್ರಕಾರ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಅ)ರ ಅನ್ವಯ ಭೂ-ಉಪಯೋಗ ಬದಲಾವಣೆ ಕೋರಿ ಅರ್ಜಿದಾರರು ಮನವಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ ಸದರಿ ಭೂ-ಉಪಯೋಗ ಬದಲಾವಣೆ ಬಗ್ಗೆ ಸಾರ್ವಜನಿಕ ಸಲಹೆ. ಅಕ್ಷೇಪಣೆಗಳು ಏನಾದರೂ ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ "ಸದಸ್ಯ ಕಾರ್ಯದರ್ಶಿ ನಗರ ಯೋಜನಾ ಪ್ರಾಧಿಕಾರ ಬಸ್ ನಿಲ್ದಾಣದ ಹತ್ತಿರ ಬಡಚಿಕರ್ ಲೈನ್ ಕದಮ್ ಕಟ್ಟಡ ಸಾ// ಬನಹಟ್ಟಿ-587311 "ರವರಿಗೆ ಖುದ್ದಾಗಿ ಅಥವಾ ಅಂಚೆ ಮುಖಾಂತರ ಸಲ್ಲಿಸಲು ಕೋರಲಾಗಿದೆ. ನಿಗಧಿತ ಅವಧಿ ಮೀರಿದ ನಂತರ ಸ್ವೀಕರಿಸುವ ಸಲಹೆ/ಸೂಚನೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ.ಸ	ಗ್ರಾಮ	ರಿ.ಸ.ನಂ	ವಿಸ್ತೀರ್ಣ	ಭೂ-ಮಾಲೀಕರ ಹೆಸರು	ಅನುಮೋದಿತ ಮಹಾ ಯೋಜನೆಯಲ್ಲಿ ಕಾಯ್ದಿರಿಸಿದ ಭೂ- ಉಪಯೋಗ	ಅರ್ಜಿದಾರರು ಬದಲಾವಣೆಗೆ ಕೋರಿರುವ ಭೂಉಪಯೋಗ
01	ಆಸಂಗಿ	82/*/1	00ಎಕರೆ-31ಗುಂಟೆ-00 ಆಣೆ	ಶ್ರೀ ಮಲ್ಲಪ್ಪ ಸಿದ್ದಪ್ಪ ಕುದರಿ ಸಾ// ಮಹಾಲಿಂಗಪೂರ	ವಸತಿ Residential	ವಾಣಿಜ್ಯ Commercial)

ಷರಾ:- ಪ್ರಶ್ನಿತ ಜಮೀನಿನ ಸುತ್ತಮುತ್ತಲಿನ ಪರಿಸರದಲ್ಲಿ ವಾಣಿಜ್ಯCommercial) ಬೆಳವಣಿಗೆಗಳು ಕಂಡು ಬಂದಿರುತ್ತದೆ. ಸದರಿ ಜಮೀನನ್ನು ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡಂತೆ ಯೋಜನಾ ಬದ್ದವಾದ ವಾಣಿಜ್ಯ ಏಕ ನಿವೇಶನವನ್ನಾಗಿ ಅಭಿವೃದ್ಧಿಪಡಿಸಲು ಉದ್ದೇಶಿಸಿರುವುದರಿಂದ ರಬಕವಿ-ಬನಹಟ್ಟಿ ನಗರದ ಆರ್ಥಿಕ ಬೆಳವಣಿಗೆಗಳಿಗೆ ಉತ್ತೇಜನ ನೀಡಿದಂತಾಗುವುದರ ಜೋತೆ ನಗರದ ಯೋಜನಾ ಬದ್ದವಾದ ಬೆಳವಣಿಗೆಗೆ ಸಹಕಾರಿಯಾಗುವುದು ಎಂಬ ಸಾರ್ವಜನಿಕ ಹಿತಾಸಕ್ತಿ ಒಳಗೊಂಡಿರುತ್ತದೆ. ಎಂದು ಅರ್ಜಿದಾರರು ತಮ್ಮ ಅರ್ಜಿ ಸಂಖ್ಯೆ:-**RKB:LBPAS**-10044/2025-26 ದಿನಾಂಕ:-06/03/2026 ರ ಮುಖಾಂತರ ತಿಳಿಸಿರುತ್ತಾರೆ.

ಸಹಿ/-
ಸದಸ್ಯ ಕಾರ್ಯದರ್ಶಿ
ನಗರ ಯೋಜನಾ ಪ್ರಾಧಿಕಾರ ರಬಕವಿ-ಬನಹಟ್ಟಿ

ಜಿಲ್ಲಾ ಪಂಚಾಯತ ಉತ್ತರ ಕನ್ನಡ.
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ
Email: dhoukannada@gmail.com Phone: 08382-226339. Fax: 08382-222452

ನಂ:ಜಿಆಕುಕ/ಜಯೋಕಾಸಾಂ/ಡಿಎಂಎಫ್/ವಿವ-59(1)/2025-26 ದಿನಾಂಕ : 12-03-2026

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ವಿಷಯ : 2025-26 ನೇ ಸಾಲಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧೀನ ಸಂಸ್ಥೆಗಳಾದ ಆಯ್ದ ತಾಲ್ಲೂಕು ಆಸ್ಪತ್ರೆಗಳಿಗೆ ಅವಶ್ಯಕವಿರುವ ಶವಗಳನ್ನಿಡುವ ಡೀಪ್ ಫ್ರಿಜರ್ ಸಲಕರಣೆಯನ್ನು ಪೂರೈಸಲು ಇ-ಟೆಂಡರ್ ಕುರಿತು

**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧೀನ ಸಂಸ್ಥೆಗಳಾದ ಆಯ್ದ ತಾಲ್ಲೂಕು ಆಸ್ಪತ್ರೆಗಳಿಗೆ 2025-26ನೇ ಸಾಲಿಗೆ ಅವಶ್ಯಕವಿರುವ ಶವಗಳನ್ನಿಡುವ ಡೀಪ್ ಫ್ರಿಜರ್ ಸಲಕರಣೆಗಳನ್ನು ಪೂರೈಸಲು ಈ ಕೆಳಕಾಣಿಸಿದಂತೆ ಅರ್ಹ ಸಂಸ್ಥೆ/ಏಜೆನ್ಸಿಗಳಿಂದ ಈ ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಅಲ್ಪಾವಧಿ ಮರು ಇ-ಟೆಂಡರ್ ಆಹ್ವಾನಿಸಲಾಗಿದೆ ಟೆಂಡರ್ ನಮೂನೆಗಳಿಗಾಗಿ ಇ.ಎಂ.ಡಿ ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ವೆಬ್ ಸೈಟ್ **www.kppp.karnataka.gov.in** ನಲ್ಲಿ ನೋಡಬಹುದಾಗಿದೆ.

ಇ- ಪ್ರೋಕ್ಯೂರ್‌ಮೆಂಟ್ ಮುಖಾಂತರ ಟೆಂಡರ್

ಕ್ರ.ಸಂ	ವಿವರಗಳು	ದಿನಾಂಕ
1	ಇ.ಎಂ.ಡಿ ಮೊತ್ತ 2.5 %	ರೂ .60,000/-
2	ಇ- ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರ್ ಫಾರಂ ಡೌನಲೋಡ್ ಆರಂಭ ದಿನಾಂಕ	ದಿನಾಂಕ: 12-03-2026, ಬೆಳ್ಳಿಗ್ಗೆ 10.00 ಘಂಟೆಯಿಂದ
3	ಟೆಂಡರ್‌ನಲ್ಲಿ ಅಕ್ಷೇಪಣೆಗಳಿದ್ದಲ್ಲಿ ಅಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ:16-03-2026ಸಾಯಂಕಾಲ 05-30 ಘಂಟೆಯವರೆಗೆ
4	ಇ- ಪ್ರೊಕ್ಯೂರ್‌ಮೆಂಟ್ ವೇದಿಕೆಯ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 20-03-2026 ರ 5-30 ಘಂಟೆಯವರೆಗೆ
5	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ: 23-03-2026 ಬೆಳ್ಳಿಗ್ಗೆ 10-30 ಘಂಟೆ
6	ಟೆಂಡರ ಅಂದಾಜು ಮೊತ್ತ	ರೂ .24,00,000/- ಮಾತ್ರ

ಸಹಿ/-
ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳು,
ಉ .ಕ ಕಾರವಾರ.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ.

ಸಂಖ್ಯೆ:ಕಾಅ:ಪಂರಾಇಂವಿ: ಮಂಡ್ಯ: ಟೆಂಪ್ರಸಂ-2:2025-26 ದಿನಾಂಕ: 11.03.2026

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ: 57/2025-26

ಕರ್ನಾಟಕ ರಾಜ್ಯದ ರಾಜ್ಯಪಾಲರುರವರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮಂಡ್ಯರವರಿಂದ, ಮಳವಳ್ಳಿ ವಿಧಾನ ಸಭಾಕ್ಷೇತ್ರಕ್ಕೆ ಸಂಬಂಧಿಸಿದಂತೆ ಮಾನ್ಯ ಮುಖ್ಯ ಮಂತ್ರಿಗಳ ವಿಶೇಷ ಮಂಜೂರಾತಿ 5054 ಯೋಜನೆ ಮತ್ತು ಮುಖ್ಯ ಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯ ಲೆಕ್ಕ ಶೀರ್ಷಿಕೆಯಡಿ ಅನುಮೋದನೆಯಾಗಿರುವ 03 ಪ್ಯಾಕೇಜ್/ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ದ್ವಿಲಕೋಟೆ ಪದ್ಧತಿ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ. ಟೆಂಡರ್ ದಾಖಲಾತಿಗಳನ್ನು ಕೆ.ಪಿ.ಪಿ.ಪಿ. ಪೋರ್ಟಲ್ ಮೂಲಕ ಪಡೆಯಬಹುದು. ಟೆಂಡರ್‌ಗಳನ್ನು https://kppp.karnataka.gov.in, ಆನ್‌ಲೈನ್ ಮೂಲಕ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ: **18.03.2026ರ ಸಂಜೆ 4.30ಗಂಟೆ** ವರೆಗೆ. ಹೆಚ್ಚಿನ ವಿವರಗಳಿಗಾಗಿ ಕೆ.ಪಿ.ಪಿ.ಪಿ. ಪೋರ್ಟಲ್ ಅಥವಾ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಮಂಡ್ಯರವರ ಕಛೇರಿಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಪಂ.ರಾ.ಇಂ.ವಿಭಾಗ, ಮಂಡ್ಯ

ವಾಸಾಸಂಇ/ಮಂಡ್ಯ/ಶಿರಡಿ ಸಾಯಿ/885/2025-26

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಛೇರಿ, ವಿದ್ಯುತ್ ಭವನ, ಗೋಪನಕೊಪ್ಪ, ಹುಬ್ಬಳ್ಳಿ-580023. Tel : 0836-2223526
E-mail: seepmc.hescom@gmail.com
eepmc1.hescom@gmail.com Website: www.hescom.co.in

CIN: U31401KA2002SGC030437

No: HESCOM/SEE(PMC)/EE-P1/AEE-1 & 2/2025-26/CYS-12249 Date: 12-03-2026

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ. ಮೂಲಕ ಮಾತ್ರ)

ಅಧೀಕ್ಷಕ ಇಂಜನೀಯರ (ವಿ), ಪಿಎಮ್‌ಸಿ, ನಿಗಮ ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ ರವರಿಂದ ಪೂರ್ಣ ಗುತ್ತಿಗೆ ಆಧಾರದಡಿಯಲ್ಲಿ ಕೆಳಕಂಡ ಕಾಮಗಾರಿಗೆ ಟೆಂಡರಗಳನ್ನು ಆಹ್ವಾನಿಸಲಾಗಿದೆ.

ಅನು ಕ್ರಮ	Particulars	Bid indent No
1	ಹುಬ್ಬಳ್ಳಿ ನಗರ ವಿಭಾಗದ ಹುಬ್ಬಳ್ಳಿ ನಗರದ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ (NWKRTC), ಪ್ರಾದೇಶಿಕ ಕಾರ್ಯಾಗಾರ ಗೋಕುಲ್ ರಸ್ತೆ ಹುಬ್ಬಳ್ಳಿ ರವರ ಹೆಸರಿನಲ್ಲಿ "ಪಿಎಂ-ಇ ಬಸ್ ಸೇವಾ ಯೋಜನೆ" ಅಡಿಯಲ್ಲಿ ಇವಿ ಚಾರ್ಜಿಂಗ್ ಸ್ಟೇಷನ್‌ಗಾಗಿ 5000 ಕೆವಿಎ ಎಚ್‌ಟಿ ಸ್ಥಾವರಕ್ಕೆ 33 ಕೆವ್ಹಿ ವೋಲ್ಟೇಜ್ ಕ್ಲಾಸ್ ವ್ಯವಸ್ಥೆಯಲ್ಲಿ ವಿದ್ಯುತ್ ಸರಬರಾಜು ಮಾಡುವ ಕಾಮಗಾರಿ.	HESCOM/2025-26/ EL/WORK_INDENT976
2	ಬೆಳಗಾವಿ ನಗರ ವಿಭಾಗದ ಬೆಳಗಾವಿ ನಗರದ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ (NWKRTC) ಸಿಟಿ ಡಿಪೋದಲ್ಲಿ (ಡಿಪೋ ನಂ-2) "ಪಿಎಂ-ಇ ಬಸ್ ಸೇವಾ ಯೋಜನೆ" ಅಡಿಯಲ್ಲಿ ಇವಿ ಚಾರ್ಜಿಂಗ್ ಸ್ಟೇಷನ್‌ಗಾಗಿ 5000 ಕೆವಿಎ ಎಚ್‌ಟಿ ಸ್ಥಾವರಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿ.	HESCOM/2025-26/ EL/WORK_INDENT989
3	ವಿಜಯಪುರ ವಿಭಾಗದ ವಿಜಯಪುರ ನಗರದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ (KKRTC) ಡಿಪೋದಲ್ಲಿ (ಡಿಪೋ ನಂ-3) "ಪಿಎಂ-ಇ ಬಸ್ ಸೇವಾ ಯೋಜನೆ" ಅಡಿಯಲ್ಲಿ ಇವಿ ಚಾರ್ಜಿಂಗ್ ಸ್ಟೇಷನ್‌ಗಾಗಿ 3000 ಕೆವಿಎ ಎಚ್‌ಟಿ ಸ್ಥಾವರಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿ.	HESCOM/2025-26/ EL/WORK_INDENT990

ಸದರಿ ಟೆಂಡರ್‌ಗಳ ಪೂರ್ಣ ವಿವರಗಳನ್ನು ವೆಬ್‌ಸೈಟ್, www.kppp.karnataka.gov.in ರಲ್ಲಿ ದಿನಾಂಕ: **12.03.2026**, ಸಾಯಂಕಾಲ **5.30** ರ ನಂತರ ಪಡೆಯಬಹುದು.

ಸಹಿ/-
ಅಧೀಕ್ಷಕ ಇಂಜನೀಯರರು(ವಿ)
(ಪಿಎಮ್‌ಸಿ), ಹೆಸ್ಕಾಂ, ಹುಬ್ಬಳ್ಳಿ.

ವಾ.ಸಾ.ಇ./ಧಾರವಾಡ/1348/2025-26/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ವಿಭಾಗ, ಬೀದರ.

ನಂ: ಇಇ/ಎಂಐಡಿ/ಬೀದರ/ತಾ.ಶಾ-1,2/ಟೆಂಡರ್/2025-26/556 ದಿನಾಂಕ: 10-03-2026

ಕೆಪಿಪಿ-ಪ್ರೋಕ್ಯೂರಮೆಂಟ, ಟೆಂಡರ್ ಪ್ರಕಟಣೆ

1) ಕಾಮಗಾರಿಗಳ ವಿವರ. : KPP -Portalನಲ್ಲಿ ನಮೂದಿಸಿದಂತೆ.2) ಕಾಮಗಾರಿಗಳ ಅಂದಾಜು ಮೊತ್ತ. : KPP -Portalನಲ್ಲಿ ನಮೂದಿಸಿದಂತೆ. 3) ಗುತ್ತಿಗೆದಾರರ ಅರ್ಹತೆ ವಿವರ. KPP -Portalನಲ್ಲಿ ನಮೂದಿಸಿದಂತೆ, 4) ಕಾಮಗಾರಿಗಳ ಟೆಂಡರ ಮೊತ್ತದ ವಿವರ. KPP -Portalನಲ್ಲಿ ನಮೂದಿಸಿದಂತೆ. 5) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ. KPP -Portalನಲ್ಲಿ ನಮೂದಿಸಿದಂತೆ. 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: ಕೆ.ಡಬ್ಲ್ಯೂ -1, ಕೆ.ಡಬ್ಲ್ಯೂ -2, ಕೆ.ಡಬ್ಲ್ಯೂ -3 ಮಾತ್ರ : **16-03-2026 ರಂದು 17.00 ಗಂಟೆವರೆಗೆ** 8) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ ಕೆ.ಡಬ್ಲ್ಯೂ -1, ಕೆ.ಡಬ್ಲ್ಯೂ -2, ಕೆ.ಡಬ್ಲ್ಯೂ -3 ಮಾತ್ರ : **20-03-2026 ರಂದು 16.00 ಗಂಟೆ ವರೆಗೆ,** 9) ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲ್ಯೂ -1, ಕೆ.ಡಬ್ಲ್ಯೂ -2, ಕೆ.ಡಬ್ಲ್ಯೂ -3 ಮಾತ್ರ : **23-03-2026 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ,** 10) ಟೆಂಡರ ಆರ್ಥಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲ್ಯೂ -1, ಕೆ.ಡಬ್ಲ್ಯೂ -2, ಕೆ.ಡಬ್ಲ್ಯೂ -3 ಮಾತ್ರ **25-03-2026 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ,** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ ವಿಳಾಸ, ದೂರವಾಣಿ ಸಂಖ್ಯೆ : ಕಾರ್ಯನಿರ್ವಾಹಕ ಇಂಜನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ.ವಿಭಾಗ, ಬೀದರ. ದೂರವಾಣಿ ಸಂ: 08482 232080, 12) ಅಂತರ್ಜಾಲ ತಾಣದ ವಿಳಾಸ. KPP portal https://kppp.karnataka.gov.in

ಸಹಿ/- ಕಾರ್ಯ ನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ವಿಭಾಗ, ಬೀದರ.

ವಾ.ಸಾ.ಸಂ.ಇ/ಬೀದರ/359/ಕೆ.ಎಸ್.ಎಂ.ಸಿ.&ಎ/2025-26

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜನೀಯರ ರವರ ಕಚೇರಿಕನೀನಿನಿ, ಕಳಸಾ ಯೋಜನೆ ವಿಭಾಗ,
ಖಾನಾಪೂರ, ಬೆಳಗಾವಿ ಜಿಲ್ಲೆ-591302

ಸಂಖ್ಯೆ. ಕನೀನಿನಿ/ಕಯೋವಿ/ಖಾ/ಶಿಬಿ/ಅ.ಟೆಂ.ಪ್ರ/2025-26/2131 ರಿಂದ 2137 ದಿನಾಂಕ: 11.03.2026.

"ಅಲ್ಪಾವಧಿ ಶೇಕಡಾವಾರು ಟೆಂಡರ ಪ್ರಕಟಣೆ"
(ಕೆಪಿಪಿ-ಪೋರ್ಟಲ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜನೀಯರ್, ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ ಕಚೇರಿ ಅಡಿಯಲ್ಲಿ ಬರುವ ಈ ಕೆಳಗಿನ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ಮತ್ತು ರಿಜಿಸ್ಟಾರ್ ಆಫ್ ಕಂಪನಿ ನೊಂದಾಯಿತ ಸಂಸ್ಥೆಗಳಿಂದ ಶೇಕಡಾವಾರು ಟೆಂಡರಗಳನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಕೆಪಿಪಿ-ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ.

ಕ್ರ ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗೆ ಇಟ್ಟ ಮೊತ್ತ ಜಿ.ಎಸ್.ಟಿ. ಹೊರತುಪಡಿಸಿ (ರೂ. ಲಕ್ಷಗಳಲ್ಲಿ)	ಅರ್ಹ ಗುತ್ತಿಗೆ ಮತ್ತು ರಿಜಿಸ್ಟಾರ್ ಆಫ್ ಕಂಪನಿ ನೊಂದಾಯಿತ ಸಂಸ್ಥೆಗಳಿಂದ
1	Improvements to road from Beejagarni village to Janewadi village in Belagavi Taluka. **(W.I. No. KNNL/2025-26/ RD/WORK_INDENT4176)**	**338.81**	ದರ್ಜೆ 2 ಮತ್ತು ಮೇಲ್ಪಟ್ಟು
2	Improvements to road from Belavatti village to Karle-Kawalewadi Main road in Belagavi Tulaka. **(W.I. No. KNNL/2025-26/RD/WORK_INDENT4177)**	**422.48**	ದರ್ಜೆ 2 ಮತ್ತು ಮೇಲ್ಪಟ್ಟು
3	Improvements to road from Kudaremani Village main road to Shinoli-Surute main road and Shinoli-Surute main road Sonoli Village limits in Belagavi Taluka. **(W.I. No. KNNL/2025-26/RD/WORK_INDENT4178)**	**338.84**	ದರ್ಜೆ 2 ಮತ್ತು ಮೇಲ್ಪಟ್ಟು
4	Improvements to road from Mandolli village to Khadarwadi village in Belagavi Taluka. **(W.I. No. KNNL/2025-26/RD/WORK_INDENT4179)**	**211.56**	ದರ್ಜೆ 2 ಮತ್ತು ಮೇಲ್ಪಟ್ಟು
5	Improvements of Road from Turamari- Konewadi Main road to Uchagaon Village in Belagavi Tulaka. **(W.I. No. KNNL/2025-26/RD/WORK_ INDENT4180)**	**254.06**	ದರ್ಜೆ 2 ಮತ್ತು ಮೇಲ್ಪಟ್ಟು
6	Improvements to road from Yelebail village to Markandeya river (near surute village) in Belagavi Taluka. **(W.I. No. KNNL/2025-26/RD/WORK_ INDENT4181)**	**127.09**	ದರ್ಜೆ 3 ಮತ್ತು ಮೇಲ್ಪಟ್ಟು
7	Consultancy Services For Third Party Inspection, Supervision And Submission of Reports etc Complete For The Work Of Hangaraga Tank Filling Scheme in Belagavi Taluka, Belagavi Dist. **(W.I. No. KNNL/2025-26/SE0398)**	**61.65**	ರಿಜಿಸ್ಟಾರ್ ಆಫ್ ಕಂಪನಿ ನೊಂದಾಯಿತ ಸಂಸ್ಥೆಗಳಿಂದ

https://kppp.karnataka.gov.in ನಲ್ಲಿ ಅರ್ಜಿ ಡೌನಲೋಡ ಮಾಡಿಕೊಳ್ಳಬಹುದು/ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ **ದಿನಾಂಕ: 25.03.2026**ರಂದು **ಸಂಜೆ 4.00ಗಂಟೆ** ವರೆಗೆ ಸಲ್ಲಿಸಬಹುದು. ಪ್ರಿ-ಬಿಡ್ ಸಭೆಯನ್ನು **ದಿನಾಂಕ: 20.03.2026**ರಂದು **ಮುಂಜಾನೆ 11.00 ಗಂಟೆಗೆ** ಕಾರ್ಯನಿರ್ವಾಹಕ ಇಂಜನೀಯರ, ಕನೀನಿನಿ, ಕಳಸಾ ಯೋಜನಾ ವಿಭಾಗ, ಖಾನಾಪೂರ ಕಚೇರಿಯಲ್ಲಿ ಆಯೋಜಿಸಲಾಗಿದೆ. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 26.03.2026 ಸಂಜೆ 4.30 ಗಂಟೆಗೆ.** ಪೂರ್ವಾರ್ಹತೆ ಕುರಿತಂತೆ ಇ.ಎಂ.ಡಿ. ವಿವರ, ಟೆಂಡರ್ ಷರತ್ತುಗಳು ಹಾಗೂ ಇತರೆ ವಿವರಗಳನ್ನು ಕೆಪಿಪಿ-ಪೋರ್ಟಲ್ ಮುಖಾಂತರ **https://kppp.karnataka.gov.in** ಪಡೆಯಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ **ದೂರವಾಣಿ ಸಂಖ್ಯೆ: 08336-222163** ಸಂಪರ್ಕಿಸುವದು.

ಸಹಿ/-
ಕಾರ್ಯನಿರ್ವಾಹಕ ಇಂಜನೀಯರ
ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ

ವಾ.ಸಾ.ಇ/ಬೆಳಗಾವಿ/2059/ದೇಶಪಾಂಡೆಪಬ್ಲಿಸಿಟಿ/2025-26

ಕರ್ನಾಟಕ ಸರ್ಕಾರ

ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ

ಸಂಖ್ಯೆ : ಕೆಎಂಸಿಆರ್‌ಐ/ನಿಕಾ/ಟೆಂಡರ್/2025-26/769 ದಿನಾಂಕ : 12-03-2026

ಇ-ಟೆಂಡರ್ ಪ್ರಕಟಣೆ

ನಿರ್ದೇಶಕರು, ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಹುಬ್ಬಳ್ಳಿ, ಇವರು ಕನಾಟಕ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ (ಪಿಡಬ್ಲುಡಿ) ಯಲ್ಲಿ ಸೂಕ್ತ ದರ್ಜೆಯಲ್ಲಿ ಗುತ್ತಿಗೆದಾರರೆಂದು ನೋಂದಾಯಿಸಿದ ಗುತ್ತಿಗೆದಾರರಿಂದ ಈ ಕೆಳಗೆ ಕಾಣಿಸಿದ ಕಾಮಗಾರಿಗಳಿಗೆ 'ಇ-ಪ್ರೊಕ್ಯೂರಮೆಂಟ್' ಮುಖಾಂತರ ಪ್ರತ್ಯೇಕವಾಗಿ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿ ಹೆಸರು	ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ ರೂ.	ಟೆಂಡರ್ ಫಾರ್ಮ ಬೆಲೆ ರೂ.	ಮುಂಗಡ ಠೇವಣಿ ಹಣ ರೂ.	ಕಾಲಮಿತಿ (ಮಳೆಗಾಲ ಸಹಿತ)	ಅರ್ಹ ಗುತ್ತಿಗೆದಾರರ ದರ್ಜೆ	ವರ್ಗ (Category)
	ಕೆಡಬ್ಲು-3 ಪ್ರಕಾರ ದ್ವಿಲಕೋಟೆ ಪದ್ಧತಿ						
1	ಕೆ.ಎಂ.ಸಿ.ಆರ್.ಐ ಆವರಣದಲ್ಲಿಯ ದೀಕ್ಷಾ ನರ್ಸಿಂಗ್ ವಿದ್ಯಾರ್ಥಿನಿಯರ ವಸತಿ ನಿಲಯದ ದುರಸ್ತಿ ಮತ್ತು ನವೀಕರಣ ಕಾಮಗಾರಿ.	1,27,20,000-00	ಇ-ಪೋರ್ಟಲ್ ಪ್ರಕಾರ	1,27,200-00	06 ತಿಂಗಳು	3ನೇ ದರ್ಜೆ ಹಾಗೂ ಮೇಲಿನ ದರ್ಜೆ	ಸಾಮಾನ್ಯ

ಟೆಂಡರ್‌ಗಳನ್ನು ಇಎಂಡಿ ಹಾಗೂ ಟೆಂಡರ್ ಶುಲ್ಕನೊಂದಿಗೆ (ವೆಬ್‌ಸೈಟ್‌ನಲ್ಲಿ ನಿಗದಿ ಮಾಡಿರುವ ಒಂದು ಮಾದರಿಯಲ್ಲಿ ಆನ್‌ಲೈನ್ ಪೇಮೆಂಟ್ ಮಾತ್ರ) ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://www.kppp.karnataka.gov.in** ಲಾಗಿನ್ ಆಗಿ ಪಡೆಯಬಹುದು. ಯಾವುದೇ ಟೆಂಡರ್ ಅನ್ನು ಸ್ವೀಕರಿಸುವ ಇಲ್ಲವೆ ಯಾವುದೇ / ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿರುವವರು ಹೊಂದಿರುತ್ತಾರೆ.

ಸಹಿ/- (ನಿರ್ದೇಶಕರು),
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ.

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ ನಂ.2, ಹೂವಿನಹಡಗಲಿ, ವಿಜಯನಗರ ಜಿಲ್ಲೆ.
Ph. No. 08399-200001 email:eeslid2hdl@gmail.com

ಅಲ್ಪಾವಧಿಟೆಂಡರ್ ಪ್ರಕಟಣೆ(call-2)
(ONLY THROUGH "e-Procurement" SYSTEM)

ಉಲ್ಲೇಖ:ಈ ಕಛೇರಿಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ:1890/2025-26ದಿನಾಂಕ: 09.03.2026

ಸಿಂಗಟಾಲೂರು ಏತ ನೀರಾವರಿಯೋಜನೆ ಹೂವಿನಹಡಗಲಿ ವಿಭಾಗ-2 ಕಛೇರಿಯಿಂದ "Repairs to Canals of Right Side of Singataluru Lift Irrigation Scheme for the Year 2025-26" ಕಾಮಗಾರಿಗೆಉಲ್ಲೇಖಿತಟೆಂಡರ್ ಪ್ರಕಟಣೆಯಲ್ಲಿ ಸೂಚಿಸಿರುವಂತ, ಅರ್ಹಗುತ್ತಿಗೆದಾರರಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ **(KNNL/2025-26/OW/WORK_INDENT4082/call-2)** ಟೆಂಡರನ್ನು ಆಹ್ವಾನಿಸಲಾಗಿದೆ. ಅದರಂತೆ, ಸದರಿಕಾಮಗಾರಿಯಟೆಂಡರ್‌ಗೆಇಟ್ಟ ಮೊತ್ತವುರೂ. 423.46 ಲಕ್ಷ (ಜಿ.ಎಸ್.ಟಿ ಹೊರತುಪಡಿಸಿ) ಆಗಿರುತ್ತದೆ ಹಾಗೂ ಈ ಕಾಮಗಾರಿಗೆಇ.ಎಂ.ಡಿ. ಮೊತ್ತವುರೂ. 6.35 ಲಕ್ಷಆಗಿರುತ್ತದೆ.

ಇನ್ನುಳಿದಂತೆ, ಸದರಿಟೆಂಡರಿಗೆ ಸಂಬಂಧಿಸಿದ ಷರತ್ತು/ನಿಯುವಾವಳಿಗಳ ಮಾಹಿತಿಯನ್ನು ಕೆಳಗೆ ಸಹಿ ಮಾಡಿರುವಅಧಿಕಾರಿಯವರಕಛೇರಿಯಿಂದಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ:10.03.2026ರನಂತರ **"https://kppp.karnataka.gov.in"**, ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯೂಮೆಂಟ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಬಿಡ್‌ನ್ನು ಸಲ್ಲಿಸಬಹುದಾಗಿರುತ್ತದೆ. ಸದರಿಕಾಮಗಾರಿಯ ಟೆಂಡರ್‌ಗೆ ಬಿಡ್ಡನ್ನು ಸಲ್ಲಿಸಲುಕೊನೆಯ ದಿನಾಂಕ: 20.03.2026 ಎಂದು ಮತ್ತು ಟೆಂಡರ್ ತಾಂತ್ರಿಕಬಿಡ್ಡನ್ನುತೆರೆಯುವ ದಿನಾಂಕ: 23.03.2026 ಎಂದು ನಿಗದಿಪಡಿಸಲಾಗಿದೆ. ಅದರಂತೆ, ಸದರಿ ಟೆಂಡರ್‌ಗಳ ಕುರಿತುPre-bid ಸಭೆಯನ್ನು ದಿನಾಂಕ: 13.03.2026 ರಂದುಕಾರ್ಯಪಾಲಕಅಭಿಯಂತರರು, ಸಿಂಗಟಾಲೂರು ಏತ ನೀರಾವರಿಯೋಜನೆ, ನಂ.2 ವಿಭಾಗ, ಹೂವಿನಹಡಗಲಿ ಕಛೇರಿಯಲ್ಲಿ ನಿಗದಿಪಡಿಸಲಾಗಿರುತ್ತದೆ. ಇನ್ನಿತರೆ ಹೆಚ್ಚಿನ ಮಾಹಿತಿಯನ್ನು**e-procurement Helpdesk Phone No's:+91-80-46010000, +91-80-68948777**ಸಂಪರ್ಕಿಸಿ ಪಡೆಯಬಹುದಾಗಿದೆ. ನಿಬಂಧನೆಗೊಳಪಟ್ಟ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರ ಪಡೆದಿರುವಅಧಿಕಾರಿಯುಎಲ್ಲಾಅಥವಾಯಾವುದೇಟೆಂಡರ್‌ನ್ನುಕಾರಣ ನೀಡದೆತಿರಸ್ಕರಿಸುವಅಧಿಕಾರಿವನ್ನು ಹೊಂದಿರುತ್ತಾರೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಸಿಂಗಟಾಲೂರು ಏತ ನೀರಾವರಿಯೋಜನೆ, ನಂ. 2 ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಹೂವಿನಹಡಗಲಿ, ವಿಜಯನಗರಜಿಲ್ಲೆ.

ವಾ.ಸಾ.ಸಂ.ಇ/ವಿಜಯನಗರ/2025-26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/587

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋ.ಇ ವಿಭಾಗ, ಶಿವಮೊಗ್ಗ

ಟೆಂಡರ್ ಪ್ರಕಟಣೆ ಸಂಖ್ಯೆ ಕಾಪಾಅ/ಶಿವಿಶಿ/ಎಇ-2/ಐಎಫ್‌ಟಿ-61/2025-26
ದಿನಾಂಕ: 11-03-2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ ಪದ್ಧತಿ)

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೊಂದಾಯಿತ 3 ಮತ್ತು 4ನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ ಇ-ಪ್ರಕ್ಯೂರಮೆಂಟ್ ಪೋರ್ಟಲ್ ಆವೃತ್ತಿ-2.0 kppp.karnataka.gov.in ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ಮತ್ತು ಸಲ್ಲಿಸಲು ದಿನಾಂಕ:13-03-2026 ರಿಂದ 23-03-2026

ಪರಿಶಿಷ್ಟ ಜಾತಿ ಗುತ್ತಿಗೆದಾರರು ಭಾಗವಹಿಸಬಹುದಾದ ಕಾಮಗಾರಿ

5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (ರಾ.ಹೆ) **1**. ಹೊಸನಗರ ತಾಲ್ಲೂಕು 1 ಕಾಮಗಾರಿ (ಇಡೆಂಟ್ ಸಂ:32523)5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (ಜಿ.ಮು.ರ) **2**. ಹೊಸನಗರ ತಾಲ್ಲೂಕು 2 ಕಾಮಗಾರಿ (ಇಡೆಂಟ್ ಸಂ:32522, 32321)

ಪ್ರವರ್ಗ-2 ಎ

5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (ಜಿ.ಮು.ರ) **3**. ಹೊಸನಗರ ತಾಲ್ಲೂಕು 1 ಕಾಮಗಾರಿ (ಇ.ನಂ:34456)

ಎಲ್ಲಾ ಗುತ್ತಿಗೆದಾರರಿಗೆ ಭಾಗವಹಿಸಬಹುದಾದ ಕಾಮಗಾರಿಗಳು

5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (ರಾ.ಹೆ) **4**. ಹೊಸನಗರ ತಾಲ್ಲೂಕು 2 ಕಾಮಗಾರಿ (ಇಡೆಂಟ್ ಸಂ:28305, 34461) 5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (ಜಿ.ಮು.ರ) **5**. ಹೊಸನಗರ ತಾಲ್ಲೂಕು 4 ಕಾಮಗಾರಿ (ಇಡೆಂಟ್ ಸಂ: 32504, 34457, 32596, 32511) ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ (ಮಳೆಗಾಲ ಸೇರಿ) : 06 ತಿಂಗಳುಗಳು

ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ-ಪಕ್ಯೂರಮೆಂಟ್ ಪೋರ್ಟಲ್ ಆವೃತ್ತಿ-2.0 kppp.karnataka.gov.in ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182-274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080-25501216/ 080-25501227 ರಿಂದ ಮಾಹಿತಿ ಪಡೆಯಬಹುದು.

ಸಹಿ/- ಕಾ.ಇಂ, ಲೋಕೋಪಯೋಗಿ ಇಲಾಖೆ, ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25-26/86/03/2011

ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆ

ನಂ.1 ಕಟ್ಟಡಗಳ ವಿಭಾಗ, ಎಸ್.ಜೆ.ಪಿ. ಆವರಣ, ಬೆಂಗಳೂರು.
ದೂರವಾಣಿ: 080-22255210

ಸಂಖ್ಯೆ: ಕಾಅ/ಕವಿ.1/ಎಇ-3 & 4/2025-26/83 ದಿನಾಂಕ: 11.03.2026

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

ಮೇಲ್ಕಂಡ ಇಲಾಖೆಯ ಸೂಚಿತ ಸ್ಥಳಗಳಲ್ಲಿ ವಾರ್ಡ್‌ರೋಬ್ ಯುಪಿವಿಸಿ ಕಿಟಕಿಗಳು ಒದಗಿಸುವುದು, ಲೀಕೇಜ್ ತಡೆಯಲು ವಾಟರ್ ಪ್ರೂಫಿಂಗ್, ಪೇಂಟಿಂಗ್, ಮೇಲ್ವಿಚಾರಕರು/ಕೆಲಸಗಾರರ ಕ್ವಾರ್ಟರ್ಸ್ ನಿರ್ಮಾಣ, ಆಟೋಮ್ಯಾಟಿಕ್ ಕಮರ್ಷಿಯಲ್ ವಾಟರ್ ಸಾಫ್ಟನರ್ ಎಕ್ಯೂಪ್‌ಮೆಂಟ್ ಪೂರೈಕೆ, ಪೊಲೀಸ್ ವರಿಷ್ಠಾಧಿಕಾರಿ ಮತ್ತು ಪೊಲೀಸ್ ನಿರೀಕ್ಷಕರ ಕೊಠಡಿಗಳ ನವೀಕರಣ, ಮಾಸ್ ಪ್ರೊಡಕ್ಷನ್ ಯೂನಿಟ್ ನಿರ್ಮಾಣ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳು ಸೇರಿದಂತೆ **ಒಟ್ಟು 06** ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(http://kppp.karnataka.gov.in)** ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕಾಮಗಾರಿಗಿಟ್ಟ ಅಂದಾಜು ಮೊತ್ತ: **ಕನಿಷ್ಠ ರೂ.13.69 ಲಕ್ಷಗಳು, ಗರಿಷ್ಠ ರೂ.282.12 ಲಕ್ಷಗಳು.** ಇಎಂಡಿ: **ಕನಿಷ್ಠ ರೂ.34,300/-, ಗರಿಷ್ಠ ರೂ.4,23,200/-.** ಪ್ರತೀ ಕಾಮಗಾರಿಯ ಕಾಲಾವಧಿ: **2 ರಿಂದ 9 ತಿಂಗಳು.** ಕಾಮಗಾರಿಯ ದಸ್ತಾವೇಜು ಬೆಲೆ: ಕೆಪಿಪಿ ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: **ಕ್ರಸಂ.1 ರಿಂದ 5ಕ್ಕೆ 18.03.2026, ಸಂಜೆ 5.20 ಗಂಟೆಯೊಳಗೆ ಮತ್ತು ಕ್ರಸಂ.6ಕ್ಕೆ 20.03.2026, ಬೆಳಿಗ್ಗೆ 11.30 ಗಂಟೆಯೊಳಗೆ.** ಟೆಂಡರ್‌ಗಳನ್ನು ತೆರೆಯುವ ದಿನಾಂಕ: ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಕಾಮಗಾರಿಯ ಸಂಕ್ಷಿಪ್ತ ವಿವರ, ಅಂದಾಜು ಮೊತ್ತ, ಇಎಂಡಿ, ಕಾಲಾವಧಿ, ಮೀಸಲಾತಿ ಮತ್ತು ಇತರೆ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಚೇರಿಯಿಂದ ಅಥವಾ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಮೂಲಕ ಪಡೆಯಬಹುದು.

ವಾಸಸಂಇ/ಉಐ-ಸಿ.ಪಿ/6199/ಕೆಎಸ್‌ಎಂಸಿಎ/2025-26 **ಸಹಿ/-ಕಾರ್ಯಪಾಲಕ ಅಭಿಯಂತರರು.**

CHANGE OF NAME
I, **SHARAD THITE**
(old name) Resident of H No: 4433, Shivaji Nagar, 2nd Lane, Chikodi, Belagavi - 591237, have changed my name as **SHARAD PRABHAKAR THITE** (new name) henceforth I will be called and recognized by new name for all future purposes, dated: 12/03/2026.

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜನೀಯರರವರ ಕಚೇರಿ ಕನೀನಿನಿ.
ಕಾರ್ಯಾಗಾರ ಮತ್ತು ಯಾಂತ್ರಿಕ ವಿಭಾಗ ನವಿಲುತೀರ್ಥ-591116
ತಾಲೂಕು: ಸವದತ್ತಿ. ಜಿಲ್ಲಾ : ಬೆಳಗಾವಿ. ರಾಜ್ಯ: ಕರ್ನಾಟಕ
Dn e-mail : eewandmdivision@gmail.com

ಸಂಖ್ಯೆ/ಕಾ & ಯಾ/ಪಿಬಿ-1/ಇ-ಟೆಂಡರ/1012 ದಿನಾಂಕ:11/03/2026

ಅಲ್ಪಾವಧಿ ಟೆಂಡರ ಪ್ರಕಟಣೆ (4ನೇ ಕರೆ)
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ)
(ಏಕ ಲಕೋಟೆ ಪದ್ಧತಿಯಲ್ಲಿ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜನೀಯರ್, ಕನೀನಿನಿ, ಕಾರ್ಯಗಾರ ಮತ್ತು ಯಾಂತ್ರಿಕ ವಿಭಾಗದಡಿಯಲ್ಲಿ 2701 ಲೆಕ್ಕ ಶೀರ್ಷಿಕೆಯಡಿ ಈ ಕೆಳಗೆ ನಮೂದಿಸಿರುವ ಇಂಡೆಂಟ್ ನಂಬರಿನ ಕಾಮಗಾರಿಗೆ ಶೇಕಡವಾರು ಟೆಂಡರನ್ನು ಏಕ ಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.

ಇಂಡೆಂಟ್ ನಂ: 3613
ಕಾಮಗಾರಿಯ ಅಂದಾಜು ಮೊತ್ತ: ರೂ.41.55 ಲಕ್ಷ
ಇ.ಎಂ.ಡಿ ಮೊತ್ತ : ರೂ. 83120.00

ಇ-ಪೋರ್ಟಲ್ ಮೂಲಕ ಟೆಂಡರನ್ನು ದಿನಾಂಕ: 23/3/2026 ರಂದು ಸಂಜೆ 4.00 ಘಂಟೆಯವರೆಗೆ ಸಲ್ಲಿಸಬಹುದಾಗಿದೆ.ಬಿಡ್ ತೆರೆಯುವ ದಿನಾಂಕ: 24/3/2026 ರಂದು ಸಂಜೆ 5.00 ಘಂಟೆ.ಹಾಗೂ ಕಾಮಗಾರಿವಾರು ಇತರೆ ವಿವರಗಳನ್ನು ಇ-ಪ್ರೂಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ https://kppp.karnataka .gov.in ಪಡೆಯಬಹುದಾಗಿದೆ.ಹೆಚ್ಚಿನ ಮಾಹಿತಿಗಾಗಿ ಈ ಕಚೇರಿಯನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜನೀಯರ,
ಕನೀನಿನಿ.ಕಾರ್ಯಗಾರ ಮತ್ತು ಯಾಂತ್ರಿಕ ವಿಭಾಗ ನವಿಲುತೀರ್ಥ.

DIPR/BGM/RO-NO-2052/KSMCA/2025-26

ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಜಿಲ್ಲಾ ಅಧಿಕಾರಿಗಳ ಕಛೇರಿ, ಜಿಲ್ಲಾಡಳಿತ ಭವನ,#ಎಸ್.ಬಿ.4, 2ನೇ ಮಹಡಿ,
ಶಿಡ್ಲಘಟ್ಟ ರಸ್ತೆ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.
ದೂರವಾಣಿ ಸಂಖ್ಯೆ: 08156-277053
Email:dobcmchikkaballapura.gmail.com

ಸಂಖ್ಯೆ:ಹಿಂವಕಇ/ಚಿಪುರ/ಸಿಬ್ಬಂದಿ-53/2025-26
ದಿನಾಂಕ: 11.03.2026

: :ಟೆಂಡರ್ ಪ್ರಕಟಣೆ: :

2026-27ನೇ ಸಾಲಿನಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ, ತಾಲ್ಲೂಕು ಕಛೇರಿ, ವಿದ್ಯಾರ್ಥಿನಿಲಯಗಳಲ್ಲಿ ಮತ್ತು ವಸತಿ ಶಾಲೆ/ಕಾಲೇಜುಗಳಲ್ಲಿ ಖಾಲಿ ಇರುವ ಗ್ರೂಪ್ 'ಸಿ' ಮತ್ತು 'ಡಿ' ಹುದ್ದೆಗಳನ್ನು ತಾತ್ಕಾಲಿಕವಾಗಿ ಹೊರಸಂಪನ್ಮೂಲದಿಂದ ಪಡೆಯಲು ನೊಂದಾಯಿತ ಅರ್ಹ ಏಜನ್ಸಿ/ಸಂಸ್ಥೆಗಳ ಮುಖಾಂತರ ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ (E-Procurement) ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

(1) ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 13.04.2026 ಸಂಜೆ 5:00 ಗಂಟೆಗೆ. (2) ಪೂರ್ವಭಾವಿ ಸಭೆ (Pre Bid) ದಿನಾಂಕ: 23.03.2026 ಬೆಳಗ್ಗೆ 11:00 ಗಂಟೆಗೆ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ಚಿಕ್ಕಬಳ್ಳಾಪುರ ಜಿಲ್ಲೆ. (3) ತಾಂತ್ರಿಕ ಟೆಂಡರ್‌ನ್ನು ತೆರೆಯುವ ದಿನಾಂಕ: 15.04.2026 ಸಂಜೆ 5:30 ಗಂಟೆಗೆ. (4) ಆರ್ಥಿಕ ಟೆಂಡರ್‌ನ್ನು ತೆರೆಯುವ ದಿನಾಂಕ: 18.04.2026 ರಂದು ಬೆಳಗ್ಗೆ 10:30 ಗಂಟೆಗೆ. ಅರ್ಹ ಟೆಂಡರ್‌ದಾರರು ಟೆಂಡರ್‌ನ್ನು kpp Protal ಮೂಲಕ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ https://kppp.karnataka.gov.in/ ನಲ್ಲಿ ನೋಡುವುದು (ದೂ.ಸಂ: +91-8046010000, +91-8068948777) ಹಾಗೂ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಜಿಲ್ಲಾಡಳಿತ ಭವನ, #ಎಸ್‌ಬಿ-4, 2ನೇ ಮಹಡಿ, ಶಿಡ್ಲಘಟ್ಟ ರಸ್ತೆ ಚಿಕ್ಕಬಳ್ಳಾಪುರ ಜಿಲ್ಲೆ ಇಲ್ಲಿ ಪಡೆಯಬಹುದಾಗಿದೆ. (ಕಛೇರಿ ದೂ.ಸಂ: 08156-277053).

ಸಹಿ/-
ಜಿಲ್ಲಾ ಅಧಿಕಾರಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:485/ಕೆಎಸ್‌ಎಂಸಿಎ/2025-26

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.

ಸಂಖ್ಯೆ:ಕಾಪಾಅ/ಪಂರಾಇಂ/ವಿಯಾ/ವಿವಿಯೋ/ಟೆ.ಪ್ರ/ತಾಸ-2/2025-26/2177 ದಿನಾಂಕ:12.03.2026

ಸಂಕ್ಷಿಪ್ತ ಟೆಂಡರ ಪ್ರಕಟಣೆ (ಅಲ್ಪಾವಧಿ) (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

1) ಕಾಮಗಾರಿ ಹೆಸರು ಮತ್ತು ಇಂಟೆಂಡ್ ಸಂಖ್ಯೆ:: (1) ವಡಗೇರಾ ತಾಲೂಕಿನ ಉಳ್ಳೆಸೂಗುರ ದಿಂದ ಗುಲಸರಂ ರಸ್ತೆ ಸುಧಾರಣೆ RDPR/2025-26/RD/WORK_INDENT24973 Other (2) ಮುಂಡರಗಿ ಗ್ರಾಮದ ಕ್ಯಾಟೇರ ಮಹಾದೇವಪ್ಪ ಮನೆಯಿಂದ ನಾಗಪ್ಪ ದೊರೆ ಮನೆಯವರೆಗೆ ಸಿ.ಸಿ. ರಸ್ತೆ ಮತ್ತು ಚರಂಡಿ ನಿರ್ಮಾಣ RDPR/2025-26/RD/WORK_INDENT25421 Other (3) ಯಾದಗಿರಿ ನಗರದ ವಾರ್ಡ ನಂ. 25ರ ಲಿಂಗಣ್ಣ ಪೂಜಾರಿ ಮನೆಯಿಂದ ಮಜರ ಹುಸೇನ್ ಮನೆಯವರೆಗೆ ಸಿ.ಸಿ. ರಸ್ತೆ ಮತ್ತು ಚರಂಡಿ ನಿರ್ಮಾಣ RDPR/2025-6/OW/WORK_INDENT25422 Other (4) ಯಾದಗಿರಿ ದೋರನಹಳ್ಳಿ ಗ್ರಾಮದ ಬಿ.ಆರ್. ಅಂಬೇಡ್ಕರ್ ನಗರ ಮಲ್ಲಮ್ಮ ಪೂಜಾರಿ ಮನೆಯಿಂದ ಹನುಮಂತ ಮಾಡ್ನಾಳ್ ಗ್ರಾಮದ ವರೆಗೆ ಸಿ.ಸಿ. ರಸ್ತೆ ಮತ್ತು ಚರಂಡಿ ಕಾಮಗಾರಿ RDPR/2025-26/RD/WORK_INDENT24843 Other (5) ಯಾದಗಿರಿ ನಗರದ ವಾರ್ಡ ನಂ. 25ರಲ್ಲಿ ಪಾಂಡು ಶೇಂಡಿಗಿ ಮನೆಯಿಂದ ನಾಗರಾಜ ದುಖಾನ ವರೆಗೆ ಇಂಟರಲಾಕ್ RDPR/2025-26/OW/WORK_INDENT25423 Other **2) ಲೆಕ್ಕ ಶೀರ್ಷಿಕೆ:** 2025-26ನೇ ಸಾಲಿನ ಮಾನ್ಯ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆ, 2025-26ನೇ ಸಾಲಿನ 5054 ಯೋಜನೆ.& 2024-26ನೇ ಸಾಲಿನ ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆ. **3) ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ 2.60 ಮತ್ತು ಗರಿಷ್ಠ ರೂ. 50.00 ಲಕ್ಷ 4) ಗುತ್ತಿಗೆದಾರರ ದರ್ಜೆ: 3ನೇ ಹಾಗೂ 4ನೇ ಮೇಲ್ಪಟ್ಟು ದರ್ಜೆ ಮೇಲ್ಪಟ್ಟು **5) ಟೆಂಡರ ಫಾರಂ ಪಡೆಯಲು ಕೊನೆಯ ದಿನಾಂಕ:** 13.03.2026 ರಿಂದ 23.03.2026 ಸಾಯಂಕಾಲ 4:00 ಗಂಟೆವರೆಗೆ **6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ:** ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ (ಅರ್ಜಿ ಶುಲ್ಕ ಹಿಂದಿರುಗಿಸಲಾಗುವುದಿಲ್ಲಾ) **7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ:**23.03.2026 ಸಾಯಂಕಾಲ 4:00 ಗಂಟೆವರೆಗೆ **8) ಟೆಂಡರ ತೆರೆಯುವ ದಿನಾಂಕ ಆರ್ಥಿಕ:**25.03.2026 ಬೆಳ್ಳಿಗೆ 11:00 ನಂತರ **9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ಅವಧಿಯಲ್ಲಿ):** ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ. **10) ಅಂತರಜಾಲ ತಾಣದ ವಿಳಾಸ:** https://kppp.karnataka.gov.in

ಸೂಚನೆ :- ಟೆಂಡರರಿಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ https://kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು (ರಜಾದಿನಗಳು ಹೊರತುಪಡಿಸಿ).

ಸಹಿ/- ಕಾರ್ಯಪಾಲಕ ಇಂಜಿನೀಯರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.

ವಾ.ಸಾ.ಸಂ.ಇ/ಯಾದಗಿರ/589/ಕೆ.ಎಸ್.ಎಂ.ಸಿ.&ಎ/2025-26

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ (ಪರಿಸರ), ಹುಬ್ಬಳ್ಳಿ - 580029.

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯು ಈ ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಅರ್ಹ ಏಜೆನ್ಸಿಗಳಿಂದ ಟೆಂಡರ್‌ನ್ನು ಆಹ್ವಾನಿಸಿದೆ.

ಕ್ರ ಸಂ.	ಇಂಡೆಂಟ್ ಸಂಖ್ಯೆ.	ಟೆಂಡರ್‌ಗಿಟ್ಟ ಮೊತ್ತ (ರೂ. ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1	DMA/2025-26/PM/ WORK_INDENT56356	49,00,000/-	98,000/-	20-03-2026 ಸಮಯ ಸಂಜೆ 4.30 ಘಂಟೆವರೆಗೆ	23-03-2026 ಸಮಯ ಬೆಳಿಗ್ಗೆ 10.30 ಘಂಟೆ

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಕುರಿತು ಮಾಹಿತಿಯನ್ನು ದಿನಾಂಕ: **13-03-2026** ರಿಂದ ವೆಬ್‌ಸೈಟ್: **www.kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳ ಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಪರಿಸರ)
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ.

ವಾ.ಸಾ.ಇ/ಧಾರವಾಡ/1349/ಅಡ್ವರ್ಟೈಸ್/2025-26

CHANGE OF NAME
I, SANGEETA
D/o NINGAPPA SHIRAHATTI
1st Cross, Ayodhya Nagar, Mysore Chawl, Hubballi
After My Marriage Solemnly affirmed, confirmed and changed my name as
SANGEETA
W/o VIJAYKUMAR BALLARY
vide affidavit sworn before Advocate, Notary, **M.A. SHIVALLI**
Hubballi on 12.03.2026

CHANGE OF NAME
I, **VAISHALI NAIK**
(old name) R/o. 1037/2 Ajjikatta Shedageri Ankola 581314, have changed my name as **VAISHALI SADANAND NAIK** (new name) henceforth I will be called and recognized by new name for all future purposes, dated: 12/03/2026.

CHANGE OF NAME
I, **MOHAMMADARSLAN**
(Old Name) Age: 34 Occ: Self Employed , R/o Ward No: 20 J M Road Near Zanda Katta Pitli Galli Vijayapura, Karnataka, Pin Code: 586104, I have changed my Name as **MOHAMMADARSLAN INAMDAR** (New Name) for all purposes affidavit dtd. 12-03-2026 Sworn before notory **M.M.Mulla** at Vijayapura Reg no 20410.

CHANGE OF NAME
I, **SHRADHA WANTAMUTTE**
(old name) Resident of Indira Nagar Chikodi - 591201, have changed my name as **SHRADHA SATISH WANTAMUTTE** (new name) henceforth I will be called and recognized by new name for all future purposes, dated: 12/03/2026.

CHANGE OF NAME
I, **VARSHA THITE**
(old name) Resident of H No: 4433, Shivaji Nagar, 2nd Lane, Chikodi, Belagavi - 591237, have changed my name as **VARSHA SHARAD THITE** (new name) henceforth I will be called and recognized by new name for all future purposes, dated: 12/03/2026.

ಭಾರತೀಯ ಕ್ರಿಕೆಟ್‌ಗೆ ನೀಡಿದ ಅಪಾರ ಕೊಡುಗೆಗಾಗಿ ದ್ರಾವಿಡ್‌ಗೆ ಜೀವಮಾನದ ಪ್ರಶಸ್ತಿ

ಜೀವಮಾನದ ಗೋಡೆಗೆ ಬಿಸಿಸಿಐ ಗರಿ



ಮುಂಬೈ: ಭಾರತೀಯ ಕ್ರಿಕೆಟ್ ತಂಡದ ಮಾಜಿ ನಾಯಕ, ಕ್ರಿಕೆಟ್ ಗೋಡೆ (ವಾಲ್) ಮತ್ತು ಟಿ20 ವಿಶ್ವಕಪ್ ಗೆಲ್ಲಿಸಿದ ಕೋಚ್ ರಾಹುಲ್ ದ್ರಾವಿಡ್ ಅವರಿಗೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಸಿ.ಕೆ. ನಾಯ್ಡು ಜೀವಮಾನದ ಸಾಧನೆ ಪ್ರಶಸ್ತಿಯನ್ನು ಘೋಷಿಸಿದ್ದು, ಮಾ.15ರಂದು ತನ್ನ ವಾರ್ಷಿಕ ನಮನ ಪ್ರಶಸ್ತಿ ಕಾರ್ಯಕ್ರಮದಲ್ಲಿ ಪ್ರದಾನ ಮಾಡಲಿದೆ. ಭಾರತ ಟೆಸ್ಟ್ ಮತ್ತು ಏಕದಿನ ತಂಡಗಳ ನಾಯಕ ಶುಬ್ಮನ್ ಗಿಲ್ ಅವರಿಗೆ ವರ್ಷದ ಕ್ರಿಕೆಟಿಗ ಪ್ರಶಸ್ತಿಯನ್ನು ಬುಧವಾರ ಘೋಷಿಸಿದೆ.

ಭಾರತೀಯ ಕ್ರಿಕೆಟ್‌ಗೆ ರಾಹುಲ್ ದ್ರಾವಿಡ್ ನೀಡಿದ ಅಪಾರ ಕೊಡುಗೆಯನ್ನು ಗುರುತಿಸಿ ಬಿಸಿಸಿಐ ಈ ಪ್ರಶಸ್ತಿಯನ್ನು ನೀಡಲಿದೆ. ದ್ರಾವಿಡ್ ಅವರನ್ನು ಹಿರಿಯ ಭಾರತೀಯ ಪುರುಷರ ತಂಡದ ಮುಖ್ಯ ಕೋಚ್ ಆಗಿ ನೇಮಕ ಮಾಡಲಾಗಿತ್ತು. ಆ ಸಮಯದಲ್ಲಿ ಅವರು ನಾಯಕ ರೋಹಿತ್ ಶರ್ಮಾ ಜತೆಗೂಡಿ ಟಿ20 ವಿಶ್ವಕಪ್ ಗೆಲ್ಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. 1990ರ ದಶಕದ ಕೊನೆಯ ಭಾಗದಿಂದ 2000ರ ದಶಕದ ಬಹುತೇಕ ಅವಧಿಯಲ್ಲಿ ಸಚಿನ್ ತೆಂಡೂಲ್ಕರ್, ಸೌರವ್ ಗಂಗೂಲಿ, ವಿ.ವಿ.ಎಸ್. ಲಕ್ಷ್ಮಣ್ ಹಾಗೂ ವಿರೇಂದ್ರ ಸೆಹ್ವಾಗ್ ಸೇರಿದಂತೆ ಬಲಿಷ್ಠ ಬ್ಯಾಟಿಂಗ್ ಕ್ರಮಾಂಕವನ್ನು ಕಟ್ಟುವುದರಲ್ಲಿ ಪ್ರಮುಖ ಪಾತ್ರವಹಿಸಿದ್ದ ದ್ರಾವಿಡ್ ತಮ್ಮ ಪೀಳಿಗೆಯ ಅತ್ಯುತ್ತಮ ಆಟಗಾರರಲ್ಲಿ ಒಬ್ಬರಾಗಿ ವಿಶ್ವವಿಖ್ಯಾತರಾಗಿದ್ದರು.

36 ಟೆಸ್ಟ್ ಶತಕ

ಬೆಂಗಳೂರು ಮೂಲದ ಈ ಬ್ಯಾಟ್ಸ್‌ಮನ್ ಲಾರ್ಡ್ಸ್‌ನಲ್ಲಿ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ತಮ್ಮ ಮೊದಲ ಪಂದ್ಯದಲ್ಲೇ 95 ರನ್ ಗಳಿಸಿ ಶತಕವನ್ನು ಕೇವಲ 5 ರನ್‌ಗಳಿಂದ ತಪ್ಪಿಸಿಕೊಂಡಿದ್ದರು. ಆದರೆ ಮುಂದಿನ 16 ವರ್ಷಗಳಲ್ಲಿ 164 ಟೆಸ್ಟ್ ಪಂದ್ಯಗಳಲ್ಲಿ 36 ಶತಕಗಳನ್ನು ಬಾರಿಸಿ 52.31ರ ಅದ್ಭುತ ಸರಾಸರಿಯಲ್ಲಿ ಒಟ್ಟು 13,288 ರನ್ ಕಲೆಹಾಕಿದ್ದರು.

ಏಕದಿನದಲ್ಲೂ 10,000 ರನ್

ಏಕದಿನ ಕ್ರಿಕೆಟ್‌ನಲ್ಲಿ 53 ವರ್ಷದ ದ್ರಾವಿಡ್ ಅವರು 344 ಪಂದ್ಯಗಳಲ್ಲಿ 10,889 ರನ್ ಗಳಿಸಿದ್ದು, ಅದರಲ್ಲಿ 12 ಶತಕಗಳು ಮತ್ತು 83 ಅರ್ಧಶತಕಗಳು ಸೇರಿವೆ. ಟೆಸ್ಟ್ ಮತ್ತು ಏಕದಿನ ಎರಡರಲ್ಲೂ 10,000ಕ್ಕಿಂತ ಹೆಚ್ಚು ರನ್ ಗಳಿಸಿದ ಕೆಲವೇ ಆಟಗಾರರಲ್ಲಿ ದ್ರಾವಿಡ್ ಒಬ್ಬರು. ಏಕದಿನಗಳಲ್ಲಿ ಭಾರತ ಪರ ಎರಡನೇ ಅತಿ ವೇಗದ ಅರ್ಧಶತಕ ದಾಖಲೆಯನ್ನೂ ಅವರು ಹಂಚಿಕೊಂಡಿದ್ದಾರೆ.

ನಿವೃತ್ತಿಗೆ ಮುನ್ನ ಏಕೈಕ ಟಿ20!

2011ರಲ್ಲಿ ಮ್ಯಾಂಚೆಸ್ಟರ್‌ನಲ್ಲಿ ನಡೆದ ಪಂದ್ಯದಲ್ಲಿ ಭಾರತ ಪರ ಏಕೈಕ ಟಿ20 ಅಂತಾರಾಷ್ಟ್ರೀಯ ಪಂದ್ಯವನ್ನೂ ಆಡಿದ ಅವರು ಸತತ ಮೂರು ಸಿಕ್ಸರ್‌ಗಳನ್ನು ಬಾರಿಸಿದ್ದರು.

ಗಂಭೀರ್ ಕೃತಜ್ಞತೆ

ಇತ್ತೀಚೆಗೆ ಅವರ ಉತ್ತರಾಧಿಕಾರಿ ಗೌತಮ್ ಗಂಭೀರ್, ಭಾರತ ಸಾಧಿಸಿದ ಐತಿಹಾಸಿಕ ಮೂರನೇ ಟಿ20 ವಿಶ್ವಕಪ್ ಗೆಲುವನ್ನು ದ್ರಾವಿಡ್ ಮತ್ತು ಲಕ್ಷ್ಮಣ್‌ರಿಗೆ ಅರ್ಪಿಸಿದ್ದು, ಅವರಿಬ್ಬರ ಅಪಾರ ಕೊಡುಗೆಗೆ ಕೃತಜ್ಞತೆ ಸಲ್ಲಿಸಿದ್ದರು. ಮೊದಲು ಈ ಟ್ರೋಫಿಯನ್ನು ರಾಹುಲ್ ಭಾಯ್ ಅವರಿಗೆ ಸಮರ್ಪಿಸಬೇಕು ಎಂದು ಭಾವಿಸುತ್ತೇನೆ. ಭಾರತೀಯ ಕ್ರಿಕೆಟ್ ಉತ್ತಮ ಸ್ಥಿತಿಯಲ್ಲಿ ಇರಲು ಅವರು ಕಾರಣ, ಅವರಿಗೆ ಕೃತಜ್ಞತೆಗಳು ಎಂದು ಗಂಭೀರ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದರು.



ವರ್ಷದ ಅಂ. ಕ್ರಿಕೆಟಿಗ ಗಿಲ್

ಭಾರತ ಟೆಸ್ಟ್ ಮತ್ತು ಏಕದಿನ ತಂಡದ ನಾಯಕ ಶುಬ್ಮನ್ ಗಿಲ್ ಅವರಿಗೆ ಬಿಸಿಸಿಐ ಪಾಲಿ ಉಮ್ರಿಗರ್ ವರ್ಷದ ಅಂತಾರಾಷ್ಟ್ರೀಯ ಕ್ರಿಕೆಟರ್ (ಪುರುಷ) ಪ್ರಶಸ್ತಿಯನ್ನು ಮಾ.15ರಂದು ಪ್ರದಾನ ಮಾಡಲಿದೆ. ಕಳೆದ ತಿಂಗಳು ತವರಿನಲ್ಲೇ ನಡೆಯಲಿರುವ ಟಿ20 ವಿಶ್ವಕಪ್‌ಗಾಗಿ ತಂಡದಲ್ಲಿ ಸ್ಥಾನ ಪಡೆಯುವಲ್ಲಿ ವಿಫಲರಾಗಿದ್ದ ಶುಬ್ಮನ್, ಎಲ್ಲಾ ವಿಭಾಗಗಳಲ್ಲಿ ರನ್ ಬರ ಅನುಭವಿಸುತ್ತಿದ್ದರು. 2025ರ ಇಂಗ್ಲೆಂಡ್ ಪ್ರವಾಸದಲ್ಲಿ 70ಕ್ಕೂ ಹೆಚ್ಚಿನ ಸರಾಸರಿಯಲ್ಲಿ 754 ರನ್ ಸೇರಿ ಕ್ಯಾಲೆಂಡರ್ ವರ್ಷದಲ್ಲಿ 983 ರನ್ ಕಲೆಹಾಕಿದ್ದಾರೆ. ಏಕದಿನ ಕ್ರಿಕೆಟ್‌ನಲ್ಲಿ ಚಾಂಪಿಯನ್ ಟ್ರೋಫಿ ಗೆದ್ದ ಭಾರತ ತಂಡಕ್ಕಾಗಿ 188 ರನ್ ಸೇರಿ ಒಟ್ಟು 490 ರನ್ ಕಲೆಹಾಕಿದ್ದಾರೆ. ಒಟ್ಟಾರೆ 49ರ ಸರಾಸರಿಯಲ್ಲಿ 1,764 ರನ್ ಕಲೆಹಾಕಿದ್ದು, ಇದರಲ್ಲಿ 7 ಶತಕಗಳು ಮತ್ತು 3 ಅರ್ಧಶತಕಗಳನ್ನು ಒಳಗೊಂಡಿವೆ.

ಲಕ್ಷ್ಮಣ್ ಜತೆಗೂಡಿ ಶ್ರೇಷ್ಠ ಟೆಸ್ಟ್ ಇನ್ನಿಂಗ್ಸ್

ದ್ರಾವಿಡ್ ಶ್ರೇಷ್ಠ ಇನ್ನಿಂಗ್ಸ್‌ಗಳಲ್ಲಿ 2001ರಲ್ಲಿ ಕೋಲ್ಕತ ಟೆಸ್ಟ್‌ನಲ್ಲಿ ದಾಖಲಾಗಿದ್ದು, ಆಸ್ಟ್ರೇಲಿಯಾ ವಿರುದ್ಧ ಸೌರವ್ ಗಂಗೂಲಿ ನೇತೃತ್ವದ ಭಾರತ ಐತಿಹಾಸಿಕ ಗೆಲುವು ಸಾಧಿಸುವಲ್ಲಿ ರೂವಾರಿ ಆಗಿದ್ದರು. ಈಡನ್‌ನಲ್ಲಿ ದ್ರಾವಿಡ್ ಮತ್ತು ಲಕ್ಷ್ಮಣ್ 376 ರನ್‌ಗಳ ಭಾರೀ ಜತೆಯಾಟದಿಂದ ಭಾರತ, ಸ್ಟೀವ್ ವಾ ನೇತೃತ್ವದ ಆಸ್ಟ್ರೇಲಿಯಾದ 16 ಪಂದ್ಯಗಳ ಗೆಲುವಿನ ನಾಗಾಲೋಟವನ್ನು ಮುರಿದಿತ್ತು. ಎರಡನೇ ಇನ್ನಿಂಗ್ಸ್‌ನಲ್ಲಿ ಆರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದಿದ್ದ ದ್ರಾವಿಡ್ 180 ರನ್ ಕಲೆಹಾಕುವ ಮೂಲಕ ಆಸ್ಟ್ರೇಲಿಯನ್ನರನ್ನು ಕಂಗೆಡಿಸಿದರು.



ಕೋಚಿಂಗ್ ವೃತ್ತಿಜೀವನ

2015ರಲ್ಲಿ ಭಾರತ ಅಂಡರ್-19 ಹಾಗೂ ಭಾರತ ಎ ತಂಡಗಳ ಕೋಚ್ ಆಗಿ ನೇಮಕಗೊಂಡ ಅವರು 2016ರಲ್ಲಿ ವಿಶ್ವಕಪ್ ಫೈನಲ್‌ಗೆ ಮತ್ತು 2018ರಲ್ಲಿ ವಿಶ್ವಕಪ್ ಪ್ರಶಸ್ತಿ ಗೆಲುವಿನತ್ತ ತಂಡ ಮುನ್ನಡೆಸಿದ್ದರು. 2019ರಲ್ಲಿ ಆ ಹುದ್ದೆಯಿಂದ ನಿವೃತ್ತರಾದ ನಂತರ ಕುಟುಂಬಕ್ಕೆ ಹೆಚ್ಚಿನ ಸಮಯ ನೀಡುವ ಉದ್ದೇಶದಿಂದ ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. 2021ರಲ್ಲಿ ಭಾರತೀಯ ಹಿರಿಯ ಪುರುಷರ ತಂಡದ ಮುಖ್ಯ ಕೋಚ್ ಆಗಿ ನೇಮಕಗೊಂಡರು. ಈ ಅವಧಿಯಲ್ಲಿ ಭಾರತ 2023ರ ಕ್ರಿಕೆಟ್ ವಿಶ್ವಕಪ್ ಫೈನಲ್‌ಗೆ ತಲುಪಿತು ಮತ್ತು 2024ರ ಐಸಿಸಿ ಪುರುಷರ ಟಿ20 ವಿಶ್ವಕಪ್ ಗೆದ್ದು 17 ವರ್ಷಗಳ ಟಿ20 ವಿಶ್ವಕಪ್ ಟ್ರೋಫಿ ಬರವನ್ನು ನೀಗಿಸಿತ್ತು.

ಚೊಚ್ಚಲ ಎಟಿಪಿ ಮಾಸ್ಟರ್ಸ್ 1000 ಸೆಮಿಫೈನಲ್ ಪ್ರವೇಶ

ಇಂಡಿಯನ್ ವೆಲ್ಸ್ ಸೆಮಿಗೇರಿದ ಭಾಂಬ್ರಿ

ಕ್ಯಾಲಿಫೋರ್ನಿಯಾ: ಭಾರತೀಯ ಟೆನಿಸ್ ತಾರೆ ಯೂಕಿ ಭಾಂಬ್ರಿ ಅವರು ಚೊಚ್ಚಲ ಎಟಿಪಿ ಮಾಸ್ಟರ್ಸ್ 1000 ಸೆಮಿಫೈನಲ್‌ಗೇರಿದ ವೈಯಕ್ತಿಕ ದಾಖಲೆ ಬರೆದಿದ್ದಾರೆ. ಇಂಡಿಯನ್ ವೆಲ್ಸ್ ಪುರುಷರ ಡಬಲ್ಸ್‌ನಲ್ಲಿ ಸ್ವೀಡನ್ ಟೆನಿಸಿಗ ಆಂಡ್ರೆ ಗೊರಾನ್ಸನ್ ಜತೆಗೂಡಿ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ.


ಅಲೆಗ್ಸಾಂಡರ್ ಎರ್ಲರ್ ಮತ್ತು ಆಂಡ್ರಿಯಾ ವವಸ್ಸೋರಿ ಅವರ ಆಸ್ಟ್ರಿಯಾ-ಇಟಲಿ ಜೋಡಿಯನ್ನು ನೇರ ಸೆಟ್‌ಗಳಲ್ಲಿ ಸೋಲಿಸಿ ಇಂಡಿಯನ್ ವೆಲ್ಸ್ ನಲ್ಲಿ ನಡೆಯುತ್ತಿರುವ ಎಟಿಪಿ ಮಾಸ್ಟರ್ಸ್ 1000 ಟೂರ್ನಿಯ ಸೆಮಿಫೈನಲ್‌ಗೆ ಮೊದಲ ಬಾರಿಗೆ ಪ್ರವೇಶಿಸಿದರು. 33 ವರ್ಷದ ಭಾರತೀಯ ಆಟಗಾರ ಇದಕ್ಕೂ ಮೊದಲು ಎಟಿಪಿ ಮಾಸ್ಟರ್ಸ್ 1000 ಮಟ್ಟದಲ್ಲಿ ಎರಡು ಬಾರಿ ಡಬಲ್ಸ್ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದರು. ಇದರಲ್ಲಿ ಕಳೆದ ವರ್ಷದ ಇಂಡಿಯನ್ ವೆಲ್ಸ್ ಕ್ವಾರ್ಟರ್ ಫೈನಲ್ ಸೇರಿದೆ. ಕ್ವಾರ್ಟರ್ ಫೈನಲ್‌ನಲ್ಲಿ ಭಾಂಬ್ರಿ ಮತ್ತು ಗೋರಾನ್ಸನ್ ಆಸ್ಟ್ರಿಯಾ-ಇಟಲಿ ಜೋಡಿಯನ್ನು 6-3, 7-6 ನೇರ ಸೆಟ್‌ಗಳಿಂದ ಸೋಲಿಸಿದರು. ಒಂದು ಗಂಟೆ 30 ನಿಮಿಷಕ್ಕಿಂತ ಹೆಚ್ಚು ಕಾಲ ನಡೆದ ಈ ಪಂದ್ಯದಲ್ಲಿ ಭಾರತ-ಸ್ವೀಡನ್ ಪುರುಷರ ಜೋಡಿ ಜಯ ಸಾಧಿಸಿತು. ಭಾರತ-ಸ್ವೀಡನ್ ಜೋಡಿ ತಮ್ಮ ಮೊದಲ ಸರ್ವ್‌ನಲ್ಲಿ ಪ್ರಾಬಲ್ಯ ಸಾಧಿಸಿ ಶೇ.83 ಅಂಕಗಳನ್ನು (29/35) ಗೆದ್ದರು. ಇದು ಎರಡನೇ ಸೆಟ್‌ನ ಟೈಬ್ರೇಕ್ ಗೆಲ್ಲಲು ಹಾಗೂ ಪಂದ್ಯವನ್ನು ಮುಕ್ತಾಯಗೊಳಿಸಲು ಪ್ರಮುಖ ಕಾರಣವಾಯಿತು. ಸೆಮಿಫೈನಲ್‌ನಲ್ಲಿ ಅವರು ಶುಕ್ರವಾರ ಫ್ರಾನ್ಸ್‌ನ ಆರ್ಥರ್ ರಿಂಡರ್‌ನೆಕ್ ಮತ್ತು ಮೊನಾಕೊದ ವಾಲೆಂಟಿನ್ ವಾಶೆರೋಟ್ ಜೋಡಿಯನ್ನು ಎದುರಿಸಲಿದ್ದಾರೆ.



ರಿಂಡರ್‌ನೆಕ್ ಮತ್ತು ವಾಶೆರೋಟ್ ಕ್ವಾರ್ಟರ್ ಫೈನಲ್‌ನಲ್ಲಿ ರಷ್ಯಾದ ಆಂಡ್ರೆ ರುಬ್ಲೆವ್ ಮತ್ತು ಕರೇನ್ ಖಾಚನೋವ್ ಜೋಡಿಯನ್ನು 6-3, 6-4 ನೇರ ಸೆಟ್‌ಗಳಿಂದ ಸೋಲಿಸಿದ್ದರು.

ಅಲ್ಕರಾಜ್, ಇಗಾ ಕ್ವಾರ್ಟರ್ ಪ್ರವೇಶ

ವಿಶ್ವ ನಂ.1 ಆಟಗಾರ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಇಂಡಿಯನ್ ವೆಲ್ಸ್ ನಲ್ಲಿ ತಮ್ಮ ಅಜೇಯ ಗೆಲುವಿನ ಓಟ ಮುಂದುವರಿಸಿದ್ದು, ಬುಧವಾರ ಕ್ವಾರ್ಟರ್ ಫೈನಲ್‌ನಲ್ಲಿ ನಾರ್ವೆ ಆಟಗಾರ ಕ್ಯಾಸ್ಪರ್ ರೂಡ್ ಅವರನ್ನು 6-1, 7-6(2) ಸೆಟ್‌ಗಳಿಂದ ಸೋಲಿಸಿ ಸೆಮಿಫೈನಲ್‌ಗೆ ಲಗ್ಗೆ ಇಟ್ಟಿದ್ದಾರೆ. ಋತುವಿನ ಸತತ 15ನೇ ಗೆಲುವು ದಾಖಲಿಸಿದ ಅಲ್ಕರಾಜ್, ಇಂಡಿಯನ್ ವೆಲ್ಸ್‌ನಲ್ಲಿ ಸತತ 5ನೇ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ. ಮಹಿಳೆಯರ ಸಿಂಗಲ್ಸ್ ನಾಲ್ಕನೇ ಸುತ್ತಿನಲ್ಲಿ ಜೆಕ್ ಗಣರಾಜ್ಯದ 13ನೇ ಶ್ರೇಯಾಂಕದ ಆಟಗಾರ್ತಿ ಕ್ಯಾರೊಲಿನಾ ಮೂಹೋವ ಅವರನ್ನು 6-2, 6-0 ನೇರ ಸೆಟ್‌ಗಳಿಂದ ಪರಾಭವಗೊಳಿಸಿದ ವಿಶ್ವ ನಂ.2 ಇಗಾ ಸ್ವಿಯಾಟೆಕ್ ಇಂಡಿಯನ್ ವೆಲ್ಸ್ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ.



ಜೊಕೊವಿಚ್ ಮಣಿಸಿ ಸೆಮಿಗೇರಿದ ಡ್ರೇಪರ್!

ಐದು ಬಾರಿಯ ಇಂಡಿಯನ್ ವೆಲ್ಸ್ ಚಾಂಪಿಯನ್ ಸರ್ಬಿಯಾ ತಾರೆ ನೊವಾಕ್ ಜೊಕೊವಿಚ್ ಅವರನ್ನು ಹಾಲಿ ಚಾಂಪಿಯನ್ ಜೇಕ್ ಡ್ರೇಪರ್ ಸೋಲಿಸಿದ್ದಾರೆ. ಜೊಕೊ ಮಣಿಸಿದ ಡ್ರೇಪರ್ ಸೆಮಿಫೈನಲ್‌ಗೇರಿದ್ದಾರೆ. ಬುಧವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಡ್ರೇಪರ್ ಎದುರು 4-6, 6-4, 7-6 (7/5) ಸೆಟ್‌ಗಳ ಅಂತರದಿಂದ ಜೊಕೊವಿಚ್ ಸೋತಿದ್ದಾರೆ. ಭಾರೀ ಪೈಪೋಟಿ ಎದುರಾದ ಮೂರನೇ ಸೆಟ್ ನಲ್ಲಿ ಡ್ರೇಪರ್ ಕೊನೆಗೂ ಮೇಲುಗೈ ಸಾಧಿಸಿದರು.

ಕಿರುಸುದ್ದಿ

ಇಸಿ ದಿನಾಂಕ ಘೋಷಣೆ ಬಳಿಕ ಐಪಿಎಲ್ ಪೂರ್ಣ ವೇಳಾಪಟ್ಟಿ

ಮುಂಬೈ: ಐಪಿಎಲ್ 2026ನೇ ಆವೃತ್ತಿಯ ಮೊದಲ 20 ದಿನಗಳ ವೇಳಾಪಟ್ಟಿಯನ್ನು ಬಿಸಿಸಿಐ ಬುಧವಾರ ಪ್ರಕಟಿಸಿದ್ದು, ವೇಳಾಪಟ್ಟಿ ಪ್ರಕಾರವೇ ಐಪಿಎಲ್ 19ನೇ ಆವೃತ್ತಿ ನಡೆಯಲಿದೆ ಎಂದು ಬಿಸಿಸಿಐ ಉಪಾಧ್ಯಕ್ಷ ರಾಜೀವ್ ಶುಕ್ಲಾ ಗುರುವಾರ ಸ್ಪಷ್ಟವಾಗಿ ಹೇಳಿದ್ದಾರೆ. ಏಪ್ರಿಲ್-ಮೇ ತಿಂಗಳಲ್ಲಿ ಪಂಚ ರಾಜ್ಯಗಳ ಚುನಾವಣೆ ನಡೆಯುವುದರಿಂದ ಚುನಾ ವಣಾ ದಿನಾಂಕಗಳನ್ನು ಚುನಾವಣಾ ಆಯೋಗವು ಪ್ರಕಟಿಸಿದ ಬಳಿಕ ಬಿಸಿಸಿಐ ಐಪಿಎಲ್ ದ್ವಿತೀಯಾರ್ಧದ ವೇಳಾಪಟ್ಟಿಯನ್ನು ಪ್ರಕಟಿಸಲಿದೆ

ಕೊಹ್ಲಿಗಿದೆ ರನ್ ಹಸಿವು

ಹೊಸದಿಲ್ಲಿ: ಆರ್‌ಸಿಬಿ ತಾರೆ ವಿರಾಟ್ ಕೊಹ್ಲಿ ಈ ಬಾರಿ ಹಿಂದಿಗಿಂತಲೂ ಹೆಚ್ಚಿನ ರನ್ ಹಸಿವಿನಲ್ಲಿ ಬ್ಯಾಟಿಂಗ್ ಪ್ರದರ್ಶನ ನೀಡುವ ಸಾಧ್ಯತೆಯಿದೆ ಎಂದು ಮಾಜಿ ಆಲ್ ರೌಂಡರ್ ಇರ್ಫಾನ್ ಪಠಾಣ್ ಅಭಿಪ್ರಾಯಿಸಿದ್ದಾರೆ. ಕಳೆದ ಐಪಿಎಲ್ ಆವೃತ್ತಿಯಲ್ಲಿ ಕೊಹ್ಲಿ 15 ಪಂದ್ಯಗಳಿಂದ 657 ರನ್‌ಗಳನ್ನು ದಾಖಲಿಸಿದ್ದಲ್ಲದೆ, ಫೈನಲ್‌ನಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ 43 ರನ್ ಹೊಡೆದು ಕಪ್ ಗೆಲ್ಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಫೀಫಾ ವಿಶ್ವಕಪ್‌ಗೆ ಇರಾನ್ ಬಹಿಷ್ಕಾರ

ಟೆಹ್ರಾನ್: ಅಮೆರಿಕದ ಸಹ ಆತಿಥ್ಯದ 2026ರ ಫೀಫಾವಿಶ್ವಕಪ್‌ನಲ್ಲಿ ಇರಾನ್ ಭಾಗವಹಿಸಲು ಸಾಧ್ಯವಿಲ್ಲ ಎಂದು ಇರಾನ್ ಕ್ರೀಡಾ ಸಚಿವ ಅಹ್ಮದ್ ಡೊನ್ಯಾಮಲಿ ಬುಧವಾರ ಸ್ಪಷ್ಟಪಡಿಸಿದ್ದಾರೆ. ಅಮೆರಿಕ ನಮ್ಮ ಸರ್ವೋಚ್ಚ ನಾಯಕನನ್ನು ಹತ್ಯೆಗೈದಿದ್ದು, ನಾವು ವಿಶ್ವಕಪ್‌ನಲ್ಲಿ ಸ್ಪರ್ಧಿಸುವುದಿಲ್ಲ ಎಂದು ಹೇಳಿದ್ದಾರೆ. ಅಮೆರಿಕ, ಮೆಕ್ಸಿಕೋ ಮತ್ತು ಕೆನಡಾ ಆತಿಥ್ಯದಲ್ಲಿ ಜೂ.11ರಿಂದ ಜು.19ರವರೆಗೆ ನಡೆಯಲಿದೆ.

ಏಷ್ಯನ್ ಗೇಮ್ಸ್, ವಿದೇಶ ಸ್ಪರ್ಧೆಗಳಿಗಾಗಿ ಧನ ಬೆಂಬಲ

ಟೆನಿಸಿಗರಿಗೆ ಹಣಕಾಸು ನೆರವಿಗೆ ಎಂಒಸಿ ಅಸ್ತು

ಹೊಸದಿಲ್ಲಿ: ಭಾರತೀಯ ತಾರಾ ಟೆನಿಸಿಗರಿಗೆ ಹಣಕಾಸಿನ ನೆರವು ನೀಡಲು ಭಾರತೀಯ ಕ್ರೀಡಾ ಪ್ರಾಧಿಕಾರದ ಅನ್ವಯದಲ್ಲಿ ಮಿಷನ್ ಒಲಿಂಪಿಕ್ ಸೆಲ್ (ಎಂಒಸಿ) ಅನುಮತಿ ನೀಡಿದೆ.

ತಾರಾ ಆಟಗಾರರಾದ ಯೂಕಿ ಭಾಂಬ್ರಿ ಮತ್ತು ಸುಮಿತ್ ನಗಾಲ್ ಅವರಿಗೆ ಹಣಕಾಸಿನ ನೆರವು ನೀಡಲಾಗುವುದು. ಇದಲ್ಲದೆ, ಉದಯೋನ್ಮುಖ ಟೆನಿಸ್ ಪ್ರತಿಭೆ ಧಕ್ಷಿಣೇಶ್ವರ್ ಸುರೇಶ್ ಅವರನ್ನು ಟಾರ್ಗೆಟ್ ಏಷ್ಯನ್ ಗೇಮ್ಸ್ ಗ್ರೂಪ್ (ಟಿಎಜಿಜಿ) ಪಟ್ಟಿಗೆ ಸೇರಿಸಲು ಎಂಒಸಿ ಶಿಫಾರಸು ಮಾಡಿದೆ.

ಏಷ್ಯನ್ ಗೇಮ್ಸ್ 2026 ಮತ್ತು ಡೇವಿಸ್ ಕಪ್ 2026ರ ಅರ್ಹತಾ ಸುತ್ತಿನ ದ್ವಿತೀಯಾರ್ಧ ಹಂತವನ್ನು ಗಮನದಲ್ಲಿಟ್ಟು ಭಾರತೀಯ ಟೆನಿಸ್ ಆಟಗಾರರಿಗೆ ಹಣಕಾಸಿನ ನೆರವು ನೀಡಲು ಎಂಒಸಿ ಅನುಮತಿ ನೀಡಿದೆ.

ಭಾಂಬ್ರಿಗೆ 29.89 ಲಕ್ಷ ರೂ. ನೆರವು: ಪ್ರಸ್ತುತ ಇಂಡಿಯನ್ ವೆಲ್ಸ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದ ಭಾಂಬ್ರಿ ಅವರಿಗೆ ತರಬೇತಿ ಮತ್ತು 2026ರಲ್ಲಿ ಫೆಬ್ರವರಿಯಿಂದ ಸೆಪ್ಟೆಂಬರ್‌ನೊಳಗಿನ ಸ್ಪರ್ಧೆಗಳಲ್ಲಿ ಭಾಗವಹಿಸಲು 29.89 ಲಕ್ಷ ರೂ. ಹಣಕಾಸು ನೆರವು ನೀಡಲು ಎಂಒಸಿ ಅನುಮತಿ ನೀಡಿದೆ. ಈ ಅವಧಿಯಲ್ಲಿ ಭಾಂಬ್ರಿ 33 ವಾರಗಳ (231 ದಿನಗಳ) ನಿರಂತರ ಎಟಿಪಿ ಮತ್ತು ಗ್ರ್ಯಾಂಡ್ ಸ್ಲಾಮ್ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

ನಗಾಲ್‌ಗೆ 27.51 ಲಕ್ಷ ರೂ. ನೆರವು: ನ್ಶೋರ್ವ ತಾರೆ ಸುಮಿತ್ ನಗಾಲ್ ಅವರು 2026ರ ಮಾರ್ಚ್‌ನಿಂದ ಸೆಪ್ಟೆಂಬರ್ ತಿಂಗಳೊಳಗಿನ ಅಂತಾರಾಷ್ಟ್ರೀಯ ಪಂದ್ಯಗಳ ತರಬೇತಿ ಮತ್ತು ಹಲವು ಸ್ಪರ್ಧೆಗಳಿಗೆ ಹಣಕಾಸಿನ ನೆರವು



ನೀಡಲು ಎಂಒಸಿ ಅನುಮತಿಸಿದೆ. ಇವುಗಳಲ್ಲಿ ಎಟಿಪಿ ಚಾಲೆಂಜರ್, ಎಟಿಪಿ ಟೂರ್, ಎಟಿಪಿ ಮಾಸ್ಟರ್ಸ್ 1000 ಪಂದ್ಯಾವಳಿ ಮತ್ತು ಫ್ರೆಂಚ್ ಓಪನ್, ವಿಂಬಲ್ಡನ್, ಯುಎಸ್ ಓಪನ್‌ನಂತಹ ಗ್ರ್ಯಾಂಡ್ ಸ್ಲಾಮ್, ಡೇವಿಸ್ ಕಪ್ ದ್ವಿತೀಯಾರ್ಧ ಮತ್ತು ಏಷ್ಯನ್ ಗೇಮ್ಸ್ ಟೂರ್ನಿಗಳು ಒಳಗೊಂಡಿವೆ.

ಧಕ್ಷಿಣೇಶ್ವರ್‌ಗೆ ಬೆಂಬಲ ನೀಡಲು ಶಿಫಾರಸು: 2011ರ ಬಳಿಕ ಮೊದಲ ಬಾರಿಗೆ ಡೇವಿಸ್ ಕಪ್ ವಿಶ್ವಮಟ್ಟದ ಪಂದ್ಯಾವಳಿ ಅರ್ಹತೆ ಸಂಪಾದಿಸುವಲ್ಲಿ ಪ್ರಮುಖ ಗೆಲುವಿನ ರೂವಾರಿಯಾದ ಉದಯೋನ್ಮುಖ ಪ್ರತಿಭೆ ಧಕ್ಷಿಣೇಶ್ವರ್ ಸುರೇಶ್ ಅವರನ್ನು ಏಷ್ಯನ್ ಗೇಮ್ಸ್ ಪ್ರತಿಭೆಗಳಲ್ಲಿ ಸೇರಿಸಿಕೊಳ್ಳಲು ಎಂಒಸಿ ಶಿಫಾರಸು ಮಾಡಿದೆ. ಕಳೆದ ತಿಂಗಳು ನೆದರ್‌ಲೆಂಡ್ಸ್‌ನಲ್ಲಿ ನಡೆದಿದ್ದ ಡೇವಿಸ್ ಕಪ್ ಅರ್ಹತಾ ಸುತ್ತಿನಲ್ಲಿ ಭಾರತದ ಎಲ್ಲಾ ಮೂರು ಗೆಲುವಿನಲ್ಲಿ ಧಕ್ಷಿಣೇಶ್ವರ್ ಪ್ರಮುಖ ಪಾತ್ರ ವಹಿಸಿದ್ದರು. 88ನೇ ಮತ್ತು 162ನೇ ಶ್ರೇಯಾಂಕದ ಆಟಗಾರರ ವಿರುದ್ಧ ಪುರುಷರ ಸಿಂಗಲ್ಸ್ ಪಂದ್ಯಗಳನ್ನು ಗೆದ್ದ ಸುರೇಶ್, ಭಾಂಬ್ರಿ ಜತೆಗೂಡಿ ನಿರ್ಣಾಯಕ ಡಬಲ್ಸ್ ಪಂದ್ಯವನ್ನು ಗೆಲ್ಲಿಸಿಕೊಟ್ಟಿದ್ದರು.

ಸತತ ಪ್ರಶಸ್ತಿ ಗೆಲ್ಲುವ ಒತ್ತಡ ಪಾಟಿದಾರ್‌ಗಿದೆ

ಹೊಸದಿಲ್ಲಿ: ಕಳೆದ ಬಾರಿಯ ಐಪಿಎಲ್‌ನಲ್ಲಿ ಚೊಚ್ಚಲ ಪ್ರಶಸ್ತಿಯನ್ನು ಗೆಲ್ಲಿಸಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ, ವಿರಾಟ್ ಕೊಹ್ಲಿ ಹಾಗೂ ಆರ್‌ಸಿಬಿ ಅಭಿಮಾನಿಗಳ 18 ವರ್ಷಗಳ ಕನಸು ನನಸಾಗಿಸಿದ ನಾಯಕ ರಜತ್ ಪಾಟಿದಾರ್ ಮೇಲಿನ ಒತ್ತಡದ ಕುರಿತು ಮಾಜಿ ಕ್ರಿಕೆಟಿಗ ಕನ್ನಡಿಗ ಅನಿಲ್ ಕುಂಬ್ಳೆ ಮಾತನಾಡಿದ್ದಾರೆ. ಈ ಬಾರಿ ಆರ್‌ಸಿಬಿ ಟ್ರೋಫಿಯನ್ನು ತಮ್ಮಲ್ಲೇ ಉಳಿಸಿಕೊಳ್ಳಬೇಕೆಂಬ ನಿರೀಕ್ಷೆಗಳು ಇರುವುದರಿಂದ ನಾಯಕ ರಜತ್ ಪಾಟಿದಾರ್ ಮೇಲೆ ಬಹಳ ಒತ್ತಡವಿರಲಿದೆ ಎಂದು ಅನಿಲ್ ಕುಂಬ್ಳೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.




ಪಾಕಿಸ್ತಾನಿ ಆಟಗಾರನ ಖರೀದಿಸಿ ಕಾವ್ಯಾ ಮಾರನ್ ಉದ್ಧಟತನ

ಲಂಡನ್: ಈವರೆಗೂ ಜಾಗತಿಕ ಟಿ20 ಪಂದ್ಯಾವಳಿಗಳಲ್ಲಿ ಭಾರತೀಯ ಮಾಲೀಕತ್ವದ ಯಾವುದೇ ಫ್ರಾಂಚೈಸಿಗಳಲ್ಲಿ ಪಾಕಿಸ್ತಾನಿ ಆಟಗಾರರನ್ನು ಖರೀದಿಸಬಾರದೆಂಬ ನಿಯಮಗಳ ಹೊರತಾಗಿಯೂ ಸನ್‌ರೈಸರ್ಸ್ ಹೈದರಾಬಾದ್ ಐಪಿಎಲ್ ಫ್ರಾಂಚೈಸಿ ಮಾಲಕಿ ಕಾವ್ಯಾ ಮಾರನ್ ತಮ್ಮ ಸನ್‌ರೈಸರ್ಸ್ ಲೀಡ್ಸ್ ದಿ ಹಂಡ್ರೆಡ್ ಫ್ರಾಂಚೈಸಿಯಲ್ಲಿ ಪಾಕ್ ಆಟಗಾರನಿಗೆ ಮಣೆ ಹಾಕಿ ಉದ್ಧಟತನ ಮೆರೆದಿದ್ದಾರೆ. ಇತ್ತೀಚೆಗೆ ಜಾಗತಿಕ ಟಿ20 ಲೀಗ್‌ಗಳಲ್ಲಿ ಪಾಕಿಗಳನ್ನು ಖರೀದಿ ಮಾಡಬಾರದೆಂಬ ಸ್ವಯಂಪ್ರೇರಿತ ನಿಲುವು ಭಾರತೀಯ ಮೂಲದ ಫ್ರಾಂಚೈಸಿಗಳು ತೆಗೆದುಕೊಂಡಿದ್ದವು. ಇಂಗ್ಲೆಂಡ್‌ನ ದಿ ಹಂಡ್ರೆಡ್ ಪಂದ್ಯಾವಳಿಯ ಪುರುಷರ ಹರಾಜಿನ ವೇಳೆ ಪಾಕ್ ಸ್ಪಿನ್ನರ್ ಅಬ್ರಾರ್ ಅಹ್ಮದ್ ಅವರನ್ನು ಕಾವ್ಯಾ ಮಾಲಕತ್ವದ ಸನ್‌ರೈಸರ್ಸ್ ಲೀಡ್ಸ್ ಫ್ರಾಂಚೈಸಿ ಬರೋಬ್ಬರಿ 2.34 ಕೋಟಿ ರೂ. ಬೆಲೆಗೆ ಖರೀದಿ ಮಾಡಿರುವುದು ಆಘಾತಕಾರಿ ಬೆಳವಣಿಗೆಯಾಗಿದೆ. ಸನ್‌ರೈಸರ್ಸ್ ಹೈದರಾಬಾದ್ ಮತ್ತು ಲೀಡ್ಸ್ ಫ್ರಾಂಚೈಸಿಗಳು ಸನ್ ಗ್ರೂಪ್‌ಗೆ ಸೇರಿದ್ದು, ಕಲಾನಿಧಿ ಮಾರನ್ ಅವರ ಪುತ್ರಿ, ಸಿಇಒ ಕಾವ್ಯಾ ಮಾರನ್ ಮುನ್ನಡೆಸುತ್ತಿದ್ದಾರೆ.



ಪದಬಂಧ

ರಾಜಾ ಸಂಗಮೇಶ ಹಿರೇಮಠ



5922

ಎಡದಿಂದ ಬಲಕ್ಕೆ

1.ನಗದ ನಡುವೆ ನರ್ತಕನಿದ್ದಾನೆ (4)
3. ಇದು ಸಿನಿಮಾದ ವಸ್ತು (4)
5.ನೀರಿನ ಓಟವಿಲ್ಲಿ ತಿರುಗಿದೆ (3)
6.ಹೊಸತು ಮೊದಲಿರುವ ಸಿರಿಧಾನ್ಯ (3)
8.ಇದು ಸಾರಿಗೆ ಸಾಧನ (3)
10.ಈತ ರಥದ ಚಾಲಕ (3)
11.ಹಳದಿಯನ್ನು ಕೇಳಿ ಪಡೆದ ಗೆಳತಿ (3)
15.ರಾಮನ ಬರುವಿಕೆಗಾಗಿ ಕಾದವಳು (3)
16.ಇದು ಚಿತ್ತಕ್ಕಿರುವ ಶಕ್ತಿ (4)
17.ದಾಹ ತಣಿಸಿದ ನದಿ (4)

ಮೇಲಿನಿಂದ ಕೆಳಕ್ಕೆ

1.ಹೊಸದಾಗಿ ನಿರ್ಮಿಸಿದ ತೋಟ (4)
2.ಅವುಗಳಿಗೆ ಕಾಣಿಸಿದ ಹಲ್ಲಿ (3)
3.ಹಳೆಯ ಕತ್ತಿಯ ಪಕ್ಕದಲ್ಲಿರುವ ತುತ್ತೂರಿ (3)
4.ಸರಳುಗಳಿಂದ ಮಾಡಿದ ಕಟ್ಟೆ (4)
7.ಪ್ರಾಣ ತಿರುಗಿಸಿಕೊಂಡು ಮಂತ್ರಿಯಾದ (3)
9.ನವರತ್ನಗಳಲ್ಲೊಂದಾದ ಕೆಂಪುಮಣಿ (3)
10.ಸಾರ್ವಜನಿಕವಾಗಿ ಕಾಣಿಸಿಕೊಂಡ ಚಕ್ರವರ್ತಿ (4)
12.ದೇವರು ಹೇಳುವ ಶ್ರೇಷ್ಠಮಾತು (4)
13.ಕುಶನ ಕುಲದವರಿಗೆ ಹೇಳಿದ ಕ್ಷೇಮಸಮಾಚಾರ (3)
14.ತುಂಬ ಚೂಪಾಗಿರುವಂಥಾದ್ದು (3)

5921 ಉತ್ತರ

ಎಡದಿಂದ ಬಲಕ್ಕೆ:
1.ವಿರಾಮ 4.ಹಪ್ಪಳ
5.ಕಡಪಕತ್ತಿ 6.ಕೇಂಕರ
7.ಸದರ 9.ಪಾಯಸ
10.ಸುಜಲ
12.ಅರಸು 14.ಭವನ
15.ಸುಗಂಧದ್ರವ್ಯ
16.ಪತ್ತಾರ 17.ತೆರವು

ಮೇಲಿನಿಂದ ಕೆಳಕ್ಕೆ :
2.ಮಕರ 3.ತಾಪತ್ರಯ
4.ಹತ್ತಿರ 6.ಕೇಂದ್ರೀಕರಿಸು
8.ಸಹಜೀವನ 11.ಅಸುರ
14.ಭವ್ಯತೆ

ಕೆಸಿಡಿ ಮೈದಾನದಲ್ಲಿ ಕುಸ್ತಿ ಹಬ್ಬ | ತೂಕದ ಆಧಾರದಡಿ ಸ್ಪರ್ಧೆಗಳು ಅಣಿ

ಧಾರವಾಡದಲ್ಲಿ ಜಂಗಿ ಕುಸ್ತಿಗೆ ಅಖಾಡ ಸಿದ್ಧ

ಮಹಾಂತೇಶ ಕಣವಿ

ಧಾರವಾಡ: ಕುಸ್ತಿ ಕರ್ನಾಟಕ ಮತ್ತು ಮಹಾರಾಷ್ಟ್ರದ ಜನಪ್ರಿಯ ಕ್ರೀಡೆ. ರಾಜ-ಮಹಾರಾಜರ ಪ್ರೋತ್ಸಾಹದಿಂದ ಅಂತಾರಾಷ್ಟ್ರೀಯ ಮಟ್ಟದಲ್ಲೂ ಖ್ಯಾತಿ ಪಡೆದ ಕುಸ್ತಿಯಲ್ಲಿ ದಂಗಲ್, ಬಯಲು, ಜಂಗಿ ಕುಸ್ತಿ, ಗರಡಿ ಕುಸ್ತಿ ಹೀಗೆ ಹಲವಾರು ವಿಧಗಳುಂಟು. ಈ ದೇಶೀಯ ಕ್ರೀಡೆಯನ್ನು ಪ್ರೋತ್ಸಾಹಿಸಲು ಪ್ರಧಾನಿ ನರೇಂದ್ರ ಮೋದಿ ಅವರ ಖೇಲೋ ಇಂಡಿಯಾ ಹಾಗೂ ಫಿಟ್ ಇಂಡಿಯಾ ಯೋಜನೆ ಅನ್ವಯ ಮಾ.13 ಮತ್ತು 14ರಂದು ಧಾರವಾಡ ಕೆಸಿಡಿ ಮೈದಾನದಲ್ಲಿ ಹಮ್ಮಿಕೊಂಡ ತೂಕದ ಜಂಗಿ ಕುಸ್ತಿಗೆ ಅಖಾಡ ಸಿದ್ಧಗೊಂಡಿದೆ.

ಒಲಿಂಪಿಕ್ಸ್ ಮಾದರಿ: ಮಾ.13ರಂದು ಮಣ್ಣಿನ ಮೇಲೆಯೇ ಮ್ಯಾಟ್ ಹಾಕಿ, ಒಲಿಂಪಿಕ್ಸ್ ನಿಯಮಗಳ ಅನ್ವಯ ಕುಸ್ತಿ ಸ್ಪರ್ಧೆಗಳು ನಡೆದರೆ, ಮಾ.14ರ ಭಾರತೀಯ ಶೈಲಿ ಮಣ್ಣಿನ ಕುಸ್ತಿ ಸ್ಪರ್ಧೆಗೆ ಬರೋಬ್ಬರಿ 200 ಕೆ.ಜಿ. ವಿವಿಧ ಚೆಂಡುಹೂ ಹಾಕಿ ಅಖಾಡವನ್ನು ಪುನಃ



ನಿರ್ಮಿಸಲಿದೆ.

150 ಪೈಲ್ವಾನರು ಭಾಗಿ: ಧಾರವಾಡ ಸಂಸದರ ಕ್ರೀಡಾ ಉತ್ಸವದ ಪ್ರಯುಕ್ತ ನಡೆಯುವ ಕುಸ್ತಿಯಲ್ಲಿ 150ಕ್ಕೂ ಅಧಿಕ ಪೈಲ್ವಾನರು ಪಾಲ್ಗೊಳ್ಳಲಿದ್ದು, ಹರ್ಯಾಣ, ಮಹಾರಾಷ್ಟ್ರ, ಕರ್ನಾಟಕದ ವಿವಿಧ ಜಿಲ್ಲೆಗಳ ಹೆಸರಾಂತ ಪೈಲ್ವಾನರು ಈ ಜಂಗಿ ಕುಸ್ತಿ ಅಖಾಡದಲ್ಲಿ ಸೆಣಸಲು ಸಜ್ಜಾಗಿದ್ದಾರೆ.

ಅಖಾಡದ ವಿಶೇಷತೆ: ಶಾಸ್ತ್ರೋಕ್ತವಾಗಿಯೇ 12X12 ಅಳತೆಯ ವೃತ್ತಾಕಾರದ ಕೆಂಪು ಮಣ್ಣಿನ ಅಖಾಡ ಸಿದ್ಧಪಡಿಸಿದೆ. ಅನುಭವಿ ಪೈಲ್ವಾನರು, ಎರಡು ದಿನ ಅಖಾಡ ಸಿದ್ಧತೆ ಮಾಡಿದ್ದಾರೆ. ಮೈದಾನದ ಸುತ್ತಲೂ 1000 ಆಸನಗಳಿಂದ ಕೂಡಿದ ಪ್ರೇಕ್ಷಕರ ಗ್ಯಾಲರಿ, ಬ್ಯಾರಿಕೇಡ್ ವ್ಯವಸ್ಥೆ ಮಾಡಲಾಗಿದೆ.

ರೂ.3 ಲಕ್ಷ ಇನಾಮು: 17 ವರ್ಷಗೊಳಗೆ ಮತ್ತು ಮೇಲ್ಪಟ್ಟ ಪುರುಷ ಹಾಗೂ ಬಾಲಕರ ವಿಭಾಗದಲ್ಲಿ ತೂಕದ ಆಧಾರದಡಿ ಹಾಗೂ ಪುರುಷರ ಸೀನಿಯರ್ ವಿಭಾಗದ ಸ್ಪರ್ಧೆಗಳು ನಡೆಯಲಿವೆ. ವಿಜೇತರಿಗೆ ವಿಭಾಗವಾರು ಸೇರಿ 30 ಲಕ್ಷ ರೂ. ನಗದು ಬಹುಮಾನ ಸಹ ಘೋಷಿಸಿದೆ.

ದಿಗ್ಗಜ ಪೈಲ್ವಾನರು

ಅಂತಾರಾಷ್ಟ್ರೀಯ ಕುಸ್ತಿಪಟು ಮಿರ್ಜಾ ಇರಾನ್ ಮತ್ತು ಹರ್ಯಾಣದ ಪುಷ್ಪೇಂದ್ರ, ದಸರಾ ಕಂಠೀರವ ಖ್ಯಾತಿಯ ಶಿವಯ್ಯ ಪೂಜಾರಿ ಹಾಗೂ ಕಾಮೇಶ ಪಾಟೀಲ, ಉಪಕರ್ನಾಟಕ ಕೇಸರಿ ಖ್ಯಾತಿ ಶಿವಾನಂದ ದಡ್ಡಿ ಹಾಗೂ ಮಹಾರಾಷ್ಟ್ರದ ಪ್ರದೀಪ ಠಾಕೂರ ಹೀಗೆ ಹರ್ಯಾಣ, ಕರ್ನಾಟಕ, ಮಹಾರಾಷ್ಟ್ರದ ದಿಗ್ಗಜ ಪೈಲ್ವಾನರು ಈ ಕುಸ್ತಿಗೆ ಮೆರುಗು ತರುವುದು ವಿಶೇಷ.

ವಿಶೇಷ ಸೂಚನೆಗಳು

ಕೊಕ್ಕರೆ, ಗದ್ದಾಲೋಡ ಅಪಾಯಕಾರಿ ಡಾವು ಮಾಡಬಾರದು. ಚಡ್ಡಿ ಹಿಡಿಯುವ ಕರಾರು ಇರುತ್ತದೆ. ಜೋಡಿ ಬಾರದೆ, ಇದ್ದಲ್ಲಿ ನಗದು ಬಹುಮಾನ ಸಿಗುವುದಿಲ್ಲ. ಪಂಚರ ನಿರ್ಣಯವೇ ಅಂತಿಮ. ಕುಸ್ತಿ ಪಟುಗಳು ಬ್ಯಾಂಕ್ ಪಾಸ್‌ಬುಕ್ ಪ್ರತಿ ತರುವುದು ಕಡ್ಡಾಯ.

> ಧಾರವಾಡದಲ್ಲಿ ಕುಸ್ತಿಗೆ ಸುದೀರ್ಘ ಇತಿಹಾಸವಿದೆ. ಯುವ ಪೀಳಿಗೆಗೆ ದೇಶಿ ಕ್ರೀಡೆಯ ಬಗ್ಗೆ ಆಸಕ್ತಿ ಮೂಡಿಸಲು ಮಣ್ಣಿನ ಕುಸ್ತಿ ಆಯೋಜಿಸಿದೆ. ಸ್ಪರ್ಧೆಯಲ್ಲಿ 140ಕ್ಕೂ ಹೆಚ್ಚು ಮಲ್ಲರು ಪಾಲ್ಗೊಳ್ಳಲಿದ್ದಾರೆ.
>
> ■ ಅಮೃತ ದೇಸಾಯಿ, ಬಿಜೆಪಿ ಮಾಜಿ ಶಾಸಕ

> ಉತ್ತರ ಕರ್ನಾಟಕ ಕುಸ್ತಿಗೆ ಹೆಸರುವಾಸಿ. ಎರಡು ದಿನದ ಕ್ರೀಡಾ ಹಬ್ಬದಲ್ಲಿ ಮಕ್ಕಳ ಮಣ್ಣಿನ ಪೌರುಷದ ಆಟ ಕಣ್ತುಂಬಿಕೊಳ್ಳಲಿದ್ದು, ಈ ಜಂಗಿ ಕುಸ್ತಿಗೆ ಅಖಾಡವೂ ಸಿದ್ಧಗೊಂಡಿದೆ.
>
> ■ ಈರೇಶ ಅಂಚಟಗೇರಿ, ಮಾಜಿ ಮೇಯರ್, ಹು-ಧಾ ಮಹಾನಗರ ಪಾಲಿಕೆ

ರಾಷ್ಟ್ರಧ್ವಜವನ್ನು ಅವಮಾನಿಸಿದ ಆರೋಪ

ಪಾಂಡ್ಯ ವಿರುದ್ಧ ದೂರು ದಾಖಲು!

ಪುಣೆ: ಭಾರತದ ಟಿ20 ವಿಶ್ವಕಪ್ ಸಂಭ್ರಮಾಚರಣೆಯು ಕಾನೂನು ವಿವಾದಕ್ಕೆ ಕಾರಣವಾಗಿದೆ. ಪುಣೆಯ ವಕೀಲೊಬ್ಬರು ಮೈದಾನದಲ್ಲಿನ ಸಂಭ್ರಮಾಚರಣೆಯ ವೇಳೆ ಹಾರ್ದಿಕ್ ಪಾಂಡ್ಯ ರಾಷ್ಟ್ರಧ್ವಜವನ್ನು ಅವಮಾನಿಸಿದ್ದಾರೆ ಎಂದು ಆರೋಪಿಸಿ ದೂರು ದಾಖಲಿಸಿದ್ದಾರೆ. ಈ ಘಟನೆಯ ಕುರಿತು ಎಫ್‌ಐಆರ್ ದಾಖಲಿಸಲು ಪೊಲೀಸರಿಗೆ ಅವರು ಮನವಿ ಮಾಡಿದ್ದಾರೆ. ಐಸಿಸಿ ಪುರುಷರ ಟಿ20 ವಿಶ್ವಕಪ್ 2026 ಗೆದ್ದ ನಂತರ ನಡೆದ ಸಂಭ್ರಮಾಚರಣೆಯ ವೇಳೆ ರಾಷ್ಟ್ರಧ್ವಜವನ್ನು ಅವಮಾನಿಸಿದ್ದರೆಂದು ಆರೋಪಿಸಿ ಹಾರ್ದಿಕ್ ಪಾಂಡ್ಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಪುಣೆ ಮೂಲದ ವಕೀಲರು ದೂರು ನೀಡಿದ್ದಾರೆ. ಘಟನೆಯ ಬಗ್ಗೆ ಎಫ್‌ಐಆರ್ ದಾಖಲಿಸುವಂತೆ ಪೊಲೀಸರಿಗೆ ಮನವಿ ಮಾಡಿದ್ದಾರೆ. ವಕೀಲ ವಾಜಿದ್ ಖಾನ್ ಪುಣೆಯ ಶಿವಾಜಿ ನಗರ ಪೊಲೀಸ್ ಠಾಣೆಯಲ್ಲಿ ಸಲ್ಲಿಸಿದ್ದಾರೆ. ಭಾನುವಾರ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಭಾರತವು ನ್ಯೂಜಿಲೆಂಡ್ ತಂಡವನ್ನು ಸೋಲಿಸಿದ ನಂತರ ಮೈದಾನದಲ್ಲಿ ತನ್ನ ಗೆಳತಿ ಮಹಿಕಾ ಶರ್ಮಾ ಅವರೊಂದಿಗೆ ಸಂಭ್ರಮಾಚರಣೆ ನಡೆಸುವ ವೇಳೆ ಪಾಂಡ್ಯ ತ್ರಿವರ್ಣ ಧ್ವಜವನ್ನು ತನ್ನ ದೇಹದ ಮೇಲೆ ಹೊದಿಕೊಂಡಿದ್ದರು ಎಂದು ಅವರು ಆರೋಪಿಸಿದ್ದಾರೆ. ಹಾರ್ದಿಕ್ ತನ್ನ ಗೆಲುವಿನ ಸಂಭ್ರಮದಲ್ಲಿ ತನ್ನ ಗೆಳತಿಯೊಂದಿಗೆ ನೃತ್ಯ ಮಾಡುತ್ತಿದ್ದರು. ರಾಷ್ಟ್ರಧ್ವಜವನ್ನು ಬೆನ್ನಿಗೆ ಕಟ್ಟಲಾಗಿತ್ತು. 1971ರ ರಾಷ್ಟ್ರಧ್ವಜ ಕಾಯ್ದೆಯ ಸೆಕ್ಷನ್ 2ರ ಪ್ರಕಾರ, ನಾವು ರಾಷ್ಟ್ರಧ್ವಜದ ಗೌರವವನ್ನು ಕಾಪಾಡಬೇಕು. ಆದರೆ ಪಾಂಡ್ಯ ತಮ್ಮ ಗೆಲುವಿನ ಸಂಭ್ರಮದಲ್ಲಿ ಅಷ್ಟಾಗಿ ಮುಳುಗಿಹೋಗಿದ್ದು, ತಮ್ಮ ಗೆಳತಿಯೊಂದಿಗೆ ರಾಷ್ಟ್ರಧ್ವಜವನ್ನು ಧರಿಸಿಕೊಂಡೇ ವೇದಿಕೆಯಲ್ಲಿ ಮಲಗಿದ್ದರು. ನನ್ನ ಅಭಿಪ್ರಾಯದಲ್ಲಿ ಇದು ರಾಷ್ಟ್ರಧ್ವಜಕ್ಕೆ ಅವಮಾನವಾಗಿದೆ ಎಂದು ಖಾನ್ ಆರೋಪಿಸಿದ್ದಾರೆ.



ಕಿರುಸುದ್ದಿ

ಪಲ್ಲಕ್ಕಿ ಉತ್ಸವ ಇಂದು

•**ಗದಗ:** ಬೆಟಗೇರಿಯ ಹಳೇಬನಶಂಕರಿದೇವಿ ದೇವಸ್ಥಾನದಲ್ಲಿ ಮಾ.13 ರಂದು ಸಂಜೆ 6ಕ್ಕೆ ದೇವಾಂಗ ಮಹಿಳಾ ಮಂಡಳ ಸದಸ್ಯರಿಂದ ಲಲಿತ ಸಹಸ್ರ ನಾಮಾವಳಿ, ಭಜನೆ, ಬನಶಂಕರಿದೇವಿ ಪಲ್ಲಕ್ಕಿ ಉತ್ಸವ ಹಮ್ಮಿಕೊಳ್ಳಲಾಗಿದೆ.

ಡಿಜಿಟಲ್ ಸಾಕ್ಷರತೆ ಅವಶ್ಯ



•**ನರಗುಂದ:** ನವಯುಗದ ಅಡಿಪಾಯ ಡಿಜಿಟಲ್ ಸಾಕ್ಷರತೆಯಾಗಿದೆ. ಆಧುನಿಕ ದಿನದಲ್ಲಿ ಮೊಬೈಲ್ ಗಣಕಯಂತ್ರ ಮುಂತಾದ ತಂತ್ರಜ್ಞಾನಗಳ ಬಳಕೆಯಿಂದ ನಾವು ಹೆಚ್ಚಿನ ಜ್ಞಾನವನ್ನು ಪಡೆಯಬಹುದೆಂದು ರೇಷ್ಮಾ ಸವದತ್ತಿ ಹೇಳಿದರು.

ತಾಲೂಕಿನ ಮೂಗನೂರ ಗ್ರಾಮದಲ್ಲಿ ಯಡಿಯೂರು ಸಿದ್ದಲಿಂಗೇಶ್ವರ ಪ್ರಥಮ ದರ್ಜೆ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ವತಿಯಿಂದ ನಡೆದ ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರದಲ್ಲಿ ಡಿಜಿಟಲ್ ಸಾಕ್ಷರತೆ ಎಂಬ ವಿಷಯದ ಕುರಿತು ಮಾತನಾಡಿದರು. ಪ್ರಾಚಾರ್ಯ ರಾಜಶೇಖರ ಪಾಟೀಲ ಮಾತನಾಡಿದರು. ಮಹಾಬಲೇಶ್ವರ ವಿಶ್ವಕರ್ಮ, ಗ್ರಾಮದ ಹಿರಿಯರಾದ ಚಿಡಿ ಮತ್ತು ಫಕೀರಪ್ಪ ಹಡಪದ ಇದ್ದರು. ಐಶ್ವರ್ಯ ನಿರೂಪಿಸಿದರು. ಕೀರ್ತಿ ಸ್ವಾಗತಿಸಿದರು. ಚೈತ್ರಾ ವಂದಿಸಿದರು.

ಮಾ.15ಕ್ಕೆ ಭೂಮಿಪೂಜೆ

•**ಲಕ್ಷ್ಮೇಶ್ವರ:** ಪಟ್ಟಣದ ಸೋಮೇಶ್ವರ ದೇವಸ್ಥಾನದ ಉತ್ತರ ಮಹಾದ್ವಾರದ ಸಂರಕ್ಷಣಾ ಕಾಮಗಾರಿಯ ಭೂಮಿಪೂಜೆ ಮಾ.15ರಂದು ನಡೆಯಲಿದೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪ್ರವಾಸೋದ್ಯಮ ಇಲಾಖೆ ಬೆಂಗಳೂರು, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಮೈಸೂರು ಇವರ ಸಹಯೋಗದಲ್ಲಿ ಸೋಮೇಶ್ವರ ದೇವಸ್ಥಾನದ ಉತ್ತರ ಮಹಾದ್ವಾರದ ಸಂರಕ್ಷಣಾ ಕಾಮಗಾರಿಯ ಭೂಮಿಪೂಜೆ ಅಂದು ಬೆಳಗ್ಗೆ 11 ಗಂಟೆಗೆ ಸೋಮೇಶ್ವರ ದೇವಸ್ಥಾನದ ಪ್ರಾಂಗಣದಲ್ಲಿ ನೆರವೇರಲಿದೆ.

ಸುಮಾರು 2 ಕೋಟಿ 40 ಲಕ್ಷ ರೂಗಳ ವೆಚ್ಚದಲ್ಲಿ ಮರುನಿರ್ಮಾಣವಾಗಲಿರುವ ಈ ಮಹಾದ್ವಾರದ ಕಾಮಗಾರಿಯ ಭೂಮಿಪೂಜೆಯ ಸಾನ್ನಿಧ್ಯವನ್ನು ಮುಕ್ತಿಮಂದಿರ ಧರ್ಮಕ್ಷೇತ್ರದ ಪಟ್ಟಾಧ್ಯಕ್ಷ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ಸ್ವಾಮೀಜಿ ವಹಿಸಲಿದ್ದಾರೆ. ಕರ್ನಾಟಕ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಉಪಸ್ಥಿತಿ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಸಂರಕ್ಷಣಾ ಕಾಮಗಾರಿಯ ಭೂಮಿಪೂಜೆ ನೆರವೇರಿಸಲಿದ್ದಾರೆ. ಸಭೆಯ ಅಧ್ಯಕ್ಷತೆಯನ್ನು ಶಾಸಕ ಡಾ.ಚಂದ್ರು ಲಮಾಣಿ ವಹಿಸಲಿದ್ದಾರೆ. ಸರ್ಕಾರ ಮುಖ್ಯ ಸಚೇತಕ ಸಲೀಂ ಅಹ್ಮದ್, ಸಂಸದ ಬಸವರಾಜ ಬೊಮ್ಮಾಯಿ, ನಿಗಮಮಂಡಳಿ ಅಧ್ಯಕ್ಷ ಜಿ.ಎಸ್.ಪಾಟೀಲ, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್.ಪಾಟೀಲ, ವಿಧಾನ ಪರಿಷತ್ ಸದಸ್ಯರಾದ ಎಸ್.ವಿ.ಸಂಕನೂರ, ಪ್ರದೀಪ ಶೆಟ್ಟರ, ಶಾಸಕ ಸಿ.ಸಿ.ಪಾಟೀಲ, ಪಂಚ ಗ್ಯಾರಂಟಿ ಸಮಿತಿ ಅಧ್ಯಕ್ಷ ನಾಗರಾಜ ಮಡಿವಾಳರ, ಆಗಮಿಸಲಿದ್ದಾರೆ ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ, ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ, ಪುರಾತತ್ವ ಇಲಾಖೆ ಆಯುಕ್ತ ದೇವರಾಜು ಎ., ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ್ವರ ವಿಭೂತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೋಮೇಶ್ವರ ದೇವಸ್ಥಾನದ ಉತ್ತರ ಮಹಾದ್ವಾರದ ಸಂರಕ್ಷಣಾ ಕಾಮಗಾರಿಯ ಭೂಮಿಪೂಜೆ ಕಾರ್ಯಕ್ರಮ ಮಾ.14 ರಂದು ನಿಗದಿಯಾಗಿದ್ದು, ಅನಿವಾರ್ಯ ಕಾರಣಗಳಿಂದ ಮಾ.15 ರಂದು ಬೆಳಗ್ಗೆ 11 ಗಂಟೆಗೆ ನೆರವೇರಲಿದೆ ಎಂದು ಶ್ರೀ ಸೋಮೇಶ್ವರ ಭಕ್ತರ ಸೇವಾ ಟ್ರಸ್ಟ್ ಕಮಿಟಿ ಅಧ್ಯಕ್ಷ ಗುರುರಾಜ ಪಾಟೀಲ ತಿಳಿಸಿದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜಿ ಶೇಂಗಾ	5109-8512
ಅಜವಾನ	7244-8400
ಅಲಸಂದಿ	5896-6259
ಕಡಲೆ	3044-5444
ಉದ್ದು	4089-4869
ಹತ್ತಿ	7301-7301
ಹೆಸರು	1107-8200
ಹುರಳಿ	2079-4374
ಜೋಳ	1613-4966
ಗೋವಿನಜೋಳ	1005-1655
ಮಡಕಿ	3017-3017
ಸಾಸವಿ	4014-4814
ಸಬ್ಬಸಗಿ	4930-4930
ಕುಸಬಿ	4289-5080
ಸೂರ್ಯಕಾಂತಿ	6769-6869
ತೊಗರಿ	3317-5938
ಗೋಧಿ	1477-5459
ಶೇಂಗಾ ಬೀಜ	10285-10286
ಗುರೆಳ್ಳು	9000-9000
ತೊಗರಿ ಬ್ಯಾಳಿ	6500-11700



ಗದಗ: ನಗರದ ಬ್ರೈಟ್ ಹಾರಿಜನ್ ಶಾಲೆಯಲ್ಲಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಿಂದ ಪ್ರಶಸ್ತ ಆ್ಯಪ್ 2.0 ಅನುಷ್ಠಾನ ಕುರಿತು ಶಹರ ಹಾಗೂ ಗ್ರಾಮೀಣ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಮುಖ್ಯ ಶಿಕ್ಷಕರಿಗಾಗಿ ಏರ್ಪಡಿಸಿದ್ದ ಕಾರ್ಯಾಗಾರವನ್ನು ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿ ವಿ.ವಿ.ನಡುವಿನಮನಿ ಉದ್ಘಾಟಿಸಿದರು. ಗ್ರಾಮೀಣ ಕ್ಷೇತ್ರ ಸಮನ್ವಯ ಅಧಿಕಾರಿ ಜೆ.ಎ.ಬಾವಿಕಟ್ಟಿ ಮಾತನಾಡಿದರು.

ಗ್ಲುಕೋಮಾ ಜಾಗೃತಿ ವಾಕ್‌ಥಾನ್‌ಗೆ ಚಾಲನೆ

•**ಗದಗ:** ಗ್ಲುಕೋಮಾ ಅನಿವಾರ್ಯ ಅಂಧತ್ವಕ್ಕೆ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ. ಇದು ನಿಧಾನವಾಗಿ ನೇತ್ರ ನರವನ್ನು ಹಾನಿಗೊಳಿಸುತ್ತದೆ. ಹೆಚ್ಚಾಗಿ ನೋವು ಅಥವಾ ಆರಂಭಿಕ ಲಕ್ಷಣಗಳಿಲ್ಲದೆ ದೃಷ್ಟಿ ಸಮಸ್ಯೆಗಳನ್ನು ಗಮನಿಸುವ ಹೊತ್ತಿಗೆ ಶಾಶ್ವತ ಹಾನಿ ಸಂಭವಿಸಬಹುದು. ಆದಕ್ಕಾಗಿ ಕಣ್ಣುಗಳನ್ನು ಪರೀಕ್ಷಿಸಿಕೊಳ್ಳಿ ಎಂದು ಡಾ.ಜವಾಹರ ಮೇರವಾಡೆ ಹೇಳಿದರು.

ಗದಗ-ಬೆಟಗೇರಿ ಲಯನ್ಸ್ ಕ್ಲಬ್ ಮತ್ತು ಮಾ ಕುಷ್ಮಾಂಡ ಟ್ರಸ್ಟ್ ಹಾಗೂ ಡಾ.ಮೇರವಾಡೆ ನೇತ್ರ ಚಿಕಿತ್ಸಾ ಕೇಂದ್ರ ಸಂಯುಕ್ತ ಆಶ್ರಯದಲ್ಲಿ ಗ್ಲುಕೋಮಾ ಜಾಗೃತಿ ಸಪ್ತಾಹ-2026 ಗ್ಲುಕೋಮಾ ಜಾಗೃತಿ ವಾಕ್‌ಥಾನ್‌ಗೆ ಚಾಲನೆ ನೀಡಿ ಮಾತನಾಡಿ, ಕಣ್ಣಿನ ಒಳಗಿನ ಒತ್ತಡವು ಹೆಚ್ಚಾದಾಗ ಮತ್ತು ಕಣ್ಣಿನಿಂದ ಮೆದುಳಿಗೆ ದೃಷ್ಟಿ ಸಂಕೇತಗಳನ್ನು ಕೊಂಡೊಯ್ಯುವ ನೇತ್ರ ನರಕ್ಕೆ ಹಾನಿಯಾದಾಗ ಗ್ಲುಕೋಮಾ ಸಂಭವಿಸುತ್ತದೆ ಎಂದರು. ಡಾ.ಸುನೀಲ ಮೇರವಾಡೆ ಮಾತನಾಡಿ, 40 ವರ್ಷಕ್ಕಿಂತ ಮೇಲ್ಪಟ್ಟವರು ಅಥವಾ ಗ್ಲುಕೋಮಾದ ಕುಟುಂಬದ ಇತಿಹಾಸವಿದ್ದರೆ ಮಧುಮೇಹ ಅಥವಾ ಅಧಿಕ ರಕ್ತದೊತ್ತಡ ಹೊಂದಿದ್ದರೆ ಹೆಚ್ಚಿನ ಕಣ್ಣಿನ ಒತ್ತಡವಿದ್ದರೆ ಮುಂತಾದ ಕಾರಣಗಳಿಂದಾಗಿ ಗ್ಲುಕೋಮಾ ಸಂಭವಿಸಬಹುದು ಎಂದರು. ಗದಗ-ಬೆಟಗೇರಿ ಲಯನ್ಸ್ ಕ್ಲಬ್ ಅಧ್ಯಕ್ಷ ರಾಜು ವೇರ್ಣೇಕರ, ಗದಗ-ಬೆಟಗೇರಿ ಲಯನ್ಸ್ ಕ್ಲಬ್ ಕಾರ್ಯದರ್ಶಿ ರಾಜಣ್ಣ ಮಲ್ಲಾಡದ, ಖಜಾಂಚಿ ರೇಣುಕಪ್ರಸಾದ ಹಿರೇಮಠ, ಝೂಡ್.ಸಿ ರಮೇಶ ಶಿಗ್ಲಿ, ಮಂಜುನಾಥ ವೀರಲಿಂಗಯ್ಯನಮಠ, ರತನ್ ದೇಸಾಯಿ, ವೀರೇಶ ಪಟ್ಟಣಶೆಟ್ಟಿ, ಅಶ್ವಥ್ ಸುಲಾಖೆ, ಅಮಿತ್‌ಚಂದ, ರೇಣುಕಾಪ್ರಸಾದ ಶಿಗ್ಲಿಮಠ, ಲಯನ್ ಲೇಡೀಸ್ ಕ್ಲಬ್‌ನ ಅಧ್ಯಕ್ಷೆ ಪೂಜಾ ಪಾಟೀಲ, ಕಾರ್ಯದರ್ಶಿ ಸುರೇಖಾ ಮಲ್ಲಾಡದ, ಖಜಾಂಚಿ ಸಹನಾ ಹಿರೇಮಠ, ಅಮೃತಾ ವಾರಕರ, ತನ್ವಿ ಬಾರ್ಶಿ, ಪ್ರೀಯಾ ಶಿಗ್ಲಿಮಠ ಇತರರಿದ್ದರು.



ಗದಗ: ಗದಗ-ಬೆಟಗೇರಿ ಲಯನ್ಸ್ ಕ್ಲಬ್ ಮತ್ತು ಮಾ ಕುಷ್ಮಾಂಡ ಟ್ರಸ್ಟ್ ಹಾಗೂ ಡಾ.ಮೇರವಾಡೆ ನೇತ್ರ ಚಿಕಿತ್ಸಾ ಕೇಂದ್ರ, ಸಂಯುಕ್ತ ಆಶ್ರಯದಲ್ಲಿ ಗ್ಲುಕೋಮಾ ಜಾಗೃತಿ ಸಪ್ತಾಹ-2026 ಗ್ಲುಕೋಮಾ ಜಾಗೃತಿ ವಾಕ್‌ಥಾನ್‌ಗೆ ಡಾ.ಜವಾಹರ ಮೇರವಾಡೆ ಚಾಲನೆ ನೀಡಿದರು.

ಗೃಹ ಬಳಕೆ ಸಿಲಿಂಡರ್‌ಗೆ ಜನ ಪರದಾಟ

▸ರುದ್ರಗೌಡ ಪಾಟೀಲ

•**ಗದಗ:** ಇರಾನ್-ಇಸ್ರೇಲ್ ಹಾಗೂ ಅಮೇರಿಕ ನಡುವಿನ ಮಧ್ಯಪ್ರಾಚ್ಯ ಯುದ್ಧದ ಕಾರ್ಮೋಡ ಅಡುಗೆ ಅನಿಲ ಸಿಲಿಂಡರ್ ರೂಪದಲ್ಲಿ ಜಿಲ್ಲೆಗೂ ತಟ್ಟಿದೆ. ವಾಣಿಜ್ಯ ಹಾಗೂ ಗೃಹ ಬಳಕೆಯ ಅನಿಲ ಸಿಲಿಂಡರ್ ಜೊತೆಗೆ ಆಟೋ ಎಲ್‌ಪಿಜಿ ಗ್ಯಾಸ್ ಪೂರೈಕೆ ವಿಳಂಬದಿಂದ ಹೋಟೆಲ್ ಹಾಗೂ ಎಲ್‌ಪಿಜಿ ವಾಹನ ಸವಾರರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ಭಾರತ್ ಗ್ಯಾಸ್, ಎಚ್‌ಪಿ ಹಾಗೂ ಇಂಡಿಯನ್ ಗ್ಯಾಸ್ ಸಿಲಿಂಡರ್ ಪೂರೈಕೆಯಾಗುತ್ತಿದ್ದು, ಮೂರು ಗ್ಯಾಸ್ ಏಜೆನ್ಸಿಗಳು ವಾಣಿಜ್ಯ ಬಳಕೆಯ ಸಿಲಿಂಡರ್ ನೋ ಸ್ಟಾಕ್ ಎಂದು ಹೇಳುತ್ತಿವೆ. 19 ಕೆಜಿ ವಾಣಿಜ್ಯ ಬಳಕೆಯ ಸಿಲಿಂಡರ್ ಪೂರೈಕೆ ಸಂಪೂರ್ಣ ಸ್ಥಗಿತಗೊಂಡಿದ್ದರಿಂದ ತುರ್ತು ಪರಿಸ್ಥಿತಿಗೆ 5 ಕೆಜಿ ವಾಣಿಜ್ಯ ಬಳಕೆ ಸಿಲಿಂಡರ್ ಒದಗಿಸಲಾಗುತ್ತಿದೆ.

ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯ ಹಾಗೂ ಸ್ಥಗಿತ ಎಂಬ ಸುದ್ದಿ ಹರಿದಾಡುತ್ತಿರುವ ಬೆನ್ನಲ್ಲೆ ಗ್ರಾಹಕರು ಸಿಲಿಂಡರ್ ಬುಕ್ಕಿಂಗ್ ಮಾಡಲು ಮುಂದಾಗುತ್ತಿದ್ದಾರೆ. ಗ್ಯಾಸ್ ಏಜೆನ್ಸಿ ಕಚೇರಿಗೆ ಮುಗಿಬೀಳುತ್ತಿರುವ ಗ್ರಾಹಕರು ಸಿಲಿಂಡರ್ ನೀಡುವಂತೆ ಸಿಬ್ಬಂದಿಗೆ ಒತ್ತಡ ಹಾಕುತ್ತಿದ್ದಾರೆ. ಸಿಲಿಂಡರ್ ಸ್ಟಾಕ್ ಮಾಡಿಕೊಳ್ಳಲುತ್ತಿದ್ದಾರೆ. ಗೃಹ ಬಳಕೆ ಸಿಲಿಂಡರ್ ದರ ಮೊದಲು 880 ರೂಪಾಯಿ ಇತ್ತು. ಈಗ 940 ರೂಪಾಯಿಗೆ ಏರಿಕೆಯಾಗಿದೆ. ಮೊದಲು ಕಮರ್ಷಿಯಲ್ ಸಿಲಿಂಡರ್ 1,880 ರೂಪಾಯಿ ಇತ್ತು. ಸದ್ಯ ಕಮರ್ಷಿಯಲ್ ದರ 1,965 ರೂ. ಏರಿಕೆಯಾಗಿದೆ. ದರ ಏರಿಕೆಯಾಗಿದ್ದರೂ ಎಚ್‌ಪಿಸಿ, ಬಿಪಿಸಿ, ಐಒಸಿ ಸಿಲಿಂಡರ್ ಸರಿಯಾಗಿ ಪೂರೈಕೆ ಆಗದ ಕಾರಣ ಗ್ರಾಹಕರು ಶಾಕ್ ಆಗಿದ್ದಾರೆ. ಗ್ಯಾಸ್ ಬುಕ್ಕಿಂಗ್ ಮಾಡಿದ 21 ದಿನಕ್ಕೆ ಬುಕ್ಕಿಂಗ್ ಆಗುತ್ತಿತ್ತು. ಈಗ 31 ದಿನಕ್ಕೆ ರಿ ಬುಕ್ಕಿಂಗ್ ಆಗುತ್ತಿದೆ.

ಬಂಕ್‌ಗಳಲ್ಲೂ ಗ್ಯಾಸ್ ಕೊರತೆ: ಎಲ್‌ಪಿಜಿ ಆಟೋ ಗ್ಯಾಸ್‌ಗೂ ಯುದ್ಧದ ಎಫೆಕ್ಟ್ ತಟ್ಟಿದೆ. ಎಪಿಎಂಸಿ ಬಳಿರುವ ಎಲ್‌ಪಿಜಿ ಗ್ಯಾಸ್ ಬಂಕ್‌ನಲ್ಲಿ ಗ್ಯಾಸ್‌ಗಾಗಿ ಆಟೋ ಚಾಲಕರು ಮುಗಿಬಿದ್ದಾರೆ. 10 ದಿನಗಳ ಹಿಂದೆ ಲೀಟರ್ 58 ರೂಪಾಯಿ, ಎರಡು ದಿನಗಳ ಹಿಂದೆ 73 ರೂಪಾಯಿ ಏರಿಕೆ ಆಗಿತ್ತು. 77.50 ರೂಪಾಯಿ ಏರಿಕೆಯಾಗಿದೆ. ಎಲ್‌ಪಿಜಿ ಗ್ಯಾಸ್ ದರ ಬರೋಬ್ಬರಿ 20 ರೂಪಾಯಿ ಏರಿಕೆಯಾಗಿದೆ.





ಪ್ರತಿನಿತ್ಯ 2 ಸಿಲಿಂಡರ್ ಪೂರೈಕೆ

ಪ್ರತಿನಿತ್ಯ 4 ಸಿಲಿಂಡರ್ ಪೂರೈಸುತ್ತಿದ್ದ ಏಜೆನ್ಸಿಗಳು ಕಳೆದ ಎರಡು ದಿನಗಳಿಂದ 2 ಸಿಲಿಂಡರ್ ಪೂರೈಕೆ ಮಾಡುತ್ತಿದೆ. ಸಿಲಿಂಡರ್ ಪರ್ಯಾಯವಾಗಿ ಇಲೆಕ್ಟ್ರಿಕ್ ಒಲೆ ಉಪಯೋಗಿಸಲಾಗುತ್ತಿದೆ. ದೊಡ್ಡ ಅಡುಗೆ ತಯಾರಿಸಲು ಇದು ಪೂರಕವಲ್ಲ. ಶೀಘ್ರ ವಾಣಿಜ್ಯ ಬಳಕೆಯ ಸಿಲಿಂಡರ್ ಪೂರೈಕೆಗೆ ಕ್ರಮ ವಹಿಸಬೇಕು ಎಂದು ಹೋಟೆಲ್ ಒಡೆಯರ್ ಸಂಘದ ಅಧ್ಯಕ್ಷ ವಿಶ್ವನಾಥ ಶೆಟ್ಟಿ ಆಗ್ರಹಿಸಿದ್ದಾರೆ.

ದಿಗಂತ ವಿಶೇಷ

“ಮೂರು ದಿನಗಳಿಂದ ವಾಣಿಜ್ಯ ಬಳಕೆಯ ಸಿಲಿಂಡರ್ ಪೂರೈಕೆ ಸಂಪೂರ್ಣ ಸ್ಥಗಿತಗೊಂಡಿದೆ. ಗೃಹ ಬಳಕೆಯ ಸಿಲಿಂಡರ್ ಪೂರೈಕೆಯಲ್ಲೂ ವ್ಯತ್ಯಯ ಉಂಟಾಗುತ್ತಿದೆ. 300 ರಿಂದ 400 ಸಿಲಿಂಡರ್ ಬುಕ್ ಆಗುತ್ತಿದ್ದವು, ಸದ್ಯ 1,100ಕ್ಕೂ ಹೆಚ್ಚು ಬುಕ್ಕಿಂಗ್ ಆಗುತ್ತಿದೆ. ಬೇಡಿಕೆ ಹೆಚ್ಚು, ಪೂರೈಕೆ ಕಡಿಮೆಯಾಗಿದೆ.

■ **ದಾಮೋದರ ನಂದರಗಿ,** ಮ್ಯಾನೇಜರ್, ವಸ್ತ್ರದ ಗ್ಯಾಸ್ ಏಜೆನ್ಸಿ

ಮೆನು ಬದಲಾಯಿಸಲು ನಿರ್ಧಾರ

ವಾಣಿಜ್ಯ ಬಳಕೆಯ ಸಿಲಿಂಡರ್ ಪೂರೈಕೆ ಕೊರತೆ ಹಿನ್ನೆಲೆ ಕೆಲ ಹೋಟೆಲ್ ಉದ್ಯಮದವರು ಇಲೆಕ್ಟ್ರಿಕ್ ಒಲೆ ಬಳಕೆಗೆ ಮುಂದಾಗಿದ್ದಾರೆ. ಕೆಲವು ಹೋಟೆಲ್ ಉದ್ಯಮದವರು ಮೆನು ಚೇಂಜ್ ಮಾಡಲು ನಿರ್ಧರಿಸಿದ್ದಾರೆ. ಗ್ಯಾಸ್ ಹೆಚ್ಚು ಬಳಕೆಯಾಗುವ ಎಣ್ಣೆ ಪದಾರ್ಥ, ಸದಾ ಹೆಂಚು ಕಾಯುತ್ತ ಮಾಡುವ ದೋಸೆ ಪದಾರ್ಥ ಬಂದ್ ಮಾಡಿ ಇಡ್ಲಿ, ಉಪ್ಪಿಟ್ಟು, ಶಿರಾ, ಪುಲಾವ್ ನಂತಹ ಪದಾರ್ಥ ಹೆಚ್ಚು ಬಳಕೆಗೆ ಮುಂದಾಗುತ್ತಿದ್ದಾರೆ.

ಬ್ಯಾರೇಜ್‌ನಲ್ಲಿ 1.9 ಟಿಎಂಸಿ ನೀರು ಸಂಗ್ರಹ

▸ಸಿ.ಎಸ್.ಅರಸನಾಳ

•**ಮುಂಡರಗಿ:** ತಾಲೂಕಿನ ಹಮ್ಮಿಗಿ ಬಳಿ ಇರುವ ಸಿಂಗಟಾಲೂರು ಏತ ನೀರಾವರಿ ಯೋಜನೆಯ ಬ್ಯಾರೇಜ್‌ನಲ್ಲಿ 1.9 ಟಿಎಂಸಿ ನೀರು ಸಂಗ್ರಹವಿದ್ದು, ಜಾಲವಾಡಗಿ ಬಳಿ ಸಂಪ್ ಮೂಲಕ ಮುಂಡರಗಿ ಪಟ್ಟಣ ಸೇರಿದಂತೆ ತಾಲೂಕಿನ 59 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಆಗುತ್ತಿದೆ. ಬೇಸಿಗೆಯಲ್ಲಿ ತಾಲೂಕಿನ ಚಿಕ್ಕವಡ್ಡಟ್ಟಿ, ಗುಡ್ಡದ ಬೂದಿಹಾಳ, ಹಳ್ಳಿಕೇರಿ, ಯಕ್ಲಾಸಪುರ, ಬೆಣ್ಣೆಹಳ್ಳಿ ಮತ್ತು ಕೊರ್ಲಹಳ್ಳಿ ಗ್ರಾಮಗಳಿಗೆ ಒಂದಿಷ್ಟು ಕುಡಿಯುವ ನೀರಿನ ಸಮಸ್ಯೆಯಾಗುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತಿದೆ.

ಜಾಲವಾಡಗಿ ಸಂಪ್ ಮೂಲಕ ನಿತ್ಯವೂ ಎಲ್ಲ ಗ್ರಾಮಗಳಿಗೆ ನೀರು ಸರಬರಾಜು ಆಗುತ್ತಿದ್ದು, ಜಾಲವಾಡಗಿಯಿಂದ ಪಟ್ಟಣಕ್ಕೆ ಸರಬರಾಜು ಆಗುವ ನೀರನ್ನು ಮುಂಡರಗಿ ಪುರಸಭೆ 23 ವಾರ್ಡ್ ಪೈಕಿ ಕೆಲವು ವಾರ್ಡ್‌ಗಳಿಗೆ 5 ದಿನಕ್ಕೊಮ್ಮೆ, ಕೆಲವು ವಾರ್ಡ್‌ಗಳಿಗೆ 4 ದಿನಕ್ಕೊಮ್ಮೆ ಸರಬರಾಜು ಮಾಡುತ್ತಿದೆ. ಪಟ್ಟಣದಲ್ಲಿ 12 ಶುದ್ಧ ಕುಡಿಯುವ ನೀರಿನ ಘಟಕಗಳಿದ್ದು, ಎಲ್ಲವೂ ಸುಸೂತ್ರವಾಗಿ ಕಾರ್ಯನಿರ್ವಹಿಸುತ್ತಿದೆ. ಪಟ್ಟಣದ ಜನತೆಗೆ ಬಳಕೆ ನೀರನ್ನು ಒಂದು ದಿನ ಬಿಟ್ಟು ಒಂದು ದಿನ ಸರಬರಾಜು ಮಾಡುತ್ತಿದ್ದು, ಅದಕ್ಕಾಗಿ 59 ಬೋರ್‌ಗಳಿದ್ದು, ಅವುಗಳಿಂದ ಎಲ್ಲ 23 ವಾರ್ಡುಗಳಿಗೂ ಬಳಕೆ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಪಟ್ಟಣದ ಶಿರೋಳ, ಬ್ಯಾಲವಾಡಗಿ, ರಾಮೇನಹಳ್ಳಿ, ಕೋಟೆ ಆಂಜನೇಯ ದೇವಸ್ಥಾನದ ಹತ್ತಿರ, ಪೊಲೀಸ್ ಠಾಣೆ ಹತ್ತಿರ ಸೇರಿ ಸುಮಾರು 8 ದನಕರುಗಳಿಗೆ ನೀರು ಕುಡಿಸಲು ನೀರಿನ ಬಾನಿಗಳನ್ನು ಪುರಸಭೆ ನಿರ್ಮಿಸಿದೆ.



“ಬೇಸಿಗೆ ಸಂದರ್ಭದಲ್ಲಿ ಪಟ್ಟಣದ ಜನತೆಗೆ ಕುಡಿಯುವ ನೀರಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಾಗಿದೆ. ನದಿ ನೀರಿನ ಜತೆಗೆ 12 ಶುದ್ಧ ಕುಡಿಯುವ ನೀರಿನ ಘಟಕಗಳಿದ್ದು, ಏನಾದರೂ ಮೋಟರ್ ಸಮಸ್ಯೆಗಳಾದರೆ ತಕ್ಷಣವೇ ರಿಪೇರಿಗೆ ಕ್ರಮ ಕೈಗೊಳ್ಳಲಾಗುವುದು.

■ **ಶಂಕರ ಹುಲ್ಲಮ್ಮನವರ**
ಮುಖ್ಯಾಧಿಕಾರಿ, ಪುರಸಭೆ, ಮುಂಡರಗಿ

ನೀರು ಸರಬರಾಜು

ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಯಾದರೆ ಚಿಕ್ಕವಡ್ಡಟ್ಟಿ, ಗುಡ್ಡದ ಬೂದಿಹಾಳ, ಬೆಣ್ಣೆಹಳ್ಳಿ, ಮತ್ತು ಕೊರ್ಲಹಳ್ಳಿ ಗ್ರಾಮಗಳ ರೈತರೊಂದಿಗೆ ಚರ್ಚಿಸಿದ್ದು, ಅವರ ಪಂಪ್ ಸೆಟ್ ಮೂಲಕ ನೀರು ಸರಬರಾಜು ಮಾಡುವ ವ್ಯವಸ್ಥೆ ಮಾಡಲು ಯೋಚಿಸಲಾಗಿದೆ. ಹಳ್ಳಿಕೇರಿ ಮತ್ತು ಯಕ್ಲಾಸಪುರ ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ನಿರ್ಧರಿಸಲಾಗಿದೆ ಎಂದು ಮುಂಡರಗಿಯ ಗ್ರಾಮೀಣ ನೀರು ಸರಬರಾಜು ಇಲಾಖೆ ಎಇಇ ಆನಂದಕುಮಾರ ತಿಳಿಸಿದ್ದಾರೆ.

ವಿಕಸಿತ ಭಾರತಕ್ಕೆ ವಿಜ್ಞಾನಿಗಳ ಪಾತ್ರ ಪ್ರಮುಖ

•**ನರಗುಂದ:** ವಿಕಸಿತ ಭಾರತವನ್ನು ಸಾಧಿಸುವಲ್ಲಿ ವಿಜ್ಞಾನಿಗಳ ಪಾತ್ರ ದೊಡ್ಡದಿದೆ ಎಂದು ಹುಲಕೋಟಿ ಶ್ರೀ ಎಚ್.ಕೆ. ಪಾಟೀಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಡಾ. ಜಿತೇಂದ್ರ ಆರ್. ಜಹಗಿದ್ದಾರ ಹೇಳಿದರು.

ಪಟ್ಟಣದ ಶ್ರೀ ಯಡೆಯೂರ ಸಿದ್ದಲಿಂಗೇಶ್ವರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ವಿಜ್ಞಾನ ದಿನವನ್ನು ಉದ್ಘಾಟಿಸಿ ಮಾತನಾಡಿ, ಪ್ರತಿವರ್ಷ ಫೆಬ್ರವರಿ 28 ರಂದು ಸರ್.ಸಿ ವಿ ರಾಮನ್ ಅವರ 'ರಾಮನ್ ಎಫೆಕ್ಟ್' ದಿನವನ್ನು ಒಂದು ನಿರ್ದಿಷ್ಟ ಥೀಮ್‌ನೊಂದಿಗೆ ಆಚರಿಸಲಾಗುತ್ತಿದೆ. ಈ ವರ್ಷದ ಥೀಮ್ ವಿಜ್ಞಾನದಲ್ಲಿ ಮಹಿಳೆಯರು ವಿಕಸಿತ ಭಾರತ ಸಾಧನೆಯನ್ನು ವೇಗಗೊಳಿಸುವುದಾಗಿದೆ. 2047 ರ ವೇಳೆಗೆ ಭಾರತವನ್ನು ವಿಕಸಿತ ಭಾರತವಾಗಿ ಪರಿವರ್ತಿಸಲು ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಔಷಧ, ಬಾಹ್ಯಾಕಾಶ ಇತ್ಯಾದಿ ಕ್ಷೇತ್ರಗಳಲ್ಲಿನ ವಿಜ್ಞಾನಿಗಳ ಕೊಡುಗೆಗಳು ಬಹಳಷ್ಟು ಮಹತ್ವದ್ದಾಗಿವೆ. ಪ್ರಸಕ್ತ ವರ್ಷದ ಕಾರ್ಯಕ್ರಮದ ಗಮನವು ವೈಜ್ಞಾನಿಕ ತಂತ್ರಜ್ಞಾನ, ಎಂಜಿನಿಯರಿಂಗ್, ಔಷಧಗಳು, ಗಣಿತ, ಬಾಹ್ಯಾಕಾಶ ಮುಂತಾದ ವಿಭಾಗಗಳಲ್ಲಿನ ಲಿಂಗ ಅಂತರವನ್ನು ತುಂಬುವುದು ಮತ್ತು ಆ ಮೂಲಕ ವಿಕಸಿತ ಭಾರತ ಕಡೆಗೆ ಭಾರತದ ಅಭಿವೃದ್ಧಿಯ ವೇಗವನ್ನು ಹೆಚ್ಚಿಸುವುದಾಗಿದೆ ಎಂದರು.

ಕಾಲೇಜಿನ ಉಪನ್ಯಾಸಕ ಎಂ.ಬಿ. ಹೂಗಾರ ಮಾತನಾಡಿ, ವಿಜ್ಞಾನ ದಿನಾಚರಣೆಯ ಈ ವರ್ಷದ ಧ್ಯೇಯ 'ವಿಜ್ಞಾನದಲ್ಲಿ ಮಹಿಳೆ' ವಾಕ್ಯವು ಪ್ರಮುಖವಾಗಿದೆ. ನಂದಿನಿ ಹರಿನಾಥ ಹಾಗೂ ರಿತು ಕರಿದಾಳ ಅವರಂತಹ ಮಹಿಳಾ ವಿಜ್ಞಾನಿಗಳು ಇಸ್ರೋದಲ್ಲಿ ಕಾರ್ಯನಿರ್ವಹಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ ಎಂದರು.

ಕಾಲೇಜಿನ ಪ್ರಾಚಾರ್ಯ ಆರ್.ಬಿ. ಪಾಟೀಲ ಮಾತನಾಡಿ, ಭಾರತದ ಮಹಾನ್ ವಿಜ್ಞಾನಿ ಸಿ.ವಿ. ರಾಮನ್ ಅವರು ಫೆಬ್ರುವರಿ 28 ರ 1928 ರಲ್ಲಿ ಬೆಳಕಿನ ಪರಿಣಾಮವನ್ನು ಕಂಡುಹಿಡಿದ ದಿನದ ಸ್ಮರಣೆಗಾಗಿ ಈ ದಿನವನ್ನು ವಿಜ್ಞಾನ ದಿನವಾಗಿ ಆಚರಿಸಲಾಗುತ್ತಿದೆ. ಬರಿಗಣ್ಣಿಗೆ ಕಾಣುವ ಬೆಳಕು ಬಿಳಿಯಾಗಿದ್ದರೂ ಅದರಲ್ಲಿ ಏಳು ಬಣ್ಣಗಳು ಇರುತ್ತವೆ ಎಂಬುದನ್ನು ಪ್ರಯೋಗದಿಂದ ತೋರಿಸಿದ್ದರು ಎಂದರು.

ಕಾಲೇಜಿನ ಅನೇಕ ಪ್ರಶಿಕ್ಷಣಾರ್ಥಿಗಳು ಭೌತವಿಜ್ಞಾನ ಮತ್ತು ರಸಾಯನಶಾಸ್ತ್ರದ ಬಗ್ಗೆ ತಯಾರಿಸಿದ ಆಸಕ್ತಿದಾಯಕ ಪ್ರಯೋಗಗಳನ್ನು ಪ್ರದರ್ಶಿಸಲಾಯಿತು. ಸಂಸ್ಥೆಯ ಅಧ್ಯಕ್ಷ ವೀರನಗೌಡ ಪಾಟೀಲ, ವೈ.ಎಂ. ಅನಾರಿ, ಬಸಮ್ಮ ಹುಡೇದಮನಿ ಪ್ರಾರ್ಥಿಸಿದರು. ಶೋಭಾ ಮಡಿವಾಳ ಸ್ವಾಗತಿಸಿದರು. ಭರತ ಬೂದನವರ ಮತ್ತು ವಿದ್ಯಾ ಬಡಿಗೇರ ನಿರೂಪಿಸಿದರು.



ತೆಗ್ಗು ಗುಂಡಿಗಳಿಗೆ ಶೀಘ್ರ ಮುಕ್ತಿ ನೀಡಲು ಸಾರ್ವಜನಿಕರ ಆಗ್ರಹ

•**ಲಕ್ಷ್ಮೇಶ್ವರ:** ಪಟ್ಟಣದ ಅನೇಕ ರಸ್ತೆಗಳಲ್ಲಿ ತೆಗ್ಗು ಗುಂಡಿಗಳು ನಿರ್ಮಾಣವಾಗಿದ್ದು, ಅದರಲ್ಲೂ ರಸ್ತೆ ಮಧ್ಯೆ ಸಿಡಿಗಳು ಕಿತ್ತಿರುವುದು, ರಸ್ತೆ ಕುಸಿದಿರುವುದು, ಚೇಂಬರ್‌ಗಳು ಕುಸಿತ, ರಸ್ತೆಗೆ ಅಡ್ಡಲಾಗಿ ಚರಂಡಿ ಪೈಪ್‌ಗಳು ಕಿತ್ತಿರುವುದು, ಹೀಗೆ ರಸ್ತೆಗಳಲ್ಲಿ ಅಪಘಾತಕ್ಕೆ ಆಹ್ವಾನ ನೀಡುವಂತಾಗಿದೆ. ಈ ಬಗ್ಗೆ ಪುರಸಭೆ ಎಂಜಿನಿಯರಿಂಗ್ ವಿಭಾಗದ ಅಧಿಕಾರಿಗಳು ಗಮನಹರಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸುತ್ತಿದ್ದಾರೆ.

ರಸ್ತೆ ಮೇಲೆ ಜನರು ಭಯದಲ್ಲಿ ಅಡ್ಡಾಡುವ ಪರಿಸ್ಥಿತಿ ತಲೆದೋರಿದೆ. ವೃದ್ಧರು, ಮಕ್ಕಳು, ವಾಹನ ಚಾಲಕರು ಗೊತ್ತಿಲ್ಲದೇ ಅಂತಹ ಸ್ಥಳಗಳಲ್ಲಿ ಬಿದ್ದರೆ ಯಾರು ಹೊಣೆ? ಪಟ್ಟಣದ ಪ್ರಮುಖ ರಸ್ತೆಗಳಲ್ಲಿ, ಹಳೆಯ ಬಡಾವಣೆಗಳಲ್ಲಿ, ಹೊಸ ಬಡಾವಣೆ ಹೀಗೆ ಎಲ್ಲೆಂದರಲ್ಲಿ ಸಾರ್ವಜನಿಕರು ದಿನನಿತ್ಯ ಸಂಕಷ್ಟ ಅನುಭವಿಸುತ್ತಿದ್ದಾರೆ. ಸಾರ್ವಜನಿಕರು ಈ ಬಗ್ಗೆ ಅನೇಕ ಬಾರಿ ಪುರಸಭೆಗೆ ಹೋಗಿ ಅಧಿಕಾರಿಗಳಿಗೆ ಗಮನಕ್ಕೆ ತಂದರೂ ಏನೂ ಪ್ರಯೋಜನವಾಗಿಲ್ಲ. ಎಂಜಿನಿಯರಿಂಗ್ ವಿಭಾಗದ ಅಧಿಕಾರಿಗಳು ತಮಗೆ ಸಮಸ್ಯೆಗಳು ಗೊತ್ತಿದ್ದರೂ ಇದರ ಬಗ್ಗೆ ಲಕ್ಷ್ಯ ವಹಿಸುತ್ತಿಲ್ಲ. ಸಾರ್ವಜನಿಕರಿಂದ ಸಮಸ್ಯೆಗಳನ್ನು ಆಲಿಸೂ ಅಧಿಕಾರಿಗಳಿಗೆ ಸಮಯ ಇಲ್ಲವೇ ಎಂದು ಸಾರ್ವಜನಿಕರು ಪ್ರಶ್ನಿಸುತ್ತಿದ್ದು, ತೆಗ್ಗು ಗುಂಡಿಗಳಿಗೆ ಆದಷ್ಟು ಬೇಗ ಮುಕ್ತಿ ನೀಡಲಿ ಎಂದು ಆಗ್ರಹಿಸಿದ್ದಾರೆ.



“ಗುತ್ತಿಗೆದಾರರಿಗೆ ದುರಸ್ತಿ ಪಡಿಸಲು ತಿಳಿಸಿದ್ದು, ಪಟ್ಟಣದಲ್ಲಿ ಇರುವ ಇಂತಹ ಸಮಸ್ಯೆಗಳನ್ನು ಶೀಘ್ರ ಪರಿಹರಿಸಲಾಗುವುದು.

■ **ವೀರೇಂದ್ರಸಿಂಗ್ ಕಾಟೇವಾಲೆ,** ಸಹಾಯಕ ಅಭಿಯಂತರ, ಪುರಸಭೆ, ಲಕ್ಷ್ಮೇಶ್ವರ

ಮಕ್ಕಳಿಗೆ ಬಾಲ್ಯದಿಂದಲೇ ಮಹಿಳೆಯರು ಆಧ್ಯಾತ್ಮಿಕ ಚಿಂತನೆ ನೀಡಲಿ

•**ಶಿರಹಟ್ಟಿ:** ಆಧ್ಯಾತ್ಮಿಕ ಚಿಂತನೆಯ ಮೇಲೆ ಸಮಾಜವನ್ನು ಮುನ್ನಡೆಸುವ ಜವಾಬ್ದಾರಿಯನ್ನು ಮುಂದಿನ ಪೀಳಿಗೆಗೆ ವಹಿಸುವ ನಿಟ್ಟಿನಲ್ಲಿ ಬಾಲ್ಯದಿಂದಲೇ ಮಕ್ಕಳಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಮನೆಯಿಂದಲೇ ಮಹಿಳೆಯರು ಮಾಡಬೇಕಾದ ಅವಶ್ಯಕತೆಯಿದೆ ಎಂದು ರಾಜಯೋಗಿನಿ ಬ್ರಹ್ಮಕುಮಾರಿ ದೇವಕಿ ಅಕ್ಕನವರು ಹೇಳಿದರು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಸ್ಥಳೀಯ ಈಶ್ವರಿ ವಿಶ್ವ ವಿದ್ಯಾಲಯದಲ್ಲಿ ನಡೆದ ಮಹಿಳೆಯರ ಜೀವನದಲ್ಲಿ ಆಧ್ಯಾತ್ಮ ಎಂಬುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಮಹಿಳೆಯರು ಶಕ್ತಿ, ತಾಳ್ಮೆ ಮತ್ತು ಪ್ರೀತಿಯ ಸಾಕಾರರೂಪವಾಗಿದ್ದು, ಆಧ್ಯಾತ್ಮಿಕತೆಯು ಅವರಲ್ಲಿನ ಆಂತರಿಕ ಶಕ್ತಿಯನ್ನು ಜಾಗೃತಗೊಳಿಸುತ್ತದೆ. ಮಹಿಳೆಯರಿಗೆ ಕುಟುಂಬ ಮತ್ತು ಸಮಾಜದ ನಡುವೆ ಸಮತೋಲನ ಕಾಯ್ದುಕೊಂಡು ಶಾಂತಿ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಲು ಆಧ್ಯಾತ್ಮಿಕ ಜೀವನಶೈಲಿ ಸಹಕಾರಿಯಾಗಲಿದೆ ಎಂದರು.

ಉಪನ್ಯಾಸಕಿ ರಾಜೇಶ್ವರಿ ಕಪ್ಪತ್ತನವರ, ಶಿಕ್ಷಕಿ ರೇಣುಕಾ ಲಕ್ಕುಂಡಿ ಮಾತನಾಡಿ, ತಾಯಿ, ಪತ್ನಿ ಮತ್ತು ಮಗಳಾಗಿ ಕುಟುಂಬಕ್ಕೆ ನಿಸ್ವಾರ್ಥ ಪ್ರೀತಿಯನ್ನು ತೋರುತ್ತಾಳೆ. ಕುಟುಂಬಕ್ಕೆ ತೋರುವ ಇದೆ ಪ್ರೀತಿಯನ್ನು ಆಧ್ಯಾತ್ಮವು ದೈವಿಕ ಪ್ರೀತಿಯಾಗಿ ಪರಿವರ್ತಿಸುತ್ತದೆ ಎಂದರು.



ಸರ್ಕಾರಿ ಪದವಿ ಕಾಲೇಜಿನ ಉಪನ್ಯಾಸಕಿ ಅನುಪಮಾ ಭಾತಖಂಡೆ ಉದ್ಘಾಟಿಸಿದರು. ರತ್ನಾ ಬದಿ, ಶಶಿಕಲಾ ಸಂಕದಾಳ, ನಿಖಿತಾ ಪಾಶ್ಚಾಪೂರ, ನಂದಾ ಪಲ್ಲೇದ, ಜಯಶ್ರೀ ಮುಧೋಳಕರ, ನಂದಾ ಕಪ್ಪತ್ತನವರ, ಬ್ರಹ್ಮಕುಮಾರಿ ಶೈಲಾ ಮುಂತಾದವರಿದ್ದರು.

ಕಾಳುಸಂತೆಯಲ್ಲಿ ಮಾರಾಟ: ಏಜೆನ್ಸಿಗಳ ವಿರುದ್ಧ ಕ್ರಮಕ್ಕೆ ಆಗ್ರಹ

•**ಗದಗ:** ಗ್ರಾಹಕರನ್ನು ವಂಚಿಸಿ ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ಕಾಳುಸಂತೆಯಲ್ಲಿ ಮಾರಾಟ ಮಾಡುತ್ತಿರುವ ಹಾಗೂ ಸಾರ್ವಜನಿಕರಿಗೆ ವಿನಾಕಾರಣ ತೊಂದರೆ ನೀಡುತ್ತಿರುವ ಏಜೆನ್ಸಿಗಳ ಮೇಲೆ ಕ್ರಮಕ್ಕೆ ಆಗ್ರಹಿಸಿ ಜಿಲ್ಲಾ ಸ್ಲಂ ಸಮಿತಿಯಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್ ಕೊರತೆಯಿಂದ ಗ್ಯಾಸ್ ಖರೀದಿಗೆ ಜನರು ಮುಗಿಬಿದ್ದಿದ್ದಾರೆ. ಎಲ್‌ಪಿಜಿ ಸಿಲಿಂಡರ್ ಹೆಚ್ಚಿನ ಉತ್ಪಾದನೆಗೆ ಕೇಂದ್ರ ಸರ್ಕಾರದಿಂದ ಆದೇಶ ಮಾಡಲಾಗಿದೆ. ಬ್ಲ್ಯಾಕ್ ಮಾರ್ಕೆಟ್‌ನಲ್ಲಿ 14.5 ಕೆಜಿ ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್ ಒಂದೂವರೆ ಸಾವಿರ ರೂಪಾಯಿಗೆ ಮಾರಾಟವಾಗುತ್ತಿದೆ. ಮುಂಬರುವ ದಿನಗಳಲ್ಲಿ ಹಬ್ಬಗಳು ಇರುವುದರಿಂದ ಎಲ್‌ಪಿಜಿ ಸಿಲಿಂಡರ್‌ಗೆ ಭಾರೀ ಬೇಡಿಕೆಯಿದೆ. ಗಲ್ಫ್ ರಾಷ್ಟ್ರಗಳಿಂದ ಭಾರತಕ್ಕೆ ಎಲ್‌ಪಿಜಿ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಹೀಗಾಗಿ ಎಲ್‌ಪಿಜಿ ಸಿಲಿಂಡರ್ ಖರೀದಿಗೆ ಜನರು ಮುಗಿಬಿದ್ದಿದ್ದು, ಹಲವು ಏಜೆನ್ಸಿಗಳು ಗ್ರಾಹಕರಿಗೆ ನೀಡಬೇಕಾದ ಎಲ್‌ಪಿಜಿ ಸಿಲಿಂಡರ್‌ಗಳನ್ನು ಕಾಳು ಸಂತೆಯಲ್ಲಿ ಮಾರಾಟ ಮಾಡುತ್ತಿದ್ದಾರೆ. ಗ್ರಾಹಕರು ತಮ್ಮ ಗೃಹ ಬಳಕೆ ಸಿಲಿಂಡರ್‌ನ್ನು ಆನ್‌ಲೈನ್ ಮೂಲಕ ಬುಕ್ ಮಾಡುತ್ತಾರೆ. ಆದರೆ ಗ್ಯಾಸ್ ಏಜೆನ್ಸಿ ಗ್ರಾಹಕರ ಹೆಸರಿಗೆ ಬಂದಿರುವ ಸಿಲಿಂಡರ್ ಕಾಳು ಸಂತೆಯಲ್ಲಿ ಹೆಚ್ಚಿನ ಹಣಕ್ಕೆ ಮಾರಾಟ ಮಾಡುತ್ತಿದ್ದಾರೆ. ಒಂದು ಸಿಲಿಂಡರ್‌ಗೆ 400 ರಿಂದ 500 ರೂ. ವರೆಗೂ ಹೆಚ್ಚುವರಿ ಹಣ ಪಡೆದುಕೊಂಡು ಸಿಲಿಂಡರ್ ಖಾಸಗಿ ವ್ಯಕ್ತಿಗಳಿಗೆ ಮಾರಾಟ ಮಾಡಲಾಗುತ್ತಿದೆ. ಮನೆ-ಮನೆಗೆ ಏಜೆನ್ಸಿಗಳ ಮೂಲಕ ಸಿಲಿಂಡರ್ ಪೂರೈಸುವ ಸಿಬ್ಬಂದಿ ಬುಕ್ ಆಗಿರುವ ಗ್ರಾಹಕರಿಗೆ ವಂಚಿಸಿ ಯಾವುದೇ ಭಯ ಇಲ್ಲದೇ ಹೆಚ್ಚಿನ ಹಣಕ್ಕಾಗಿ ಬ್ಲ್ಯಾಕ್‌ನಲ್ಲಿ ಮಾರಾಟ ಮಾಟುತ್ತಿರುವ ವಿರುದ್ಧ ಜಿಲ್ಲಾಧಿಕಾರಿಗಳು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಜಿಲ್ಲಾ ಸ್ಲಂ ಸಮಿತಿ ಅಧ್ಯಕ್ಷ ಇಮ್ತಿಯಾಜ ಮಾನ್ವಿ, ಸ್ಲಂ ಸಮಿತಿ ಕಾರ್ಯದರ್ಶಿ ಅಶೋಕ ಕುಸಬಿ, ಇಬ್ರಾಹಿಂ ಮುಲ್ಲಾ, ಶರಣಪ್ಪ ಸೂಡಿ, ಮೌಲಾಸಾಬ ಗಚ್ಚಿ, ಮೆಹಬೂಬಸಾಬ ಬಳ್ಳಾರಿ, ಪರವೀನಬಾನು ಹವಾಲ್ದಾರ, ಮುಷ್ತಾ ಬಿಜಾಪೂರ, ವಿಶಾಲಕ್ಷಿ ಹಿರೇಗೌಡ್ರ, ಮಕ್ತುಮಸಾಬ ಮುಲ್ಲಾನವರ, ಶಂಕ್ರಪ್ಪ ರೋಣದ, ಆನಂದಪ್ಪ ಮೂಲಿಮನಿ ಇದ್ದರು.



ಮಿತವ್ಯಯ ಬಳಕೆ ಅಗತ್ಯ: ಸ್ವಾಮೀಜಿ

•**ಗದಗ:** ಹಸಿ ತರ್ಕಾರಿ, ನೆನಸಿದ ಕಾಳು ತಿನ್ನಲು ಸಾರ್ವಜನಿಕರು ಯುದ್ಧದ ಸಂದರ್ಭದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಬಳಕೆ ಮಿತವ್ಯಯವಾಗಿರಲಿ. ಹಸಿ ತರ್ಕಾರಿ, ನೆನಸಿದ ಕಾಳು ಬಳಸುವಂತೆ ಗದಗ-ಡಂಬಳ ತೋಂಟದಾರ್ಯ ಮಠದ ಡಾ.ತೋಂಟದ ಸಿದ್ಧರಾಮ ಸ್ವಾಮೀಜಿ ಮನವಿ ಮಾಡಿಕೊಂಡಿದ್ದಾರೆ.



ಈ ಕುರಿತು ಪತ್ರಿಕೆಯ ಪ್ರಟಣೆಗೆ ತಿಳಿಸಿದ ಅವರು, ಪೆಟ್ರೋಲಿಯಂ ಉತ್ಪನ್ನಗಳ ಕೊರತೆಯಿಂದಾಗುವ ಸಮಸ್ಯೆಗಳಿಂದ ಆಚೆ ಬರಲು ಶ್ರೀಗಳು ಭಕ್ತರಿಗೆ ಸಲಹೆ ನೀಡಿದ್ದಾರೆ. ಬೇಯಿಸಿದ ಆಹಾರ ಸೇವನೆ ಕಡಿಮೆ ಮಾಡಿ, ಕಾಳು, ತರ್ಕಾರಿ ಹೆಚ್ಚು ಬಳಸಿ ಎಂದಿದ್ದಾರೆ. ಯುದ್ಧದಿಂದಾಗಿ ಅನೇಕ ರಾಷ್ಟ್ರಗಳಿಗೆ ಪೆಟ್ರೋಲ್, ಡಿಸೇಲ್, ಗ್ಯಾಸ್ ಸರಬರಾಜು ತೊಂದರೆಯಾಗಿದೆ. ಕರ್ನಾಟಕದಲ್ಲಿ ನಿತ್ಯ ದಾಸೋಹ ನಡೆಸುವ ಮಠಗಳಿಗೂ ಯುದ್ಧದಿಂದ ವ್ಯತ್ಯಯವಾಗಿದೆ. ಇಂಥ ಸಮಸ್ಯೆಯಲ್ಲಿ ಇದೊಂದು ರಾಷ್ಟ್ರದ ಸಮಸ್ಯೆ ಎಂದು ಜನರು ಅರಿಯಬೇಕು. ಅನಾವಶ್ಯಕ ಓಡಾಟವನ್ನೂ ಜನರು ಕಡಿಮೆ ಮಾಡಬೇಕು. ಅವಶ್ಯಕತೆ ಇದ್ದಲ್ಲಿ ಮಾತ್ರ ವಾಹನ ಬಳಕೆ ಮಾಡಬೇಕು. ನಾವೆಲ್ಲ ಭಾರತ ನಿವಾಸಿಗಳು ಕೈಗೂಡಿಸಿದರೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು. ರಾಜಕೀಯ ನೇತಾರರು ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಾಗಿದೆ. ಅಮೇರಿಕ ಅನೇಕ ದೇಶದ ಮೇಲೆ ಪ್ರಭುತ್ವ ಸಾಧಿಸುತ್ತಿರುವುದನ್ನು ಗಮನಿಸುತ್ತಿದ್ದೇವೆ. ಎಲ್ಲ ರಾಷ್ಟ್ರದ ಮುಖಂಡರು ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು. ಕೊಲ್ಲಿ ಪ್ರದೇಶದಲ್ಲಿ ನಡೆಯುತ್ತಿರುವ ಯುದ್ಧಕ್ಕೆ ವಿರಾಮ ಹಾಡಬೇಕು. ಯುದ್ಧದಿಂದ ಯಾವುದೇ ಪ್ರಯೋಜನ ಇಲ್ಲ, ರಾಷ್ಟ್ರದ ನಾಯಕರು ಮಾತನಾಡಿ ಸಮಸ್ಯೆ ಬಗೆಹರಿಸಲಿ ಎಂದು ಶ್ರೀಗಳು ಮನವಿ ಮಾಡಿದ್ದಾರೆ.

ಸಿಲಿಂಡರ್ ಬೆಲೆ ಏರಿಕೆ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ

•**ಗದಗ:** ಸಾರ್ವಜನಿಕರ ದಿನಬಳಕೆಗೆ ಅಗತ್ಯವಾಗಿ ಬೇಕಾಗಿರುವ ಸಿಲಿಂಡರ್ ದರವನ್ನು ಏರಿಕೆ ಮಾಡಿರುವುದನ್ನು ಖಂಡಿಸಿ ಕೇಂದ್ರ ಸರ್ಕಾರದ ವಿರುದ್ಧ ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರು ನಗರದ ಮಹಾತ್ಮ ಗಾಂಧಿ ವೃತ್ತದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು. ಜೊತೆಗೆ ಮಹಿಳೆಯರು ರಸ್ತೆ ಮಧ್ಯದಲ್ಲಿ ಸೌದೆ ಒಲೆ ಹಚ್ಚಿ ಅಡುಗೆ ಮಾಡಿ ಆಕ್ರೋಶ ವ್ಯಕ್ತಪಡಿಸಿದರು.

ಮಾಜಿ ಸಚಿವ ಬಿ.ಆರ್. ಯಾವಗಲ್ಲ ಮಾತನಾಡಿ, ಸಿಲಿಂಡರ್ ಬೆಲೆ ಏರಿಕೆಯಿಂದ ಜನರ ಬದುಕು ಕಷ್ಟವಾಗಿದೆ. ಕೇಂದ್ರ ಸರ್ಕಾರ ವಿದೇಶಾಂಗ ನೀತಿಯನ್ನು ಗಾಳಿಗೆ ತೂರಿದ್ದರಿಂದ ದೇಶದ ಆರ್ಥಿಯ ನೀತಿಯು ಹಾಳಾಗಿದೆ ಎಂದರು.

ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕೃಷ್ಣಗೌಡ ಪಾಟೀಲ ಮಾತನಾಡಿ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ದ್ವಂದ್ವ ನೀತಿಯಿಂದಾಗಿ ಜಾಗತಿಕವಾಗಿ ಭಾರತ ಎಲ್ಲ ದೇಶಗಳ ಸ್ನೇಹವನ್ನೂ ಕಳೆದುಕೊಂಡಿದ್ದು ಇನ್ನು ದೇಶದಲ್ಲಿ ಜನರಿಗೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಹಾಗೂ ಅಡುಗೆ ಅನಿಲ ಪೂರೈಕೆ ಮಾಡದೆ ಜನರಿಗೆ ತೊಂದರೆ ನೀಡುತ್ತಿದ್ದು ಕೇಂದ್ರದಿಂದ ಜನಸಾಮಾನ್ಯರಿಗೆ ನಿತ್ಯ ದೊಂದರೆಯಾಗುತ್ತಿದ್ದು ಇದನ್ನು ಮನವರಿಕೆ ಮಾಡಿಕೊಂಡು ಅಧಿಕಾರ ನಡೆಸಬೇಕಾದ ಸರ್ಕಾರ ಕಣ್ಮುಚ್ಚಿ ಕುಳಿತಿದ್ದು ಜನರಿಗೆ ಮಾಡಿದ ಮೋಸವಾಗಿದೆ ಎಂದು ಆರೋಪಿಸಿದರು.

ರೋಣ ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಮಿಥುನ್ ಪಾಟೀಲ, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ನೀಲಮ್ಮ ಬೋಳನವರ ಮಾತನಾಡಿದರು. ಪ್ರವೀಣ ಯಾವಗಲ್ಲ, ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ ಅಶೋಕ ಮಂದಾಲಿ, ಸಿದ್ದು ಪಾಟೀಲ, ಅಕ್ಬರಸಾಬ ಬಬರ್ಚಿ, ಭಾಷಸಾಬ ಮಲ್ಲಸಮುದ್ರ, ಎಸ್.ಎನ್. ಬಳ್ಳಾರಿ, ವಿ.ಬಿ. ಸೋಮನಕಟ್ಟಿಮಠ, ಬಸವರಾಜ ಕಡೇಮನಿ, ಉಮರಫಾರುಕ ಹುಬ್ಬಳ್ಳಿ, ಅಮರೇಶ ಮಾಗಡಿ, ಬಿ.ಆರ್. ಬೆನಕನವಾರಿ, ಉಮೇಶ ಹೂಗಾರ, ರಮೇಶ ಹೊನ್ನಿನಾಯ್ಕರ, ಡಿ.ಡಿ. ಮುರನಾಳ, ಶರಣಪ್ಪ ಬೆಟಗೇರಿ ಇದ್ದರು.



ಕಿರುಸುದ್ದಿ

ಪಡಿತರ ಅಕ್ಕಿ ವಶ: ದೂರು ದಾಖಲು



ಕೂಡ್ಲಿಗಿ: ತಾಲೂಕಿನ ಕ್ಯಾಸನಕೆರಿ ಗ್ರಾಮದ ರಾಷ್ಟ್ರೀಯ ಹೆದ್ದಾರಿ 50ರಲ್ಲಿ ಅಕ್ರಮವಾಗಿ ಪಡಿತರ 360 ಚೀಲ ಒಟ್ಟು 4 ಲಕ್ಷಕ್ಕೂ ಅಧಿಕ ಮೊತ್ತದ ಅಕ್ಕಿ ವಶಪಡಿಸಿಕೊಳ್ಳಲಾಗಿದೆ ಎಂದು ಕಮಲ ಗುಡ್ಡಪುರ ಆಹಾರ ನಿರೀಕ್ಷಕರು ಮಾಹಿತಿ ನೀಡಿದರು. ಯಾವುದೇ ದಾಖಲೆಗಳಿಲ್ಲದೆ ಅನಧಿಕೃತ ಅಕ್ರಮವಾಗಿ ಸಾಗಿಸುತ್ತಿದ್ದ 182.40ಕ್ವಿಂಟಲ್ ಪಡಿತರ ಅಕ್ಕಿ ವಶಪಡಿಸಿಕೊಂಡು ಕೂಡ್ಲಿಗಿ ಪೊಲೀಸ್ ಠಾಣೆಯಲ್ಲಿ ಮಂಗಳವಾರ ಪ್ರಕರಣ ದಾಖಲಾಗಿರುತ್ತದೆ. ಇದೇ ಸಂದರ್ಭದಲ್ಲಿ ಆಹಾರ ನಿರೀಕ್ಷಕಿ ವಾಣಿಶ್ರೀ, ಕಂದಾಯ ನಿರೀಕ್ಷಕ ತಳವಾರ ಪ್ರಭು, ಕೂಡ್ಲಿಗಿ ಠಾಣೆ ಎಸ್‌ಐ ಬಸವರಾಜ್ ಶೆಟ್ಟಿ ಸೇರಿದಂತೆ ಇತರರು ಇದ್ದರು.

ಚೇತರಿಕೆ ಕಂಡ ಮೆಣಸಿನಕಾಯಿ ಚೀಲಗಳ ಆವಕ

ಬ್ಯಾಡಗಿ: ಪಟ್ಟಣದ ಅಂತಾರಾಷ್ಟ್ರೀಯ ಕೃಷಿ ಉತ್ಪನ್ನ ಮಾರುಕಟ್ಟೆಗೆ ಗುರುವಾರ ಸುಮಾರು 1.75 ಲಕ್ಷಕ್ಕೂ ಅಧಿಕ ಮೆಣಸಿನಕಾಯಿ ಚೀಲಗಳು ಮಾರುಕಟ್ಟೆಯಲ್ಲಿ ಆವಕ ಆಗಿದ್ದು ದರವು ಕಳೆದ ವಾರಕ್ಕೆ ಹೋಲಿಸಿದರೆ ಸ್ಥಿರವಾಗಿದೆ. ಬ್ಯಾಡಗಿ ಕಡ್ಡಿ ಮೆಣಸಿನಕಾಯಿ ಕಳೆದ ವಾರಕ್ಕೆ ಹೋಲಿಸಿದರೆ ದರದಲ್ಲಿ ಏರಿಕೆ ಕಡಿಮೆ 4.209ರೂ. 100ಕೆಜಿ



ಸರಾಸರಿ ದರ 100 ಕೆಜಿಗೆ 48.029ರೂ. ಅತಿ ಹೆಚ್ಚು 100ಕೆಜಿಗೆ 62.222ರೂ. ಬ್ಯಾಡಗಿ ಡಬ್ಬಿ ಕಳೆದ ವಾರಕ್ಕೆ ಹೋಲಿಸಿದರೆ ಈ ವಾರ ಅತಿ ಸ್ವಲ್ಪ ಏರಿಕೆ ದರ ಕಡಿಮೆ ಪ್ರತಿ 100 ಕೆಜಿಗೆ 5.109ರೂ. ಸರಾಸರಿ ದರ ಪ್ರತಿ 100 ಕೆಜಿಗೆ 51.229ರೂ. ಹೆಚ್ಚು ದರ ಪ್ರತಿ 100 ಕೆಜಿಗೆ. 64.679ರೂ. ಗುಂಟೂರು ಒಣಮೆಣಸಿಕಾಯಿ ಕಡಿಮೆ ಬಿಳಿಕಾಯಿ ದರ ಪ್ರತಿ 100 ಕೆಜಿಗೆ 1509 ರೂ. ಸರಾಸರಿ ದರ ಪ್ರತಿ 100 ಕೆಜಿಗೆ 13.829 ರೂ.ಅತಿ ಹೆಚ್ಚು ದರ ಪ್ರತಿ 100 ಕೆಜಿಗೆ 17.899ರೂ.

ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಸಮಿತಿ ರಚನೆ। ವರದಿ ನೀಡಲು ಮೂರು ತಿಂಗಳ ಗಡುವು

ಕರ್ನಾಟಕ ಆಡಳಿತ ನ್ಯಾಯ ಮಂಡಳಿಗೆ ಕೋಕ್?

▸ ಲಕ್ಷ್ಮೀಕಾಂತ್ ಕುಲಕರ್ಣಿ


ದಿಗಂತ ವಿಶೇಷ

ಯಾದಗಿರಿ: ರಾಜ್ಯ ಸರ್ಕಾರ ಹಾಗೂ ಸರ್ಕಾರಿ ಸ್ವಾಮ್ಯದ ನಿಗಮ ಮಂಡಳಿಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ನೇಮಕಾತಿ ಹಾಗೂ ಸೇವಾ ವಿಷಯಗಳಿಗೆ ಸಂಬಂಧಿಸಿದ ವ್ಯಾಜ್ಯಗಳನ್ನು ತ್ವರಿತ ಇತ್ಯರ್ಥ ಪಡಿಸುವ ನಿಟ್ಟಿನಲ್ಲಿ ಸ್ಥಾಪಿಸಲಾದ ಕರ್ನಾಟಕ ಆಡಳಿತ (ಕೆಎಟಿ) ನ್ಯಾಯ ಮಂಡಳಿಯನ್ನೇ ಸರ್ಕಾರ ಇದೀಗ ರದ್ದುಗೊಳಿಸಲು ಮುಂದಾಗಿದೆ.

ಪ್ರಸ್ತುತ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯಲ್ಲಿ ಕಾರ್ಯದ ಒತ್ತಡವು ಗಣನೀಯವಾಗಿ ಕ್ಷೀಣಿಸಿರುವುದು ಕಂಡು ಬಂದಿರುವುದರಿಂದ, ವರ್ಗಾವಣೆ ವಿಷಯವನ್ನು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯ ವ್ಯಾಪ್ತಿಯಿಂದ ಹೊರಗಿಡುವುದು ಮತ್ತು ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯನ್ನು ರದ್ದುಪಡಿಸುವ ಅಥವಾ ಮುಂದುವರಿಸುವ ಕುರಿತಂತೆ ಪರಿಶೀಲಿಸಿ, ಸೂಕ್ತ ಆಡಳಿತಾತ್ಮಕ ನಿರ್ಣಯ ಕೈಗೊಳ್ಳುವಂತೆ ರಾಜ್ಯ ಸಂಸದೀಯ ವ್ಯವಹಾರಗಳ ಇಲಾಖೆ ನೀಡಿದ ಶಿಫಾರಸು ಮಾಡಿದೆ.

ಅದರಂತೆ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಉಪ ಕಾರ್ಯದರ್ಶಿ ಎಸ್.ಆರ್. ಶಿವಶಂಕರ್ ಅವರು, ಕೆಎಟಿ ರದ್ದುಗೊಳಿಸುವುದರಿಂದ ಆಗುವ ಸಾಧಕ-ಬಾಧಕಗಳ ಕುರಿತು ವರದಿ ಸಲ್ಲಿಸಲು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಉಮೇಶ್ ಎಂ.ಅಡಿಗ, ನಿವೃತ್ತ ಐಎಎಸ್ ಅಧಿಕಾರಿ ಜಿ.ಸತ್ಯವತಿ, ಸರ್ಕಾರದ ಅಪರ ಕಾರ್ಯದರ್ಶಿ ಕೆ.ಎಲ್.ಅಶೋಕ್, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಜಂಟಿ ಕಾರ್ಯದರ್ಶಿ ಕಾರ್ಯದರ್ಶಿ, ಅಕ್ಷಯ್ ಶ್ರೀಧರ್ ಮತ್ತು ಸರ್ಕಾರದ ಅಧೀನ ಕಾರ್ಯದರ್ಶಿ ಪ್ರತಿಭಾ. ಕೆ ಅವರನ್ನು ಒಳಗೊಂಡ ಸಮಿತಿ ರಚಿಸಿ ಆದೇಶಿಸಿದ್ದಾರೆ.





ಹಲವು ಪ್ರಕರಣಗಳಲ್ಲಿ ಸರ್ಕಾರಕ್ಕೆ ಮುಜುಗರ

ಕೆಲ ಹಿರಿಯ ಐಎಎಸ್, ಐಪಿಎಸ್ ಅಧಿಕಾರಿಗಳ ವರ್ಗಾವಣೆ ಹಾಗೂ ಅಮಾನತ್ತಿನಂತ ಪ್ರಕರಣಗಳಲ್ಲಿ ಕೆಎಟಿ ತಡೆಯಾಜ್ಞೆ ನೀಡಿದ್ದುಂಟು. ಹೀಗಾಗಿ ಸರ್ಕಾರ ಹಲವು ಬಾರಿ ಮುಜುಗರ ಅನುಭವಿಸಿದೆ. ಇನ್ನೂ ಅಧಿಕಾರಿ, ಸಿಬ್ಬಂದಿ ವರ್ಗಾವಣೆ ವಿಷಯದಲ್ಲೂ ಕೆಎಟಿ ತಕ್ಷಣ ಸ್ಟೇ ಕೊಡುವ ಕಾರಣ ಕಾರ್ಯಾಂಗದ ಮೇಲೆ ಸರ್ಕಾರದ ಹಿಡಿತ ತಪ್ಪುತ್ತಿದ್ದು, ಕೆಎಟಿಯನ್ನೇ ರದ್ದುಗೊಳಿಸಿದರೆ, ತನ್ನ ಕೆಲಸ ಸಲೀಸಾಗಲಿದೆ ಎಂಬ ಲೆಕ್ಕಾಚಾರಗಳು ಅಡಗಿರುವ ಅನುಮಾನ ಮೂಡುತ್ತಿದೆ

ಸಮಿತಿಯ ಕಾರ್ಯವ್ಯಾಪ್ತಿ, ಷರತ್ತು ಹೀಗಿವೆ

ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯ ಬೆಂಗಳೂರಿನ ಪ್ರಧಾನ ಪೀಠ, ಬೆಳಗಾವಿ ಮತ್ತು ಕಲಬುರ್ಗಿ ಪೀಠಗಳಲ್ಲಿ ವರ್ಷವಾರು ದಾಖಲಾದ, ವಿಲೇವಾರಿಯಾದ ಹಾಗೂ ಪ್ರಸ್ತುತ ಬಾಕಿ ಇರುವ ದಾವೆ, ಪಕರಣಗಳ ಬಗ್ಗೆ ತಿಳಿಸುವುದು. ಮೂರು ಪೀಠಗಳಲ್ಲಿನ ದಾವೆ, ಪ್ರಕರಣಗಳನ್ನು ಹೈಕೋರ್ಟ್‌ಗೆ ವರ್ಗಾಯಿಸಿದ್ದಲ್ಲಿ ಆಗುವ ಸಾಧಕ, ಬಾಧಕಗಳು ಬಗ್ಗೆ ಮೂರು ತಿಂಗಳ ಒಳಗೆ ವರದಿ ನೀಡುವಂತೆ ಸರ್ಕಾರ ಆದೇಶಿಸಿದೆ.

ರಾಜ್ಯದಲ್ಲಿ ಬೆಂಗಳೂರು (ಪ್ರಧಾನ ಪೀಠ), ಬೆಳಗಾವಿ ಹಾಗೂ ಕಲಬುರುಗಿ ಹೀಗೆ ಕೆಎಟಿಯ ಮೂರು ಪೀಠಗಳಿವೆ. ಬೆಂಗಳೂರು ವ್ಯಾಪ್ತಿಗೆ 17 ಜಿಲ್ಲೆಗಳು, ಬೆಳಗಾವಿ 9 ಹಾಗೂ ಕಲಬುರಗಿಗೆ 5 ಜಿಲ್ಲೆಗಳು ಬರುತ್ತವೆ. ಈಗಾಗಲೇ ಮಧ್ಯಪ್ರದೇಶ, ತಮಿಳುನಾಡು, ಹಿಮಾಚಲ ಪ್ರದೇಶ, ಆಂಧ್ರಪ್ರದೇಶ ಮತ್ತು ಓರಿಸ್ಸಾ ರಾಜ್ಯಗಳಲ್ಲಿ ಕೆಎಟಿಯನ್ನು ರದ್ದುಗೊಳಿಸಲಾಗಿದೆ. ಹೀಗಾಗಿ ರಾಜ್ಯ ಸರ್ಕಾರ ಸಹ ಇದೇ ಹಾದಿಯನ್ನು ಹಿಡಿಯಲು ಮುಂದಾಗಿದೆ.

ಮೂಲಗಳ ಪ್ರಕಾರ ಈಗಾಗಲೇ ಕಲಬುರಗಿ ಕೆಎಟಿ ಪೀಠ ಬಹುತೇಕ ಸ್ಥಗಿತಗೊಂಡಿದೆ. ಸರ್ಕಾರ ಕೆಎಟಿ ರದ್ದುಗೊಳಿಸಿದರೆ ಮುಂದೆ ಎದುರಾಗುವ ವಿರೋಧಗಳಿಂದ ತಪ್ಪಿಸುವ ನಿಟ್ಟಿನಲ್ಲಿ ಸಮಿತಿ ರಚನೆ ತನ್ಮೂಲಕ ವರದಿ ಪಡಿಸಿಕೊಂಡು ರದ್ದುಪಡಿಸಿದ್ದಲ್ಲಿ ವಿರೋಧಗಳಿಂದ ಬಚಾವ್ ಆಗಬಹುದು ಎಂಬ ಲೆಕ್ಕಾಚಾರ ಹೊಂದಿದೆ ಎನ್ನಲಾಗಿದೆ.

ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಗೆ ನೀರು ಹರಿಸಲು ನಿರ್ಧಾರ

ಕೊಪ್ಪಳ: ತುಂಗಭದ್ರಾ ಜಲಾಶಯದಲ್ಲಿ 2025-26ನೇ ಜಲವರ್ಷದಲ್ಲಿ ನೀರಿನ ಲಭ್ಯತೆ ಆಧರಿಸಿ ಪ್ರಾದೇಶಿಕ ಆಯುಕ್ತರು ಕಲಬುರಗಿ ಇವರ ಆದೇಶದ ಮೇರೆಗೆ ಕೊಪ್ಪಳ ಮತ್ತು ರಾಯಚೂರು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಹಾಗೂ ಗ್ರಾಮಗಳ ವ್ಯಾಪ್ತಿಯಲ್ಲಿರುವ ನೀರಿನ ಕೆರೆಗಳನ್ನು ತುಂಬಿಸಲು ತುಂಗಭದ್ರಾ ಜಲಾಶಯದಿಂದ ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಗೆ ಪ್ರಾದೇಶಿಕ ಆಯುಕ್ತರು, ಕಲಬುರಗಿ ವಲಯ ಕಲಬುರಗಿ ರವರು ನಿಗದಿ ಪಡಿಸಿದ ವೇಳಾಪಟ್ಟಿಯಂತೆ ನೀರು ಹರಿಸಲು ನಿರ್ಧರಿಸಲಾಗಿದೆ.

ಅದರಂತೆ ಸಂಬಂಧಿಸಿದ ಕಾರ್ಯಪಾಲಕ ಅಭಿಯಂತರರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು ತಮ್ಮ ವ್ಯಾಪ್ತಿಯಲ್ಲಿನ ತೂಬುಗಳ ಗೇಟ್‌ಗಳ ಮುಖಾಂತರ ಕೆರೆ ಕಟ್ಟೆಗಳಲ್ಲಿ ಕುಡಿಯುವ ಸಲುವಾಗಿ ನೀರು ಶೇಖರಣೆ ಮಾಡಲು ಹಾಗೂ ನಿಗದಿತ ಪ್ರಮಾಣದ ನೀರನ್ನು 104 ಮೈಲ್ ವರೆಗೆ ಹರಿಸಿ ಹಾಗೂ ಗ್ರಾಮಗಳ ವ್ಯಾಪ್ತಿಯಲ್ಲಿರುವ ನೀರಿನ ಕೆರೆಗಳನ್ನು ತುಂಬಿಸಲು ಕ್ರಮ ಕೈಗೊಳ್ಳಲು ಜಿಲ್ಲಾಡಳಿತ ಹಾಗೂ ಪೊಲೀಸ್ ಸಿಬ್ಬಂದಿ ಸಹಯೋಗದೊಂದಿಗೆ ಸಮರ್ಪಕ ನೀರು ನಿರ್ವಹಣೆ ಮಾಡಬೇಕು.

ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆ (0ರಿಂದ104 ಮೈಲ್ ವರೆಗೆ)ಗೆ ಕುಡಿಯುವ ನೀರಿಗಾಗಿ ಕೊಪ್ಪಳ ಮತ್ತು ರಾಯಚೂರು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಹಾಗೂ ಗ್ರಾಮಗಳ ವ್ಯಾಪ್ತಿಯಲ್ಲಿರುವ ನೀರಿನ ಕೆರೆಗಳನ್ನು ತುಂಬಿಸಲು ಮಾರ್ಚ್ 16 (ಸೋಮವಾರ ಬೆಳಗ್ಗೆ 8 ಗಂಟೆ) ರಿಂದ ಮಾರ್ಚ್ 27ರ (ಶುಕ್ರವಾರ ಬೆಳಗ್ಗೆ 8 ಗಂಟೆ) ವರೆಗೆ 2000 ಕ್ಯೂಸೆಕ್‌ನಂತೆ ಕುಡಿಯುವ ನೀರು ಹರಿಸಲಾಗುವುದು.

ಅದರಂತೆ, ಯರಮರಸ್ ವಿಭಾಗ ಮಾರ್ಚ್ 19, 20,21ರ ವರೆಗೆ, ಸಿರವಾರ ವಿಭಾಗ ಮಾ. 21, 22, 23ರವರೆಗೆ, ಸಿಂದನೂರು ವಿಭಾಗ ಮಾ.24,25,ಮಾ. 26ರ ವರೆಗೆ ಹಾಗೂ ವಡ್ಡರಹಟ್ಟಿ ವಿಭಾಗದ ಮಾ.26, 27ರ ವರೆಗೆ ನೀರು ಹರಿಸಲು ವೇಳಾಪಟ್ಟಿ ನಿಗದಿಪಡಿಸಲಾಗಿದೆ.



₹1 ಕೋಟಿ ಮೊತ್ತದ ಶಶಿಕಲಾ ಜೊಲ್ಲೆ ವಿದ್ಯಾರ್ಥಿ ವೇತನ ಪುರಸ್ಕಾರ ಪ್ರಕಟ

ಚಿಕ್ಕೋಡಿ: ಪಿಯುಸಿ ಪ್ರಥಮ ವರ್ಷದ ಪ್ರವೇಶಾತಿಗಾಗಿ ರೂ. 1 ಕೋಟಿ ಮೊತ್ತದ 'ಶ್ರೀಮತಿ ಶಶಿಕಲಾ ಜೊಲ್ಲೆ ವಿದ್ಯಾರ್ಥಿ ವೇತನ ಪುರಸ್ಕಾರ-2026'ಕ್ಕೆ 40 ವಿದ್ಯಾರ್ಥಿಗಳನ್ನು ಪರೀಕ್ಷೆ ಮೂಲಕ ಆಯ್ಕೆ ಮಾಡಿದ ಫಲಿತಾಂಶವನ್ನು ಯಕ್ಸಂಬಾದ ಜೊಲ್ಲೆ ಗ್ರೂಪ್ ಉಪಾಧ್ಯಕ್ಷ ಬಸವಪ್ರಸಾದ ಜೊಲ್ಲೆ ಗುರುವಾರ ನಿಪ್ಪಾಣಿ ನಗರದ ಅಣ್ಣಾಸಾಹೇಬ ಜೊಲ್ಲೆ ಪಿಯು ಕಾಲೇಜಿನಲ್ಲಿ ಪ್ರಕಟಿಸಿದರು.

ನಿಪ್ಪಾಣಿ ನಗರದ ಹೊರವಲಯದ ಅಣ್ಣಾಸಾಹೇಬ ಜೊಲ್ಲೆ ಸ್ವತಂತ್ರ ಪಿಯು ವಿಜ್ಞಾನ ವಸತಿ ಮಹಾವಿದ್ಯಾಲಯದ ಪಿಯುಸಿ ಪ್ರಥಮ ಹಾಗೂ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಅನ್ವಯವಾಗಲಿದೆ. ಮೊದಲ 10 ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಶೇ.100, 11ರಿಂದ 20ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಶೇ.75, 21ರಿಂದ 30 ಸ್ಥಾನ ಪಡೆದವರಿಗೆ ಶೇ.50, 31ರಿಂದ 40ರ ವರೆಗೆ ಸ್ಥಾನ ಪಡೆದುಕೊಂಡ ವಿದ್ಯಾರ್ಥಿಗಳಿಗೆ ಶೇ.25ರಷ್ಟು ಫೀ ವಿನಾಯಿತಿ ಇದೆ ಎಂದು ಹೇಳಿದರು.

ಸಾಕ್ಷಿ ವಡಗಾವೆ (ಮಲಿಕವಾಡ), ಸಮರ್ಥ ಧನಾಳೆ (ನದಿ ಇಂಗಳಗಾಂವ), ನೈತಿಕ ಹೇರಲಗಿ (ಕಬ್ಬೂರ), ಸಂದೇಶ ಪಾಟೀಲ (ಹೆಬ್ಬಾಳ), ಅಪೂರ್ವ



ಅಂಕಲಗಿ (ಚಿಕ್ಕೋಡಿ), ರುದ್ರಗೌಡ ಪಾಟೀಲ (ಶಿರಗುಪ್ಪಿ), ಅಂಜಲಿ ಸಲಗರೆ (ದಿಗ್ಗೇವಾಡಿ), ಶಶಾಂಕ ಆರೇರ (ಹುಕ್ಕೇರಿ), ಸೋಹಂ ಕುಂಬಾರ (ಕಾರದಗಾ), ಜಾಹ್ನವಿ ಮಗದುಮ್ಮ (ಜನವಾಡ) ಮೊದಲ ಹತ್ತು ಸ್ಥಾನಗಳನ್ನು ಪಡೆದುಕೊಂಡಿದ್ದು, ಇವರು ಶೇ. 100 ರಷ್ಟು ಫೀ ವಿನಾಯಿತಿ ಹೊಂದಿದ್ದಾರೆ. ವಿದ್ಯಾರ್ಥಿಗಳ ಪ್ರತಿಭೆಯನ್ನು ಪ್ರೋತ್ಸಾಹಿಸಲು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಶ್ರೇಷ್ಠತೆ ಬೆಳೆಸುವ ಉದ್ದೇಶದಿಂದ ಈಚೆಗೆ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಈಚೆಗೆ ನಿಪ್ಪಾಣಿ, ಯಕ್ಸಂಬಾ ಸೇರಿದಂತೆ ವಿವಿಧೆಡೆ ಪ್ರವೇಶ ಪರೀಕ್ಷೆಗಳನ್ನು ನಡೆಸಲಾಗಿತ್ತು.

ಈ ಸಂದರ್ಭದಲ್ಲಿ ಅಣ್ಣಾಸಾಹೇಬ ಜೊಲ್ಲೆ ಸ್ವತಂತ್ರ ಪಿಯು ವಿಜ್ಞಾನ ವಸತಿ ಮಹಾವಿದ್ಯಾಲಯದ ಪ್ರಾಚಾರ್ಯ ದೀಪಕ ಪಾಟೀಲ, ಕಾರ್ಯಕ್ರಮ ನಿರ್ವಹಣಾಧಿಕಾರಿ ಎಂ.ಎಂ. ಪಾಟೀಲ ಇದ್ದರು.

ಸಚಿವೆ ಹೆಬ್ಬಾಳ್ಕರ್ ಮನೆ ಸಮೀಪವೇ ಮಾರಕಾಸ್ತ್ರ ಹಿಡಿದು ಕಳ್ಳರ ಅಟ್ಟಹಾಸ

ಬೆಳಗಾವಿ: ನಗರದಾದ್ಯಂತ ಪುಡಿ ರೌಡಿಗಳ ಅಟ್ಟಹಾಸ ಸಾರ್ವಜನಿಕರ ನಿದ್ದೆಗೆಡಿಸಿದೆ. ಪೆಟ್ರೋಲ್ ಕಳ್ಳರ ಗ್ಯಾಂಗ್ ಮಾರಕಾಸ್ತ್ರ ಹಿಡಿದು ರಸ್ತೆಯಲ್ಲೇ ಅಟ್ಟಹಾಸ ಮೆರೆಯುತ್ತಿದ್ದು, ಬೈಕ್‌ಗಳ ಪೆಟ್ರೋಲ್ ಕದಿಯುತ್ತಿದ್ದಾರೆ. ಬೆಳಗಾವಿ ಗ್ರಾಮೀಣ ಕ್ಷೇತ್ರದ ಶಾಸಕಿ ಹಾಗೂ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರ ಮನೆಯ ಸಮೀಪವೇ ಈ ಕಳ್ಳರ ಗ್ಯಾಂಗ್ ಅಟ್ಟಹಾಸ ಮೆರೆದಿರುವ ದೃಶ್ಯ ಇದೀಗ ಸಿಸಿ ಟಿವಿಯಲ್ಲಿ ಸೆರೆಯಾಗಿದೆ.

ಬೆಳಗಾವಿಯ ಹನುಮಾನ ನಗರದ ಎಪಿಎಂಸಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪೆಟ್ರೋಲ್ ಕಳ್ಳರ ಗ್ಯಾಂಗ್ ಸರಣಿ ಕಳ್ಳತನಕ್ಕೆ ಸ್ಥಳೀಯರಲ್ಲಿ ಭಯ ಹುಟ್ಟು



ಹಾಕಿದೆ.ಪೆಟ್ರೋಲ್ ದರ ಏರಿಕೆಯಾಗುವ ಸಾಧ್ಯತೆಯ ಹಿನ್ನೆಲೆಯಲ್ಲಿ ಸಕ್ರಿಯವಾಗಿರುವ ಈ ಖದೀಮರು, ಮುಖಕ್ಕೆ ಮಾಸ್ಕ್ ಧರಿಸಿ ಕೈಯಲ್ಲಿ ಮಾರಕಾಸ್ತ್ರಗಳಾದ ಲಾಂಗ್ ಮತ್ತು ಪೆಟ್ರೋಲ್ ತುಂಬಲು ಬಾಟಲಿಗಳನ್ನು ಹಿಡಿದು ಬೀದಿಗಿಳಿದಿದ್ದಾರೆ. ಮನೆಗಳ ಮುಂದೆ ನಿಲ್ಲಿಸಿದ್ದ ಕಾರು ಹಾಗೂ ದ್ವಿಚಕ್ರ ವಾಹನಗಳನ್ನೇ ಟಾರ್ಗೆಟ್ ಮಾಡಿರುವ ಇವರು, ಪೆಟ್ರೋಲ್ ಮತ್ತು ಡೀಸೆಲ್ ಕದಿಯಲು ಸಂಚು ಹಾಕಿದ್ದಾರೆ.ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರ ಮನೆ ಸಮೀಪವೇ ಇಂತಹ ಘಟನೆ ನಡೆದಿರುವುದು ಸ್ಥಳೀಯರ ಭದ್ರತೆಯ ಬಗ್ಗೆ ಪ್ರಶ್ನೆ ಹುಟ್ಟುಹಾಕಿದೆ. ದ್ವಿಚಕ್ರ ವಾಹನಗಳಷ್ಟೇ ಅಲ್ಲದೆ, ಕಾರುಗಳ ಟ್ಯಾಂಕ್‌ಗೂ ಕನ್ನ ಹಾಕಲು ಯತ್ನಿಸುತ್ತಿರುವ ಈ ಖದೀಮರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಪೊಲೀಸ್ ಇಲಾಖೆಗೆ ಸ್ಥಳೀಯರು ಆಗ್ರಹಿಸಿದ್ದಾರೆ.

ಅಡುಗೆ ಅನಿಲ ಕೊರತೆಯಿಲ್ಲ: ಆಯುಕ್ತರ ಸ್ಪಷ್ಟನೆ

ಕಾರವಾರ: ಪ್ರಸ್ತುತ ಕೊಲ್ಲಿ ರಾಷ್ಟ್ರ ಯುದ್ಧದ ಪರಿಣಾಮವಾಗಿ ಉದ್ಭವಿಸಿರುವ ಎಲ್ಪಿಜಿ ಸರಬರಾಜು ಬಗ್ಗೆ ಸಮರ್ಪಕವಾದ ಪರಿಹಾರ ಕಂಡು ಕೊಳ್ಳುವ ಹಿನ್ನೆಲೆಯಲ್ಲಿ ರಾಜ್ಯಸರ್ಕಾರವು ಅತ್ಯಂತ ಮಹತ್ವದ ಕ್ರಮಗಳನ್ನು ಕೈಗೊಂಡಿದೆ. ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆ ಇಲ್ಲ. ಈ ಬಗ್ಗೆ ಊಹಾತ್ಮಕ ವರದಿ ನಂಬದಂತೆ ಆಹಾರ, ನಾಗರಿಕ ಸರಬರಾಜು ಇಲಾಖೆ ಆಯುಕ್ತರು ಪ್ರಕಟನೆ ನೀಡಿದ್ದಾರೆ.



ರಾಜ್ಯ ಸರ್ಕಾರವು ತೈಲ ಕಂಪನಿ ಅಧಿಕಾರಿಗಳೊಂದಿಗೆ (ಐಓಇ ಆಕಇ ಏಕಇ) ಸಭೆ ನಡೆಸಿ ಗೃಹ ಬಳಕೆಯ ಎಲ್ಪಿಜಿ ಸಿಲಿಂಡರ್‌ಗಳ ಲಭ್ಯತೆ ಬಗ್ಗೆ ಮಾಹಿತಿ ಪಡೆದು ಸಮಸ್ಯೆ ಇಲ್ಲದ ಬಗ್ಗೆ ತೈಲ ಕಂಪನಿ ಅಧಿಕಾರಿಗಳಿಂದ ಖಾತ್ರಿಪಡಿಸಿಕೊಂಡಿದೆ. ದೇಶದಲ್ಲಿ ಪ್ರಸ್ತುತ ಲಭ್ಯವಿರುವ ದೇಶೀಯ ಎಲ್‌ಪಿಜಿ ದಾಸ್ತಾನು ಗೃಹಬಳಕೆಗ್ರಾಹಕರಿಗೆ ಅಗತ್ಯವಿರುವ ಬಗ್ಗೆ ತೈಲಕಂಪನಿಗಳು ಮಾಹಿತಿ ನೀಡಿದ್ದು, ರಾಜ್ಯದ ಎಲ್ಲಾ ಗ್ರಾಹಕರು ಎಲ್‌ಪಿಜಿ ಸರಬರಾಜಿನ ಬಗ್ಗೆ ಯಾವುದೇ ರೀತಿಯ ಆತಂಕಕ್ಕೆ ಒಳಗಾಗುವ ಆವಶ್ಯಕತೆ ಇಲ್ಲ. ಗ್ರಾಹಕರು ಆತಂಕದಲ್ಲಿ ತುರ್ತು ಮತ್ತು ಅನಗತ್ಯ ಬುಕಿಂಗ್ ಮಾಡದೆ, ಮಾರುಕಟ್ಟೆಯಲ್ಲಿ ಕೃತಕ ಬೇಡಿಕೆ ಸೃಷ್ಟಿಯಾಗದಂತೆ ಸಮರ್ಪಕವಾಗಿ ಬಳಕೆ ಮಾಡಲು ಸಮತೋಲನ ಕಾಪಾಡಲು ತಿಳಿಸಿದೆ. ಅಗತ್ಯ ಸೇವೆಗಳನ್ನು ಒದಗಿಸುವ ಸಾರ್ವಜನಿಕ ಸಂಸ್ಥೆಗಳಾದ ಸರ್ಕಾರಿ ಆಸ್ಪತ್ರೆಗಳು, ವಿದ್ಯಾರ್ಥಿನಿಲಯಗಳು, ಅಂಗನವಾಡಿ, ಶಾಲೆ, ಕಾಲೇಜು, ಕಾರಾಗೃಹ, ಇತ್ಯಾದಿ ಸಂಸ್ಥೆಗಳಿಗೆ ಯಾವುದೇ ಅಡಚಣೆಯಾಗದಂತೆ ಎಲ್‌ಪಿಜಿ ಸೌಲಭ್ಯವನ್ನು ಒದಗಿಸುವಂತೆ ತೈಲಕಂಪನಿಗಳಿಗೆ ಸೂಚನೆ ನೀಡಲಾಗಿದೆ. ಅನಧಿಕೃತವಾಗಿ ಗ್ಯಾಸ್ ಸಿಲಿಂಡರ್‌ಗಳ ಅಕ್ರಮ ದಾಸ್ತಾನು/ಸಾಗಾಣಿಕೆ ಈ ಸಂಬಂಧ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಈ ಬಗ್ಗೆ ಕ್ರಮವಹಿಸಲು ಅಗತ್ಯ ಸೂಚನೆಗಳನ್ನು ನೀಡಲಾಗಿದೆ. ಕಾಳಸಂತೆಕೋರರ ವಿರುದ್ಧ ಕಠಿಣ ಕಾನೂನು ಕ್ರಮಗಳನ್ನು ಜರುಗಿಸಲು ಸಹ ಜಿಲ್ಲಾಡಳಿತಕ್ಕೆ ನಿರ್ದೇಶನ ನೀಡಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಸಿಎಂ ಸೇರಿ ಹಲವು ಸಚಿವರು ಭಾಗಿ। ನಂಜಯ್ಯನಮಠ ಮಾಹಿತಿ

ನಾಳೆ ಮೆಡಿಕಲ್ ಕಾಲೇಜು ನಿರ್ಮಾಣಕ್ಕೆ ಅಡಿಗಲ್ಲು

ಬಾಗಲಕೋಟೆ: ಬಾಗಲಕೋಟೆ ಸರ್ಕಾರಿ ಮೆಡಿಕಲ್ ಕಾಲೇಜ್ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾರ್ಚ್ 14ರಂದು ನೆರವೇರಿಸುವರು ಎಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಸ್.ಜಿ.ನಂಜಯ್ಯನಮಠ ತಿಳಿಸಿದರು.

ನವನಗರದ ಪತ್ರಿಕಾಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.14ರಂದು ನವನಗರದ ಸೆಕ್ಟರ್ ನಂ.1ರಲ್ಲಿ ಅಡಿಗಲ್ಲು ಕಾರ್ಯಕ್ರಮ ಆಯೋಜಿಸಲಾಗಿದೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಸಚಿವರಾದ ಎಂ.ಬಿ.ಪಾಟೀಲ, ಆರ್.ಬಿ.ತಿಮ್ಮಾಪೂರ ಸೇರಿದಂತೆ ಜಿಲ್ಲೆಯ ಶಾಸಕರು, ವಿಧಾನ ಪರಿಷತ್ ಸದಸ್ಯರು, ರಾಜ್ಯ ನಾಯಕರು ಆಗಮಿಸಲಿದ್ದಾರೆಂದರು.

ಹಿಂದಿನ ಶಾಸಕ ದಿ.ಎಚ್.ವೈ.ಮೇಟಿ ಅವರ ಕನಸು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಜಿಲ್ಲೆಯ ಮೇಲಿರುವ ಪ್ರೀತಿಯಿಂದ ಹಲವು ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ಸಿಗಲಿದೆ. ಕಾರ್ಯಕ್ರಮಕ್ಕೆ ಸುಮಾರು 1ಲಕ್ಷಕ್ಕಿಂತ ಹೆಚ್ಚು ಜನರು ಭಾಗವಹಿಸುವ ನಿರೀಕ್ಷೆಯಿದೆ ಎಂದು ಹೇಳಿದರು. ಸರ್ಕಾರ ಘೋಷಿಸದಂತೆ ನೀರಾವರಿಗೆ 40 ಲಕ್ಷ , ಒಣಬೇಸಾಯಕ್ಕೆ 30 ಲಕ್ಷ ರೂ. ಪರಿಹಾರದ ಚೆಕ್ ಕೂಡ ಕೆಲವೊಂದು ರೈತರಿಗೆ ಇದೇ ಕಾರ್ಯಕ್ರಮದಲ್ಲಿ ವಿತರಿಸಲಾಗುವುದು. ಇನ್ನೂ ಹಂತ ಹಂತವಾಗಿ ಸರ್ಕಾರ



> ಬಾಗಲಕೋಟೆ ಮೆಡಿಕಲ್ ಕಾಲೇಜ್ ನಿರ್ಮಾಣಕ್ಕೆ ಅಡಿಗಲ್ಲು ಹಾಗೂ ರೈತರಿಗೆ ಪರಿಹಾರದ ಚೆಕ್ ವಿತರಣೆ ಕಾರ್ಯಕ್ರಮಕ್ಕೆ 1ಲಕ್ಷ ಜನ ಸ್ವಯಂ ಪ್ರೇರಣೆಯಿಂದ ಬರಲಿದ್ದಾರೆ.
> ■ **ಎಸ್.ಜಿ.ನಂಜಯ್ಯನಮಠ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ**

ಅನುದಾನ ಬಿಡುಗಡೆ ಮಾಡಲಿದ್ದು ನಂತರ ಇನ್ನಷ್ಟು ರೈತರಿಗೂ ಕೂಡ ಚೆಕ್ ವಿತರಣೆ ನಡೆಯಲಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಪ್ರಚಾರ ಪ್ರಚಾರ ಸಮಿತಿ ಅಧ್ಯಕ್ಷ ನಾಗರಾಜ ಹದ್ಲಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕುತುಬುದ್ದೀನ ಖಾಜಿ, ಗ್ರಾಮೀಣ ಘಟಕದ ಅಧ್ಯಕ್ಷ ಎಸ್.ಎನ್.ರಾಂಪೂರ, ಮುಖಂಡರಾದ ಮಲ್ಲಿಕಾರ್ಜುನ ಮೇಟಿ, ಉಮೇಶ ಮೇಟಿ, ರಾಜು ಮನ್ನಿಕೇರಿ, ಶ್ರೀನಿವಾಸ ಬಳ್ಳಾರಿ ಉಪಸ್ಥಿತರಿದ್ದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat



ಬನವಾಸಿ: ಸಮೀಪದ ವಡ್ಡಿನಕೊಪ್ಪದಲ್ಲಿ ಆಲ್ಟ್ ಡಿಜಿಟಲ್ ಸಂಸ್ಥೆ ಆರಂಭಿಸಿದ ಮೇಸ್ತ್ರಿ ಆ್ಯಪ್ ಹಣಕಾಸು ತಜ್ಞ, ಲೇಖಕ ರಂಗಸ್ವಾಮಿ ಮೂಕನಹಳ್ಳಿ ಗುರುವಾರ ಉದ್ಘಾಟಿಸಿದರು. ಸಂಸ್ಥೆಯ ಸ್ಥಾಪಕ ಗೌತಮ ಹೆಗಡೆ ಬೆಂಗಳೆ ತಂತ್ರಜ್ಞ ವಿಕಾಸ ಗೋಯಲ್, ಪ್ರಮುಖರಾದ ವಿಶ್ವನಾಥ ಭಟ್ಟ, ರಾಜಾರಾಮ ಇತರರು ಇದ್ದರು.

ಉದ್ಯಮದ ಕಡೆ ಗಮನಹರಿಸಿ: ಮೂಕನಹಳ್ಳಿ

ಬನವಾಸಿ: ಯುವ ಸಮೂಹದವರು ಆರಂಭದಲ್ಲಿ ಉದ್ಯೋಗ ಶೀಲರಾಗಿ ಅನುಭವ ಪಡೆದು ಕ್ರಮೇಣ ಉದ್ಯಮ ಕಟ್ಟುವುದರ ಬಗ್ಗೆ ಗಮನ ನೀಡಬೇಕು ಎಂದು ಹಣಕಾಸು ತಜ್ಞ, ಲೇಖಕ ರಂಗಸ್ವಾಮಿ ಮೂಕನಹಳ್ಳಿ ಹೇಳಿದರು.ಸಮೀಪದ ವಡ್ಡಿನಕೊಪ್ಪದಲ್ಲಿ ಆಲ್ಟ್ ಡಿಜಿಟಲ್ ಸಂಸ್ಥೆ ಆರಂಭಿಸಿದ ಮೇಸ್ತ್ರಿ ಆ್ಯಪ್ ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು. ನಾವು ಎಷ್ಟೇ ಬುದ್ಧಿವಂತರಿದ್ದು ದೊಡ್ಡ ಉದ್ಯೋಗ, ಸಂಬಳ ಪ್ಯಾಕೇಜ್ ಎಷ್ಟೇ ಹೊಂದಿದ್ದರೂ ಉದ್ಯೋಗಿಯಾಗಿಯೇ ಇರುತ್ತೇವೆ. ನಾವು ಉದ್ಯೋಗಸ್ಥರಿಂದ ಉದ್ಯೋಗದಾತರಾಗುವ ಸಂಸ್ಥೆಗಳನ್ನು ಕಟ್ಟಿ ಬೆಳೆಸುವ ಮನಸ್ಥಿತಿ ಬೆಳೆಸಿಕೊಳ್ಳಬೇಕು. ದುಡಿಯಲು ಆರಂಭಿಸಿದ ಬಳಿಕ ಸಾಧ್ಯವಾದಷ್ಟು ಉಳಿತಾಯ ಮಾಡಿ, ಒಳ್ಳೆಯ ಕಡೆಯಲ್ಲಿ ಹೂಡಿಕೆ ಮಾಡಬೇಕು. ಶೇ.20ರಷ್ಟಾದರೂ ಉಳಿಸಲು ಆರಂಭಿಸಬೇಕು ಎಂದರು. ವ್ಯಕ್ತಿಗೆ ಸಮಯ, ಹಣ, ಜ್ಞಾನ ಬಹಳ ಮಹತ್ವದ್ದು. ಕೇವಲ ಹಣ, ಸಮಯ ಮಾತ್ರ ಬಳಸದೇ ಜ್ಞಾನ ಹೆಚ್ಚಿಸಿಕೊಂಡು ಬಳಸಿಕೊಳ್ಳಬೇಕು ಎಂದರು. ಸಂಸ್ಥೆಯ ಸ್ಥಾಪಕ ಗೌತಮ ಹೆಗಡೆ ಬೆಂಗಳೆ ಮಾತನಾಡಿ, ಕೆಲಸ ಹುಡುಕುತ್ತಿರುವವರು ಹಾಗೂ ಕೆಲಸಗಾರರನ್ನು ಹುಡುಕುತ್ತಿರುವವ ನಡುವೆ ವೇದಿಕೆಯಾಗಿದ ಮೇಸ್ತ್ರಿ ಆ್ಯಪ್ ಕೆಲಸ ಮಾಡುತ್ತದೆ ಎಂದರು.ತಂತ್ರಜ್ಞ ವಿಕಾಸ ಗೋಯಲ್, ಪ್ರಮುಖರಾದ ವಿಶ್ವನಾಥ ಭಟ್ಟ, ರಾಜಾರಾಮು ಇತರರು ಇದ್ದರು. ಶ್ರೀ ಲಕ್ಷ್ಮೀ ನಿರೂಪಿಸಿದರು.



ಕುಮಟಾ: ಚಂದಾವರ ಸೀಮೆಯ ಅದಿದೇವ ಹನುಮಂತ ದೇವರ ಸವಾರಿ ಮೂರ್ತಿ ಕಲಾವೃದ್ಧಿ ಮಹೋತ್ಸವ ಗುರುವಾರ ವಿಜೃಂಭಣೆಯಿಂದ ಸಂಪನ್ನಗೊಂಡಿತು. ಸಾಗರೋಪಾದಿಯಲ್ಲಿ ಹರಿದು ಬಂದ ಭಕ್ತಾದಿಗಳು ಹನುಮಂತ ದೇವನ ದರ್ಶನ ಪಡೆದು, ತೀರ್ಥ-ಪ್ರಸಾದ ಸ್ವೀಕರಿಸಿ ಧನ್ಯತೆ ಮೆರೆದರು.

ಕಿರುಸುದ್ದಿ

ಶ್ರಮಿಕ ವಸತಿ ಶಾಲೆ: ಶಿರಸಿಯಲ್ಲಿ ಸ್ಥಾಪನೆ

ಶಿರಸಿ: ಕರ್ನಾಟಕದಾದ್ಯಂತ ನೋಂದಾಯಿತ ಕಟ್ಟಡ ಕಾರ್ಮಿಕರ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ರಾಜ್ಯ ಸರ್ಕಾರವು ಒಟ್ಟು 62 ಶ್ರಮಿಕ ವಸತಿ ಶಾಲೆಗಳನ್ನು ಸ್ಥಾಪಿಸಲು ಯೋಜಿಸಿದ್ದು, ಅದರಲ್ಲಿ ಒಂದು ಶಿರಸಿಯಲ್ಲಿ ಸ್ಥಾಪನೆಯಾಗಲಿದೆ. ಮುಖ್ಯಮಂತ್ರಿ ಸಿದ್ಧರಾಮಯ್ಯನವರ ಘೋಷಣೆಯಂತೆ 6 ರಿಂದ 12 ತರಗತಿಯವರೆಗೆ ವ್ಯಾಸಾಂಗ ಮಾಡಲು ಅನುಕೂಲವಾಗುವ ಶ್ರಮಿಕ ವಸತಿ ಶಾಲೆಯು ಶಿರಸಿ ವಿಧಾನಸಭಾ ಕ್ಷೇತ್ರದಲ್ಲಿ ನಿರ್ಮಿಸಲು ಪ್ರಸ್ತಾಪಿಸಲಾಗಿದೆ. ಇದು ಶಾಸಕ ಭೀಮಣ್ಣ ನಾಯ್ಕ ಅವರ ಪ್ರಯತ್ನದಿಂದ ಶಿರಸಿಗೆ ಬಂದಿದ್ದು, ರಾಜ್ಯದ 62 ಶಾಲೆಗಳಲ್ಲಿ ಶಿರಸಿಯಲ್ಲೂ ಒಂದು ನಿರ್ಮಾಣವಾಗಲಿದೆ.

ಇನ್ನು ವಸತಿ ಶಾಲೆ ನಿರ್ಮಾಣ ಉದ್ದೇಶಕ್ಕಾಗಿ ಶಿರಸಿ ಕ್ಷೇತ್ರದಲ್ಲಿ 10 ಎಕರೆ ಸರ್ಕಾರಿ ಜಮೀನನ್ನು ಗುರುತಿಸಿ, ಅದನ್ನು ಕಾರ್ಮಿಕ ಇಲಾಖೆಯ ಆಯುಕ್ತರಿಗೆ ಹಸ್ತಾಂತರಿಸುವಂತೆ ಕಾರ್ಮಿಕ ಸಚಿವ ಸಂತೋಷ್ ಲಾಡ್ ಶಾಸಕ ಭೀಮಣ್ಣ ನಾಯ್ಕ ಅವರಿಗೆ ಪತ್ರದ ಮೂಲಕ ಕೋರಿದ್ದು, ಜಾಗ ಹಸ್ತಾಂತರವಾದಲ್ಲಿ ವಸತಿ ಶಾಲೆ ಶೀಘ್ರವಾಗಿ ಸ್ಥಾಪನೆಯಾಗುವ ಭರವಸೆ ಮೂಡಿದೆ.

ಮಾ.15ಕ್ಕೆ ಯುವ ಸಂಗೀತೋತ್ಸವ

ಶಿರಸಿ: ಬೆಂಗಳೂರಿನ ಸಪ್ತಕ ಸಂಸ್ಥೆಯಿಂದ ಅಪರೂಪದ ವಿಶೇಷ ಯುವ ಸಂಗೀತೋತ್ಸವವನ್ನು ಮಾ.15ರಂದು ಸಂಜೆ 4 ಗಂಟೆಗೆ ನಗರದ ರಂಗಧಾಮದ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಸಂಸ್ಥಾಪಕ ಜಿ.ಎಸ್.ಹೆಗಡೆ ತಿಳಿಸಿದ್ದಾರೆ.ಈ ಕುರಿತು ಪ್ರಕಟನೆ ನೀಡಿರುವ ಅವರು, ಅಂದಿನ ಕಾರ್ಯಕ್ರಮದಲ್ಲಿ ಬೆಂಗಳೂರಿನ ಯುವ ಗಾಯಕ ಅನಿರುದ್ಧ ಐತಾಳ್ ಗಾಯನ ಕಾರ್ಯಕ್ರಮ ನೀಡಲಿದ್ದಾರೆ. ಅವರಿಗೆ ತಬಲಾದಲ್ಲಿ ಯೋಗೀಶ್ ಭಟ್ಟ ಹಾಗೂ ಹಾರ್ಮೋನಿಯಂನಲ್ಲಿ ಭರತ್ ಹೆಗಡೆ ಸಂಗತ ನೀಡಲಿದ್ದಾರೆ.ಬಳಿಕ ಮುಂಬಯಿಯ ಖ್ಯಾತ ತಬಲಾ ಕಲಾವಿದ ಯಶವಂತ ವೈಷ್ಣವ್ ಅವರ ತಬಲಾ ಸೋಲೋ ಕಾರ್ಯಕ್ರಮ ನಡೆಯಲಿದ್ದು, ಅವರಿಗೆ ಹಾರ್ಮೋನಿಯಂ ಲೆಹರಾದಲ್ಲಿ ವರ್ಗಾಸರದ ಅಜಯ ಹೆಗಡೆ ಸಹಕಾರ ನೀಡಲಿದ್ದಾರೆ.ಬೆಂಗಳೂರಿನ ಸಿದ್ಧಾರ್ಥ ಬೆಳ್ಮಣ್ಣು ಗಾಯನ ಕಾರ್ಯಕ್ರಮ ಕೂಡ ನಡೆಯಲಿದ್ದು, ಅವರಿಗೆ ತಬಲಾದಲ್ಲಿ ಯೋಗೀಶ್ ಭಟ್ಟ ಹಾಗೂ ಹಾರ್ಮೋನಿಯಂನಲ್ಲಿ ಭರತ್ ಹೆಗಡೆ ಸಾತ್ ನೀಡಲಿದ್ದಾರೆ.ಸಂಗೀತಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮಯಶಸ್ವಿಗೊಳಿಸಬೇಕು ಎಂದು ಸಪ್ತಕ ಸಂಸ್ಥೆಯ ಜಿ.ಎಸ್. ಹೆಗಡೆ ಮನವಿ ಮಾಡಿದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	60000	70598
ಬಿಳಿಗೋಟು	28099	39099
ಕೆಂಪುಗೋಟು	15199	39699
ಬೆಟ್ಟೆ	40096	51018
ರಾಶಿ	49609	53528
ಚಾಲಿ	43618	47630
ಬಿ.ಕಾಳುಮೆಣಸು	78000	88599

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	60619	64895
ರಾಶಿ	39009	58149
ಬೆಟ್ಟೆ	36600	52699
ಕೆಂಪುಗೋಟು	16000	38019
ಬಿಳಿಗೋಟು	16899	38799
ಚಾಲಿ ಹೊಸದು	37406	47599
ಕೋಕಾ	11069	33699
ಕಾಳುಮೆಣಸು	55555	67601

ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಹೇಳಿಕೆ

ಅಡುಗೆ ಅನಿಲ ಸರಬರಾಜಿನಲ್ಲಿಲ್ಲ ವ್ಯತ್ಯಯ

ಕಾರವಾರ: ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷದಿಂದ ಉತ್ತರ ಕನ್ನಡ ಜಿಲ್ಲೆಗೃಹಬಳಕೆಯ ಅನಿಲ ಸರಬರಾಜು ವ್ಯವಸ್ಥೆಯಲ್ಲಿ ಯಾವುದೇ ರೀತಿಯ ವ್ಯತ್ಯಯ ಇಲ್ಲವಾಗಿದ್ದು, ಗೃಹಬಳಕೆ ಅನಿಲದ ದೈನಂದಿನ ಸರಬರಾಜು ಮತ್ತು ವಿತರಣೆಯಲ್ಲಿ ಯಾವುದೇ ಅಡಚಣೆ ಇಲ್ಲದೇ ಎಂದಿನಂತೆ ನಡೆಯುತ್ತಿದ್ದು, ಸಾರ್ವಜನಿಕರು ಯಾವುದೇ ರೀತಿಯ ಅನಗತ್ಯ ಗೊಂದಲ ಮತ್ತು ಆತಂಕಗಳಿಗೆ ಒಳಗಾಗಬಾರದು ಎಂದು ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ತಿಳಿಸಿದ್ದಾರೆ.

ಅವರು ಗುರುವಾರ ಜಿಲ್ಲೆಗೆ ಅನಿಲ ಸರಬರಾಜು ಮಾಡುವ ಕಂಪನಿಗಳ ಅಧಿಕಾರಿಗಳು ಮತ್ತು ಆಹಾರ ಇಲಾಖೆಯ ಅಧಿಕಾರಿಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಉತ್ತರ ಕನ್ನಡ ಜಿಲ್ಲೆಗೆ ಅನಿಲ ಸರಬರಾಜು ಮಾಡುವ ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೋರೇಷನ್, ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್, ಇಂಡಿಯನ್ ಆಯಿಲ್ ಕಾರ್ಪೋರೇಷನ್ ಕಂಪನಿಗಳ ಅಧಿಕಾರಿಗಳೊಂದಿಗೆ ವರ್ಚುವಲ್ ಮೂಲಕ ನಡೆದ ಸಭೆಯಲ್ಲಿ, ಎಲ್ಲಾ ಕಂಪನಿಗಳು ಜಿಲ್ಲೆಯ ದೈನಂದಿನ ಬೇಡಿಕೆಗೆ ತಕ್ಕಂತೆ ಗೃಹ ಬಳಕೆಯ ಅನಿಲ ಸರಬರಾಜು ಮಾಡುವಂತೆ ಜಿಲ್ಲಾಧಿಕಾರಿಗಳು ಸೂಚಿಸಿದ್ದು, ಈ ಕುರಿತು ಪ್ರತಿಕ್ರಿಯಿಸಿದ ಅಧಿಕಾರಿಗಳು ಗೃಹ ಬಳಕೆಯ ಅನಿಲ ಸರಬರಾಜು ವ್ಯವಸ್ಥೆಯಲ್ಲಿ ಯಾವುದೇ ಸಮಸ್ಯೆಯಿಲ್ಲ, ಕಳೆದ ಒಂದು ದಿನ ಮಾತ್ರ ಗ್ಯಾಸ್ ಮುಂಗಡ ಬುಕ್ಕಿಂಗ್ ನಲ್ಲಿ ತಾಂತ್ರಿಕ ತೊಂದರೆ ಕಂಡುಬಂದಿದ್ದು, ಪ್ರಸ್ತುತ ಆ ದೋಷವನ್ನು ಸರಿಪಡಿಸಲಾಗಿದೆ.



> ಜಿಲ್ಲೆಯಲ್ಲಿನ ಅಂಗನವಾಡಿಗಳು, ಶಾಲೆಗಳು, ಆಸ್ಪತ್ರೆಗಳು, ಸರ್ಕಾರಿ ಹಾಸ್ಟೆಲ್‌ಗಳು ಮತ್ತು ಇಂದಿರಾ ಕ್ಯಾಂಟೀನ್‌ಗಳ ದೈನಂದಿನ ಚಟುವಟಿಕೆಗಳಿಗೆ ಯಾವುದೇ ತೊಂದರೆಯಾಗದಂತೆ ಆದ್ಯತೆಯಲ್ಲಿ ಅನಿಲ ಸರಬರಾಜು ಮಾಡುವಂತೆ ತಿಳಿಸಿದರು.
> ■ ಕೆ.ಲಕ್ಷ್ಮೀಪ್ರಿಯಾ, ಜಿಲ್ಲಾಧಿಕಾರಿ

ಸಾರ್ವಜನಿಕರು ಗೃಹ ಬಳಕೆ ಅನಿಲ ಮುಂಗಡ ಬುಕಿಂಗ್‌ನ್ನು ಮೊಬೈಲ್ ಮಿಸ್ ಕಾಲ್ ಮೂಲಕ ಮಾತ್ರವೇ ಮಾಡದೇ ಇತರೇ ವಿಧಾನಗಳಾದ ಐ.ವಿ.ಆರ್.ಎಸ್, ವಾಟ್ಸಾಪ್, ಮೊಬೈಲ್ ಅಪ್ಲಿಕೇಶನ್ ಮತ್ತು ಪಾವತಿ ಅಪ್ಲಿಕೇಶನ್ ವಿಧಾನಗಳನ್ನು ಕೂಡಾ ಬಳಸಬಹುದಾಗಿದೆ ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ದಿಲೀಷ್ ಶಶಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್, ಅಪರ ಜಿಲ್ಲಾಧಿಕಾರಿ ಸಾಜಿದ್ ಮುಲ್ಲಾ, ಆಹಾರ ಇಲಾಖೆ ಉಪನಿರ್ದೇಶಕ ಮಂಜುನಾಥ ರೇವಣಕರ್ ಹಾಗೂ ವರ್ಚುವಲ್ ಮೂಲಕ ಅನಿಲ ಸರಬರಾಜು ಕಂಪನಿಗಳ ಅಧಿಕಾರಿಗಳು ಮತ್ತು ಜಿಲ್ಲೆಯ ವಿವಿಧ ತಾಲೂಕುಗಳ ಅನಿಲ ಸರಬರಾಜುದಾರರು ಭಾಗವಹಿಸಿದ್ದರು.

ಸುಳ್ಳು ಸುದ್ದಿಗೆ ಕಿವಿಗೊಡದಿರಿ

ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಸರಬರಾಜು ಮತ್ತು ವಿತರಣೆ ಕುರಿತಂತೆ ಸರ್ಕಾರ ನೀಡುವ ಮಾರ್ಗಸೂಚಿಗಳನ್ನು ಪಾಲಿಸುವಂತೆ ಹಾಗೂ ಸಾರ್ವಜನಿಕರು ಅನಿಲ ಪೂರೈಕೆ ಕುರಿತಂತೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುವ ಯಾವುದೇ ರೀತಿಯ ಸುಳ್ಳು ಸುದ್ದಿಗಳಿಗೆ ಕಿವಿಗೊಡಬಾರದು ಎಂದು ತಿಳಿಸಿದರು.

ಎರಡನೇ ದಿನವೂ ಮುಂದುವರಿದ ಹೋರಾಟ

ಯಲ್ಲಾಪುರ: ಟಿಎಂಎಸ್ ಉಳಿಸಿ ಹೋರಾಟ ಸಮಿತಿಯಿಂದ ಹಮ್ಮಿಕೊಂಡಿರುವ ಸಹಕಾರ ಧರಣಿ ಗುರುವಾರ ಎರಡನೇ ದಿನವು ಪಟ್ಟಣದ ಅಂಬೇಡ್ಕರ ವೃತ್ತದಲ್ಲಿ ರಸ್ತೆ ತಡೆ ನಡೆಸಿ ಸದಸ್ಯರು ಬಿರು ಬಿಸಿಲಿನಲ್ಲಿಯೇ ರಸ್ತೆ ಮಧ್ಯದಲ್ಲಿಯೇ ಕುಳಿತು ಪ್ರತಿಭಟನೆ ನಡೆಸಿ ಆಡಳಿತಾಧಿಕಾರಿಯನ್ನು ವಜಾಗೊಳಿಸಬೇಕು ಎಂದು ಪಟ್ಟುಹಿಡಿದರು.

ಈ ವೇಳೆ ನೇತೃತ್ವವಹಿಸಿದ್ದ ಟಿಎಂಎಸ್ ಮಾಜಿ ಅಧ್ಯಕ್ಷ ಎನ್.ಕೆ ಭಟ್ಟ ಅಗ್ಗಾಶಿಕುಂಬ್ರಿ ಮಾತನಾಡಿ, ತಾಲೂಕಾ ಮಾರ್ಕೆಟಿಂಗ್ ಸೊಸೈಟಿಯ ಅಸ್ತಿತ್ವವನ್ನೇ ಅಂತ್ಯಗೊಳಿಸುವ ಹುನ್ನಾರ ನಡೆದಿದ್ದು, ಹಿಂಬಾಗಿಲಿನಿಂದ ಅಧಿಕಾರಪಡೆಯುವಸಾಹಸಕ್ಕೆಕೈಹಾಕಿರುವದು ಅನ್ಯಾಯದ ಪರಮಾವ. ಸಂಸ್ಥೆಯ ಉಳಿವಿಗಾಗಿ ನಾವು ನ್ಯಾಯಾಲಯದ ಮೊರೆ ಹೋಗುವುದು ಅನಿವಾರ್ಯವಾಯಿತು. ಇನ್ನೇನು ನ್ಯಾಯಾಲಯದ ತೀರ್ಪು ಬರುವ ಹೊತ್ತಿಗೆ ತಾವು ಸೋಲಬಹುದು ಎಂಬ ಆತಂಕದಿಂದ ಸಂಸ್ಥೆಗೆ ಮಾರಕವಾಗುವ ನಿರ್ಧಾರವನ್ನು ಆಡಳಿತಾಕಾರಿ ಮೂಲಕ ಕೈಗೊಳ್ಳಲು ಮುಂದಾಗಿರುವುದು ಅಧಿಕಾರದ ದುರುಪಯೋಗವಾಗಿದೆ.

ಸಂಸ್ಥೆಯ, ಸದಸ್ಯರ ಹಿತಕ್ಕಾಗಿ ಹೋರಾಟಕ್ಕೆ ಮುಂದಾಗಿದ್ದೇವೆ ಸ್ಪಂದನೆ ದೊರೆಯದ ಕಾರಣ ಇಂದು ರಸ್ತೆ ತಡೆ ನಡೆಸಿದ್ದೇವೆ. ಇದರಿಂದ ಜನರಿಗೆ ತೊಂದರೆಯಾಗುತ್ತದೆ ಎಂಬ ಅರಿವು ಆಳುವವರಿಗೆ ಇಲ್ಲದಂತಾಗಿದೆ. ಈಗಲೂ ನಮ್ಮ ಆಗ್ರಹಕ್ಕೆ ಸ್ಪಂದನೆ ದೊರಯದಿದ್ದರೆ ಸಂಸ್ಥೆಯ ಎದುರು ಉಪವಾಸ ಸತ್ಯಾಗ್ರಹವನ್ನು ನಡೆಸುತ್ತೇವೆ . ಹಣಕಾಸಿನ ತೊಂದರೆ ಕಾರಣದಿಂದ ರೈತರು ಆತ್ಮಹತ್ಯೆ ಮಾಡಿಕೊಂಡರೆ ಸರ್ಕಾರವೇ ನೇರ ಜವಾಬ್ದಾರರಾಗಿರುತ್ತದೆ ಎಂದರು. ಬಿಜೆಪಿ ಮಂಡಲಾಧ್ಯಕ್ಷ ಪ್ರಸಾದ ಹೆಗಡೆ ಮಾತನಾಡಿ, ಟಿಎಂಎಸ್ ನ ಈ ಅವ್ಯವಸ್ಥೆಗೆ ಶಾಸಕ ಶಿವರಾಮ ಹೆಬ್ಬಾರ ಹಾಗೂ ಅವರ ತಂಡವೇ ನೇರ ಕಾರಣ. ರೈತರ ಹಿತಕ್ಕಾಗಿ ಸಹಕಾರಿ ಸಂಸ್ಥೆಯನ್ನು ಸರಿದೂಗಿಸಿಕೊಂಡು ಹೋಗಬೇಕಾದ ಶಾಸಕರೇ ವಿಷಕಂಠಕರಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮಾಜಿ ನಿರ್ದೇಶಕ ವೆಂಕಟರಮಣ ಬೆಳ್ಳಿ ಮಾತನಾಡಿದರು. ತಹಶೀಲ್ದಾರ ಚಂದ್ರಶೇಖರ ಹೊಸಮನಿ ಹಾಗೂ ಸಹಕಾರಿ ಇಲಾಖೆಯ ಜಿಲ್ಲಾ ಉಪನಿಬಂಧಕರು ಸ್ಥಳಕ್ಕೆ ಆಗಮಿಸಿ ಅಹವಾಲು ಸ್ವೀಕರಿಸಿದರು. ಪ್ರತಿಭಟನೆಯಲ್ಲಿ ಪ್ರಮೋದ ಹೆಗಡೆ, ರಾಘವೇಂದ್ರ ಭಟ್ಟ, ಸುಬ್ಬಣ್ಣ ಬೋಳ್ಮನೆ, ನರಸಿಂಹ ಭಟ್ಟ, ಗೋಪಾಲ ಕೃಷ್ಣ ಗಾಂವಕರ,ನಾಗರಾಜ ಕವಡಿಕೆರೆ, ಎಂ ಆರ ಹೆಗಡೆ ಕುಂಬ್ರಿಗುಡ್ಡೆ, ರವಿ ಕೈಟಕರ್, ನಟರಾಜ ಗೌಡರ, ಕೆ.ಟಿ.ಹೆಗಡೆ, ಸುಬ್ಬಣ್ಣ ಉದ್ದಾಬೈಲ, ಅಪ್ಪು ಆಚಾರಿ, ಜಿ.ಆರ್ ಭಾಗ್ವತ, ರಾಮಕೃಷ್ಣ ಗಾಂವ್ಕರ, ದತ್ತಾತ್ರೇಯ ಭಟ್ಟ ಸೇರಿದಂತೆ ನೂರಾರು ರೈತರು ಭಾಗವಹಿಸಿದ್ದರು. ವೆಂಕಟರಮಣ ಭಟ್ಟ ಕಿರಕುಂಭತ್ತಿ ನಿರೂಪಿಸಿದರು.



ಕಣ್ಣಿನ ತಪಾಸಣೆ: ಕನ್ನಡಕ ವಿತರಣೆ



ಅಂಕೋಲಾ: ಕೆಎಲ್‌ಇ ಸಂಸ್ಥೆಯ ಶೇಷಗಿರಿ ಪಿಕಳೆ ಶಿಕ್ಷಣ ಮಹಾವಿದ್ಯಾಲಯ, ಒನ್ ಸೈಟ ಎಕ್ಸಿಲಾರ ಲಕ್ಸೋಟ್ಟಿಕಾ ಫೌಂಡೇಶನ್ ಹಾಗೂ ಸ್ಪಂದನ ಸೇವಾ ಟ್ರಸ್ಟ್ ಹಡಿನಬಾಳ ಹೊನ್ನಾವರ ಹಾಗೂ ಸಂಗಮ ಸೇವಾ ಸಂಸ್ಥೆ ಸಹಯೋಗದಲ್ಲಿ ಫೆ.7ರಂದು ನಡೆದ ಉಚಿತ ಕಣ್ಣಿನ ತಪಾಸಣೆ ಹಾಗೂ ಕನ್ನಡಕ ವಿತರಣಾ ಕಾರ್ಯಕ್ರಮದಲ್ಲಿ ಒಟ್ಟು 178 ಜನರನ್ನು ಪರೀಕ್ಷಿಸಿ ಅದರಲ್ಲಿ ಒಟ್ಟು 37ಜನ ಆಯ್ಕೆಯಾಗಿದ್ದರು, ಆ ಸಂದರ್ಭದಲ್ಲಿ ಆಯ್ಕೆಯಾದ ಟಿಎಲ್ಲಾ ಫಲಾನುಭವಿಗಳಿಗೆ ಗುರುವಾರ ಉಚಿತ ಕನ್ನಡಕವನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಸಂಸ್ಥೆಯ ಸಿಬ್ಬಂದಿ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಸೇರಿದಂತೆ ಅನೇಕರು ಲಾಭವನ್ನು ಪಡೆದರು ಎಂದು ಕಾಲೇಜಿನ ಪ್ರಾ. ಡಾ. ವಿನಾಯಕ.ಜಿ.ಹೆಗಡೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಮಟಾದಲ್ಲಿ ಆಸ್ಪತ್ರೆ ನಿರ್ಮಿಸಿ: ಶಾಸಕ ಶೆಟ್ಟಿ

ಕುಮಟಾ: ಉಕ ಜಿಲ್ಲೆಯ ಜನರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸುವ ಉದ್ದೇಶದಿಂದ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಸ್ಥಾಪನೆ ಕುರಿತಾಗಿ ಸರ್ಕಾರ ಘೋಷಣೆ ಮಾಡಿರುವುದನ್ನು ಸದನದಲ್ಲಿ ಸ್ವಾಗತಿಸಿದ ಕುಮಟಾ ಹೊನ್ನಾವರ ಕ್ಷೇತ್ರದ ಶಾಸಕ ದಿನಕರ ಶೆಟ್ಟಿ, ಕುಮಟಾದಲ್ಲಿಯೇ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಸ್ಥಾಪನೆಗೆ ಒತ್ತಾಯಿಸಿದ್ದಾರೆ. ಈ ಬಗ್ಗೆ ಸದನದ ಗಮನ ಸೆಳೆದ ಅವರು, ಸರ್ಕಾರ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನು ಕಾರವಾರದಲ್ಲಿ ಸ್ಥಾಪಿಸುವ ಬದಲು, ಜಿಲ್ಲೆಯ ಮಧ್ಯಭಾಗವಾಗಿರುವ ಕುಮಟಾದಲ್ಲಿ ಸ್ಥಾಪಿಸಿದರೆ ಜಿಲ್ಲೆಯ ಎಲ್ಲ ತಾಲೂಕಿನ ಜನರಿಗೆ ಹೆಚ್ಚು ಅನುಕೂಲವಾಗಲಿದೆ ಎಂದು ಶಾಸಕ ಅಭಿಪ್ರಾಯಪಟ್ಟರು.ಉಕ ಜಿಲ್ಲೆಯ ಭೌಗೋಳಿಕ ಸ್ಥಿತಿಯನ್ನು ಗಮನಿಸಿದರೆ ಕುಮಟಾ ತಾಲೂಕು ಜಿಲ್ಲೆಯ ಮಧ್ಯಭಾಗದಲ್ಲಿದ್ದು, ಅಂಕೋಲಾ, ಹೊನ್ನಾವರ, ಭಟ್ಕಳ, ಶಿರಸಿ, ಸಿದ್ದಾಪುರ, ಯಲ್ಲಾಪುರ ಸೇರಿದಂತೆ ಇತರ ಭಾಗಗಳ ಜನರಿಗೆ ಕುಮಟಾ ತಲುಪುವುದು ಸುಲಭವಾಗುತ್ತದೆ. ಇಲ್ಲಿ ರೈಲ್ವೆ ನಿಲ್ದಾಣವು ಪಟ್ಟಣಕ್ಕೆ ಅರ್ಧ ಕಿಲೋಮೀಟರ್ ದೂರದಲ್ಲಿರುವುದರಿಂದ ರೋಗಿಗಳು ರೈಲ್ವೆ ಮೂಲಕವೂ ಬಂದು ಚಿಕಿತ್ಸೆ ಪಡೆಯಬಹುದು.ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಕಾರವಾರದಲ್ಲಿ ಸ್ಥಾಪನೆಯಾದರೆ ಜಿಲ್ಲೆಯ ದಕ್ಷಿಣ ಹಾಗೂ ಒಳನಾಡು ಭಾಗದ ಜನರಿಗೆ ದೂರ ಪ್ರಯಾಣ ಮಾಡಬೇಕಾಗುವ ಪರಿಸ್ಥಿತಿ ಉಂಟಾಗಬಹುದು.



ಆದರೆ ಕುಮಟಾದಲ್ಲಿ ಆಸ್ಪತ್ರೆ ಸ್ಥಾಪಿಸಿದರೆ ಜಿಲ್ಲೆಯ ಬಹುತೇಕ ಭಾಗದ ಜನರಿಗೆ ತುರ್ತು ಚಿಕಿತ್ಸಾ ಸೇವೆಗಳನ್ನು ಸುಲಭವಾಗಿ ಪಡೆಯಲು ಸಾಧ್ಯವಾಗುತ್ತದೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು. ಕುಮಟಾದಿಂದ ಕಾರವಾರಕ್ಕೆ ಹೋಗುವುದಕ್ಕಿಂತ ಜನರಿಗೆ ಉಡುಪಿ ಮಂಗಳೂರಿಗೆ ಹೋಗುವುದು ಹೆಚ್ಚು ವಿಶ್ವಾಸ ಮೂಡಿಸುತ್ತದೆ. ಕಾರವಾರದಲ್ಲಿ ಈಗ ಹೊಸದಾಗಿ ಆಸ್ಪತ್ರೆ ಪ್ರಾರಂಭ ಮಾಡಿ ಇನ್ನು ಹತ್ತು ವರ್ಷಗಳು ಬೇಕಾಗಬಹುದು. ಕುಮಟಾದ ಬಾರ್ಡರ್ ಹಾಗೂ ಕಾರವಾರ ಅಂಕೋಲಾ ಕ್ಷೇತ್ರಕ್ಕೆ ಹೊಂದಿಕೊಂಡ ಮಾದನಗೇರಿಯಲ್ಲಿ ಕೆ.ಆರ್.ಡಿ.ಬಿಯ 1800 ಎಕರೆ ಭೂಮಿ ಪಾಳು ಬಿದ್ದಿದ್ದು, ಅಲ್ಲಿ ಆಸ್ಪತ್ರೆ ನಿರ್ಮಾಣ ಮಾಡಿದರೆ ಅನುಕೂಲವಾಗಲಿದೆ ಎಂದು ವಿವರಿಸಿದರು. ಆದ್ದರಿಂದ ಸರ್ಕಾರ ಜಿಲ್ಲೆಯ ಜನರ ಸೌಲಭ್ಯವನ್ನು ಪರಿಗಣಿಸಿ ಸೂಕ್ತ ನಿರ್ಧಾರ ಕೈಗೊಂಡು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನು ಕುಮಟಾದಲ್ಲೇ ಸ್ಥಾಪಿಸುವ ಬಗ್ಗೆ ಚಿಂತನೆ ನಡೆಸಬೇಕು ಎಂದು ಅವರು ಮನವಿ ಮಾಡಿದರು.

ಬಿಡಾಡಿ ದನಗಳ ನಿಯಂತ್ರಣಕ್ಕೆ ಒತ್ತಾಯ

ದಾಂಡೇಲಿ: ನಗರದಲ್ಲಿ ಹೆಚ್ಚುತ್ತಿರುವ ಬಿಡಾಡಿ ದನಕರುಗಳ ನಿಯಂತ್ರಣಕ್ಕೆ ತ್ವರಿತ ಕ್ರಮ ಕೈಗೊಳ್ಳಬೇಕೆಂದು ನಗರದ ಗೋರಕ್ಷಕರ ನಿಯೋಗ ದಾಂಡೇಲಿ ನಗರಸಭೆಗೆ ಗುರುವಾರ ಭೇಟಿ ನೀಡಿ ಆಗ್ರಹಿಸಿತು.

ಗೋರಕ್ಷಕ ನಿಯೋಗದ ಪ್ರಮುಖ ವಾಸುದೇವ ಪ್ರಭು ಮತ್ತು ವಿಶ್ವ ಹಿಂದು ಪರಿಷತ್ ಅಧ್ಯಕ್ಷ ಶ್ರೀನಾಥ್ ಪಾರ್ಸೇಲ್ಕರ್ ಅವರ ನೇತೃತ್ವದಲ್ಲಿ ಭೇಟಿ ನೀಡಿದ ನಿಯೋಗ ನಗರಸಭೆಯ ವ್ಯವಸ್ಥಾಪಕ ಪರಶುರಾಮ ಶಿಂದೆ ಅವರಲ್ಲಿ ಬಿಡಾಡಿ ದನಕರುಗಳ ಸಂಖ್ಯೆ ವ್ಯಾಪಕವಾಗಿ ಹೆಚ್ಚಳವಾಗಿದೆ. ರಾತ್ರಿ ವೇಳೆಯಲ್ಲಿ ನಿರ್ಜನ ಪ್ರದೇಶದಲ್ಲಿ ಬಿಡಾಡಿ ಜಾನುವಾರುಗಳನ್ನು ವಾಹನದಲ್ಲಿ ತುಂಬಿಸಿಕೊಂಡು ಹೋಗುತ್ತಿರುವ ಬಗ್ಗೆ ಮಾಹಿತಿ ಲಭ್ಯವಾಗುತ್ತಿದೆ. ಇದು ಹತ್ತು ಹಲವು ಅನುಮಾನಕ್ಕೆ ಕಾರಣವಾಗುತ್ತಿದೆ ಮತ್ತು ಧರ್ಮ ಧರ್ಮಗಳ ನಡುವೆ ಸಂಘರ್ಷಕ್ಕೂ ಕಾರಣವಾಗಬಹುದು. ಈ ನಿಟ್ಟಿನಲ್ಲಿ ಬಿಡಾಡಿ ದನ ಕರುಗಳನ್ನು ಕೂಡಲೇ ನಗರ ಸಭೆಯ ನೇತೃತ್ವದಲ್ಲಿ ಪಶುವೈದ್ಯ ಇಲಾಖೆ ಹಾಗೂ ಪೊಲೀಸ್ ಇಲಾಖೆಯ ಸಮ್ಮುಖದಲ್ಲಿ ಗೋಶಾಲೆಗೆ ರವಾನಿಸುವ ಕಾರ್ಯ ಮಾಡಬೇಕೆಂದು ಆಗ್ರಹಿಸಿದರು.ನಿಯೋಗದ ಮನವಿಗೆ ನಗರಸಭೆಯ ವ್ಯವಸ್ಥಾಪಕ ಪರಶುರಾಮ ಶಿಂದೆ ಅವರು ಪೌರಾಯುಕ್ತರು ಜಿಲ್ಲಾಧಿಕಾರಿಗಳ ಕಚೇರಿಗೆ ಸಭೆಗೆ ಹೋಗಿರುತ್ತಾರೆ. ನಾಳೆ ಅವರು ಬಂದ ತಕ್ಷಣವೇ ಅವರ ಗಮನಕ್ಕೆ ಈ ವಿಚಾರವನ್ನು ತರುವುದಾಗಿಯೂ ಮತ್ತು ಬಿಡಾಡಿ ದನ ಕರುಗಳ ನಿಯಂತ್ರಣಕ್ಕೆ ನಗರಸಭೆ ತ್ವರಿತ ಕ್ರಮ ಕೈಗೊಳ್ಳಲಿದೆ ಎಂದರು.

ಗೋರಕ್ಷಕರು, ವಿಶ್ವ ಹಿಂದು ಪರಿಷತ್, ಬಜರಂಗದಳ ಹಾಗೂ ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರು ಉಪಸ್ಥಿತರಿದ್ದರು.



ಪರೀಕ್ಷೆಗೆ ಗೈರು ಹಾಜರಾಗದಂತೆ ಎಚ್ಚರವಹಿಸಿ: ಡಿಸಿ

ಕಾರವಾರ: ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನ ಎಸ್ ಎಸ್‌ಎಲ್‌ಸಿ ಪರೀಕ್ಷೆಗೆ ನೊಂದಾಯಿಸಿರುವ ಎಲ್ಲಾ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಗಳಿಗೆ ಹಾಜರಾಗುವ ಕುರಿತಂತೆ, ವಿದ್ಯಾರ್ಥಿಗಳಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸುವಂತೆ ಮತ್ತು ಯಾವುದೇ ವಿದ್ಯಾರ್ಥಿ ಗೈರು ಹಾಜರಾಗದಂತೆ ಎಚ್ಚರವಹಿಸುವಂತೆ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಕೆ. ಲಕ್ಷ್ಮೀ ಪ್ರಿಯಾ ಸೂಚಿಸಿದರು.

ಅವರು ಗುರುವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ, ಎಸ್‌ಎಸ್‌ಎಲ್‌ಸಿ ಪರೀಕ್ಷೆ ಕುರಿತ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಮಾ. 18 ರಿಂದ ಏ.2 ರವರೆಗೆ ಜಿಲ್ಲೆಯ 73 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, ಈ ಬಾರಿಯ ಜಿಲ್ಲೆಯಲ್ಲಿ ಒಟ್ಟು 19,988 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲಿದ್ದಾರೆ. ಪರೀಕ್ಷೆ ಕುರಿತಂತೆ ವಿದ್ಯಾರ್ಥಿಗಳಿಗೆ ಈ ಬಾರಿ ಶಿಕ್ಷಣ ಇಲಾಖೆ ವತಿಯಿಂದ ಉತ್ತಮ ರೀತಿಯಲ್ಲಿ ತರಬೇತಿ ನೀಡಿದ್ದು, ಪರೀಕ್ಷೆಗೆ ಹಾಜರಾದ ಪ್ರತಿಯೊಬ್ಬ ವಿದ್ಯಾರ್ಥಿಯೂ ಉತ್ತೀರ್ಣರಾಗುವ ರೀತಿಯಲ್ಲಿ ಅವರನ್ನು ಸಿದ್ಧಗೊಳಿಸಲಾಗಿದ್ದು, ಪರೀಕ್ಷಾ ಹಾಜರಾತಿಯು ಶೇ.100 ಆದಲ್ಲಿ ಫಲಿತಾಂಶವು ಶೇ.100 ಬರಬಹುದಾದ ಎಲ್ಲಾ ಸಾಧ್ಯತೆಗಳಿರುವ ಕಾರಣ, ಯಾವುದೇ ವಿದ್ಯಾರ್ಥಿ ಗೈರು ಹಾಜರಾಗದಂತೆ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸುವಂತೆ ತಿಳಿಸಿದರು.



ಪರೀಕ್ಷೆಗಳು ಪಾರದರ್ಶಕವಾಗಿ ಹಾಗೂ ಅತ್ಯಂತ ವ್ಯವಸ್ಥಿತವಾಗಿ ನಡೆಸಲು ಅಗತ್ಯವಿರುವ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಮತ್ತು ಪರೀಕ್ಷಾ ಮಂಡಳಿಯು ಸೂಚಿಸಿರುವಂತೆ ಪರೀಕ್ಷಾ ಕೇಂದ್ರಗಳಲ್ಲಿ ಎಲ್ಲಾ ರೀತಿಯ ಮುನ್ನೆಚ್ಚರಿಕೆ ಕ್ರಮ ಕೈಗೊಂಡು, ಯಾವುದೇ ಲೋಪವಾಗದಂತೆ ಪರೀಕ್ಷೆಗಳನ್ನು ನಡೆಸಬೇಕು ಎಂದರು.

ಪರೀಕ್ಷಾ ಪ್ರಕ್ರಿಯೆಗಳು ಆನ್‌ಲೈನ್ ನಲ್ಲಿ ನಡೆಯುವುದರಿಂದ ಎಲ್ಲಾ ಕೇಂದ್ರಗಳಲ್ಲಿ ಇಂಟರ್ನೆಟ್ ನ ಯಾವುದೇ ಅಡಚಣೆಯಾಗದಂತೆ ಮುನ್ನೆಚ್ಚರಿಕೆ ವಹಿಸುವಂತೆ ಸೂಚಿಸಿದರು.

ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ ಕುಡಿಯುವ ನೀರು ಸೇರಿದಂತೆ ಪರೀಕ್ಷಾ ಕೇಂದ್ರಗಳ ವ್ಯಾಪ್ತಿಯಲ್ಲಿ ವಿದ್ಯುತ್ ಕಡಿತಗೊಳಿಸದಂತೆ ಮೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿದ ಅವರು ಜಿಲ್ಲೆಯಲ್ಲಿ ತಾಪಮಾನ ಹೆಚ್ಚಿರುವ ಕಾರಣ ಎಲ್ಲಾ ಕೇಂದ್ರಗಳಲ್ಲಿ ಆರೋಗ್ಯ ಇಲಾಖೆಯಿಂದ ಅಗತ್ಯ ಮುನ್ನೆಚ್ಚರಿಕೆ ಕ್ರಮವಾಗಿ ಓಆರ್‌ಎಸ್ ಪಾಕೆಟ್ ಗಳೊಂದಿಗೆ ಸಿಬ್ಬಂದಿ ನಿಯೋಜಿಸುವಂತೆ ಸೂಚಿಸಿದರು

ಜಿಪಂ ಮುಖ್ಯ ಕಾರ್ಯನಿರ್ವಾಹಿಧಿಕಾರಿ ಡಾ. ದಿಲೀಶ್ ಶಶಿ, ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್, ಅಪರ ಜಿಲ್ಲಾಧಿಕಾರಿ ಸಾಜೀದ್ ಮುಲ್ಲಾ, ಶಿಕ್ಷಣ ಇಲಾಖೆ ಉಪನಿರ್ದೇಶಕಿ ಲತಾ ನಾಯ್ಕ ಹಾಗೂ ವರ್ಚುವಲ್ ಮೂಲಕ ಎಲ್ಲಾ ತಾಲೂಕುಗಳ ತಹಶೀಲ್ದಾರ್‌ಗಳು ಮತ್ತು ಪರೀಕ್ಷಾ ಕರ್ತವ್ಯಕ್ಕೆ ನಿಯೋಜಿಸಿರುವ ಅಧಿಕಾರಿಗಳು ಇದ್ದರು.

ಬಸ್ ಅವಧಿ ನಿಗದಿಪಡಿಸಿ

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವತಿಯಿಂದ ವಿದ್ಯಾರ್ಥಿಗಳ ಬೇಡಿಕೆಗೆ ಅನುಗುಣವಾದ ಮಾರ್ಗದಲ್ಲಿ ಮತ್ತು ನಿಗಧಿತ ಸಮಯಕ್ಕೆ ಬಸ್ ವ್ಯವಸ್ಥೆ ಒದಗಿಸುವಂತೆ ತಿಳಿಸಿದ ಅವರು ವಿದ್ಯಾರ್ಥಿಗಳು ಸಾಕಷ್ಟು ಮುಂಚಿತವಾಗಿ ಪರೀಕ್ಷಾ ಕೇಂದ್ರಗಳನ್ನು ತಲುಪುವ ನಿಟ್ಟಿನಲ್ಲಿ ಬಸ್‌ಗಳಿಗೆ ಸಮಯ ನಿಗಧಿಪಡಿಸಿ ಎಂದು ಡಿಸಿ ಹೇಳಿದರು.

ಕಿರುಸುದ್ದಿ

ಸಾಯಿಬಾಬಾಗೆ ಪೂಜೆ



ಹಾನಗಲ್ಲ: ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ ಅವರ 6 ವರ್ಷಗಳ ಪಕ್ಷ ಸಂಘಟನೆ ಸಾಧನೆಗೆ ಶುಭ ಕೋರಿ ಹಾನಗಲ್ಲ ತಾಲೂಕು ಅಕ್ಕಿಆಲೂರಿನಲ್ಲಿ ಸಾಯಿಬಾಬಾ ಮಂದಿರದಲ್ಲಿ ಸಾಯಿಬಾಬಾ ದೇವರಿಗೆ ಪೂಜೆ ಸಲ್ಲಿಸಿ ಕಾಂಗ್ರೆಸ್ ಕಾರ್ಯಕರ್ತರು ಹರ್ಷಪಟ್ಟರು. ಬುಧವಾರ ಪೂಜೆ ಸಲ್ಲಿಸಿ ಮಾತನಾಡಿದ ಕೆಪಿಸಿಸಿ ಕಾರ್ಯದರ್ಶಿ ಪ್ರಕಾಶಗೌಡ ಪಾಟೀಲ, ಡಿ.ಕೆ.ಶಿವಕುಮಾರ ಅವರು ಪಕ್ಷ ಸಂಘಟನೆ ಮೂಲಕ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಅಭೂತಪೂರ್ವವಾಗಿ ಸಂಘಟನೆಯ ಶಕ್ತಿಯನ್ನು ಪ್ರದರ್ಶಿಸಿದ್ದಾರೆ. 6 ವರ್ಷಗಳ ಅವಧಿಯಲ್ಲಿ ರಾಜ್ಯದ ಹಿತಕ್ಕೆ ಸಲ್ಲಿಸಿದ ಸೇವೆ ಅನುಕರಣೀಯವಾದುದು. ಉಪಮುಖ್ಯಮಂತ್ರಿಯಾಗಿ ಸರ್ಕಾರದ ಆಡಳಿತದಲ್ಲಿಯೂ ಜನ ಮೆಚ್ಚುಗೆಯ ನಾಯಕರಾಗಿ ಹೊರಹೊಮ್ಮಿದ್ದಾರೆ. ಅವರ ಅಧಿಕಾರಾವಧಿ ರಾಜ್ಯದ ಹಿತಕ್ಕೆ, ಪಕ್ಷದ ಕಾರ್ಯಕರ್ತರ ಒಕ್ಕಟ್ಟಿಗೆ ಸಹಕಾರಿಯಾಗಿದೆ ಎಂದರು. ಕಾಂಗ್ರೆಸ್ ಕಾರ್ಯಕರ್ತರಾದ ರವೀಂದ್ರ ಚಿಕ್ಕೇರಿ, ಎಂ.ಎಂ. ಸರಖಾಜಿ, ಸಂತೋಷ ಹಿರಿಜನ, ಇನಾಯತ್‌ಖಾನ ಪಠಾಣ, ನಸರುಲ್ಲಾ ಉಪ್ಪಣಸಿ, ಮುಸ್ತಾಕ್ ಅಹಮ್ಮದ್ ಕಾರಡಗಿ, ಮೆಹಬೂಬಸಾಬ ಹಿತ್ತಲಮನಿ, ಮಹ್ಮದಗೌಸ ಮಟಗಿ ಮೊದಲಾದವರು ಇದ್ದರು.

ಸಾಧಕಿ ಸಮಾವೇಶಕ್ಕೆ ಮಹಿಳೆಯರ ಆಯ್ಕೆ

ಹಾವೇರಿ: ಕರ್ನಾಟಕ ಸರ್ಕಾರದ ಸಂತ ಕವಿ ಕನಕದಾಸ ಮತ್ತು ತತ್ವಪದಾಧಿಕಾರರ ಅಧ್ಯಯನ ಸಂಸ್ಥೆ, ಬೆಂಗಳೂರು. ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಹಾಗೂ ಕರ್ನಾಟಕ ಲೇಖಕಿಯರ ಸಂಘ ಬೆಂಗಳೂರು ಜಂಟಿಯಾಗಿ ಮಹಿಳಾ ದಿನಾಚರಣೆ ಅಂಗವಾಗಿ ಮಾ. 13ಮತ್ತು 14ರಂದು ಎರಡು ದಿಗಳ ಕಾಲ ಆಯೋಜಿಸಿರುವ 'ಸಾಧಕಿ' ಮಹಿಳಾ ಚಿಂತನ ಸಮಾವೇಶಕ್ಕೆ ಹಾವೇರಿ ಜಿಲ್ಲೆಯ ಹತ್ತು ಮಹಿಳೆಯರು ಆಯ್ಕೆಯಾಗಿದ್ದಾರೆ.

ವಚನಕಾರ್ತಿಯರ, ಕೀರ್ತನಕಾರ್ತಿಯರ, ತತ್ವ ಪದಕಾರ್ತಿಯರ ಕುರಿತು ಸ್ತ್ರೀ ಸಂವೇದನೆಯ ಎರಡು ದಿನಗಳ ಸಮಾವೇಶಕ್ಕೆ ರೇಣುಕಾ ಗುಡಿಮನಿ, ಗೀತಾ ಸಾಲಿಮಠ, ಕಮಲಾ ಬುಕ್ಕಶೆಟ್ಟಿ, ಜುಬೇದಾ ನಾಯಕ, ಜ್ಯೋತಿ ಬಶೆಟ್ಟಿಯವರ, ಸುರೇಖಾ ನೇರಳಿಕರ, ಕವಯತ್ರಿ ಅನಿತ ಮಂಜುನಾಥ ಹಾಗೂ ಶಿಗ್ಗಾವಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರೇಣುಕಾ ನೆಲ್ಲೂರ ಮತ್ತು ರಂಜಿತಾ ಮಲ್ಲೂರ ವಿದ್ಯಾರ್ಥಿ ಪ್ರತಿನಿಧಿಗಳಾಗಿರುತ್ತಾರೆ. ಧಾರವಾಡ ಕರ್ನಾಟಕ ವಿವಿ ಕುಲಪತಿ ಪ್ರೊ. ಎ.ಎಂ. ಖಾನ, ಸಂತ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಸಂಸ್ಥೆಯ ಅಧ್ಯಕ್ಷ ಕಾ.ತ. ಚಿಕ್ಕಣ್ಣ, ಬಿ.ಟಿ. ಲಲಿತಾ ನಾಯಕ, ಪ್ರೊ. ಮಾಲತಿ ಪಟ್ಟಣಶೆಟ್ಟಿ, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷರಾದ ಡಾ.ಆರ್. ಸುನಂದಮ್ಮ ಸಮಾವೇಶದಲ್ಲಿ ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

ತರಬೇತಿ ಕಾರ್ಯಾಗಾರ

ಹಾವೇರಿ: ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗದ ಸಹಯೋಗದಲ್ಲಿ ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಹಾಗೂ ಜಿಲ್ಲೆಯ ಎಲ್ಲ ಇಂಜನೀಯರ್‌ಗಳಿಗೆ ವಿವಿಧ ಯೋಜನೆಗಳಡಿ ಶೇ.5ರ ಅನುದಾನ ಬಳಕೆ ಹಾಗೂ ವಿಶಿಷ್ಟಚೇತನರಗೆ ಅಡೆತಡೆ ರಹಿತ ವಾತಾವರಣ ನಿರ್ಮಾಣ ಕುರಿತು ಒಂದು ದಿನದ ಕಾರ್ಯಾಗಾರ ಇತ್ತೀಚೆಗೆ ಜಿಪಂ ಸಭಾಂಗಣದಲ್ಲಿ ಜರುಗಿತು. ಜಿಪಂ ಉಪಕಾರ್ಯದರ್ಶಿ ಡಾ.ಪುನೀತ್ ಅವರು ಉದ್ಘಾಟನೆ ನೆರವೇರಿಸಿದರು. ಎಲಬು ಮತ್ತು ಕೀಲು ತಜ್ಞ ಡಾ.ನಾಗಭೂಷಣ ಅವರು ವಿವಿಧ ವಿಕಲತೆಯ ಬಗ್ಗೆ ಮಾಹಿತಿ ನೀಡಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ ದಾವಣಗೆರೆ ಸಿ.ಆರ್.ಸಿ.ಕೇಂದ್ರದ ಪುನರ್ವಸತಿ ಅಧಿಕಾರಿ ಕಣಗ ಸಭಾಪತಿ ಅವರು ವಿಕಲಚೇತನ ಸ್ನೇಹಿ ಕಟ್ಟಡಗಳು ಹಾಗೂ ರ್‍ಯಾಂಪ್, ರೈಲಿಂಗ್‌ಗಳ ನಿರ್ಮಾಣದ ಬಗ್ಗೆ ತರಬೇತಿ ನೀಡಿದರು. ಜಿಲ್ಲಾ ವಿಶಿಷ್ಟಚೇತನರ ಕಲ್ಯಾಣಾಧಿಕಾರಿ ಆಶು ನದಾಫ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಮಹಿಳೆ ಕಾಣೆ

ರಟ್ಟೀಹಳ್ಳಿ: ತಾಲೂಕಿನ ಚಟ್ನಳ್ಳಿ ಗ್ರಾಮದ ಮಹಿಳೆ ರಟ್ಟೀಹಳ್ಳಿ ಪಟ್ಟಣದಿಂದ ಕಾಣೆಯಾದ ಬಗ್ಗೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮಹಿಳೆ ಚಟ್ನಳ್ಳಿ ಗ್ರಾಮದ ಕಾವ್ಯಾ ಗಿರೀಶ ಬ್ಯಾಡಗೌಡ್ರ (28) ವರ್ಷದ ಮಹಿಳೆ ಎರಡು ಮಕ್ಕಳನ್ನು ಹೊಂದಿದ್ದು ರಟ್ಟಿಹಳ್ಳಿ ಪಟ್ಟಣಕ್ಕೆ ಬಂದಾಗ ಶೌಚಕ್ಕೆ ಹೋಗಿ ಬರುತ್ತೇನೆಂದು ಹೇಳಿ ಹೋದವರು ತಿರುಗಿ ಬಾರದ ಕಾರಣ ತಂದೆ ಪ್ರಕರಣ ದಾಖಲಿಸಿದ್ದಾರೆ.





ಶಿಗ್ಗಾವಿ: ತಾಲೂಕಿನ ಹೊಸೂರ ಗ್ರಾಮದಲ್ಲಿ 2025-26 ಶೈಕ್ಷಣಿಕ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರವನ್ನು ಅಂಕಲಕೋಟಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಡಾ. ಎ.ಸಿ. ವಾಲಿ ಉದ್ಘಾಟಿಸಿದರು.

ವ್ಯಕ್ತಿತ್ವ ವಿಕಸನಕ್ಕೆ ಎನ್‌ಎಸ್‌ಎಸ್ ಸಹಕಾರಿ

ಶಿಗ್ಗಾವಿ : ಎನ್‌ಎಸ್‌ಎಸ್‌ನ ಮುಖ್ಯ ಉದ್ದೇಶವು ಭಾರತೀಯ ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ಸಾರ್ವಜನಿಕ ಸೇವೆಯ ಮೂಲಕ ಅಭಿವೃದ್ಧಿಗೊಳಿಸುವುದಾಗಿದೆ. ಈ ಸ್ವಯಂಪ್ರೇರಿತ ಸಂಸ್ಥೆಯ ಮೂಲ ತತ್ವವು ವಿದ್ಯಾರ್ಥಿಗಳಿಗೆ ಲೋಕಸೇವೆಯ ಮೂಲಕ ರಾಷ್ಟ್ರ ನಿರ್ಮಾಣದ ಕಾರ್ಯಗಳಲ್ಲಿ ಒಳಗೊಂಡಂತಹ ಅನುಭವ ನೀಡುವುದಾಗಿದೆ ಎಂದು ಅಂಕಲಕೋಟಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಡಾ. ಎ.ಸಿ. ವಾಲಿ ಹೇಳಿದರು. ತಾಲೂಕಿನ ಹೊಸೂರ ಗ್ರಾಮದಲ್ಲಿ 2025-26 ಶೈಕ್ಷಣಿಕ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ ಉದ್ಘಾಟಿಸಿ ಮಾತನಾಡಿ, ಶಿಬಿರಾರ್ಥಿಗಳು ಅಭ್ಯಾಸದ ಜೊತೆಗೆ ಸೇವಾ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು. ಅದೇ ನಿಜವಾದ ಧರ್ಮವಾಗಿದೆ, ಗ್ರಾಮದಲ್ಲಿ ಶ್ರಮದಾನ, ಝಾಥಾಗಳ ಮೂಲಕ ಸ್ವಚ್ಛತೆ, ಸಾಮಾಜಿಕ ಅರಿವು ಮೂಡಿಸಲು ಕರೆ ನೀಡಿದರು. ನಿವೃತ್ತ ಶಿಕ್ಷಕ ಎನ್.ಎಸ್. ಬರದೂರ ಮಾತನಾಡಿ, ಶಿಬಿರಾರ್ಥಿಗಳು ಗುರು ಹಿರಿಯರ ಮಾರ್ಗದರ್ಶನದಲ್ಲಿ ಭವಿಷ್ಯ ರೂಪಿಸಿಕೊಳ್ಳಿ. ಶ್ರದ್ಧೆ, ಆಸಕ್ತಿ ಇವು ತಮ್ಮ ಜೀವನವನ್ನು ರೂಪಿಸಲಿವೆ ಎಂದರು. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರಾಜಶೇಖರ್ ಬಿ.ಹೆಚ್ ಮಾತನಾಡಿದರು. ಪ್ರೊ. ಡಿ.ಎಸ್. ಭಟ್ಟ, ಡಿ.ಎಸ್. ಸೊಗಲಾದ, ಆರ್.ಪಿ. ನದಾಫ್, ಐ.ಎಂ ದುದ್ದಗಿ, ಎಸ್‌ಡಿಎಂಸಿ ಅಧ್ಯಕ್ಷ ನಾಗರಾಜ ಇಂದೂರ, ಉಪಾಧ್ಯಕ್ಷೆ ಶೋಭಾ ಚಲವಾದಿ ಗ್ರಾಮದ ಹಿರಿಯರಾದ ಚಂದ್ರಪ್ಪ ಲಕ್ಕಣ್ಣನವರ್, ಧರಣೇಂದ್ರ ಪುಟ್ಟಣ್ಣನವರ, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಡಾ. ಆನಂದ ಇಂದೂರ, ವಿನಯ್ ಕುಲಕರ್ಣಿ, ಪ್ರವೀಣ್ ಸಿದ್ದಣ್ಣನವರ, ಪ್ರತಿಮ ಗುಂಜಳ, ಶಿಬಿರಾರ್ಥಿಗಳು ಇದ್ದರು.



ರಟ್ಟೀಹಳ್ಳಿ: ಪಟ್ಟಣದ ಪ್ರಿಯದರ್ಶಿನಿ ಪ್ರಥಮ ದರ್ಜೆ ಮಹಾವಿದ್ಯಾಲಯದ ವತಿಯಿಂದ ತಾಲೂಕಿನ ಚಪ್ಪರದಹಳ್ಳಿ ಗ್ರಾಮದಲ್ಲಿ ಜರುಗಿದ ಎನ್‌ಎಸ್‌ಎಸ್ ವಾರ್ಷಿಕ ಶಿಬಿರವನ್ನು ಫಾಲಾಕ್ಷಗೌಡ ಪಾಟೀಲ ಉದ್ಘಾಟಿಸಿದರು. ಸಂಸ್ಥೆಯ ಅಧ್ಯಕ್ಷ ಡಿ.ಎಂ.ಸಾಲಿ, ಪ್ರಾಚಾರ್ಯರು, ಸಿಬ್ಬಂದಿ ವರ್ಗ, ಗ್ರಾಮದ ಮುಖಂಡರು, ಎನ್‌ಎಸ್‌ಎಸ್ ಶಿಬಿರಾರ್ಥಿಗಳು ಭಾಗವಹಿಸಿದ್ದರು.

ಉಳಿತಾಯ ಬಜೆಟ್ ಮಂಡನೆ | ಜಿಲ್ಲಾಧಿಕಾರಿ ದಾನಮ್ಮನವರ ಸೂಚನೆ

ನಗರದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿ

ಹಾವೇರಿ: ನಗರದ ಎಲ್ಲಾ ಸಾರ್ವಜನಿಕರು ಹಾಗೂ ಅಧಿಕಾರಿಗಳ ಸಹಕಾರದೊಂದಿಗೆ ಆದಾಯದ ಮೂಲ ಹೆಚ್ಚಿಸಿಕೊಂಡು ಕುಡಿಯುವ ನೀರು, ಸ್ವಚ್ಛತೆ ಸೇರಿದಂತೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಪ್ರಾಮಾಣಿಕ ಪ್ರಯತ್ನದೊಂದಿಗೆ ನಗರದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವಂತೆ ನಗರಸಭೆ ಸಿಬ್ಬಂದಿಗೆ ನಗರಸಭೆ ಆಡಳಿತಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಡಾ. ವಿಜಯ ಮಹಾಂತೇಶ ದಾನಮ್ಮನವರ ಸೂಚಿಸಿದರು.

ಇಲ್ಲಿಯ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪ್ರಸಕ್ತ 2026-27ನೇ ಸಾಲಿನ 13.85 ಲಕ್ಷ ರೂ., ಗಳ ಉಳಿತಾಯ ಬಜೆಟ್ ಮಂಡಿಸಿ, ಅವರು ಮಾತನಾಡಿದರು.

ಆದಾಯದ ಮೂಲ: ಹಾವೇರಿ ನಗರಸಭೆ ಸ್ವಂತ ಮೂಲಗಳಾದ ಮನೆ ಕಂದಾಯ 6.7ಕೋಟಿ ರೂ., ನೀರಿನ ಕರ 1ಕೋಟಿ ರೂ., ಮಳಿಗೆ ಬಾಡಿಗೆ 1.65ಕೋಟಿ ರೂ., ಸಂತೆ ಶುಲ್ಕ 12.50ಲಕ್ಷ ರೂ., ವೇತನ ಅನುದಾನ (ಎಸ್‌ಎಫ್‌ಸಿ) 5.65ಕೋಟಿ, ಎಸ್‌ಎಫ್‌ಸಿ ವಿದ್ಯುತ್ ಅನುದಾನ 3.65ಕೋಟಿ, ಕೇಂದ್ರ ಸರ್ಕಾರದ 15ನೇ ಹಣಕಾಸು ಯೋಜನೆಯಡಿ 2.55ಕೋಟಿ, ಎಸ್‌ಎಫ್‌ಸಿ ರಾಜ್ಯ ಹಣಕಾಸು ಆಯೋಗದ ಅನುದಾನ 2.75ಕೋಟಿ, ಸ್ವಚ್ಛ ಭಾರತ ಯೋಜನೆಗೆ 1ಕೋಟಿ, ಡೇ-ನಲ್ಮ್ ಯೋಜನೆಗೆ 5ಲಕ್ಷ ರೂ., ಅಸಾಮಾನ್ಯ ಆದಾಯ 6.85ಕೋಟಿ, ಕಟ್ಟಡ ಪರವಾನಿಗೆ ಶುಲ್ಕ 28.67ಲಕ್ಷ, ಇತರೆ ಆದಾಯ 3.76ಕೋಟಿ ರೂ., ಅನುದಾನ ನಿರೀಕ್ಷಿಸಲಾಗಿದೆ ಎಂದರು.

ಆದ್ಯತಾ ವಲಯ: ಪ್ರತಿ ವಾರ್ಡ್‌ನಲ್ಲೂ ರಸ್ತೆ ನಿರ್ಮಾಣಕ್ಕೆ 4.15ಕೋಟಿ, ಹೊಸ ಚರಂಡಿ, ಸಿಡಿ ನಿರ್ಮಾಣಕ್ಕೆ 1.92ಕೋಟಿ, ಹೊಸ ಪೈಪ್‌ಲೈನ್‌ಗೆ 1.92ಕೋಟಿ, ಹೊಸ ಪಂಪಸೆಟ್ ಖರೀದಿಗೆ 95ಲಕ್ಷ, ರಸ್ತೆ ದುರಸ್ತಿಗೆ 98.79ಲಕ್ಷ, ಚರಂಡಿ ದುರಸ್ತಿಗೆ 1.29ಕೋಟಿ, ನಗರ ನೈರ್ಮಲೀಕರಣಕ್ಕೆ 3.96ಕೋಟಿ, ಪೈಪ್‌ಲೈನ್ ದುರಸ್ತಿಗೆ 1.27ಕೋಟಿ, ಮೋಟಾರ ದುರಸ್ತಿಗೆ 89ಲಕ್ಷ ರೂ., ನೀರು ಸರಬರಾಜು ಸಾಮಾಗ್ರಿ ಖರೀದಿಗೆ 65ಲಕ್ಷ ರೂ., ಬೀದಿ ದೀಪ ನಿರ್ವಹಣೆ 1.49ಕೋಟಿ, ವಿದ್ಯುತ್ ಬಿಲ್‌ಗೆ 3.70ಕೋಟಿ, ವೇತನಕ್ಕಾಗಿ 5.55ಕೋಟಿ, ಸಾರ್ವಜನಿಕ ಉದ್ಯಾನವನಗಳು ಹಾಗೂ ಕೆರೆ ಅಭಿವೃದ್ಧಿಗಾಗಿ 25ಲಕ್ಷ ರೂ., ಎಸ್‌ಸಿ, ಎಸ್‌ಟಿ ಜನರ ಅಭಿವೃದ್ಧಿಗೆ 30.80ಲಕ್ಷ, ವಿಕಲ ಚೇತನರ ಅಭಿವೃದ್ಧಿಗೆ 13ಲಕ್ಷ ರೂ., ಸ್ಟೇಷನರಿ ಸಾಮಗ್ರಿ ಸೇರಿ ಇತರೆ ವೆಚ್ಚಕ್ಕಾಗಿ 2ಕೋಟಿ ಅನುದಾನ ಮೀಸಲಿರಿಸಲಾಗಿದೆ ಎಂದರು.

ಈ ವೇಳೆ ವಿಧಾನಸಭೆ ಉಪಾಧ್ಯಕ್ಷರು, ಶಾಸಕ ರುದ್ರಪ್ಪ ಲಮಾಣಿ, ಅಪರ ಜಿಲ್ಲಾಧಿಕಾರಿ ಎಲ್.ನಾಗರಾಜ, ಪೌರಾಯುಕ್ತ ಎಚ್.ಕಾಂತರಾಜು, ನಗರಸಭೆ ಮಾಜಿ ಅಧ್ಯಕ್ಷ ಸಂಜೀವಕುಮಾರ ನೀರಲಗಿ ಇತರರಿದ್ದರು. ಲೆಕ್ಕ ಅಧೀಕ್ಷಕಿ ಶೋಭಾ ಉದಗಟ್ಟಿ ನಿರ್ವಹಿಸಿದರು.



- 2026-27ನೇ ಸಾಲಿನ 13.85 ಲಕ್ಷ ರೂ., ಗಳ ಉಳಿತಾಯ ಬಜೆಟ್ ಮಂಡನೆ
- ಆದಾಯದ ಮೂಲಗಳ ಹೆಚ್ಚಳಕ್ಕೆ ಆದ್ಯತೆ
- ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಒತ್ತು

ನಗರಸಭೆಯ ಆದಾಯದ ಮೂಲ ಹೆಚ್ಚಿಸಿಕೊಂಡು ಮುಂದಿನ ಸಾರಿ ಇನ್ನಷ್ಟು ಹೆಚ್ಚಿನ ಉಳಿತಾಯ ಬಜೆಟ್ ಮಂಡಿಸಲು ಪ್ರಯತ್ನಿಸಬೇಕು. ನಮ್ಮ ಸಂಪನ್ಮೂಲ ಹೆಚ್ಚಿಸಿಕೊಂಡರೆ ನಗರದ ಅಭಿವೃದ್ಧಿ ಮಾಡಲು ಅನುಕೂಲ ಆಗಲಿದೆ. ಅ ಖಾತೆಯಿಂದ ಬ ಖಾತೆ ಮಾಡಬೇಕು. ಇದರಿಂದ ಬಡವರಿಗೆ ಅನುಕೂಲ ಆಗಲಿದೆ.

■ **ರುದ್ರಪ್ಪ ಲಮಾಣಿ, ಶಾಸಕರು, ಹಾವೇರಿ.**

ಒಳ ಮೀಸಲಾತಿ ಜಾರಿಗೆಗೆ ಆಗ್ರಹಿಸಿ ಪ್ರತಿಭಟನೆ

ಬ್ಯಾಡಗಿ: ಒಳ ಮೀಸಲಾತಿ ಜಾರಿ ಮಾಡದೆ ಡೇಟು ಹಾಕುತ್ತಿರುವ ಸರ್ಕಾರದ ನಡೆ ಮಾದಿಗರ ಆಕ್ರೋಶಕ್ಕೆ ಕಾರಣವಾಗಿದೆ ಕೂಡಲೇ ಸರ್ಕಾರವು ಮಾದಿಗರಿಗೆ ಒಳ ಮೀಸಲಾತಿ ಜಾರಿಗೆ ಮಾಡಬೇಕೆಂದು ಆದಿ ಜಾಂಬವ ಮಾದಿಗ ಸಮುದಾಯದ ತಾಲೂಕ ಅಧ್ಯಕ್ಷ ಸೋಮಣ್ಣ ಮಾಳಗಿ ಆಗ್ರಹಿಸಿದರು.

ಪಟ್ಟಣದ ಅಂಬೇಡ್ಕರ್ ಭವನದಿಂದ ಪ್ರತಿಭಟನೆ ಮಾಡುವ ಮೂಲಕ ಪ್ರಮುಖ ರಸ್ತೆಗಳಲ್ಲಿ ಹಾದು ಹಳೆ ಪುರಸಭೆಯ ಎದುರು ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿ ಬೃಹತ್ ಪ್ರತಿಭಟನೆ ನಡೆಸಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಆಕ್ರೋಶವನ್ನು ವ್ಯಕ್ತಪಡಿಸಿದರು.

ತಾಲೂಕು ಅಧ್ಯಕ್ಷ ಮಾತನಾಡಿ, ನಮ್ಮ ಸಮಾಜ ಕಳೆದ 35 ವರ್ಷಗಳಿಂದ ಒಳ ಮೀಸಲಾತಿಗೆ ಆಗ್ರಹಿಸಿ ಸುದೀರ್ಘ ಹೋರಾಟ ಮಾಡಿದೆ ಸುಪ್ರೀಂ ಕೋರ್ಟ್ ನಿರ್ದೇಶನದಂತೆ ರಾಜ್ಯದಲ್ಲಿ ಒಳಮೀಸಲಾತಿ ಜಾರಿಯಾಗಿದೆ ಆದರೆ ಒಳ ಮೀಸಲಾತಿ ಅಳವಡಿಸದೆ 56 ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರ ನೋಟಿಫಿಕೇಶನ್ ಹೊರಡಿಸಿದೆ. ಸರ್ಕಾರದ ಈ ಕ್ರಮ ಮಾದಿಗ ಸಮುದಾಯದ ಆಕ್ರೋಶಕ್ಕೆ ಕಾರಣವಾಗಿದೆ. ಸರ್ಕಾರದ ಅಧಿಸೂಚನೆಯನ್ನು ಹಿಂಪಡೆದು ಹೊಸ ಅಧಿಸೂಚನೆ ಹೊರಡಿಸಬೇಕು ಒಳ ಮೀಸಲಾತಿ ಅಡಿ ಖಾಲಿ ಹುದ್ದೆಗಳು ಭರ್ತಿ ಮಾಡಬೇಕು ಶೇ.15ರ ಹಂಚಿಕೆಯನ್ನು ಸ್ಪಷ್ಟವಾಗಿ ಅನ್ವಯಿಸಿ ಕ್ರಮ ತೆಗೆದುಕೊಳ್ಳಬೇಕು ಪರೀಕ್ಷೆ ಜಾರಿಗೆ ಗೊಳಿಸಬೇಕೆಂದು ಆಗ್ರಹಿಸಿದರು.

ಸಮಾಜದ ಮುಖಂಡ ಸುರೇಶ್ ಅಸಾದಿ ಮಾತನಾಡಿ ಕಾಂಗ್ರೆಸ್ ಪಕ್ಷ ಚುನಾವಣಾ ಪೂರ್ವದಲ್ಲಿ ನಾವು ಅಧಿಕಾರಕ್ಕೆ ಬಂದರೆ ಒಳ ಮೀಸಲಾತಿ ಜಾರಿ ಮಾಡುವುದಾಗಿ ಪ್ರಣಾಳಿಕೆಯಲ್ಲಿ ಪ್ರಕಟಿಸಿತ್ತು. ಚಿತ್ರದುರ್ಗದಲ್ಲಿ ನಡೆದ ಸಮಾವೇಶದಲ್ಲೂ ಭರವಸೆ ನೀಡಲಾಗಿತ್ತು. ಇದನ್ನು ನಂಬಿ ದಲಿತರು ಕಾಂಗ್ರೆಸ್ ಬೆಂಬಲಿಸಿದ್ದರಿಂದ ಅಧಿಕಾರಕ್ಕೆ ಬಂತು. ಆದರೆ ಈಗ ದಲಿತರಿಗೆ ಅನ್ಯಾಯ ಮಾಡುತ್ತಿದ್ದಾರೆ ಎಂದು ದೂರಿದರು.

ರವಿ ಹುಣಸಿಮರದ ಮಾತನಾಡಿದರು. ಪ್ರತಿಭಟನೆಯಲ್ಲಿ ಗೌರವಾಧ್ಯಕ್ಷ ದುರ್ಗೇಶ್ ಗೋಣೆಮ್ಮನವರ್, ಬಸವರಾಜ್ ತಡಸರ್, ನಾಗರಾಜ ದೊಡ್ಡನಿ, ಸುಭಾಷ್ ಮಾಳಗಿ, ನಾಗರಾಜ್ ಹಾವನೂರ, ಅರುಣ್ ಕೋಡಿಹಳ್ಳಿ, ಶಂಕರ ಕುಸುಗೂರ್, ಹನುಮಂತಪ್ಪ ಕಾಟೇನಹಳ್ಳಿ, ಮಾರುತಿ ಹಂಜಗಿ, ಮಹದೇವ ಹುಬ್ಬಳ್ಳಿ, ಮಂಜುನಾಥ್ ಹಂಜಗಿ, ಎಂಎನ್ ನಾಯಕ್, ಅಪ್ಪು ಬಾಗಲಕೋಟೆ, ಬುದ್ದಿವಂತ ಹಂಜಗಿ, ವಿನಾಯಕ ಹುಬ್ಬಳ್ಳಿ ಹಾಗೂ ಅನೇಕರು ಭಾಗವಹಿಸಿದ್ದರು.



ಏ.6ರವರೆಗೆ ಕ್ರಮ ಕೈಗೊಳ್ಳದಂತೆ ಮನವಿ

ರಾಣೇಬೆನ್ನೂರ: ನಗರದ ನೆಹರು ಮಾರುಕಟ್ಟೆ ಎಪಿಎಂಸಿ ವ್ಯಾಪಾರಸ್ಥರು ಹೈಕೋರ್ಟ್‌ಗೆ ಸಲ್ಲಿಸಿದ ಅರ್ಜಿ ಸ್ವೀಕರಿಸಿದ ನ್ಯಾಯಾಲಯ ಏ.6ರವರೆಗೆ ಯಾವುದೆ ಕಾನೂನು ಕ್ರಮ ತೆಗೆದುಕೊಳ್ಳದಂತೆ ಸೂಚಿಸಿದೆ. ಆದ್ದರಿಂದ ಎಪಿಎಂಸಿ ಅಧಿಕಾರಿಗಳು ಅಲ್ಲಿಯವರೆಗೆ ನಮ್ಮ ಮೇಲೆ ಯಾವುದೆ ಕ್ರಮ ಜರುಗಿಸುವಂತಿಲ್ಲ ಎಂದು ನೆಹರು ಮಾರುಕಟ್ಟೆ ವ್ಯಾಪಾರಸ್ಥರು ಬುಧವಾರ ಎಪಿಎಂಸಿ ಆಡಳಿತಾಧಿಕಾರಿ ಕುಮಾರಸ್ವಾಮಿ ಅವರಿಗೆ ಮನವಿ ಸಲ್ಲಿಸಿದರು.

ನೇತೃತ್ವ ವಹಿಸಿದ್ದ ವರ್ತಕ ಜಿ.ಜಿ. ಹೊಟ್ಟಿಗೌಡ್ರ ಮಾತನಾಡಿ, ನೆಹರು ಮಾರುಕಟ್ಟೆಯಲ್ಲಿ ನಾವು ಹಲವು ವರ್ಷಗಳಿಂದ ವ್ಯಾಪಾರ ಮಾಡುತ್ತಿದ್ದು, ಇದೀಗ ಎಪಿಎಂಸಿಯವರು ಅದು ಅನಧಿಕೃತ ಎಂದು ಹೇಳಿದ ಮೇಲೆ ನಾವು ಕೋರ್ಟ್ ಮೊರೆ ಹೋಗಿದ್ದೇವೆ. ನ್ಯಾಯಾಲಯ ಏ.6ರವರೆಗೆ ಯಥಾಸ್ಥಿತಿ ಕಾಯ್ದುಕೊಳ್ಳಲು ಸೂಚಿಸಿದೆ. ಅದರಂತೆ ಎಪಿಎಂಸಿ ಅಧಿಕಾರಿಗಳು ನಮ್ಮ ಮೇಲೆ ಯಾವುದೆ ಕ್ರಮ ಜರುಗಿಸಬಾರದು ಎಂದರು. ಸಂಚಾರಕ್ಕೆ ತೊಂದರೆ ಆಗದಂತೆ ವ್ಯಾಪಾರಸ್ಥರು ನೋಡಿಕೊಳ್ಳುವರು. ಪ್ರತಿ ಭಾನುವಾರ ವ್ಯಾಪಾರ ಬಂದ್ ಮಾಡಿ ಅದನ್ನು ಮಂಗಳವಾರ ನಡೆಸುವರು. ನಮಗೆ ಮುಖ್ಯ ಎಪಿಎಂಸಿ ಪ್ರಾಂಗಣ ಬದಲು ಎಪಿಎಂಸಿ ಮೇಗಾ ಮಾರುಕಟ್ಟೆಯಲ್ಲಿ ವ್ಯಾಪಾರ ನಡೆಸಲು ಅವಕಾಶ ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

ಮನವಿ ಸ್ವೀಕರಿಸಿದ ಎಪಿಎಂಸಿ ಆಡಳಿತಾಧಿಕಾರಿ ಕುಮಾರಸ್ವಾಮಿ ಮಾತನಾಡಿ, ನ್ಯಾಯಾಲಯದ ಆದೇಶದಂತೆ ಎಪಿಎಂಸಿ ನಡೆದುಕೊಳ್ಳಲಿದೆ. ಮುಂದಿನ ತೀರ್ಮಾನ ಕುರಿತು ನ್ಯಾಯಾಲಯದ ಸೂಚನೆ ಮೇರೆಗೆ ತೀರ್ಮಾನ ಮಾಡಲಾಗುವುದು ಎಂದರು.

ನೆಹರು ಮಾರುಕಟ್ಟೆಯ ವ್ಯಾಪಾರಸ್ಥರಾದ ಹಾಲೇಶಪ್ಪ ಮುದ್ದಿ, ಪುಟ್ಟಣಗೌಡ ತೆಂಬದ, ಜಟ್ಟೆಪ್ಪ ಕರೇಗೌಡ್ರ, ಅಶೋಕ ಗಂಗನಗೌಡ್ರ, ಬಸಣ್ಣ ಕಂಬಳಿ, ಗಣೇಶ ಕಂಬಳಿ, ಚಂದ್ರಶೇಖರ ತೆಂಬದ, ಗೋಪಾಲರೆಡ್ಡಿ, ನಿಂಗನಗೌಡ ಪಾಟೀಲ, ಮುತ್ತು ಪಾಟೀಲ, ಬಿ.ಎಸ್. ಗುಡ್ಡದ, ಬಿ.ಎಸ್. ನರಸಗೊಂಡರ, ಅಶೋಕ ಹೊಟ್ಟಿಗೌಡ್ರ, ರಾಜಶೇಖರ ಹಾದಿಮನಿ, ರಾಮನಗೌಡ ಚನ್ನಗೌಡ್ರ ಮತ್ತಿತರರು ಇದ್ದರು.



ಅರ್ಥಪೂರ್ಣ ಜಯಂತಿಗಳ ಆಚರಣೆಗೆ ಸಿದ್ಧತೆ ಮಾಡಿ: ಎಡಿಸಿ

ಹಾವೇರಿ: ಜಿಲ್ಲಾಡಳಿತದಿಂದ ದೇವರ ದಾಸಿಮಯ್ಯ, ಅಗ್ನಿಬನ್ನಿರಾಯ ಹಾಗೂ ಭಗವಾನ್ ಮಹಾವೀರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ ಎಲ್. ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ದೇವರ ದಾಸಿಮಯ್ಯ, ಅಗ್ನಿಬನ್ನಿರಾಯ ಹಾಗೂ ಭಗವಾನ್ ಮಹಾವೀರ ಜಯಂತಿ ಕುರಿತು ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಸರ್ಕಾರದ ಮಾರ್ಗಸೂಚಿ ಅನ್ವಯ ಜಯಂತಿಗಳ ಆಚರಣೆ ಮಾಡಲಾಗುವುದು. ಶಿಷ್ಟಾಚಾರದ ಅನುಸಾರ ಆಮಂತ್ರಣ ಪತ್ರಿಕೆ, ಬ್ಯಾನರ್, ಉಪನ್ಯಾಸಕರ ಆಯ್ಕೆ, ನೀರು, ಉಪಹಾರ, ಆಸನ, ವೇದಿಕೆ ವ್ಯವಸ್ಥೆಯನ್ನು ವ್ಯವಸ್ಥಿತವಾಗಿ ಮಾಡಬೇಕು. ಶಾಲಾ-ಕಾಲೇಜು, ಗ್ರಾಪಂಗಳಲ್ಲಿ ಈ ಮಹಾನ್ ವ್ಯಕ್ತಿಗಳ ಜಯಂತಿ ಆಚರಣೆಗೆ ಆದೇಶ ಹೊರಡಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಮಾ.24 ರಂದು ದೇವರದಾಸಿಮಯ್ಯ ಜಯಂತಿ ಹಾಗೂ ಮಾ.27 ರಂದು ಅಗ್ನಿಬನ್ನಿರಾಯ ಜಯಂತಿ ಬೆಳಿಗ್ಗೆ 11 ಗಂಟೆಗೆ ಹಾವೇರಿ ನಗರದ ಗಾಂಧಿ ಭವನದಲ್ಲಿ ಆಚರಣೆ ನಿರ್ಣಯಿಸಲಾಯಿತು. ಭಗವಾನ್ ಮಹಾವೀರ ಜಯಂತಿಯನ್ನು ಮಾ.31ರ ಬದಲಾಗಿ ಮಾ.30ರಂದು ಆಚರಣೆಗೆ ಸರ್ಕಾರಕ್ಕೆ ರಾಜ್ಯಮಟ್ಟದಲ್ಲಿ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದೆ. ಸರ್ಕಾರದ ಆದೇಶದ ನೋಡಿಕೊಂಡು ಭಗವಾನ್ ಮಹಾವೀರ ಆಚರಣೆ ದಿನಾಂಕ ನಿಗದಿಗೆ ಇಲಾಖೆಗೆ ತಿಳಿಸಲಾಗುವುದು ಎಂದು ಸಮಾಜದ ಮುಖಂಡ ಚಂದ್ರನಾಥ ಕಳಸೂರ ಸಭೆಗೆ ತಿಳಿಸಿದರು.

ಸಮಾಜದ ಮುಖಂಡರುಗಳು ಜಯಂತಿಗಳ ಆಚರಣೆ ಬಗ್ಗೆ ಚರ್ಚಿಸಿ ಸಲಹೆ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಬಿ. ಹಿರೇಮಠ ಜಯಂತಿಗಳ ಆಚರಣೆ ಕುರಿತು ಸರ್ಕಾದ ಮಾರ್ಗಸೂಚಿಗಳ ಬಗ್ಗೆ ಮಾಹಿತಿ ನೀಡಿದರು. ಸಭೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು, ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

ಮಾ.19ಕ್ಕೆ ಕರಿಯಮ್ಮಾ ದೇವಿ ದೇವಸ್ಥಾನ ಲೋಕಾರ್ಪಣೆ

ಬಂಕಾಪೂರ: ಇಲ್ಲಿಗೆ ಸಮೀಪದ ಹೊಸೂರು ಗ್ರಾಮದ ಕರಿಯಮ್ಮಾ ದೇವಿಯ ನೂತನ ಶಿಲಾ ದೇವಸ್ಥಾನ ಲೋಕಾರ್ಪಣೆ ಹಾಗೂ ಕಳಸಾರೋಹಣ ಹಾಗೂ ನೂತನ ಮೂರ್ತಿ ಪ್ರಾಣ ಪ್ರತಿಷ್ಠಾನ ಜಾತ್ರಾಮಹೋತ್ಸವ ಧಾರ್ಮಿಕ ಕಾರ್ಯಕ್ರಮ ಮಾ.19 ರಂದು ಜರುಗಲಿವೆ.

ಅಂದು ನೂತನ ಕರಿಯಮ್ಮಾ ದೇವಿಯ ಮೂರ್ತಿಯ ಪುರ ಪ್ರವೇಶ ಧಾರ್ಮಿಕ ಕಾರ್ಯಕ್ರಮದಲ್ಲಿ ಗ್ರಾಮದ ಸುಮಂಗಲೆಯರು ಪೂರ್ಣ ಕುಂಭಮೇಳ ಸಕಲವಾದ್ಯಮೇಳ ವೈಭವದೊಂದಿಗೆ ಗ್ರಾಮದ ಪ್ರಮುಖ ಬೀದಿಯಲ್ಲಿ ಸಂಚರಿಸಿ ದೇವಸ್ಥಾನ ತಲುಪುವುದು. ಮಾ.20 ರಂದು ಶುಕ್ರವಾರ ಪ್ರಾಥಃಕಾಲ ಬಂಕಾಪೂರ ಅರಳೆಲೆ ಹಿರೇಮಠದ ರೇವಣಸಿದ್ದೇಶ್ವರ ಶ್ರೀಗಳು ಹಾಗೂ ಸದಾಶಿವಪೇಠೆಯ ಗದುಗ್ಗೆಯಾ ಮಹಾಂತಿನಮಠ ಶಾಸ್ತ್ರಿಗಳ ಶಾಸ್ತ್ರೋಕ್ತ ಪೂಜೆಯ ವಿಧಿವಿದಾನಗಳನ್ನು ವೈದಿಕ ಕಾರ್ಯಗಳು ದೇವಸ್ಥಾನದಲ್ಲಿ ನೂತನ ಮೂರ್ತಿಗೆ ಪೂಜಾಕೈಂಕರ್ಯಗಳು ಜರುಗುವವು. ಬೆಳಗ್ಗೆ 11ಗಂಟೆಗೆ ಧರ್ಮಸಭೆ ಜರುಗುವುದು. ಧರ್ಮಸಭೆಯಲ್ಲಿ ಬಂಕಾಪೂರ ಅರಳೆಲೆ ಹಿರೇಮಠದ ರೇವಣಸಿದ್ದೇಶ್ವರ ಶ್ರೀಗಳು. ಚಿತ್ರದುರ್ಗದ ಗುರಪೀಠ ಮಾದರ ಚನ್ನಯ್ಯಾ ಶ್ರೀಗಳು. ಶಿಗ್ಗಾವಿ ವಿರಕ್ತಮಠದ ಸಂಗನಬಸವ ಶ್ರೀಗಳು, ಕುಮಾರಪಟ್ಟಣದ ಪುಣ್ಯಕೋಟಿಮಠದ ಬಾಲಯೋಗಿ ಪೂಜ್ಯಶ್ರೀ ಜಗದೀಶ್ವರ ಶ್ರೀಗಳು, ದೇವರಗುಡ್ಡದ ಬಸವಾನಂದ ನಿಬಣ್ಣಜ್ಜ ನೇತ್ರತ್ವದಲ್ಲಿ ಕಾರ್ಯಕ್ರಮ ಗಂಜೀಗಟ್ಟಿಯ ಚರಮೂರ್ತೇಶ್ವರಮಠದ ವೈಜನಾಥ ಶಿವಲಿಂಗ ಶಿವಾಚಾರ್ಯರು ಸಾನಿಧ್ಯವಹಿಸುವರು.

ಕ್ಷೇತ್ರ ಶಾಸಕ ಯಾಶೀರಖಾನ್ ಪಠಾಣ ಅಧ್ಯಕ್ಷತೆಯಲ್ಲಿ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪೂರ ಜೋತಿ ಬೆಳಗಿಸುವರು. ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಹೆಸ್ಕಾಂ ಅಧ್ಯಕ್ಷ ಅಜಂಪೀರ್ ಖಾದ್ರಿ. ಹಾನಗಲ್ ಶಾಸಕ ಶ್ರೀನಿವಾಸ್ ಮಾನೆ, ಹಿರೇಕೇರೂರು ಶಾಸಕ ಯು.ಬಿ.ಬಣಕಾರ, ವಿದಾನಸಭೆಯ ಉಪಾಧ್ಯಕ್ಷ ರುದ್ರಪ್ಪ ಲಮಾಣಿ. ಬಸವರಾಜ ಶಿವಣ್ಣವರ ಹಾಗೂ ಪ್ರಕಾಶ ಕೋಳಿವಾಡ್ ಶಾಸಕರು ಉಪಸ್ಥಿತರಿರುವರು ಎಂದು ದೇವಸ್ಥಾನ ಕಮೀಟಿ ಪ್ರಕಟಣೆ ತಿಳಿಸಿದೆ.

ಕನ್ನಡ ಖಾಸಗಿ ಶಾಲೆಗಳನ್ನು ಸರ್ಕಾರಿ ಅನುದಾನಕ್ಕೆ ಒಳಪಡಿಸಿ

ಹಾವೇರಿ: ಕಳೆದ 30 ವರ್ಷಗಳಿಂದ ಗ್ರಾಮೀಣ, ನಗರ ಭಾಗಗಳಲ್ಲಿ ಕನ್ನಡ ಭಾಷೆಯಲ್ಲಿ ಶಿಕ್ಷಣ ನೀಡುತ್ತಿರುವ ಕನ್ನಡ ಶಾಲೆಗಳನ್ನು ಗುರುತಿಸಿ, ರಾಜ್ಯ ಸರ್ಕಾರದ ಅನುದಾನಕ್ಕೆ ಒಳಪಡಿಸುವ ಮೂಲಕ ವೇತನಾನುದಾನವನ್ನು ನೀಡಬೇಕೆಂದು ಅಖಿಲ ಕರ್ನಾಟಕ ಅನುದಾನ ರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಜಿಲ್ಲಾಧ್ಯಕ್ಷ ನೀಲಪ್ಪ ಚಾವಡಿ ಹೇಳಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗ್ರಾಮೀಣ ಪ್ರದೇಶದ ಮಕ್ಕಳಲ್ಲಿ ಶಿಕ್ಷಣ ನೀಡುವ ಉದ್ದೇಶದಿಂದ ಕಳೆದ 30 ವರ್ಷಗಳ ಹಿಂದೆ ಕನ್ನಡ ಶಾಲೆಗಳು ಸ್ಥಾಪಿತಗೊಂಡಿವೆ. 1995ರಿಂದ ಇಲ್ಲಿಯವರೆಗೂ ಮಕ್ಕಳಿಗೆ ಶಿಕ್ಷಣ ಕೊಡುತ್ತಿರುವ ಖಾಸಗಿ ಶಾಲೆಗಳು ಸರ್ಕಾರದಿಂದ ಯಾವುದೇ ಅನುದಾನವಿಲ್ಲದೇ ಸಂಕಷ್ಟದಲ್ಲಿವೆ.

ಚುನಾವಣೆ ಪೂರ್ವದಲ್ಲಿ ಖಾಸಗಿ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸುವ ಭರವಸೆ ನೀಡಿದ್ದ ಸರ್ಕಾರವೂ ನಿಷ್ಕಾಳಜಿ ವಹಿಸುತ್ತಿದೆ. ಜಿಲ್ಲೆಯಲ್ಲಿ 352 ಅನುದಾನ ರಹಿತ ಖಾಸಗಿ ಕನ್ನಡ ಶಾಲೆಗಳು, 43 ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಸಿಬ್ಬಂದಿಗಳಿಗೆ ಸಂಬಳ, ಮೂಲಸೌಕರ್ಯ ಒದಗಿಸುವಲ್ಲಿ ಸಂಕಷ್ಟಪಡುವಂತಾಗಿದೆ ಎಂದು ಅಳಲು ತೋಡಿಕೊಂಡರು.

1995ರ ನಂತರ ಆರಂಭವಾದ ಕನ್ನಡ ಮಾತೃಭಾಷಾ ಶಾಲೆಗಳನ್ನು ಗುರುತಿಸಿ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಿ ವೇತನಾನುದಾನವನ್ನು ಒದಗಿಸಬೇಕು. ಈ ಹಿಂದೆ ಗ್ರಾಮೀಣ ಹಾಗೂ ನಗರ ಪ್ರದೇಶದ ಬಡವರಿಗೆ ಆಸರೆಯಾಗಿದ್ದ ಆರ್‌ಟಿಇ (ಶಿಕ್ಷಣ ಹಕ್ಕು ಕಾಯಿದೆ)ಯನ್ನು ಪುನಃ ಜಾರಿಗೆ ತರಬೇಕು. ಖಾಸಗಿ ಶಾಲೆಗಳ ಮಾನ್ಯತೆ ನವೀಕರಣಕ್ಕೆ ವಿಧಿಸಿರುವ ಮಾರ್ಗಸೂಚಿಗಳನ್ನು ಸರಳೀಕರಣ ಮಾಡಬೇಕು. ಆರ್‌ಟಿಇ ಕಾಯಿದೆ ಅಡಿಯಲ್ಲಿ ಆಯ್ಕೆಯಾದ ಶಾಲೆಗಳಿಗೆ ಬರಬೇಕಾದ ಶುಲ್ಕ ಮರುಪಾವತಿ ಹಣವನ್ನು ಈ ಕೂಡಲೇ ಎಲ್ಲ ಶಾಲೆಗಳಿಗೆ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಸುರೇಶ ಬಿಷ್ಟನಗೌಡ್ರ, ತಿಪ್ಪೇಸ್ವಾಮಿ ಹೊಸಮನಿ, ಮುತ್ತಯ್ಯ ಕಿತ್ತೂರಮಠ, ಮಂಜುನಾಥ ಮಡಿವಾಳರ ಇದ್ದರು.



ಕಾಂಗ್ರೆಸ್ ಸರ್ಕಾರ ಅನುದಾನ ರಹಿತ ಖಾಸಗಿ ಕನ್ನಡ ಮಾಧ್ಯಮ ಶಾಲೆಗಳನ್ನು ಮುಚ್ಚುವ ಹುನ್ನಾರ ನಡೆಸಿದೆ. ಬಜೆಟ್‌ನಲ್ಲೂ ಖಾಸಗಿ ಶಾಲೆಗಳಿಗೆ ಅನುದಾನ ಮೀಸಲಿಡುವ ಪ್ರಸ್ತಾಪ ಮಾಡಿಲ್ಲ. ಇರುವ ಶಾಲೆಗಳನ್ನು ಕೆಪಿಎಸ್ ಶಾಲೆಗಳಿಗೆ ವಿಲೀನ ಮಾಡುತ್ತಿದೆ. ಸಿಎಂ ಸಿದ್ದರಾಮಯ್ಯ, ಶಿಕ್ಷಣ ಸಚಿವ ಮಧು ಬಂಗಾರಪ್ಪ ಖಾಸಗಿ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಬೇಕು. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬೇಕು.

■ **ಡಿ.ಎಸ್ ಮಾಳಗಿ, ಅಧ್ಯಕ್ಷರು, ಡಾ.ಬಿ.ಆರ್ ಅಂಬೇಡ್ಕರ ಶಿಕ್ಷಣ ಸಂಸ್ಥೆ**

ಸಾಮೂಹಿಕ ವಿವಾಹದಿಂದ ಸರಳತೆ, ಸಮಾನತೆಯ ಸಂದೇಶ

ಹಾನಗಲ್ಲ: ಸಾಮೂಹಿಕ ವಿವಾಹವು ಸಮಾಜದಲ್ಲಿ ಸರಳತೆ ಮತ್ತು ಸಮಾನತೆ ಸಾರುವ ಮಹತ್ವದ ಸಂಪ್ರದಾಯವಾಗಿದೆ. ಸಾಮೂಹಿಕ ವಿವಾಹ ಹೆಚ್ಚೆಚ್ಚು ನಡೆಯುವುದರಿಂದ ಐಕ್ಯತೆಯ ಸಂದೇಶ ಸಿಗಲಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ತಾಲೂಕಿನ ಕಲಕೇರಿ ಗ್ರಾಮದಲ್ಲಿ ಬಸವಣ್ಣ ದೇವರ ರಥೋತ್ಸವ ಹಾಗೂ ವೀರಭದ್ರೇಶ್ವರ ಗುಗ್ಗಳ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮಾತನಾಡಿ, ಹೆತ್ತವರು, ಪೋಷಕರು ಸಾಲ, ಸೋಲ ಮಾಡಿ ಅದ್ದೂರಿಯಾಗಿ ಮಕ್ಕಳ ವಿವಾಹ ನೆರವೇರಿಸಿ ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಅನಗತ್ಯವಾಗಿ ಹಣ ವ್ಯಯ ಮಾಡಿ ಪ್ರತಿಷ್ಠೆಗಾಗಿ ಮದುವೆ ಮಾಡುತ್ತಿರುವುದು ಹೆಚ್ಚು ಕಾಣಸಿಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ನವ ದಂಪತಿಗಳು ಪರಸ್ಪರ ಗೌರವ, ವಿಶ್ವಾಸ ಮತ್ತು ಪ್ರೀತಿಯಿಂದ ಬದುಕು ಕಟ್ಟಿಕೊಳ್ಳಬೇಕಿದೆ. ಕುಟುಂಬಗಳಲ್ಲಿ ಒಗ್ಗಟ್ಟು, ಸಂಸ್ಕಾರ ಕಾಪಾಡಿಕೊಂಡು ಉತ್ತಮ ಸಮಾಜಕ್ಕೆ ಕೊಡುಗೆ ನೀಡುವಂತೆ ಸಲಹೆ ನೀಡಿದರು.



ಈ ವೇಳೆ 6 ಜೋಡಿ ನವವಧುವರರು ಗೃಹಸ್ಥಾಶ್ರಮಕ್ಕೆ ಕಾಲಿಟ್ಟರು. ಜಿಪಂ ಮಾಜಿ ಸದಸ್ಯರಾದ ಮಹದೇವಪ್ಪ ಬಾಗಸರ, ಟಾಕನಗೌಡ ಪಾಟೀಲ, ತಾಪಂ ಮಾಜಿ ಸದಸ್ಯ ಅಜ್ಜಪ್ಪ ಹಿರಳ್ಳಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜು ಗೊರಣ್ಣನವರ, ಮುಖಂಡರಾದ ಶಿವನಾಗಪ್ಪ ಬಿಷ್ಟಣ್ಣನವರ, ಬಸವಂತಪ್ಪ ಶೇಷಗಿರಿ, ಪ್ರಕಾಶ ಬಣಕಾರ, ಸುರೇಶ ಕೊಂಡೋಜಿ, ಭರಮಣ್ಣ ಶಿವೂರ, ಬಸವರಾಜ ಗೌರಕ್ಕನವರ, ನಾಗಪ್ಪ ಮಳ್ಳಿಹಳ್ಳಿ, ವೀರಪ್ಪ ಮಳ್ಳಿಹಳ್ಳಿ, ಸುರೇಶ ಬಿಷ್ಟಣ್ಣನವರ, ಮಹಲಿಂಗಯ್ಯ ಹಿರೇಮಠ, ಶಿವಾನಂದಪ್ಪ ಬಣಕಾರ, ಮಲ್ಲಿಕಾರ್ಜುನ ಕಳ್ಳಿ, ಬಸನಗೌಡ ಗೋರೇಗೌಡ್ರ, ಶಾಂತಪ್ಪ ಕೊಪ್ಪದ, ಹೇಮಣ್ಣ ಅಡಿಗಣ್ಣವರ, ಮೂಕಪ್ಪ ಕೊಪ್ಪದ, ಮಾರ್ತಾಂಡಪ್ಪ ಗೋರೇಗೌಡ್ರ, ಮಾರ್ತಾಂಡ ಗೌಡರ ಸೇರಿದಂತೆ ಹಲವರು ಇದ್ದರು.

ಕಿರುಸುದ್ದಿ

ರಾಜ್ಯಕ್ಕೆ 6ನೇ ಸ್ಥಾನ



ಬೆಳಗಾವಿ : ಮಂಡ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆಯ ವಿದ್ಯಾರ್ಥಿನಿ ಡಾ. ವಿಶಾಖ ಹೆಗಡೆ ಅವರು ವೈದ್ಯಕೀಯ ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ 6ನೇ ರ್‍ಯಾಂಕ್ ಪಡೆದು ರಾಜ್ಯ ಮಟ್ಟದಲ್ಲಿ ಗಮನಾರ್ಹ ಸಾಧನೆ ಮಾಡಿದ್ದಾರೆ. ರಾಜೀವ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯವು ಸೆಪ್ಟೆಂಬರ್ 2025ರಲ್ಲಿ ನಡೆಸಿದ ವೈದ್ಯಕೀಯ ಸ್ನಾತಕೋತ್ತರ ಪದವಿ (ಚರ್ಮ, ಲೈಂಗಿಕ ಮತ್ತು ಕುಷ್ಠರೋಗ ವಿಭಾಗ) ಪರೀಕ್ಷೆಯಲ್ಲಿ ಡಾ. ವಿಶಾಖ ಹೆಗಡೆ ಅವರು ವಿಶ್ವವಿದ್ಯಾಲಯ ಮಟ್ಟದಲ್ಲಿ 6ನೇ ಸ್ಥಾನ ಪಡೆದು ಕೀರ್ತಿ ಗಳಿಸಿದ್ದಾರೆ. ಇದಲ್ಲದೆ ಮಂಡ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಎಲ್ಲಾ ಸ್ನಾತಕೋತ್ತರ ವಿಭಾಗಗಳಲ್ಲಿ ಅಗ್ರಸ್ಥಾನ ಪಡೆದು ಮೊದಲ ಸ್ಥಾನ ಗಳಿಸಿದ್ದಾರೆ. ಡಾ. ವಿಶಾಖ ಅವರು ಈ ಹಿಂದೆ ಬೆಳಗಾವಿಯ ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ವೈದ್ಯಕೀಯ ಪದವಿ (ಎಂಬಿಬಿಎಸ್) ಪೂರ್ಣಗೊಳಿಸಿದ್ದರು. ಪ್ರಸ್ತುತ ಡಾ. ವಿಶಾಖ ಹೆಗಡೆ ಅವರು ಬೆಳಗಾವಿಯ ಜವಾಹರಲಾಲ್ ನೆಹರು ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಕೆ.ಎಲ್.ಇ. ಸಂಸ್ಥೆಯ ಡಾ. ಪ್ರಭಾಕರ ಕೋರೆ ಆಸ್ಪತ್ರೆ ಮತ್ತು ವೈದ್ಯಕೀಯ ಸಂಶೋಧನಾ ಕೇಂದ್ರದಲ್ಲಿ ಹಿರಿಯ ನಿವಾಸಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಡಾ. ವಿಶಾಖ ಅವರು ಬೆಳಗಾವಿಯಲ್ಲಿ ನೆಲೆಸಿರುವ ಡಾ. ಜಿ.ಎಸ್. ಮಂಜುನಾಥ್ ಹಾಗೂ ನಿರುಪಮ ಮಂಜುನಾಥ್ ಅವರ ಪುತ್ರಿ.

ಕಳಪೆ ಕಾಮಗಾರಿ ಕೈಗೊಂಡವರ ವಿರುದ್ಧ ಕ್ರಮಕ್ಕೆ ಒತ್ತಾಯ



ರಾಯಬಾಗ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆಯಿಂದ ರಾಯಬಾಗ ಮತಕ್ಷೇತ್ರದಲ್ಲಿ ಜಲ ಜೀವನ ಮಿಷನ್ ಯೋಜನೆಯಡಿ ನಿರ್ಮಿಸಿರುವ ಬಹುತೇಕ ಎಲ್ಲ ಕಾಮಗಾರಿಗಳು ಕಳಪೆ ಗುಣಮಟ್ಟದ್ದಾಗಿದ್ದು, ಕಳಪೆ ಕಾಮಗಾರಿ ಮಾಡಿರುವ ಹಾಗೂ ಇನ್ನು ಕಾಮಗಾರಿ ಪ್ರಾರಂಭಿಸದೇ ಇರುವ ಗುತ್ತಿಗೆದಾರರ ಮತ್ತು ಅಧಿಕಾರಿಗಳ ವಿರುದ್ಧ ಇಲಾಖೆ ಸಚಿವರು ತಕ್ಷಣ ಕಠಿಣ ಕ್ರಮ ಕೈಗೊಳ್ಳುವಂತೆ ರಾಯಬಾಗ ಶಾಸಕ ದುರ್ಯೋಧನ ಐಹೊಳೆಯವರು ಸದನದಲ್ಲಿ ಒತ್ತಾಯಿಸಿದರು. ರಾಯಬಾಗ ಮತಕ್ಷೇತ್ರದಲ್ಲಿ ಕಾಮಗಾರಿ ಮುಗಿದು 3 ವರ್ಷ ಕಳೆದರೂ ಪ್ರತಿ ಮನೆಗೆ ನೀರು ಪೂರೈಸಲು ಸಾಧ್ಯವಾಗಿಲ್ಲ, ಪ್ರತಿ ಗ್ರಾಮಗಳಲ್ಲಿ ಮನೆ ಮನೆಗಳಿಗೆ ಜೋಡಿಸಿರುವ ನಳ, ಪೈಪುಗಳು ಕಳಪೆ ಕಾಮಗಾರಿಯಿಂದ ಕಿತ್ತು ಹೋಗಿದ್ದು, ಈಗ ಬೇಸಿಗೆ ಪ್ರಾರಂಭವಾಗಿರುವುದರಿಂದ ಜನರು ಕುಡಿಯುವ ನೀರಿಗಾಗಿ ಪರದಾಡುವ ಪರಿಸ್ಥಿತಿ ತಲೆದೂರಿದೆ ಎಂದರು. ಶಾಸಕರ ಪ್ರಶ್ನೆಗೆ ಉತ್ತರಿಸಿದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ ಸಚಿವ ಪ್ರಿಯಾಂಕ ಖರ್ಗೆ ಅವರು, ಜೆ.ಜೆ.ಎಮ್ ಯೋಜನೆಯಡಿ ಕೈಗೊಂಡಿರುವ ಕಳಪೆ ಕಾಮಗಾರಿ ಲೋಪಗಳ ಬಗ್ಗೆ ತನಿಖೆ ನಡೆಸಲು ನಾಳೆಯೆ ತಂಡವನ್ನು ಕಳುಹಿಸಿ ಕೊಡುವುದಾಗಿ ಹೇಳಿದರು. ಕುಡಿಯುವ ನೀರಿನ ಅಭಾವಕ್ಕೆ ಮುಂದಿನ ವಾರ ಟಾಸ್ಕ್ ಫೋರ್ಸ್ ರಚನೆ ಮಾಡುವುದಾಗಿ ತಿಳಿಸಿದ ಸಚಿವರು, ಕಳೆದ ವರ್ಷ ಟಾಸ್ಕ್ ಫೋರ್ಸ್ ಗಾಗಿ ನೀಡಬೇಕಿದ್ದ ಬಾಕಿ ಹಣವನ್ನು ಪರಿಶೀಲನೆ ನಡೆಸಿ ಹಣ ನೀಡಲು ಕ್ರಮ ಕೈಗೊಳ್ಳುವುದಾಗಿ ಸಚಿವರು ಹೇಳಿದರು.

ನಿಷೇಧಾಜ್ಞೆ ಜಾರಿ

ಬೆಳಗಾವಿ: ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಬೆಂಗಳೂರು ಇವರ ವತಿಯಿಂದ 2026 ರ ಮಾರ್ಚ ಮತ್ತು ಎಪ್ರಿಲ್ ತಿಂಗಳಲ್ಲಿ ಎಸೆಸೆಲ್ಸಿ ವಾರ್ಷಿಕ ಪರೀಕ್ಷೆಗಳು ಜರುಗಲಿದ್ದು, ಪರೀಕ್ಷಾ ಕೇಂದ್ರದ ಸುತ್ತಮುತ್ತ ನಿಷೇದಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ಮೊಹಮ್ಮದ ರೋಷನ್ ಅವರು ಆದೇಶ ಹೊರಡಿಸಿದ್ದಾರೆ.ಪರೀಕ್ಷೆ-1 ಗಳು ಮಾ.18 ರಿಂದ ಏಪ್ರಿಲ್ ದಿ.2 ರವರೆಗೆ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ 131 ಪರೀಕ್ಷಾ ಕೇಂದ್ರಗಳಲ್ಲಿ ಹಾಗೂ ಬೆಳಗಾವಿ ಶೈಕ್ಷಣಿಕ ಜಿಲ್ಲೆಯ 104 ಪರೀಕ್ಷಾ ಕೇಂದ್ರಗಳಲಿ ನಿಷೇಧಾಜ್ಞೆ ಜಾರಿಗೊಳಿಸಿದ್ದಾರೆ.

ನಿಧನ ಸುದ್ದಿ

ರೂಪಾ ಪಾಟೀಲ



ಮುರಗೋಡ: ಕಸಬಾ ಓಣಿಯ ನಿವಾಸಿ ರೂಪಾ ಮಲ್ಲಿಕಾರ್ಜುನ (ಗೌಡಪ್ಪ) ಪಾಟೀಲ (47) ಬುಧವಾರ ನಿಧನರಾಗಿದ್ದಾರೆ. ಮೃತರು ಪತಿ, ಮೂರು ಜನ ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಕಬ್ಬೂರು: ಸಮೀಪದ ಕರಗಾಂವ ಗ್ರಾಮದಲ್ಲಿ ಜೈ ಕಿಸಾನ್ ಜಂಕ್ಷನ್ ಕಬ್ಬೂರ ಸಹಯೋಗದಲ್ಲಿ ಉಚಿತ ಆರೋಗ್ಯ ತಪಾಸನಾ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಕರಗಾಂವ ಗ್ರಾಮ ಪಂಚಾಯತಿ ಅಧ್ಯಕ್ಷರಾದ ರಾಜೀವ್ ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು. ಪ್ರಾರ್ಥಮಿಕ ಆರೋಗ್ಯ ಕೇಂದ್ರದ ವೈದ್ಯಾಕಾರಿ ಡಾ. ಸುಕುಮಾರ್ ಭಾಗಾಯಿ ಮತ್ತು ಮ್ಯಾನೇಜರ್ ಸುರೇಶ್ ಲಿಗಾಡೆ , ಸ್ಟೋರ್ ಮ್ಯಾನೇಜರ್ ವಿಷ್ಣು ಕಡಲಗಿ, ಪ್ರವೀಣ ಈಟಿ, ಕೆಂಪಯ್ಯ ಮೂಡಸಿ ಮತ್ತು ಗ್ರಾಮದ ಜನರು ಭಾಗವಹಿಸಿದ್ದರು.

ಮನರಂಜಿಸಿದ ಕುಸ್ತಿಪಟುಗಳು

ಸುಗಂಧ ದೇವಿ ಜಾತ್ರೆ

ರಾಯಬಾಗ: ಗ್ರಾಮೀಣ ಭಾಗದಲ್ಲಿ ಜಾತ್ರೆ, ಜಾತ್ರೆ, ಹಳ್ಳಿ ಸಂಸ್ಕೃತಿಗಳು ಎದ್ದು ಕಾಣುತ್ತಿವೆ ಇದರ ನಿಮಿತ್ತ ಗ್ರಾಮೀಣ ಕ್ರೀಡೆಗಳಿಗೆ ಪ್ರೋತ್ಸಾಹ ಕೊಡಲು ನಮ್ಮ ಯುವಕರು ಕುಸ್ತಿ ಪಂದ್ಯಾವಳಿ ಇಟ್ಟಿರೋದು ಇದೊಂದು ಹೆಮ್ಮೆಯ ವಿಷಯ ಎಂದು ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಾಹುಲ ಜಾರಕಿಹೊಳಿ ಹೇಳಿದರು. ಬಾವನಸೌಂದತ್ತಿ ಗ್ರಾಮದ ಸುಗಂಧಾದೇವಿ ಜಾತ್ರೆಯ ನಿಮಿತ್ತ ಮಹಾವೀರ ಮೋಹಿತೆ ಅಭಿಮಾನಿ ಬಳಗದ ವತಿಯಿಂದ ಕುಸ್ತಿ ಪಂದ್ಯಾವಳಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ರಾಜ್ಯ ಪ್ರಧಾನ ಕಾರ್ಯದರ್ಶಿ ಮಹಾವೀರ ಮೊಹಿತೆ ಮಾತನಾಡಿದರು. ಮಹಾರಾಷ್ಟ್ರ ಕೇಸರಿ ಸಿಕಂದ ಶೇಖರ್ ಅವರು ಹರಿಯಾಣದ ಅಮಿತ್ ಕುಮಾರ್ ಅವರನ್ನು ಚಿತ್ತಟ್ ಮಾಡಿ 5 ಲಕ್ಷ ರೂಪಾಯಿ ಪ್ರಥಮ ಬಹುಮಾನ ಪಡೆದುಕೊಂಡರು. ದ್ವಿತಿಯ ಬಹುಮಾನ ಮಾವುಲಿ ಕೊಕಟೆ ಮಹಾರಾಷ್ಟ್ರ ತೃತೀಯ ಬಹುಮಾನ 2,50,000 ನೇಪಾಳದ ದೇವಾ ಥಾಪಾ ಅವರು ಪಡೆದುಕೊಂಡರು. ಈ ಸಂದರ್ಭದಲ್ಲಿ ಶಿವನಗೌಡ ಪಾಟೀಲ, ಅರ್ಜುನ ನಾಯಿಕವಾಡಿ, ವಸಂತ ಕರಿಗಾರ, ದಿಲೀಪ ಜಮಾದಾರ, ಜೈಕುಮಾರ ಖಿಮಲಾಪುರೆ, ಅರ್ಜುನ ಬಂಡಗರ, ಜ್ಯೋತಿ ಕೆಂಪಟ್ಟಿ, ಅಣ್ಣಾಪ್ಪಾ ಸಮಾಜೆ, ಗಣೇಶ ಮೋಹಿತೆ, ಲಕ್ಷ್ಮಣ ಮಾಂಗ ,ಅಣ್ಣಪ್ಪ ಭೋವಿ, ನಾಮದೇವ ಕಾಂಬಳೆ, ಅರ್ಜುನ ಭುವಿ ಸೇರಿದಂತೆ ಅನೇಕ ಕುಸ್ತಿಪಟುಗಳು ಭಾಗಿಯಾಗಿದ್ದರು. ಪೈಲ್ವಾನ್ ಸಂಬಾಜಿ ಸುಡಿಕೆ ಅವರು ಪಂದ್ಯಾವಳಿಗಳನ್ನು ನಡೆಸಿಕೊಟ್ಟರು.



ಬಾವನಸೌಂದತ್ತಿ ಗ್ರಾಮದ ಸುಗಂಧಾದೇವಿ ಜಾತ್ರೆಯ ನಿಮಿತ್ತ ಮಹಾವೀರ ಮೋಹಿತೆ ಅಭಿಮಾನಿ ಬಳಗದ ವತಿಯಿಂದ ಕುಸ್ತಿ ಪಂದ್ಯಾವಳಿ ನಡೆದವು.

ಬೆಳಗಾವಿ ಜಿಲ್ಲೆಯ 1158 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಗಣಕೀಕರಣ



ಮೂಡಲಗಿ : ಬೆಳಗಾವಿ ಜಿಲ್ಲೆಯ ರೈತರಿಗೆ ಹೆಚ್ಚಿನ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಜಿಲ್ಲೆಯ 1158 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಈಗಾಗಲೇ ಹಾರ್ಡ್‌ವೇರ್ ವಿತರಿಸಲಾಗಿದ್ದು, ಈ ಪೈಕಿ 1004 ಸಂಘಗಳಿಗೆ ಎಂಟರ್‌ಪ್ರೈಸ್ ರಿಸೋರ್ಸ್ ಪ್ಲಾನಿಂಗ್ ತಂತ್ರಾಂಶದ ಸೌಲಭ್ಯ ಒದಗಿಸಲಾಗಿದೆ ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಅವರು ಲಿಖಿತ ಉತ್ತರದಲ್ಲಿ ಮಾಹಿತಿ ನೀಡಿದ್ದಾರೆಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ತಿಳಿಸಿದ್ದಾರೆ.

ನವದೆಹಲಿಯಲ್ಲಿ ನಡೆಯುತ್ತಿರುವ ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ಬೆಳಗಾವಿ ಜಿಲ್ಲೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಆಧುನೀಕರಣ ಮತ್ತು ಡಿಜಿಟಲೀಕರಣಕ್ಕೆ ಕೇಂದ್ರ ಸರ್ಕಾರ ಕೈಗೊಂಡ ಕ್ರಮಗಳ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು ಜಿಲ್ಲೆಯ 743 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಈಗ 'ಸಾಮಾನ್ಯ ಸೇವಾ ಕೇಂದ್ರಗಳಾಗಿ' ಬದಲಾಗಿದ್ದು, ರೈತರಿಗೆ ಬ್ಯಾಂಕಿಂಗ್ ಜೊತೆಗೆ ವಿವಿಧ ಸರ್ಕಾರಿ ಸೇವೆಗಳನ್ನು ಒದಗಿಸುತ್ತಿವೆ. ಸುಗಮ ಹಣ ವರ್ಗಾವಣೆಗಾಗಿ ಬೆಳಗಾವಿ ಡಿ.ಸಿ.ಸಿ ಬ್ಯಾಂಕ್ ಮೂಲಕ ಮೊದಲ ಹಂತದಲ್ಲಿ 100 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಮೈಕ್ರೋ-ಎಟಿಎಂ ಸೌಲಭ್ಯ ನೀಡಲಾಗಿದೆ.

ಜಿಲ್ಲೆಯ ಎಲ್ಲಾ 1158 ಪಿಕೆಪಿಎಸ್ ಗಳ ಸಿಬ್ಬಂದಿಗೆ ಡಿಜಿಟಲ್ ಅಕೌಂಟಿಂಗ್ ಮತ್ತು ಹಣಕಾಸು ಕಾರ್ಯಾಚರಣೆಗಳ ಬಗ್ಗೆ ಈಗಾಗಲೇ ತರಬೇತಿ ನೀಡಿ ಸಜ್ಜುಗೊಳಿಸಲಾಗಿದೆ. ಜಿಲ್ಲೆಯ ಸಹಕಾರಿ ವಲಯವನ್ನು ಡಿಜಿಟಲೀಕರಣಗೊಳಿಸುವ ಮೂಲಕ ರೈತರಿಗೆ ಬ್ಯಾಂಕಿಂಗ್ ಮತ್ತು ಕೃಷಿ ಸೇವೆಗಳು ಸ್ಥಳೀಯವಾಗಿಯೇ ಸುಲಭವಾಗಿ ದೊರೆಯುವಂತಾಗಲು ಕ್ರಮ ಕೈಗೊಳ್ಳಲಾಗಿದೆ ಎಂದು ಸಚಿವರು ಉತ್ತರಿಸಿದ್ದಾರೆಂದು ಸಂಸದ ಈರಣ್ಣ ಕಡಾಡಿ ತಿಳಿಸಿದ್ದಾರೆ.

ಕಿಸಾನ್ ಸಮೃದ್ಧಿ ಕೇಂದ್ರ

ರೈತರಿಗೆ ಅಗತ್ಯವಿರುವ ರಸಗೊಬ್ಬರ ಮತ್ತು ಕೃಷಿ ಪರಿಕರಗಳನ್ನು ಒಂದೇ ಸೂರಿನಡಿ ಒದಗಿಸಲು ಜಿಲ್ಲೆಯ 200 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು 'ಕಿಸಾನ್ ಸಮೃದ್ಧಿ ಕೇಂದ್ರ'ಗಳಾಗಿ ಕಾರ್ಯನಿರ್ವಹಿಸುತ್ತಿವೆ. ಬೆಳಗಾವಿ ಜಿಲ್ಲೆಯ 165 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಕೃಷಿ ಮೂಲಸೌಕರ್ಯ ನಿಧಿ ಯೋಜನೆಯಡಿ, ಗೋದಾಮು ಅಥವಾ ಶೇಖರಣಾ ಸೌಲಭ್ಯ ನಿರ್ಮಿಸಲು ಬೆಳಗಾವಿ ಡಿಸಿಸಿ ಬ್ಯಾಂಕ್ ಮೂಲಕ ಸಾಲ ಒದಗಿಸಲಾಗಿದೆ.

ಆರೋಗ್ಯಕರ ಬದುಕಿಗೆ ಸಾವಯುವ ಕೃಷಿಯೇ ಮದ್ದು

ಮೂಡಲಗಿ: ಇತ್ತೀಚಿನ ವರ್ಷಗಳಲ್ಲಿ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಅತಿಯಾದ ಬಳಕೆಯಿಂದ ಮಣ್ಣಿನ ಫಲವತ್ತತೆ ಕುಸಿಯುತ್ತಿದ್ದು, ಮಾನವನ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ಈ ಹಿನ್ನೆಲೆಯಲ್ಲಿ, ಪ್ರಕೃತಿಸ್ನೇಹಿ ಸಾವಯವ ಕೃಷಿಪದ್ಧತಿಯು ಇಂದು ಆಶಾದಾಯಕ ಬೆಳವಣಿಗೆಯಾಗಿ ಹೊರಹೊಮ್ಮುತ್ತಿದ್ ಎಂದು ಚಿಕ್ಕೋಡಿಯ ಕೃಷಿ ಇಲಾಖೆಯ ಉಪನಿರ್ದೇಶಕರಾದ ಸಹದೇವ ಯರಗೊಪ್ಪ ಹೇಳಿದರು.

ಸಮೀಪದ ದತ್ತುಗ್ರಾಮ ಬಳೋಬಾಳದಲ್ಲಿ, ಕಲ್ಲೋಳಿ ಪಟ್ಟಣದ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕ ಹಮ್ಮಿಕೊಂಡಿರುವ 2025-26ನೇ ಸಾಲಿನ ವಾರ್ಷಿಕ ವಿಶೇಷ ಶಿಬಿರದ ಅಂಗವಾಗಿ ಬುಧವಾರ ಆಯೋಜಿಸಲಾಗಿದ್ದ 'ಸಾವಯವ ಕೃಷಿಯ ಲಾಭಗಳು' ಎಂಬ ವಿಷಯದ ಉಪನ್ಯಾಸ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಹಸಿರು ಎಲೆ ಗೊಬ್ಬರ ಮಣ್ಣಿಗೆ ನೈಸರ್ಗಿಕ ಸಾರಜನಕವನ್ನು ಒದಗಿಸುತ್ತದೆ. ಕಾಂಪೋಸ್ಟ್ ಮತ್ತು ಎರೆಹುಳು ಗೊಬ್ಬರ ಕೃಷಿ ತ್ಯಾಜ್ಯಗಳನ್ನು ಮರುಬಳಕೆ ಮಾಡಲು ಸಹಕಾರಿಯಾಗುತ್ತದೆ ಎಂದು ನುಡಿದರು. ಅಧ್ಯಕ್ಷತೆ ವಹಿಸಿದ್ದ ಲಗಮಣ್ಣ ಕಳಸನ್ನವರ ಮಾತನಾಡಿದರು.

ಕಾರ್ಯಕ್ರಮದಲ್ಲಿ ಗೋಕಾಕದ ಕೃಷಿ ಅಧಿಕಾರಿಗಳಾದ ಎಸ್.ಬಿ. ಕರಗಣ್ಣಿ, ಎಂ.ಆಯ್. ಕರಗಣ್ಣಿ, ಬಳೋಬಾಳ ಕೃಷಿ ಸಖಿ ಮಾಲಾಶ್ರೀ ಕುರಣಗಿ, ಎನ್.ಎಸ್.ಎಸ್. ಕಾರ್ಯಕ್ರಮ ಅಧಿಕಾರಿ ಶಂಕರ ನಿಂಗನೂರ, ಬಿ.ಸಿ. ಮಾಳಿ, ಎಂ.ಆರ್. ಕರಗಣ್ಣಿ, ಶಿಬಿರಾರ್ಥಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಐಶ್ವರ್ಯಾ ಚಿಪ್ಪಲಕಟ್ಟಿ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ಸಾಕ್ಷೀ ಮಕ್ಕಳಗೇರಿ ಹಾಗೂ ಸಂಗಡಿಗರು ಎನ್‌ಎಸ್‌ಎಸ್ ಗೀತೆ ಹಾಡಿದರು. ಜ್ಯೋತಿ ಕುಂಬಾರ ಸ್ವಾಗತಿಸಿದರು. ಗೌರಮ್ಮ ಬನ್ನಿಶೆಟ್ಟಿ ಹಾಗೂ ಸುಶ್ಮಿತಾ ವೆಂಕಟಾಪೂರ, ಸಾವಿತ್ರಿ ಕಮತಿ ವಂದಿಸಿದರು.



ಮಹಿಳಾ ದಿನಾಚರಣೆ

ಬೆಳಗಾವಿ: ಇಲ್ಲಿನ ಕುಡುಚಿಯ ಕೆಎಸ್ ಆರ್ ಪಿಸಿಪಿ ಆವರಣದಲ್ಲಿರುವ ದುರ್ಗಾದೇವಿ ದೇವಿಯ ಸಮ್ಮುಖದಲ್ಲಿ ಸರ್ವ ಲೋಕಸೇವಾ ಫೌಂಡೇಶನ್ ಹಾಗೂ ಪೊಲೀಸ್ ಸಿಬ್ಬಂದಿಗಳ ನೇತೃತ್ವದಲ್ಲಿ ಚನ್ನಮ್ಮ ಬಸಯ್ಯ ಹಿರೇಮಠ ವೃದ್ಧಾಶ್ರಮದಲ್ಲಿ, ಮಹಿಳಾ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ದುರ್ಗಾದೇವಿಯ ಅಮ್ಮನವರಿಗೆ ವೀರೇಶ್ ಬಸಯ್ಯ ಹಿರೇಮಠ ಭಕ್ತಿಯಿಂದ ಕಾಣಿಕೆ ಅರ್ಪಿಸಿದರು. ದೇವಿಗೆ ಅರ್ಪಿಸಿದ ಸೀರೆಗಳನ್ನು ವೃದ್ಧಾಶ್ರಮಕ್ಕೆ ನೀಡಿ ತಾಯಂದಿರು, ಅಕ್ಕ, ತಂಗಿಯಂದಿರಿಗೆ 250 ಸೀರೆಗಳನ್ನು ಸಮರ್ಪಿಸಿ ಮಾನವೀಯತೆ ಮೆರೆದರು. ಈ ಸಂದರ್ಭದಲ್ಲಿ ವೀರೇಶ್ ಬಸಯ್ಯ ಹಿರೇಮಠ, ಮಲ್ಲಪ್ಪ ಗುರಾಯಿ, ಸುಭಾಷ ಮರಕುಟೆ, ವಿಶ್ವನಾಥ ಕುರಪಿ, ಬಸವರಾಜ ಮಡಿವಾಳ, ಎಂ.ಎಸ್.ಚೌಗುಲಾ ಹಾಗೂ ಗೌರೀಶ್ ಹಿರೇಮಠ ಸೇರಿದಂತೆ ಇತರರು ಇದ್ದರು.



ಬೇಡಿಕೆ ಈಡೇರಿಕೆಗೆ ಆಗ್ರಹ



ಬೆಳಗಾವಿ : ಕರ್ನಾಟಕ ಅನುದಾನ ರಹಿತ ಶಾಲಾ ಕಾಲೇಜುಗಳಿಲ್ಲಿ ಕಳೆದ 30 ವರ್ಷಗಳಿಗೆ ವಿದ್ಯಾರ್ಥಿಗಳಿಗೆ ಪಾಠ ಮಾಡಿಕೊಂಡು ಬರುತ್ತಿದ್ದಾರೆ. ಆದರೆ ರಾಜ್ಯದಲ್ಲಿ ಯಾವ ಸರ್ಕಾರಗಳು ಅಧಿಕಾರಕ್ಕೆ ಬಂದರು ಶಾಶ್ವತ ಅನುದಾನ ರಹಿತ ಶಾಲಾ ಕಾಲೇಜುಗಳ ನೌಕರರ ವಿವಿಧ ಬೇಡಿಕೆಗಳನ್ನು ಈಡೇರಿಸಿಲ್ಲ. 1995 ರಿಂದ ಪ್ರಾರಂಭವಾದ ಶಾಲಾ ಕಾಲೇಜುಗಳಿಗೆ ಅನುದಾನ ಒದಗಿಸುವುದಾಗಿ ಬೆಳಗಾವಿ ಅಧಿವೇಶನದ ವೇಳೆ ಭರವಸೆ ನೀಡಿದ್ದರು ಅದು ಬರೀ ಭರವಸೆಯಾಗಿಯೇ ಉಳಿದೆ ಎಂದು ಪ್ರತಿಭಟನೆಯಲ್ಲಿ ಆಕ್ರೋಶವನ್ನು ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರವು ರಾಜ್ಯದಲ್ಲಿರುವ ಎಲ್ಲ ಅನುದಾನ ರಹಿತ ಶಾಲಾ ಕಾಲೇಜುಗಳಿಗೆ ಅನುದಾನ ಬಿಡುಗಡೆ ಮಾಡಬೇಕೆಂದು ಆಗ್ರಹಿಸಿದರು.

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ದೀಪದಾನ

ಯರಗಟ್ಟಿ: ಸಮೀಪದ ಮುಗಳಿಹಾಳ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ 2025-26ನೇ ಸಾಲಿನ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳಿಗೆ ದೀಪದಾನ ಹಾಗೂ ಬೀಳ್ಕೊಡುವ ಸಮಾರಂಭವನ್ನು ಅತ್ಯಂತ ಭಕ್ತಿಭಾವದಿಂದ ಹಾಗೂ ಅರ್ಥಪೂರ್ಣವಾಗಿ ಆಚರಿಸಿದರು. ವಿದ್ಯಾರ್ಥಿಗಳ ಮುಂದಿನ ಜೀವನ ಪಥ ಬೆಳಗಲಿ ಎಂಬ ಆಶಯದಿಂದ ಶಿಕ್ಷಕರು ಹಾಗೂ ಅತಿಥಿಗಳು ದೀಪದಾನ ಮಾಡುವ ಮೂಲಕ ಅವರಿಗೆ ಶುಭ ಹಾರೈಸಿದರು.

ಶಾಲೆಯ ಮುಖ್ಯ ಶಿಕ್ಷಕರಾದ ಐ. ಜಿ. ಸುಬ್ಬಾಪುರಮಠ ಮಾತನಾಡಿದರು. ಮುಖ್ಯ ಅತಿಥಿಗಳಾದ ಎಸ್.ಆರ್. ಮಾಳಿ, ಡಾ. ಬಿ.ಎಂ. ಬರಗಾಲಿರವರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ನಿವೃತ್ತ ಮುಖ್ಯೋಪಾಧ್ಯಾಯರಾದ ಉದ್ದಂಡ ಗಾಂವಕರ ಮಾತನಾಡಿದರು.

ಕಾರ್ಯಕ್ರಮದಲ್ಲಿ ಶಾಲೆಯ ವಿದ್ಯಾರ್ಥಿಗಳು ತಮ್ಮ ಶಾಲಾ ದಿನಗಳ ನೆನಪುಗಳನ್ನು ಹಂಚಿಕೊಂಡು ಗುರುಗಳಿಗೆ ಕೃತಜ್ಞತೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಶಾಲೆಗೆ ಭೂ ಧಾನಿಗಳಾದ ಗೋಪಾಲಗೌಡ ಗಂಗರೆಡ್ಡಿ, ಗ್ರಾ.ಪಂ. ಸದಸ್ಯರಾದ ಪದ್ಮಾವತಿ ಮುರಗಟ್ಟಿ, ಬಿ ಆರ್ ಸಿ ಗುರುಗಳಾದ ಬಿ



ಎನ್ ಬ್ಯಾಳಿ, ಎಪಿಎಂಸಿ ಸದಸ್ಯರಾದ ಲಕ್ಷ್ಮಣ ದಳವಾಯಿ, ಲಕ್ಷ್ಮಣ ದಳವಾಯಿ, ಮಾರುತಿ ಇಟ್ನಾಳ, ಪತ್ರೆಪ್ಪ ಪಟ್ಟಣಶೆಟ್ಟಿ, ಬಸವರಾಜ ಗಣಿ, ಬಸವರಾಜ ದಳವಾಯಿ, ಬಸವರಾಜ ಇಟಗೌಡ್ರ, ಪರಶು ಕತ್ತಿ, ವಿಠ್ಠಲ ಮಾಲದಿನ್ನಿ, ಹಾಗೂ ಹಿರಿಯರು, ಯುವಕರು, ಶಾಲಾ ಸಹ ಶಿಕ್ಷರುಗಳು ಮತ್ತಿತರರು ಉಪಸ್ಥಿತರಿದ್ದರು.



ಯಮಕನಮರಡಿ: ಸ್ಥಳೀಯ ಹರಿ ಮಂದಿರದ ಪೂಜ್ಯರಾದ ಆನಂದ ಮಹಾರಾಜ್ ಗೋಸಾವಿ ಅವರ 65ನೇ ಜನ್ಮದಿನದವನ್ನು ಭಕ್ತಿ ಪೂರ್ವಕವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸ್ಥಳೀಯ ಯುವ ಧುರೀಣರಾದ ರವಿ ಜಿನರಾಳಿ, ದಸ್ತಗೀರ್ ಬಸಾಪೂರಿ, ಸುನಿಲ್ ದೇಸಾಯಿ, ಗೋಪಾಲ್ ಚಿಪಣಿ, ಸಂತೋಷ್ ಬಿದ್ರೆವಾಡಿ, ಅನಿಲ್ ಖವರೆ ಉಪಸ್ಥಿತ ಇದ್ದರು.

ಮಹಿಳೆಯರಿಂದ ಸದೃಢ ಸಮಾಜ ನಿರ್ಮಾಣ

ಕಾಗವಾಡ : ಹೆಣ್ಣುಮಕ್ಕಳಿಗೆ ತಮ್ಮ ಅಧಿಕಾರದ ಅರಿವು ಇದೆ. ಮುಖ್ಯವಾಗಿ ಎಲ್ಲರಿಗೂ ವಿದ್ಯಾಭ್ಯಾಸ ಸಿಗುವ ಹಾಗೆ ನೋಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ. ಮಹಿಳೆಯರು ಸ್ವಶಕ್ತಿಯಿಂದ ಬೆಳೆದಾಗ ಮಾತ್ರ ಸಧೃಡ ಸಮಾಜ ನಿರ್ಮಾಣ ಆಗಲು ಸಾಧ್ಯ ಎಂದು ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯೆ ಸ್ವಾತಿ ಪಾಟೀಲ ಹೇಳಿದರು.

ಅವರು ತಾಲ್ಲೂಕಿನ ಐನಾಪುರ ಪಟ್ಟಣದಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಾ ಮಹಿಳೆಯರ ಸಬಲೀಕರಣ, ಶಿಕ್ಷಣ ಮತ್ತು ಸಮಾಜ ನಿರ್ಮಾಣದಲ್ಲಿ ಮಹಿಳೆಯರ ಮಹತ್ವದ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ನಾಮದೇವ ಮಾಂಗ ವಹಿಸಿ, ಮಾತನಾಡಿದರು.

ಈ ಸಂದರ್ಭದಲ್ಲಿ ಉಪನ್ಯಾಸಕಿ ಡಾ. ಶಾಂತಾ ಬಂಗಾರಿ, ಪ್ರೊ. ಭಾಗ್ಯಶ್ರೀ ಎಂ.ಎಸ್., ಪ್ರೊ. ಶೃತಿ ಎಚ್. ಪ್ರೊ. ಸಾಗರಿಕಾ ಎಂ.ಎನ್. ಹಾಗೂ



ಕಾಲೇಜಿನ ಎಲ್ಲಾ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗದವರು ಇತರರು ಇದ್ದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯರು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿ ಮಹಿಳಾ ದಿನಾಚರಣೆಯ ಮಹತ್ವವನ್ನು ಹಂಚಿಕೊಂಡರು. ಜ್ಯೋತಿ ಸ್ವಾಗತಿಸಿ, ಪಲ್ಲವಿ ವಂದಿಸಿದರು.

ಎಸ್‌ಸಿಪಿ, ಟಿಎಸ್‌ಪಿ ಅನುದಾನ ದುರ್ಬಳಕೆ ಎರಡು ಗ್ರಾಪಂಗಳ ವಿರುದ್ಧ ದೂರು

ಬೈಲಹೊಂಗಲ: ತಾಲೂಕಿನಹೊಳಿನಾಗಲಾಪುರ ಮತ್ತು ಭಾವಿಹಾಳ ಗ್ರಾಮ ಪಂಚಾಯತಿಗಳಿಗೆ 2020-21 ರಿಂದ 2024-25ರವರೆಗಿನ ಅವಧಿಯಲ್ಲಿ ಸರ್ಕಾರದಿಂದ ಮಂಜೂರಾದ ಎಸ್.ಸಿ.ಪಿ, ಟಿ.ಎಸ್.ಪಿ ಅನುದಾನವನ್ನು ದಲಿತರ ಶ್ರೇಯೋಭಿವೃದ್ಧಿಗಾಗಿ ಬಳಸದೇ ಅನ್ಯ ಕಾರ್ಯಗಳಿಗೆ ವಿನಿಯೋಗಿಸಿದ್ದು, ಅನುದಾನ ದುರ್ಬಳಕೆಯ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಅಂಬೇಡ್ಕರ್ ಸೇವಾ ಸಮಿತಿ ಕರ್ನಾಟಕ ಸಂಘಟನೆಯ ಬೆಳಗಾವಿ ಜಿಲ್ಲಾ ಘಟಕದ ಅಧ್ಯಕ್ಷ ಸಂತೋಷ ತಳವಾರ ಬೆಳಗಾವಿಯ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಪೊಲೀಸ್ ಅಧೀಕ್ಷಕರಿಗೆ ಲಿಖಿತ ದೂರು ಸಲ್ಲಿಸಿದ್ದಾರೆ.

ಹೊಳಿನಾಗಲಾಪುರ ಗ್ರಾಪಂ ವ್ಯಾಪ್ತಿಯ ಗುಡದೂರ ಗ್ರಾಮದಲ್ಲಿ 2021-22 ರಿಂದ 2024-25 ಅವಧಿಯಲ್ಲಿ ಎಸ್.ಸಿ.ಪಿ, ಟಿ.ಎಸ್.ಪಿ ಅನುದಾನದಡಿ 10 ಲಕ್ಷಕ್ಕೂ ಹೆಚ್ಚು ಹಣವನ್ನು ವಿನಿಯೋಗಿಸಲಾಗಿದೆ. ಆದರೆ, ಈ ಹಣವನ್ನು ದಲಿತರ ಕೇರಿಗಳ ಅಭಿವೃದ್ಧಿಗಾಗಿ ಖರ್ಚು ಮಾಡದೇ ಅನ್ಯ ಕಾರ್ಯಗಳಿಗೆ ಬಳಸಲಾಗಿದೆ. ಅದೇ ಪ್ರಕಾರ ಭಾವಿಹಾಳ ಗ್ರಾಪಂ ವ್ಯಾಪ್ತಿಯ ಭಾಂವಿಹಾಳ ಗ್ರಾಮದಲ್ಲಿ 2020-21 ರಿಂದ 2024-25 ಅವಧಿಯಲ್ಲಿ ಈ ಅನುದಾನದಡಿ 8 ಲಕ್ಷಕ್ಕೂ ಹೆಚ್ಚು ಹಣವನ್ನು ವಿನಿಯೋಗಿಸಲಾಗಿದೆ. ಆದರೆ, ಈ ಹಣವನ್ನೂ ದಲಿತರಿಗಾಗಿ ಖರ್ಚು ಮಾಡದೇ ಅನ್ಯ ಕಾರ್ಯಗಳಿಗೆ ಬಳಸಲಾಗಿದೆ ಎಂದು ಸಂತೋಷ ಅವರು ನಿರ್ದೇಶನಾಲಯಕ್ಕೆ ನೀಡಿರುವ ದೂರಿನಲ್ಲಿ ಕಾಮಗಾರಿಯ ಮಾಹಿತಿ, ಎಂ.ಬಿ, ಕಾಮಗಾರಿ ಸಂಖ್ಯೆ ಸೇರಿದಂತೆ ಅಗತ್ಯ ಮಾಹಿತಿಯನ್ನು ಉಲ್ಲೇಖಿಸಿದ್ದಾರೆ.

ಎರಡೂ ಗ್ರಾಪಂಗಳ ಅಧ್ಯಕ್ಷರು, ಪಿಡಿಒ, ಸದಸ್ಯರು, ಗುತ್ತಿಗೆದಾರರು, ಇಂಜಿನಿಯರ್ ಸೇರಿದಂತೆ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ದಲಿತರಿಗೆ ಮೀಸಲಿಟ್ಟ ಅನುದಾನವನ್ನು ಸರಕಾರದ ನಿಯಮಗಳನ್ನು ಗಾಳಿಗೆ ತೂರಿದ್ದಾರೆ. ಈ ಅಕ್ರಮದ ಬಗ್ಗೆ ತನಿಖೆ ನಡೆಸಿ ಇವರೆಲ್ಲರ ವಿರುದ್ಧ ಎಸ್.ಸಿ.ಪಿ, ಟಿ.ಎಸ್.ಪಿ ಕಾಯ್ದೆ 2013 ಪ್ರಕರಣ 25 ಮತ್ತು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿ ಪ್ರಕಾರ ಕ್ರಮ ಜರುಗಿಸಬೇಕು ಎಂದು ಸಂತೋಷ ತಳವಾರ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯಕ್ಕೆ ಸಲ್ಲಿಸಿದ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಸಾಧಕ ವಿದ್ಯಾರ್ಥಿಗಳಿಗೆ ಸಿಹಿ ಹಂಚಿಕೆ

ಹಾರೂಗೇರಿ: ಸ್ಥಳೀಯ ಶ್ರೀ ಕರೇಸಿದ್ದೇಶ್ವರ ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಬೆಂಗಳೂರು ನಡೆಸುವ ಕೆಎಸ್‌ಈಎಬಿ ರಾಜ್ಯಮಟ್ಟದ ಎಸೆಸೆಲ್ಸಿ ಪೂರ್ವ ಸಿದ್ಧತಾ ಪರೀಕ್ಷೆಯಲ್ಲಿ ಒಂದು, ಎರಡು ಹಾಗೂ ಮೂರರಲ್ಲಿನ ಫಲಿತಾಂಶ ಹಾಗೂ ಶಾಲಾ ಮಟ್ಟದಲ್ಲಿ ನಡೆಸಿದ ಎರಡು ಸಾಧನಾ ಪರೀಕ್ಷೆಗಳ ಫಲಿತಾಂಶದಲ್ಲಿ ಅತೀ ಹೆಚ್ಚು ಅಂಕ ಪಡೆದ ಟಾಪ್ 10 ವಿದ್ಯಾರ್ಥಿಗಳಿಗೆ ಶಾಲಾ ಕಾರ್ಯಾಲಯದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಭಗವಂತ ಬಂತಿ ಅವರಿಂದ ಸಾಧಕ ವಿದ್ಯಾರ್ಥಿ/ನಿಯರಿಗೆ ಸಿಹಿ ತಿನ್ನಿಸಿ ಮುಂಬರುವ ವಾರ್ಷಿಕ ಪರೀಕ್ಷೆಯಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡಲು ಪ್ರೋತ್ಸಾಹಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ನಿರ್ದೇಶಕರಾದ ಸಿದ್ದಪ್ಪ ಹಾಡಕಾರ ಉಪಸ್ಥಿತರಿದ್ದರು ಹಾಗೂ ಮುಖ್ಯೋಪಾಧ್ಯಾಯರಾದ ಐ. ಬಿ. ಬಿರಾದಾರ ಸ್ವಾಗತಿಸಿ, ಫಲಿತಾಂಶ ವಿವರ ನೀಡಿದರು. ಅಲ್ಲದೇ ಎಸ್. ಎಲ್. ತಟ್ಟಿಮನಿ, ಕೆ. ವೈ. ನಾಯಿಕ, ಜಗದೀಶ ಗಡಾದ, ಎಸ್. ಎಂ. ಕಬಾಡಗಿ, ಶೋಭಾ ಶೇಗುಣಸಿ, ಎಸ್. ಎ. ಜಲಗೇರಿ, ಪ್ರಮೋದ ದೊಡಮನಿ, ಎಚ್. ಎಸ್. ಕಂಟೆಪ್ಪಗೊಳ , ಎಸ್. ಎಂ. ಚೌಗಲಾ ಮುಂತಾದ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.



ಮಕ್ಕಳಿಗೆ ಗುಣಮಟ್ಟದ ಶಿಕ್ಷಣದ ಜೊತೆಗೆ ಸಂಸ್ಕಾರ ನೀಡಿ



ಯರಗಟ್ಟಿ : ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸುವುದರ ಮೂಲಕ ಸಂಸ್ಕಾರ ನೀಡಬೇಕು ಎಂದು ಮಾಜಿ ಗ್ರಾ. ಪಂ. ಸದಸ್ಯ ಸಂತೋಷ ಹಾದಿಮನಿ ಹೇಳಿದರು.

ಪಟ್ಟಣದ ಬಾಲಾಜಿ ಶಿಕ್ಷಣ ಸಂಸ್ಥೆಯ ಹಾಗೂ ಸಹರಾ ಪೂರ್ವ ಪ್ರಾಥಮಿಕ ಹಾಗೂ ಕಿರಿಯ ಪ್ರಾಥಮಿಕ ಶಾಲಾ ವತಿಯಿಂದ ಹಮ್ಮಿಕೊಂಡಿದ್ದ ಬಾಲಾಜಿ ಕನ್ನಡ ಮಾಧ್ಯಮ ಪ್ರೌಢಶಾಲೆಯ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಎಪಿಎಂಸಿ ಅಧ್ಯಕ್ಷ ನೀಲಕಂಠ ಶೀದಬಸನ್ನವರ, ರಾಜರಾಜೇಶ್ವರಿ ಆಶ್ರಮದ ಪೂಜ್ಯ ಗಣಪತಿ ಮಹಾರಾಜರು ಮಾತನಾಡಿದರು.

ಪಪಂ ಸದಸ್ಯ ನಿಖಿಲ ಪಾಟೀಲ, ಮುಖ್ಯೋಪಾಧ್ಯಾಯ ಎ. ಎ. ಮಕ್ತುಮನ್ನವರ, ನಿವೃತ್ತ ಶಿಕ್ಷಕ ಎಚ್. ಎಲ್. ವಜ್ರಮಟ್ಟಿ, ಕಡಬಿ ಗ್ರಾಪಂ ಸದಸ್ಯ ಗಂಗಪ್ಪ ಮೀಸಿ, ಗಣ್ಯರಾದ ಕಲ್ಮೇಶ ಬಾಲರಡ್ಡಿ, ವಸತಿ ನಿಲಯ ಪಾಲಕರಾದ ಉಮೇಶ ಅವರಾದಿ, ಡಿ. ಡಿ. ಹೊಸಮನಿ, ಇಮ್ತಿಯಾಜ್ ಖಾದ್ರಿ, ಎಸ್. ವ್ಹಿ. ಯರಡ್ಡಿ, ಬಾಲಾಜಿ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ರಾಜೇಂದ್ರ ಶೆಟ್ಟಿ, ಉಪಾಧ್ಯಕ್ಷ ಪ್ರಕಾಶ ಕೊಪ್ಪದ, ಕಾಳಪ್ಪ ಬಡಿಗೇರ, ಬಾಲಾಜಿ ಶಾಲಾ ಮುಖ್ಯೋಪಾಧ್ಯಾಯ ಎ. ಎಚ್. ವಜ್ರಮಟ್ಟಿ, ಸಹರಾ ಶಾಲಾ ಪ್ರಧಾನ ಗುರುಮಾತೆ ಲಕ್ಷ್ಮೀ ಹೂಗಾರ ಸೇರಿದಂತೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ಶಾಲಾ ವಿದ್ಯಾರ್ಥಿ ಪ್ರತಿನಿಧಿ ಹಾಗೂ ವಿದ್ಯಾರ್ಥಿಗಳು ಇದ್ದರು.

ಕಿರುಸುದ್ದಿ

ಕಾನೂನು ಅರಿವು ಕಾರ್ಯಕ್ರಮ

ಖಾನಾಪುರ: ಪಟ್ಟಣದ ಸ್ವಾಮಿ ವಿವೇಕಾನಂದ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಮಂಗಳವಾರ ವಕೀಲರ ಸಂಘ, ಶಿಕ್ಷಣ ಇಲಾಖೆ ಮತ್ತ ತಾಲೂಕು ಕಾನೂನು ಸೇವಾ ಸಮಿತಿಗಳ ಸಹಯೋಗದಲ್ಲಿ ಕಾನೂನು ಅರಿವು ಕಾರ್ಯಕ್ರಮ ಜರುಗಿತು. ಪಟ್ಟಣದ ನ್ಯಾಯಾಲಯದ ಹಿರಿಯ ದಿವಾಣಿ ನ್ಯಾಯಾಧೀಶ ನ್ಯಾ. ಚಂದ್ರಶೇಖರ ತಳವಾರ ಕಾರ್ಯಕ್ರಮ ಉದ್ಘಾಟಿಸಿದರು.

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಹಿರಿಯ ವಕೀಲ ಚೇತನ ಮನೇರಿಕರ ಪೋಕ್ಸೋ ಕಾಯ್ದೆ, ವರದಕ್ಷಿಣೆ ಕಾಯ್ದೆ, ಬಾಲ್ಯವಿವಾಹ ಮತ್ತು ಮಾದಕ ವಸ್ತು ವಿರೋಧಿ ಕಾಯ್ದೆಗಳ ಬಗ್ಗೆ ವಿವರಿಸಿದರು. ವಕೀಲರ ಸಂಘದ ಅಧ್ಯಕ್ಷ ಈಶ್ವರ ಘಾಡಿ ಅಧ್ಯಕ್ಷತೆ ವಹಿಸಿದ್ದರು. ಬಿಇಒ ರಾಮಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಸ್ವಾಮಿ ವಿವೇಕಾನಂದ ಪಿಯು ಕಾಲೇಜು ಪ್ರಾಚಾರ್ಯ ಪಿ.ಕೆ ಚಾಪಗಾಂವಕರ, ಪ್ರೌಢಶಾಲೆಯ ಮುಖ್ಯ ಶಿಕ್ಷಕ ವಿನೋದ ಮರಾಠೆ ಸೇರಿದಂತೆ ವಕೀಲರು, ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ಇದ್ದರು.

ಮಾ.18ರಂದು ಮೇಯರ್, ಉಪಮೇಯರ್ ಚುನಾವಣೆ

ಬೆಳಗಾವಿ : ಬಹುನಿರೀಕ್ಷಿತ ಬೆಳಗಾವಿ ಮಹಾನಗರ ಪಾಲಿಕೆಯ ಮೇಯರ್ ಹಾಗೂ ಡೆಪ್ಯೂಟಿ ಮೇಯರ ಸ್ಥಾನಕ್ಕೆ ಚುನಾವಣೆ, ಬುಧವಾರ ಇದೇ ಮಾ.18 ರಂದು ನಿಗದಿ ಮಾಡಲಾಗಿದೆ ಎಂದು ಪ್ರಾದೇಶಿಕ ಆಯುಕ್ತರು ತಿಳಿಸಿದ್ದಾರೆ. ಬುಧವಾರ ಬೆಳಿಗ್ಗೆ 9 ರಿಂದ 11 ಘಂಟೆವರೆಗೆ ಮೇಯರ್ ಹಾಗೂ ಡೆಪ್ಯೂಟಿ ಮೇಯರ್ ಸ್ಥಾನಗಳಿಗೆ ನಾಮಪತ್ರ ಸ್ವೀಕರಿಸಲಾಗುವುದು, ಬಳಿಕ ಮಧ್ಯಾಹ್ನ 1 ಗಂಟೆಯಿಂದ ಆಯ್ಕೆ ಪ್ರಕ್ರಿಯೆ ಪ್ರಾರಂಭವಾಗಲಿದೆ ಎಂದು ಪ್ರದೇಶಿಕ ಆಯುಕ್ತರು ತಿಳಿಸಿದ್ದಾರೆ.

ಬೆಳಗಾವಿ ಉತ್ತರ ಹಾಗೂ ದಕ್ಷಿಣ ಮತಕ್ಷೇತ್ರಗಳಿಂದ ಹಲವಾರು ನಗರ ಸೇವಕರು ಮೇಯರ್ ಡೆಪ್ಯೂಟಿ ಮೇಯರ್ ಸ್ಥಾನಗಳಿಗೆ ಆಕಾಂಕ್ಷಿಗಳಾಗಿದ್ದು, ಮೇಯರ ಸ್ಥಾನ ಸಾಮಾನ್ಯ ಮಹಿಳೆಗೆ ಹಾಗೂ ಡೆಪ್ಯೂಟಿ ಮೇಯರ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಿದ್ದು, ಯಾರು ಮೇಯರ್ ಡೆಪ್ಯೂಟಿ ಮೇಯರ್ ಸ್ಥಾನಕ್ಕೆ ಆಯ್ಕೆ ಆಗುತ್ತಾರೋ ಎಂಬುವುದು ಬೆಳಗಾವಿ ನಗರದ ಜನತೆಯಲ್ಲಿ ಕುತೂಹಲ ಮೂಡಿಸಿದೆ.

ಪೊಲೀಸ್ ದೂರುಗಳ ಪ್ರಾಧಿಕಾರಕ್ಕೆ ದೂರು

ಖಾನಾಪುರ: ತಾಲೂಕಿನ ನಂದಗಡ ಪೊಲೀಸ್ ಠಾಣೆಯ ಅಧಿಕಾರಿಗಳು ಸರ್ಕಾರದ ಆದೇಶವಿದ್ದರೂ ಕಳೆದ 8 ತಿಂಗಳಿಂದ ಪ್ರತಿ ತಿಂಗಳು ದಲಿತರ ದಿನವನ್ನು ಆಚರಿಸದೇ ದಲಿತ ಸಮುದಾಯದವರ ಬಗ್ಗೆ ನಿರ್ಲಕ್ಷ್ಯ ವಹಿಸಿದ್ದಾರೆ ಮತ್ತು ದಲಿತರ ಸಭೆ ಆಯೋಜಿಸದೇ ಮೇಲಧಿಕಾರಿಗಳಿಗೆ ಸಭೆ ನಡೆಸಿರುವ ಬಗ್ಗೆ ಖೊಟ್ಟಿ ನಡಾವಳಿಗಳನ್ನು ಸಲ್ಲಿಸಿದ್ದಾರೆ ಎಂದು ಆರೋಪಿಸಿರುವ ಅಂಬೇಡ್ಕರ್ ಸೇವಾ ಸಮಿತಿ ಕರ್ನಾಟಕ ಸಂಘಟನೆಯ ಅಧ್ಯಕ್ಷ ಸಂತೋಷ ತಳವಾರ ದಲಿತ ವಿರೋಧಿ ನೀತಿ ಅನುಸರಿಸುತ್ತಿರುವ ನಂದಗಡ ಪೊಲೀಸ್ ಠಾಣೆಯ ಅಧಿಕಾರಿಗಳ ವಿರುದ್ಧ ಸೂಕ್ತ ತನಿಖೆ ನಡೆಸಬೇಕು ಎಂದು ಬೆಳಗಾವಿ ಜಿಲ್ಲಾಧಿಕಾರಿಗಳ ಕಚೇರಿಯ ಪೊಲೀಸ್ ದೂರುಗಳ ಪ್ರಾಧಿಕಾರಕ್ಕೆ ಲಿಖಿತ ದೂರು ಸಲ್ಲಿಸಿದ್ದಾರೆ.ಜ.12ರಂದು ಪೊಲೀಸ್ ಠಾಣೆಗೆ ಭೇಟಿ ನೀಡಿ ದಲಿತರ ಸಭೆ ನಡೆಸಿರುವ ಬಗ್ಗೆ ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ಕೇಳಿದ್ದು, ಠಾಣೆಯ ಸಾರ್ವಜನಿಕ ಮಾಹಿತಿ ಅಧಿಕಾರಿ ಮಾಹಿತಿ ನೀಡಲು ನಿರಾಕರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಜ.23ರಂದು ಮೇಲ್ಮನವಿ ಪ್ರಾಧಿಕಾರಿಯಾದ ಪೊಲೀಸ್ ಇನ್ಸಪೆಕ್ಟರ್ ಅವರಿಗೆ ಮೇಲ್ಮನವಿ ಸಲ್ಲಿಸಿದ್ದು, ಅವರಿಂದಲೂ ಇದುವರೆಗೆ ಮಾಹಿತಿ ಸಿಕ್ಕಿಲ್ಲ, ಮಾಹಿತಿ ಹಕ್ಕಿನಡಿ ಮಾಹಿತಿ ನೀಡದ ಮತ್ತು ದಲಿತರ ಸಭೆ ಆಯೋಜನೆ ಬಗ್ಗೆ ಕ್ರಮ ಕೈಗೊಳ್ಳದ ನಂದಗಡ ಠಾಣೆಯ ಅಧಿಕಾರಿಗಳ ವಿರುದ್ಧ ಕರ್ನಾಟಕ ಸಾರ್ವಜನಿಕ ದಾಖಲೆಗಳ ಕಾಯ್ದೆ 2010 ಪ್ರಕರಣ 9ರ ಪ್ರಕಾರ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಪೊಲೀಸ್ ದೂರುಗಳ ಪ್ರಾಧಿಕಾರಕ್ಕೆ ದೂರು ಸಲ್ಲಿಸಿರುವುದಾಗಿ ದೂರುದಾರ ಸಂತೋಷ ತಳವಾರ

ಅಪಘಾತ: ಸವಾರ ಸಾವು

ಹಿರೇಬಾಗೇವಾಡಿ: ಸಾರಿಗೆ ಬಸ್ ಹಾಯ್ದು ದ್ವಿಚಕ್ರವಾಹನ ಸವಾರ ಸ್ಥಳದಲ್ಲೇ ಮೃತಪಟ್ಟ ಘಟನೆ ಬುಧವಾರ ಸಂಜೆ ಹಿರೇಬಾಗೇವಾಡಿಯ ಬಸವನಗರದ ಪೆಟ್ರೋಲ ಪಂಪ್ ಬಳಿ ಸಂಭವಿಸಿದೆ.

ಖಾನಾಪುರ ತಾಲೂಕು ಅವರೊಳ್ಳಿ ಗ್ರಾಮದ ದ್ವಿಚಕ್ರವಾಹನ ಸವಾರ ರಾಜಗೌಡ ಕಲಗೌಡ ಪಾಟೀಲ (45)ಮೃತ. ರಾಜ ಗೌಡ ಪತ್ನಿಯೊಂದಿಗೆ ಬೆಳಗಾವಿಗೆ ಹೋಗಿ ದ್ವಿಚಕ್ರ ವಾಹನದ ಮೇಲಿಂದ ಹೆದ್ದಾರಿಯಲ್ಲಿ ವಾಪಸ್ ಊರಿಗೆ ಹೋಗುವಾಗ ಹಿಂದಿನಿಂದ ಬಂದ ಬಸ್ ಹಾಯ್ದಿದೆ. ಪತ್ನಿ ಸುನಿತಾ ಇವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಹಿರೇಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಖಾನಾಪುರ: ಪಟ್ಟಣದ ಸ್ವಾಮಿ ವಿವೇಕಾನಂದ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಮಂಗಳವಾರ ವಕೀಲರ ಸಂಘ, ಶಿಕ್ಷಣ ಇಲಾಖೆ ಮತ್ತ ತಾಲೂಕು ಕಾನೂನು ಸೇವಾ ಸಮಿತಿಗಳ ಸಹಯೋಗದಲ್ಲಿ ಕಾನೂನು ಅರಿವು ಕಾರ್ಯಕ್ರಮ ಜರುಗಿತು. ಪಟ್ಟಣದ ನ್ಯಾಯಾಲಯದ ಹಿರಿಯ ದಿವಾಣಿ ನ್ಯಾಯಾಧೀಶ ನ್ಯಾ.ಚಂದ್ರಶೇಖರ ತಳವಾರ ಕಾರ್ಯಕ್ರಮ ಉದ್ಘಾಟಿಸಿದರು.

ಗ್ರಾಮದೇವತೆ ಜಾತ್ರೆ: ಶ್ರೀಗಳು ಭಾಗಿ

ಹುಕ್ಕೇರಿ: ನಾಡಿನ ಜನತೆ ಸುಖ ಶಾಂತಿ ನೆಮ್ಮದಿಯಿಂದ ಬದುಕಲಿ ಎಂಬ ಉದ್ದೇಶದಿಂದ ಪ್ರತಿ ಮೂರು ವರ್ಷಕ್ಕೊಮ್ಮೆ ಗ್ರಾಮದೇವತೆ ಲಕ್ಷ್ಮೀ ದೇವರ ಜಾತ್ರಾ ಮಹೋತ್ಸವ ಆಚರಿಸಲಾಗುತ್ತದೆ ಎಂದು ಹುಕ್ಕೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯರು ಹೇಳಿದರು.

ಪಟ್ಟಣದ ಬಡಿಗೇರ ಓಣಿಯಲ್ಲಿ ಗ್ರಾಮ ದೇವತೆ ಲಕ್ಷ್ಮೀ ದೇವಿಗೆ ಪೂಜೆ ಸಲ್ಲಿಸಿ ಉಡಿ ತುಂಬಿ ಮಾತನಾಡಿದರು. ಕೋಮು ಸೌಹಾರ್ದತೆಗೆ ಹೆಸರಾದ ಹುಕ್ಕೇರಿ ಪಟ್ಟಣದಲ್ಲಿ ಜಾತ್ಯಾತೀತವಾಗಿ ಸರ್ವರೂ ಜಾತ್ರಾ ಮಹೋತ್ಸವದಲ್ಲಿ ಸೇರಿಕೊಂಡು ಆಚರಣೆ ಮಾಡುವುದು ಶ್ಲಾಘನೀಯ ಎಂದರು.

ಜಾತ್ರೆಯಲ್ಲಿ ಯುವ ಸಮೂಹ ಹಿರಿಯರ ಮಾರ್ಗದರ್ಶನದಲ್ಲಿ ಶಾಂತಿಯುತವಾಗಿ ಹೊನ್ನಾಟ ಮತ್ತು ದೇವಿ ಉತ್ಸವ ನಡೆಸಬೇಕೆಂದರು. ಪ್ರಾರಂಭದಲ್ಲಿ ಅರ್ಚಕರು ಎಂದಿನಂತೆ ಬೆಳಿಗ್ಗೆ ಪ್ರಾಣ ಪ್ರತಿಷ್ಠಾಪನೆ, ಪೂಜೆ ಜರುಗಿಸಿದರು. ನಂತರ ಕನ್ನಡಿಯಲ್ಲಿ ದೇವಿ ಮುಖ ದರ್ಶನ ಮಾಡಿದ ಬಳಿಕ ಹೊನ್ನಾಟ ಪ್ರಾರಂಭಿಸಿದರು. ರಾತ್ರಿ ದೇವಿ ಹೊನ್ನಾಟದೊಂದಿಗೆ ಹಕ್ಕುದಾರರ ಮನೆಗೆ ತೆರಳಿ ಉಡಿ ತುಂಬಿಸಿಕೊಳ್ಳುವ ಕಾರ್ಯ ಜರುಗಿತು.

ಮುಖ್ಯಾಧಿಕಾರಿ ಈಶ್ವರ ಸಿದ್ನಾಳ , ಜಾತ್ರಾ ಮಹೋತ್ಸವ ಸಮಿತಿ ಹಕ್ಕುದಾರರು, ವಿದ್ಯುತ್ ಸಹಕಾರಿ ಸಂಘದ ಅಧ್ಯಕ್ಷ ಮಹಾವೀರ ನಿಲಜಗಿ, ಸುರೇಶಜಿನರಾಳಿ, ರವಿ ನಾಯಿಕ, ಅನೀಲ ಶೆಟ್ಟಿ, ಸುಭಾಸ ನಾಯಿಕ, ರವಿ ನಾಯಿಕ ಮತ್ತು ಮುಖಂಡರಿದ್ದರು.



ಹುಕ್ಕೇರಿ: ಪಟ್ಟಣದ ಬಡಿಗೇರ ಓಣಿಯಲ್ಲಿ ಗ್ರಾಮ ದೇವತೆ ಲಕ್ಷ್ಮೀ ದೇವಿಗೆ ಹುಕ್ಕೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯರು ಅವರುನ ಪೂಜೆ ಸಲ್ಲಿಸಿದರು. ಮುಖ್ಯಾಧಿಕಾರಿ ಈಶ್ವರ ಸಿದ್ನಾಳ , ಜಾತ್ರಾ ಮಹೋತ್ಸವ ಸಮಿತಿ ಹಕ್ಕುದಾರರು, ವಿದ್ಯುತ್ ಸಹಕಾರಿ ಸಂಘದ ಅಧ್ಯಕ್ಷ ಮಹಾವೀರ ನಿಲಜಗಿ, ಸುರೇಶಜಿನರಾಳಿ, ರವಿ ನಾಯಿಕ, ಅನೀಲ ಶೆಟ್ಟಿ, ಸುಭಾಸ ನಾಯಿಕ, ರವಿ ನಾಯಿಕ ಮತ್ತು ಮುಖಂಡರಿದ್ದರು.

ಅದೃಶ್ಯ ಕಾಡಸಿದ್ಧೇಶ್ವರ ಸ್ವಾಮೀಜಿಯವರಿಂದ ಕೃಷಿ ಉತ್ಸವಕ್ಕೆ ಚಾಲನೆ

ದನಕರುಗಳು ರೈತರ ಅವಿಭಾಜ್ಯ ಅಂಗ

ಚಿಕ್ಕೋಡಿ: ದನಕರುಗಳು ರೈತರ ಅವಿಭಾಜ್ಯ ಅಂಗವಾಗಿವೆ. ರೈತರ ವಿವಿಧ ಮುಖಗಳು ಹಾಗೂ ಅವರ ವಿಕಸಿತ ಪರಿಚಯವಾಗಲು ಹಾಗೂ ರೈತರ ಕಲೆ, ಕ್ರೀಡೆಗಳನ್ನು ಜೀವಂತವಾಗಿಡಲು ಕೃಷಿ ಉತ್ಸವ(ಮೇಳ) ಉತ್ತಮ ವೇದಿಕೆಯಾಗುತ್ತದೆ ಎಂದು ಮಹಾರಾಷ್ಟ್ರದ ಕೊಲ್ಹಾಪೂರ ಜಿಲ್ಲೆಯ ಕಣೇರಿಯ ಸಿದ್ಧಗಿರಿಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಹೇಳಿದರು.

ನಿಪ್ಪಾಣಿಯ ಶ್ರೀ ಹಾಲಸಿದ್ದನಾಥ ಸಹಕಾರಿ ಸಕ್ಕರೆ ಕಾರ್ಖಾನೆ ಮತ್ತು ಜೊಲ್ಲೆ ಗ್ರುಪ್ ಆಯೋಜಿಸಿದ್ದ ಆರು ದಿನಗಳ ಬೃಹತ್ ಕೃಷಿ ಉತ್ಸವಕ್ಕೆ ಬುಧವಾರ ಚಾಲನೆ ನೀಡಿ ಮಾತನಾಡಿದ ಅವರು, ಮೇಳವನ್ನು ರೈತರು ತಮ್ಮ ಉತ್ಸವವಾಗಿ ಆಚರಿಸಬೇಕು. ಕೃಷಿಮೇಳ ರೈತರ ಉತ್ಸವವಾಗಿದ್ದು, ಉತ್ತಮ ಜಾನುವಾರುಗಳನ್ನು ಬೆಳೆಸುವುದು ಮತ್ತು ಅವಗಳನ್ನು ಸಂರಕ್ಷಿಸುವ ಹವ್ಯಾಸ ಸ್ಪರ್ಧೆಗಳ ಮೂಲಕ ಉಳಿಯುತ್ತದೆ. 21ನೇ ಶತಮಾನದಲ್ಲಿ ಎತ್ತುಗಳನ್ನು ಸಾಕುವುದು ಎಂದರೆ ನಮ್ಮ ಸಂಸ್ಕೃತಿಯನ್ನು ಉಳಿಸುವ ಪ್ರಯತ್ನವಾಗಿದೆ. ರೈತರಿಗೆ ಪ್ರೇರಣೆ ದೊರಕಲು ಎತ್ತಿನ ಸ್ಪರ್ಧೆ ಉತ್ತಮ ಉತ್ಸವವಾಗಿದೆ ಎಂದರು.

ಶಾಸಕಿ ಶಶಿಕಲಾ ಜೊಲ್ಲೆ ಮಾತನಾಡಿ, ರೈತರು ದೇಶದ ಆಧಾರಸ್ತಂಭ. ಕೃಷಿಗೆ ಗ್ರಾಮೀಣ ಭಾಗ ಬಹಳ ಮುಖ್ಯವಾಗಿದೆ. ಜಾನುವಾರುಗಳು ಮತ್ತು ಪಕ್ಷಿಗಳನ್ನು ಸಾಕುವ ಕೆಲಸವನ್ನು ರೈತರು ಮಾಡುತ್ತಾರೆ. ಆದ್ದರಿಂದ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ದೇಶದ ರೈತರು ಮತ್ತು ಸೈನಿಕರಿಗಾಗಿ ಉತ್ತಮ ಯೋಜನೆಗಳನ್ನು ನೀಡಿದ್ದಾರೆ ಎಂದರು.



ನಿಪ್ಪಾಣಿಯ ಕೃಷಿ ಮೇಳದಲ್ಲಿ ಪೂಜ್ಯರು ಹಾಗೂ ಗಣ್ಯರು ಸೇರಿದಂತೆ ರೈತರು ಭಾಗಿ

ಕನ್ಹೇರಿ ಸಿದ್ಧಗಿರಿಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿಗಳಿಂದ ಕೃಷಿ ಜಾಗೃತಿ

» ಆರಂಭದಲ್ಲಿ ಕಾರ್ಖಾನೆಯ ಆವರಣದಲ್ಲಿ ಬೇರೆ ಬೇರೆ ರಾಜ್ಯಗಳ ವಿವಿದ ತಳಿಗಳ ದನಕರುಗಳ ಪ್ರದರ್ಶನ ಮತ್ತು ವಾಣಿಜ್ಯ ಕೃಷಿ ಉಳುಮೆ ಸಂಬಂಧಿತ ಅಧುನಿಕ ವಾಹನಗಳು ಹಾಗೂ ಯಂತ್ರೋಪಕರಣಗಳ ಮಾರಾಟ ಮಳಿಗೆಗಳನ್ನು ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಉದ್ಘಾಟಿಸಿದರು.

ಹುಕ್ಕೇರಿ ಹಿರೇಮಠದ ಚಂದ್ರಶೇಖರ ಸ್ವಾಮೀಜಿ, ನಿಡಸೋಸಿಯ ನಿಜಲಿಂಗೇಶ್ವರ ಸ್ವಾಮೀಜಿ ಮಾತನಾಡಿದರು.

ಈ ಸಂದರ್ಭದಲ್ಲಿ ಸದಲಗಾದ ಡಾ. ಶ್ರದ್ಧಾನಂದ ಸ್ವಾಮೀಜಿ, ಬಸವ ಮಲ್ಲಿಕಾರ್ಜುನ ಸ್ವಾಮೀಜಿ, ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ, ಜೊಲ್ಲೆ ಗ್ರುಪ್ ಉಪಾಧ್ಯಕ್ಷ ಬಸವ ಪ್ರಸಾದ ಜೊಲ್ಲೆ, ಕಾರ್ಖಾನೆ ಅಧ್ಯಕ್ಷ ಮಲಗೊಂಡಾ ಪಾಟೀಲ, ಸಂಚಾಲಕ ಜಯಕುಮಾರ ಖೋತ, ಜಯವಂತ ಭಾಟಲೆ, ರಾಜು ಗುಂದೇಶಾ, ಸಮಿತ ಸಾಸನೆ, ಸುನೀಲ ಪಾಟೀಲ, ರಾವಸಾಹೆಬ ಫರಾಳೆ, ರಮೇಶ ಪಾಟೀಲ, ಸುಹಾಸ ಗೂಗೆ, ಪ್ರವಿಣ ಶಿಂಧೆ, ವ್ಯವಸ್ಥಾಪಕ ನಿರ್ದೇಶಕ ಅಪ್ಪಾಸಾಹೆಬ ಶಿರಗಾಂವೆ, ಕಚೇರಿ ಅಧೀಕ್ಷಕ ಗಜನಾನ ರಾಮನಕಟ್ಟಿ ಸೇರಿದಂತೆ ಕರ್ನಾಟಕ, ಮಹಾರಾಷ್ಟ್ರ ರಾಜ್ಯದ ಸಹಸ್ರಾರು ರೈತರು ಉಪಸ್ಥಿತರಿದ್ದರು.

ಗ್ರಾಮೀಣ ಸಮಾಜದ ನೈಜ್ಯತೆ ತಿಳಿಯಲು ಎನ್‌ಎಸ್‌ಎಸ್ ಶಿಬಿರ ಸಹಕಾರಿ: ಶ್ರೀಗಳು

ಮೂಡಲಗಿ: ಗ್ರಾಮೀಣ ಸಮಾಜದ ನೈಜ್ಯತೆಯನ್ನು ಅರಿಯಲು ಎನ್‌ಎಸ್‌ಎಸ್ ಶಿಬಿರಗಳು ಸಹಕಾರಿಯಾಗಿದ್ದು, ಆಧುನಿಕ ಜೀವನದ ಭರಾಟೆಯಲ್ಲಿ ನೈಜ್ಯ ಸಮಾಜದ ಚಿಂತನೆ ಮಕ್ಕಳಲ್ಲಿ ಅರಿವು ಮೂಡಿಬರುತ್ತಿಲ್ಲ ಸಮಾಜದ ಆಗು ಹೋಗುಗಳ ಜೊತೆಗೆ ಗ್ರಾಮೀಣ ಜನರ ಬದುಕು ಅವಿಭಕ್ತ ವಿಭಕ್ತ ಕುಟುಂಬಗಳ ನಡುವಿನ ಅಂತರ ತಿಳಿದುಕೊಳ್ಳುವದರ ಜೊತೆಗೆ ಸಂಸ್ಕೃತಿ ಸಂಪ್ರದಾಯಗಳ ತಿಳವಳಿಕೆ ಬೆಳಸಿಕೊಳ್ಳಲು ಇಂದಿನ ವಿದ್ಯಾರ್ಥಿಗಳು ಇಂತಹ ಶಿಬಿರಗಳಲ್ಲಿ ಪಾಲ್ಗೊಳ್ಳುವುದು ಅಗತ್ಯವಿದೆ ಎಂದು ಇಟ್ನಾಳದ ಸಿದ್ದೇಶ್ವರ ಆಶ್ರಮದ ಸಿದ್ದೇಶ್ವರ ಸ್ವಾಮೀಜಿ ಹೇಳಿದರು.

ಮೂಡಲಗಿ ಪಟ್ಟಣದ ಸಮೀಪದ ಇಟ್ನಾಳ ಗ್ರಾಮದ ಮಾದವಾನಂದ ದೇವಸ್ಥಾನದಲ್ಲಿ ಆರ್‌ಡಿಎಸ್ ಕಲಾ, ವಾಣಿಜ್ಯ, ವಿಜ್ಞಾನ, ಸಮಾಜಕಾರ್ಯ ಪದವಿ ಮಹಾವಿದ್ಯಾಲಯದ ವಿದ್ಯಾರ್ಥಿಗಳ ವಾರ್ಷಿಕ ಎನ್. ಎಸ್. ಎಸ್. ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಉದ್ಘಾಟಕರಾಗಿ ಆಗಮಿಸಿ ಮಾತನಾಡಿ ಶಿಕ್ಷಣ ಕೇವಲ ಓದಿಗೆ ಸೀಮಿತವಾಗಬಾರದು. ಅಖಂಡ ಭಾರತದಲ್ಲಿ ಬದುಕುತ್ತಿರುವ ನಾವೆಲ್ಲರು ಭಾರತದ ಪರಂಪರೆ ಸಂಸ್ಕೃತಿ ಗುಂಪು ಜೀವನದ ಮೌಲ್ಯಗಳನ್ನು ಅರಿಯಲು ಇಂತಹ ಸಾಮೂಹಿಕ ಜೀವನದ ಚಟುವಟಿಕೆಗಳಲ್ಲಿ ಪಾಲ್ಗೊಂಡು ಸಮರಸ ಜೀವನದ ಮೌಲ್ಯಗಳನ್ನು ಬೆಳಸುವ ಶಿಕ್ಷಣದ ಅಗತ್ಯವಿದೆ ವಿದ್ಯಾರ್ಥಿಗಳು ಸಮಾಜದ ಮುಖ್ಯವಾಹಿನಿಯಲ್ಲಿ ಗುರ್ತಿಸಲು ಇಂತಹ ಶಿಬಿರಗಳಲ್ಲಿ ಪಾಲ್ಗೊಳ್ಳಬೇಕು ಎಂದರು.

ಕಾಲೇಜಿನ ಪ್ರಾಚಾರ್ಯ ಸತೀಶ ಗೋಟೂರೆ ಮಾತನಾಡಿದರು.

ಪ್ರಾಚಾರ್ಯ ಶಿವಾನಂದ ಸತ್ತಿಗೇರಿ ಅಧ್ಯಕ್ಷತೆ ವಹಿಸಿದ್ದರು. ಇಟ್ನಾಳದ ಪಿಕೆಪಿಎಸ್ ಅಧ್ಯಕ್ಷರಾದ ಚನ್ನಪ್ಪ ಮಗದುಮ್ಮ ಲಕ್ಷ್ಮೀ ಪಿಕೆಪಿಎಸ್ ಅಧ್ಯಕ್ಷರಾದ ಗಿರಿಗೌಡ ಪಾಟೀಲ ಮಾಜಿ ಗ್ರಾಮ ಪಂಚಾಯತ ಅಧ್ಯಕ್ಷರಾದ ಗೀತಾ ಕಂಬಾರ ಮಾಜಿ ಉಪಾಧ್ಯಕ್ಷರಾದ ಯಲ್ಲವ್ವ ಬ್ಯಾಕೂಡ ಊರಿನ ಹಿರಿಯರಾದ ಮಲ್ಲಪ್ಪ ದಾನಿಹಾಳ, ಶಂಕರ ಪಾಟೀಲ, ಗೋವಿಂದ ಪೂಜೇರಿ, ಭೀಮಪ್ಪಾ ಪಾಟೀಲ ಸಿದ್ದಪ್ಪಾ ಬ್ಯಾಕೂಡ ಉಪನ್ಯಾಸಕರಾದ ಎಸ್.ಎನ್.ಕುಂಬಾರ ಕಿರಣ ಪಟ್ಟಣಶೆಟ್ಟಿ ಸುನೀಲ ಸತ್ತಿ ರಾಘವೇಂದ್ರ, ಡಬಾಜ, ಅಕ್ಷತಾ ಹೊಸಮನಿ, ಕವಿತಾ ಮಳಲಿ ಮತ್ತಿತರರು ಇದ್ದರು.

ಜ್ಯೋತಿ ಬಿ. ಗರಗದ ನಿರೂಪಿಸಿದರು. ಎನ್.ಎಸ್.ಎಸ್. ಘಟಕಾಧಿಕಾರಿ ರಾಜು ಪತ್ತಾರ ಸ್ವಾಗತಿಸಿದರು. ವರ್ಷಾ ಮಾದರ ವಂದಿಸಿದರು.



36 ವರ್ಷಗಳಿಂದ ಗ್ರಾಹಕರಿಗೆ ಉತ್ತಮ ಸೇವೆ

ಕಾಗವಾಡ: ಮಾಜಿ ಸಂಸದ ಹಾಗೂ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಣ್ಣಾಸಾಬ ಜೋಲ್ಲೆಯವರ ನೇತೃತ್ವದ ಶ್ರೀ ಬಿರೇಶ್ವರ ಕೊ ಆಪ್ ಕ್ರೆಡಿಟ್ ಸೊಸೈಟಿಯು ಕಳೆದ 36ವರ್ಷಗಳಿಂದ ನಿರಂತರವಾಗಿ ಗ್ರಾಹಕರಿಗೆ ಉತ್ತಮ ಸೇವೆ ಸಲ್ಲಿಸುತ್ತಾ ದಾಪುಗಾಲು ಹಾಕುತ್ತಾ ಸಂಸ್ಥೆ ಲಾಭದಿಂದ. ಮುನ್ನುಗುತ್ತಿದ್ದು ಇದ್ದಕೆಲ್ಲ ಜೋಲ್ಲೆಯವರ ಮೇಲಿರುವ ಗ್ರಾಹಕರ ಪ್ರೀತಿ, ವಿಶ್ವಾಸ,ಸಹಕಾರವೇ ಮುಖ್ಯ ಕಾರಣ ಎಂದು ಬಿರೇಶ್ವರ ಸಂಸ್ಥೆಯ ಜನರಲ್ ಮ್ಯಾನೇಜರ್ ಬಹದ್ದೂರ ಗುರವ ಹೇಳಿದರು.

ಗುರುವಾರ ತಾಲ್ಲೂಕಿನ ಐನಾಪುರ ಪಟ್ಟಣದಲ್ಲಿರುವ ಬಿರೇಶ್ವರ ಬ್ಯಾಂಕಿನ ನೂತನ ಕಟ್ಟಡದವಾಸ್ತುಶಾಂತಿಪೂಜಾಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಬಿರೇಶ್ವರ ಸಂಸ್ಥೆಯು ಕರ್ನಾಟಕ ,ಮಹಾರಾಷ್ಟ್ರ,ಗೊವಾ ರಾಜ್ಯಗಳಲ್ಲಿ 231ಶಾಖೆಗಳನ್ನು ಹೊಂದಿ 5100ಕೋಟಿ ಡಿಪಾಜಿಟ್ ಹೊಂದಿದ್ದು 4ಲಕ್ಷಕೂ ಅಧಿಕ ಸದಸ್ಯರನ್ನು ಹೊಂದಿದ್ದು,3900ಕೋಟಿ ಸಾಲ ನೀಡಿದ್ದೇವೆ.

ಕಳೆದ ವರ್ಷ 45.30 ಕೋಟಿ 30 ಲಾಭ ಗಳಿಸಿದ್ದೇವೆ. ಇದ್ದಲ್ಲದೆ ಇನ್ನೂ ಅನೇಕ ಸಂಘ ಸಂಸ್ಥೆಗಳ ಮೂಲಕ ಜೊಲ್ಲೆಯವರು ಸಹಸ್ರಾರು ಕುಟುಂಬಗಳಿಗೆ ಗ್ರಾಮೀಣ ಭಾಗಗಳಲ್ಲಿ ಯುವಕರಿಗೆ ಉದ್ಯೋಗ ನೀಡಿ ಆಶ್ರಯದಾತರಾಗಿದಾರೆ ಹಾಗೂ ಲಕ್ಷಾಂತರ ಜನರಿಗೆ ಸಾಲ ನೀಡಿ ಆರ್ಥಿಕ ಅಭಿವೃದ್ಧಿ ಮಾಡುತ್ತಾ ಬಂದಿದ್ದಾರೆ ಎಂದರು.

ನಿರ್ದಶಕ ತಮ್ಮಣ್ಣಾ ಪಾರಶೇಟ್ಟಿ ಮಾತನಾಡಿ, ಮಾ.16ರವರಗೆ ನಿಪಾಣಿ ತಾಲ್ಲೂಕಿನ ಹಾಲ ಸಿದ್ದನಾಥ ಶುಗರ್ಸ ಕಾರ್ಖಾನೆ ಆವರಣದಲ್ಲಿ ಜೊಲ್ಲೆಯವರ ನೇತೃತ್ವದಲ್ಲಿ ನಡೆಯುತ್ತಿರುವ ಐತಿಹಾಸಿಕ ಕೃಷಿ ಉತ್ಸವದಿಂದ ಲಕ್ಷಾಂತರ ಗ್ರಾಮೀಣ ಭಾಗದ ರೈತ ಭಾಂಧವರಿಗೆ ವರದಾನವಾಗಲಿದೆ ಎಂದರು.

ಈ ಸಂದರ್ಭದಲ್ಲಿ ಸಂಸ್ಥೆ ಚೆರಮನ್ ಅಪ್ಪಾಸಾಬ ಜೋಲೆ,ಎಜಿಎಂ ಪ್ರವೀಣ ತೋರಿ,ಸ್ಥಳೀಯ ಶಾಖಾ ಅಧ್ಯಕ್ಷ ಶಂಭುಲಿಂಗ ಕುಡಚಿ,ತಮ್ಮಣ್ಣಾ ಪಾರಶೇಟ್ಟಿ,ರಾಮು ಕಾಗಲಿ,ರಾಜು ಅಪರಾಜ,ನಿಂಗಪ್ಪ ಖೊಕಲೆ, ಜಿನ್ನಪ್ಪಾಶಿರಹಟ್ಟಿ,ಭೀಮು ಬಸ್ತವಾಡ, ರವಿಂದ್ರ ಬಣಜವಾಡ,ನೀತಿನ ತೋಡಕರ,ಮಂಜುನಾಥ ಕಾಗಲಿ,ಅಣಾಸಾಬ ಡೂಗನವರ,ದಾದಾ ಪಾಟೀಲ, ಎಸ್.ಕೆ ಮಾನೆ ವಿಕ್ರಂ ಗುರವ ಸಂದೀಪ ಜಾಧವ, ಉದಯ ನಿಡಗುಂದಿ ಸೇರಿದಂತೆ ಇತರರು ಇದ್ದರು.



ಒಳಮೀಸಲಾತಿಯಲ್ಲಿ ಬಲಗೈ ಸಮುದಾಯಕ್ಕೆ ಅನ್ಯಾಯ: ಆರೋಪ

ಚಿಕ್ಕೋಡಿ: ಕರ್ನಾಟಕ ರಾಜ್ಯದಲ್ಲಿ 101 ಪರಿಶಿಷ್ಟ ಜಾತಿಗಳಿದ್ದು, ಇವುಗಳಲ್ಲಿ ಬಲಗೈ (ಛಲವಾದಿ) ಸಮುದಾಯದ ಜನರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೆ ಈ ಸಮುದಾಯಕ್ಕೆ ಸರ್ಕಾರ ಶೇ. 6 ರಷ್ಟು ಮೀಸಲಾತಿ ನೀಡಿ ಅನ್ಯಾಯ ಮಾಡಿದೆ'' ಎಂದು ಬಲಗೈ ಸಮುದಾಯದ ಮುಖಂಡ ಸಿದ್ಧಾರ್ಥ ಸಿಂಗೆ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬುಧವಾರ ಕರೆದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ''ಕಳೆದ ಹಲವು ವರ್ಷಗಳಿಂದ ಮೀಸಲಾತಿಗಾಗಿ ಸಮುದಾಯದ ಜನರು ಹೋರಾಟ ಮಾಡಿದ್ದು, ಒಳಮೀಸಲಾತಿಯಲ್ಲಿ ರೋಸ್ಟರ್ ಪದ್ಧತಿಯಿಂದ ಬಿ ಮತ್ತು ಸಿ ಪ್ರವರ್ಗದವರಿಗೆ ಸರ್ಕಾರಿ ನೇಮಕಾತಿಯಲ್ಲಿ ಅನ್ಯಾಯವಾಗುತ್ತದೆ. ಮಾದಿಗ ಸಮುದಾಯಕ್ಕೆ ಸೇರಿದ ಸಚಿವರಾದ ಆರ್ ಬಿ ತಿಮ್ಮಾಪುರ ಹಾಗೂ ಕೆ ಹೆಚ್ ಮುನಿಯಪ್ಪ ಎಲ್ಲ ಸಮುದಾಯದ ಸಚಿವರಾಗಿ ನಮಗೆ ನ್ಯಾಯ ಒದಗಿಸಿಕೊಡಬೇಕು'' ಎಂದು ಕಿಡಿಕಾರಿದರು.



ಸುದ್ದಿಗೋಷ್ಠಿಯಲ್ಲಿ ಶ್ರವಣ ಕಾಂಬಳೆ, ನಾಮದೇವ ಕಾಂಬಳೆ, ಸಂಜಯ ಕಾಂಬಳೆ, ಕೆಂಪಣ್ಣ ಶಿರಹಟ್ಟಿ, ಆನಂದ ಆರಬಳ್ಳಿ, ರೇಖಾ ಬಂಗಾರಿ, ಕಲ್ಪನಾ ಪೂಜಾರಿ, ಚಿದಾನಂದ ತಳಕೇರಿ, ಮಹೇಶ ಮಾಳಗೆ, ಬಾಬಾಸಾಹೇಬ ಕಿಲ್ಲೇದಾರ, ಕೃಷ್ಣ ಗಸ್ತಿ ಇತರರು ಇದ್ದರು.

ಯುವಕರಲ್ಲಿ ಸಾಹಿತ್ಯದ ಅಭಿರುಚಿ ಮೂಡಿಸಿ: ಸಾಹಿತಿ ಸರಜೂ ಕಾಟ್ಕರ್

ಬೆಳಗಾವಿ: ಯುವಕರಲ್ಲಿ ಸಾಹಿತ್ಯದ ಅಭಿರುಚಿ ಮೂಡುವ ಕೆಲಸವಾಗಲು ಕವಿ, ಸಾಹಿತಿ, ಗಾಯಕರ ಪಾತ್ರ ಬಲು ದೊಡ್ಡದು. ಸಾಮಾಜಿಕ ಬದಲಾವಣೆಗೆ ಇವೆಲ್ಲವೂ ಸಕಾರಣವಾಗಿವೆ. ಇಂದಿನ ಯುವಕರ ಮನದಲ್ಲಿ ಇಂತಹ ಸಾಹಿತ್ಯ ಉಳಿದರೆ ಬದುಕು ಬದಲಾಗಲಿದೆ ಎಂದು ದ.ರಾ. ಬೇಂದ್ರೆ ರಾಷ್ಟ್ರೀಯ ಪ್ರತಿಷ್ಠಾನದ ಅಧ್ಯಕ್ಷ ಸಾಹಿತಿ ಸರಜೂ ಕಾಟ್ಕರ್ ಹೇಳಿದರು.

ನಗರದ ಕುಮಾರ ಗಂಧರ್ವ ಕಲಾ ಮಂದಿರದಲ್ಲಿ ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್ ಏರ್ಪಡಿಸಿದ್ದ ಕೆ.ಎಸ್. ನರಸಿಂಹಸ್ವಾಮಿ ನೆನಪಿನ ವಸಂತೋತ್ಸವ ಉದ್ಘಾಟಿಸಿ ಮಾತನಾಡಿದ ಅವರು. ಕೆ ಎಸ್ ನರಸಿಂಹಸ್ವಾಮಿ ಟ್ರಸ್ಟ್ ಈ ಭಾಗದಲ್ಲಿ ಹಮ್ಮಿಕೊಂಡಿರುವ ಕೆ.ಎಸ್.ಎನ್ ನೆನಪಿನ ವಸಂತೋತ್ಸವ ಉತ್ತರ ದಕ್ಷಿಣ ಕರ್ನಾಟಕ ಬೆಸೆಯುವ ವಿನೂತನ ಕಾರ್ಯಕ್ರಮವಾಗಿದೆ ಎಂದರು.



ಬಸವರಾಜ ಕಟ್ಟೀಮನಿ ಪ್ರತಿಷ್ಠಾನ ಅಧ್ಯಕ್ಷ ಯಲ್ಲಪ್ಪ ಹಿಮ್ಮಡಿ, ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಕಿಕ್ಕೇರಿ ಕೃಷ್ಣಮೂರ್ತಿ ಮಾತನಾಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪ ನಿರ್ದೇಶಕಿ ವಿದ್ಯಾವತಿ ಭಜಂತ್ರಿ, ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್ ನ ಸದಸ್ಯರಾದ ನಗರ ಶ್ರೀನಿವಾಸ ಉಡುಪ, ಕೆ. ವಿ . ಬಲರಾಮ, ಮಾದಾಪುರ ಸುಬ್ಬಣ್ಣ, ಪ್ರಾಧ್ಯಾಪಕರಾದ ಎಸ್. ವಿ. ವಾಲಿಶೆಟ್ಟಿ, ಗೀತಾ ದಯಣ್ಣವರ ಸೇರಿದಂತೆ ಹಲವರು ಇದ್ದರು.

ಹೆಲಿಕಾಪ್ಟರ್, ಬ್ರೇಕ್ಫೇಲ್ ಬೈಜ್ಯಾ ಪ್ರಥಮ: 5 ಲಕ್ಷ ರೂ. ನಗದು ಬಹುಮಾನ

ಚಿಕ್ಕೋಡಿ: ಕೃಷಿ ಉತ್ಸವದ ಅಂಗವಾಗಿ ಶ್ರೀ ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆ ಹಾಗೂ ಬೀರೇಶ್ವರ ಕೋ ಆಫ್ ಕ್ರೆಡಿಟ್ ಸೊಸೈಟಿ ಸಹಯೋಗದಲ್ಲಿ ಹಾಲಸಿದ್ಧನಾಥ ಕಾರ್ಖಾನೆ ಸ್ಥಳದಲ್ಲಿ ಭವ್ಯ ಕೃಷಿ ಉತ್ಸವ ಪ್ರಾರಂಭವಾಗಿದೆ.

ಭವ್ಯ ಎತ್ತಿನಗಾಡಿ ಸ್ಪರ್ಧೆಯಲ್ಲಿ ಶಿರೂರಿನ ಬಾಳು ದಾದು ಹಜಾರೆ ಅವರ ಹೆಲಿಕಾಪ್ಟರ್ ಬೈಜ್ಯಾ ಮತ್ತು ಬ್ರೇಕ್ಫೇಲ್ ಬೈಜ್ಯಾ ಪ್ರಥಮ ಸ್ಥಾನ ಪಡೆದು 5 ಲಕ್ಷ ರೂಪಾಯಿ ನಗದು ಬಹುಮಾನ ಪಡೆದಿವೆ. ಲಕ್ಷಾಂತರ ಸ್ಪರ್ಧಾ ಅಭಿಮಾನಿಗಳ ಉಪಸ್ಥಿತಿಯಲ್ಲಿ ನಡೆದ ಈ ಸ್ಪರ್ಧೆಗಳು ಬೆನಾಡಿಯ ಮೈದಾನದಲ್ಲಿ ಕಡುಬಿಸಿಲಿನ ನಡುವೆಯೂ ಜನಸಂದಣಿಯಿಂದ ಕಂಗೊಳಿಸಿತು. ವಿಜೇತರಿಗೆ ಪ.ಪೂ. ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ, ಪ್ರಾಣಲಿಂಗ ಸ್ವಾಮೀಜಿ, ಮಲ್ಲಿಕಾರ್ಜುನ ಸ್ವಾಮೀಜಿ, ಬಿಡಿಸಿ ಬ್ಯಾಂಕ್ ಅಧ್ಯಕ್ಷರು ಹಾಗೂ ಮಾಜಿ ಸಂಸದ ಅಣ್ಣಾಸಾಹೇಬ ಜೊಲ್ಲೆ, ಶಾಸಕಿ ಶಶಿಕಲಾ ಜೊಲ್ಲೆ, ಜ್ಯೋತಿಪ್ರಸಾದ್ ಜೊಲ್ಲೆ, ಬಸವಪ್ರಸಾದ್ ಜೊಲ್ಲೆ ಹಾಗೂ ಗಣ್ಯರು ಬಹುಮಾನ ವಿವರಿಸಿದರು.

ಇನ್ನೂ ಲಿಂಗನೂರಿನ ಅಜಿಂಕ್ಯ ಕೊಪಾರ್ಡೆ ಅವರ ಬೈಜ್ಯಾ ಮತ್ತು ಶಿವರ್ಯಾ ಎತ್ತಿನ ಗಾಡಿಯು ದ್ವಿತೀಯ ಸ್ಥಾನ ಪಡೆದು 3 ಲಕ್ಷ ರೂಪಾಯಿ,ತೃತೀಯ ಸ್ಥಾನವನ್ನು ಶಶಿಕಾಂತ್ ಜಾಧವ ಬೆಳಂಕೆ ಅವರ ಎತ್ತಿನ ಗಾಡಿಯು ಪಡೆದು 2 ಲಕ್ಷ ರೂಪಾಯಿ ಬಹುಮಾನ ಪಡೆದಿತು. ಜನರಲ್ ಬಿ ಗುಂಪಿನ ಎತ್ತಿನಗಾಡಿಯ ಸ್ಪರ್ಧೆಯಲ್ಲಿ ಸಂದೀಪ ಪಾಟೀಲ್ ಕೊಲ್ಹಾಪುರ ಅವರ ವಶ್ಯಾ ಮತ್ತು ಹರಣ್ಯಾ ಪ್ರಥಮ ಸ್ಥಾನ ಪಡೆದು 2 ಲಕ್ಷ ರೂಪಾಯಿ, ದ್ವಿತೀಯ ಸ್ಥಾನವನ್ನು ಪ್ರವೀಣ್ ರೋಡೆ ಎರಂಡೋಳಿ ಅವರ ಗಾಡಿ 1 ಲಕ್ಷ ರೂಪಾಯಿ, ತೃತೀಯ ಸ್ಥಾನವನ್ನು ಬಂಡಾ ಖಿಲಾರೆ ದಾನೋಳಿ ಅವರ ಎತ್ತಿನಗಾಡಿಯು ಪಡೆದಿತು. ಜನರಲ್ ಒಂದು ಎತ್ತು ಒಂದು ಕುದುರೆ ಆ' ಗುಂಪಿನ ಸ್ಪರ್ಧೆಯಲ್ಲಿ ಮಾನಕಾಪೂರದ ಬಾಳು ಬಟ್ಟೆ ಅವರ ಗಾಡಿ ಪ್ರಥಮ ಸ್ಥಾನ ಪಡೆದು 50 ಸಾವಿರ ರೂಪಾಯಿ, ದ್ವಿತೀಯ ಸ್ಥಾನವನ್ನು ಕಾಕೇಶ್ ಚೌಗುಲೆ, ಆಷ್ಟಾ ಅವರ ಗಾಡಿ 30 ಸಾವಿರ ರೂಪಾಯಿ ಹಾಗೂ ತೃತೀಯ ಸ್ಥಾನವನ್ನು ಅತೂಲ್ ಪಾಟೀಲ್, ಕೌಲಾಪುರ ಅವರ ಗಾಡಿ 20 ಸಾವಿರ ರೂಪಾಯಿ ಬಹುಮಾನ ಪಡೆದಿತು. ಜನರಲ್ ಕುದುರೆಗಾಡಿ ಸ್ಪರ್ಧೆಯಲ್ಲಿ ಸಮೀರ್ ಮುಲ್ಲಾ ಡಿಗ್ರಜ್ ಅವರ ಗಾಡಿ ಪ್ರಥಮ ಸ್ಥಾನ ಪಡೆದು 25 ಸಾವಿರ ರೂಪಾಯಿ, ದ್ವಿತೀಯ ಸ್ಥಾನವನ್ನು ಬಸೌಂಡಾ ಪಾಟೀಲ್ ಬೆನಾಡಿ ಅವರ ಗಾಡಿ 15 ಸಾವಿರ ರೂಪಾಯಿ ಹಾಗೂ ಕಿಶೋರ್ ಪುಜಾರಿ ಅವರ ಗಾಡಿ ತೃತೀಯ ಸ್ಥಾನ ಪಡೆದು 10 ಸಾವಿರ ರೂಪಾಯಿ ಬಹುಮಾನ ಪಡೆದಿತು. ಒಂದು ದೂಸಾ ಮತ್ತು ಒಂದು ಚೌಸಾ ಎತ್ತುಬಂಡಿ ಸ್ಪರ್ಧೆಯಲ್ಲಿ ಧುಳಗಾಂವಿನ ಬಾಳು ಸರ್ಕಾರ ಅವರ ಗಾಡಿ ಪ್ರಥಮ ಸ್ಥಾನ ಪಡೆದು 50 ಸಾವಿರ ರೂಪಾಯಿ, ದ್ವಿತೀಯ ಸ್ಥಾನವನ್ನು ಸಂತೋಷ ಪಂಡಾರೆ, ಶಿಂಗಣಾಪುರ ಅವರ ಗಾಡಿ 30 ಸಾವಿರ ರೂಪಾಯಿ ಹಾಗೂ ಬಂಡಾ ಖಿಲಾರೆ ಅವರ ಗಾಡಿ ತೃತೀಯ ಸ್ಥಾನ ಪಡೆದು 20 ಸಾವಿರ ರೂಪಾಯಿ ಬಹುಮಾನ ಪಡೆದಿತು.



ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಮಾತನಾಡಿ, ಇದು ರೈತರ ಉತ್ಸವವಾಗಿದ್ದು, ಉತ್ತಮ ಜಾನುವಾರುಗಳನ್ನು ಬೆಳೆಸುವುದು ಮತ್ತು ಅವಗಳನ್ನು ಸಂರಕ್ಷಿಸುವ ಹವ್ಯಾಸ ಸ್ಪರ್ಧೆಗಳ ಮೂಲಕ ಉಳಿಯುತ್ತದೆ ಎಂದು ಹೇಳಿದರು.

ಶಾಸಕಿ ಶಶಿಕಲಾ ಜೊಲ್ಲೆ ಮಾತನಾಡಿ, ರೈತರು ದೇಶದ ಆಧಾರಸ್ತಂಭ. ಕೃಷಿಗೆ ಗ್ರಾಮೀಣ ಭಾಗ ಬಹಳ ಮುಖ್ಯವಾಗಿದೆ ಎಂದರು.

ಸ್ಪರ್ಧೆಯ ಆರಂಭದಲ್ಲಿ ಬಸವಪ್ರಸಾದ್ ಜೊಲ್ಲೆ ಅವರು ಸ್ವಾಗತ ಭಾಷಣ ಮಾಡಿ ಮೊದಲ ಸ್ಪರ್ಧೆಗೆ ಧ್ವಜ ಚಾಲನೆ ನೀಡಿದರು.

ಈ ವೇಳೆ ಹಾಲಸಿದ್ಧನಾಥ ಸಕ್ಕರೆ ಕಾರ್ಖಾನೆ ಅಧ್ಯಕ್ಷ ಎಂ.ಪಿ. ಪಾಟೀಲ್, ಉಪಾಧ್ಯಕ್ಷ ಪವನ ಪಾಟೀಲ್, ನಿರ್ದೇಶಕರು, ಕರ್ನಾಟಕ ಆಯಿಲ್ ಫೆಡರೇಶನ್ನ ನಿರ್ದೇಶಕರು ಹಾಗೂ ಗಣ್ಯರು ಉಪಸ್ಥಿತರಿದ್ದರು. ಪಿಎಸ್ಐ ರಮೇಶ್ ಪವಾರ್ ಹಾಗೂ ಶಿವರಾಜ ನಾಯಿಕವಾಡಿ ಇವರ ಮಾರ್ಗದರ್ಶನದಲ್ಲಿ ಪೊಲೀಸ್ ಬಂದೋಬಸ್ತ್ ಆಯೋಜಿಸಲಾಗಿತ್ತು.

ಇಂದು ರಾಷ್ಟ್ರಮಟ್ಟದ ಅಣಕು ನ್ಯಾಯಾಲಯ ಸ್ಪರ್ಧೆ

ಬೆಳಗಾವಿ: ನಗರದಲ್ಲಿರುವ ಟಿಳಕವಾಡಿಯ ಕರ್ನಾಟಕ ಲಾ ಸೊಸೈಟಿಯ ರಾಜಾ ಲಖಮಗೌಡ ಕಾನೂನು ಮಹಾವಿದ್ಯಾಲಯದ ವತಿಯಿಂದ 16 ನೇ ಎಂ. ಕೆ. ನಂಬಿಯಾರ್ ಸ್ಮರಣಾರ್ಥ ರಾಷ್ಟ್ರಮಟ್ಟದ ಅಣಕು ನ್ಯಾಯಾಲಯ ಸ್ಪರ್ಧೆ ಮಾ.13 ರಿಂದ 15ರವರೆಗೆ ಹಮ್ಮಿಕೊಳ್ಳಲಾಗಿದೆ.

ಗುರುವಾರ ನಗರದ ಖಾಸಗಿ ಹೋಟೆಲ್ ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಆರ್.ಎಲ್. ಕಾನೂನು ಮಹಾವಿದ್ಯಾಲಯದ ಆಡಳಿತ ಮಂಡಳಿಯ ಚೇರ್ಮನ್, ನ್ಯಾಯವಾದಿ ಆರ್.ಎಸ್.ಮುತಾಲಿಕ್ ಹಾಗೂ ಕೆಎಲ್ ಎಸ್ ಸಂಸ್ಥೆಯ ಕಾರ್ಯದರ್ಶಿ ಹಾಗೂ ನ್ಯಾಯವಾದಿ ಎಸ್ .ವಿ.ಗಣಾಚಾರಿ ಅವರು ಮಾಹಿತಿ ನೀಡಿದರು.

ಭಾರತದ ಮಾಜಿ ಅಟಾರ್ನಿ ಜನರಲ್ ಹಾಗೂ ನಮ್ಮ ಸಂಸ್ಥೆಯ ಹೆಮ್ಮೆಯ ಹಳೆಯ ವಿದ್ಯಾರ್ಥಿ ಪದ್ಮವಿಭೂಷಣ ಕೆ. ಕೆ. ವೇಣುಗೋಪಾಲ್ ಅವರ ಪ್ರಾಯೋಜಕತ್ವದಲ್ಲಿ ಈ ಸ್ಪರ್ಧೆ ನಡೆಯಲಿದೆ. ವಿವಿಧ ವಿಭಾಗಗಳಲ್ಲಿ ವಿಜೇತರಾದವರಿಗೆ ಒಟ್ಟು ರೂ. 1,35,000 ನಗದು ಬಹುಮಾನ ವಿತರಿಸಲಾಗುವುದು. ಇದಲ್ಲದೆ, ಬೆಳಗಾವಿಯ ಹಿರಿಯ ವಕೀಲ ಅಶೋಕ ಎನ್. ಪೋತದಾರ ಅವರ ಹೆಸರಿನಲ್ಲಿ ಶ್ರೇಷ್ಠ ವಾಗ್ಮಿ ಪ್ರಶಸ್ತಿಯೊಂದಿಗೆ ರೂ. 6,000 ನಗದು ಬಹುಮಾನ ನೀಡಲಾಗುವುದು.

ಸ್ಪರ್ಧೆಯ ಉದ್ಘಾಟನಾ ಸಮಾರಂಭ ಮಾರ್ಚ್ 13 ರಂದು ಸಂಜೆ 5.30 ಕ್ಕೆ ಬೆಳಗಾವಿಯ ಟಿಳಕವಾಡಿ ಕೆಎಲ್ ಎಸ್ ಪ್ಲಾಟಿನಂ ಜುಬಿಲಿ ಕಟ್ಟಡದ ಕೆ. ಕೆ. ವೇಣುಗೋಪಾಲ್ ಸಭಾಂಗಣದಲ್ಲಿ ನಡೆಯಲಿದೆ. ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಜ್ಯೋತಿ ಎಂ ಉಪಸ್ಥಿತರಿರುವರು. ಕೆಎಲ್ ಎಸ್ ಅಧ್ಯಕ್ಷ, ಅಡ್ವೋಕೇಟ್ ಪ್ರದೀಪ ಎಸ್. ಸಾವಕಾರ ಅಧ್ಯಕ್ಷತೆ ವಹಿಸುವರು. ಕೆಎಲ್ ಎಸ್ ಚೇರ್ಮನ್ ಎ.ಕೆ.ಟಗಾರೆ ಉಪಸ್ಥಿತರಿರುವರು.



ಕರ್ನಾಟಕ ಲಾ ಸೊಸೈಟಿಯ ಆಡಳಿತ ಮಂಡಳಿಯ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಸರ್ವ ಸದಸ್ಯರು ಉಪಸ್ಥಿತರಿರುವರು. ಇತ್ತೀಚೆಗೆ ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆಯಾದ ಸಂಸ್ಥೆಯ 8 ಹಳೆಯ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುವುದು ಎಂದು ಹೇಳಿದರು. ಸಮಾರೋಪ ಸಮಾರಂಭ ಮಾ. 15 ರಂದು ಸಂಜೆ 4:30 ಕ್ಕೆ ನಡೆಯಲಿದೆ. ಗೌರವಾನ್ವಿತ ನ್ಯಾಯಮೂರ್ತಿ ವಿಜಯಕುಮಾರ್ ಎ. ಪಾಟೀಲ ಉಪಸ್ಥಿತರಿರುವರು. ಪ್ರದೀಪ ಎಸ್. ಸಾವಕಾರ ಅಧ್ಯಕ್ಷತೆ ವಹಿಸುವರು.

ಬೋರ್ಡ್ ಚೇರ್ಮನ್, ಕಾರ್ಯದರ್ಶಿಗಳು ಮತ್ತು ಆಡಳಿತ ಮಂಡಳಿಯ ಎಲ್ಲಾ ಸದಸ್ಯರು ಉಪಸ್ಥಿತರಿರುವರು ಎಂದು ವಿವರಿಸಿದರು. ಪ್ರಾಚಾರ್ಯ ಡಾ.ಎ.ಎಚ್. ಹವಾಲ್ದಾರ್, ಅಣಕು ನ್ಯಾಯಾಲಯ ಸ್ಪರ್ಧೆಯ ಸಂಯೋಜಕಿ ಪ್ರೊ.ಅಶ್ವಿನಿ ಪರಬ್, ಅಣಕು ನ್ಯಾಯಾಲಯ ಸ್ಪರ್ಧೆಯ ಕಾರ್ಯದರ್ಶಿ ಸುನಿಧಿ ಜೋಶಿ, ಮಹಾವಿದ್ಯಾಲಯದ ಮಾಧ್ಯಮ ಸಂಪರ್ಕಾಧಿಕಾರಿ ಮಂಜುನಾಥ ಕಾಳೆ ಹಾಗೂ ವಿದ್ಯಾರ್ಥಿಗಳು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಕಿರುಸುದ್ದಿ

ಚಿಕ್ಕಲಕಿ ಏತ ನೀರಾವರಿ ಕಾಮಗಾರಿ ಪೂರ್ಣಗೊಳಿಸಲು ಭರವಸೆ

ಜಮಖಂಡಿ: ಕಾನೂನು ಚೌಕಟ್ಟಿನಲ್ಲಿ ಎಲ್ಲ ಕಾರ್ಯ ಮಾಡಬೇಕಿದ್ದು, ಬ್ಯಾರೇಜ್ ನಿರ್ವಹಣೆ, ಏತ ನೀರಾವರಿ ಕಾಮಗಾರಿ ಮಾಡಲು ಬ್ಯಾರೇಜ್ ವಾರ್ಷಿಕ ನಿರ್ವಹಣೆಗಾಗಿ ಬೇರೆ ಬೇರೆ ಇಲಾಖೆಯ ಅಭಿಯಂತರರನ್ನು ನಿಯುಕ್ತಿ ಮಾಡಬೇಕಿದೆ. ಅದು ಕೇವಲ ಒಂದಿಬ್ಬರಿಂದ ಸಾಧ್ಯವಿಲ್ಲ ಎಂದು ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು ಉತ್ತರಿಸಿದರು. ತಾಲೂಕಿನ ಏಕಮಟ್ಟ ಚಿಕ್ಕಲಕಿ ಏತ ನೀರಾವರಿ ಕಳೆದ 13 ವರ್ಷದಿಂದ ನನೆಗುದಿಗೆ ಬಿದ್ದಿದೆ. ಕಳೆದ 13 ವರ್ಷದಲ್ಲಿ ಶೇ 80 ರಷ್ಟು ಕಾಮಗಾರಿ ಮುಗಿದಿದ್ದು ಉಳಿದ 20 ರಷ್ಟು ಮಾತ್ರ ಬಾಕಿ ಉಳಿದಿದೆ ಎಂದು ಶಾಸಕ ಜಗದೀಶ ಗುಡಗುಂಟಿ ಸದನದಲ್ಲಿ ಪ್ರಶ್ನಿಸಿದ್ದಾರೆ. ಈ ಯೋಜನೆಯಲ್ಲಿ 5 ಸಾವಿರ ಎಕರೆ ಜಮೀನಿಗೆ ನೀರು ನೀಡಲು 33 ಕಿಮೀ ದೂರ ಕ್ರಮಿಸಬೇಕು. ಆದರಲ್ಲಿ ಕೇವಲ 15 ಕಿಮೀ ಮಾತ್ರ ಕಾಮಗಾರಿಯು ಪೂರ್ಣಗೊಂಡಿದೆ ಉಳಿದ ಕಾಮಗಾರಿಯು ಇನ್ನೂ ಆಗಿಲ್ಲ, ಈ ನೀರಾವರಿ ಯೋಜನೆ ಪೂರ್ಣಗೊಳಿಸಲು ರೈತರು ಹೋರಾಟ ಪ್ರತಿಭಟನೆ ಮಾಡುತ್ತಿದ್ದಾರೆ. ಆದಕ್ಕಾಗಿ ಉಳಿದ ಕಾಮಗಾರಿ ಪೂರ್ಣಗೊಳಿಸಲು ತ್ವರಿತ ಗತಿಯಲ್ಲಿ ಅನುದಾನ ಮತ್ತು ಸಮಿಣ್ಣೆ ಕಾರ್ಯವು ಎಂದಾಗುತ್ತದೆ ತಿಳಿಸಬೇಕು ಎಂದು ಒತ್ತಾಯಿಸಿದಾಗ ಆದಷ್ಟು ಬೇಗ ಭೇಟಿ ನೀಡಿ ರೈತರಿಗೆ ತಿಳಿ ಹೇಳಿ ಕಾಮಗಾರಿ ಪೂರ್ಣಗೊಳಿಸಲಾಗುವುದು ಎಂದು ಭರವಸೆಯನ್ನು ಸಚಿವರು ನೀಡಿದ್ದಾರೆ ಎಂದು ಶಾಸಕ ಜಗದೀಶ ಗುಡಗುಂಟಿ ತಿಳಿಸಿದ್ದಾರೆ.

ಉತ್ತಮ ದೈಹಿಕ ಶಿಕ್ಷಕ ಪ್ರಶಸ್ತಿ ಪ್ರದಾನ

ಕಲಾದಗಿ: ಉಪನಿರ್ದೇಶಕರು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘ ಮತ್ತು ಡಾ.ಎಚ್.ಎಫ್.ಕಟ್ಟಿಮನಿ ಪ್ರೌಢ ಶಿಕ್ಷಣ ಪ್ರತಿಷ್ಠಾನ ಧಾರವಾಡ ಇವರ ಸಂಯುಕ್ತ ಆಶ್ರಯದಲ್ಲಿ ಕೊಡಮಾಡುವ ಶಿಕ್ಷಣ ಪರಿಶ್ರಮ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ



ಬೀಳಗಿ ತಾಲೂಕಿನ ಸುನಗ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯ ದೈಹಿಕ ಶಿಕ್ಷಕ ಕಲಾದಗಿ ಗ್ರಾಮದ ಸಂಜಯಕುಮಾರ ಕಲವಾರ ಅವರಿಗೆ ಬೀಳಗಿ ತಾಲೂಕಿನ ಉತ್ತಮ ದೈಹಿಕ ಶಿಕ್ಷಕ ಎಂದು ಪ್ರಶಸ್ತಿ ಪತ್ರ ಹಾಗೂ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಿಲಾಯಿತು.

ಅನುದಾನ ಸ್ವಾಗತಾರ್ಹ

ಕಲಾದಗಿ: ಕ್ಷತ್ರಿಯ ಮರಾಠಾ ಸಮಾಜದ ಬಹು ವರ್ಷಗಳ ಬೇಡಿಕೆಯಾಗಿದ್ದ ಛತ್ರಪತಿ ಶಿವಾಜಿ ಮಹಾರಾಜ ಮತ್ತು ಜಗಜ್ಯೋತಿ ಬಸವಣ್ಣನವರ ಮೂರ್ತಿ



ಪ್ರತಿಷ್ಠಾಪನೆಗೆ ರಾಜ್ಯ ಸರ್ಕಾರದಿಂದ ತಲಾ 40ಲಕ್ಷ ರೂ. ಗಳಂತೆ ಒಟ್ಟು 80 ಲಕ್ಷ ರೂ. ಬಿಡುಗಡೆ ಮಾಡಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಆರ್ಥಿಕ ಇಲಾಖೆಗೆ ಸೂಚನೆ ನೀಡಿರುವುದು ಸಂತೋಷ ಹಾಗೂ ಸ್ವಾಗತಾರ್ಹವಾಗಿದ್ದು, ಸಿಎಂ ಜಿಲ್ಲಾ ಉಸ್ತುವಾರಿ ಸಚಿವರಿಗೂ ಹಾಗೂ ಮುಖಂಡ ಹೊಳಬಸು ಶೆಟ್ಟರ ಅವರಿಗೆ ಕ್ಷತ್ರಿಯ ಮರಾಠಾ ಸಮಾಜ ಜಿಲ್ಲಾಧ್ಯಕ್ಷ ಶ್ರೀಕಾಂತ ಪಾಟೀಲ ಕೃತಜ್ಞತೆ ತಿಳಿಸಿದರು.

ಅಭಿವೃದ್ಧಿಗೆ ಸಹಕರಿಸಿ

ಮುಧೋಳ: 2025-26ನೇ ಸಾಲಿನ ಆರ್ಥಿಕ ವರ್ಷವು ಪೂರ್ಣಗೊಳ್ಳಲು ಇನ್ನು ಕೇವಲ 1 ತಿಂಗಳು ಬಾಕಿ ಉಳಿದಿದ್ದು, ಪ್ರಯುಕ್ತ ನಗರಸಭೆಗೆ ಭರಣಾಮಾಡಬೇಕಾದ ಸ್ವಯಂ ಘೋಷಿತ ಆಸ್ತಿ ತೆರಿಗೆ, ನೀರಿನ ಕರ, ವಾಣಿಜ್ಯ ಮಳಿಗೆಗಳ ಬಾಡಿಗೆ, ಉದ್ದಿಮೆ ಪರವಾನಿಗೆ ಫೀ ಹಾಗೂ ಇತರೆ ಕರಗಳನ್ನು ನಗರಸಭೆಗೆ ಭರಣಾ ಮಾಡಿ ನಗರದ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸಲು ಈ ಮೂಲಕ ವಿನಂತಿಸಿಕೊಳ್ಳಲಾಗಿದೆ. ತಪ್ಪಿದಲ್ಲಿ ಕಟಬಾಕಿದಾರಿಗೆ ಕಾನೂನಿನ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಇ-ಆಸ್ತಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಬಹುದಾಗಿದೆ. ಎಂದು ಪೌರಾಯುಕ್ತ ಗೋಪಾಲ ಕಾಸೆ ತಿಳಿಸಿದ್ದಾರೆ.

ಅಗ್ನಿ ಅವಘಡ

ಜಮಖಂಡಿ: ನಗರದ ಮುಧೋಳ ರಸ್ತೆಯಲ್ಲಿ ಬರುವ ಯುಗಾದಿಯಂದು ನಡೆಯುವ ಆಮರಾಯಿ ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ಸ್ವಚ್ಛತೆ ಮಾಡುವ ಸಮಯದಲ್ಲಿ ಸಮೀಪದ ಫರ್ನಿಚರ ಅಂಗಡಿಗೆ ಬೆಂಕಿ ತಗುಲಿ ಅಪಾರ ಪ್ರಮಾಣದ ವಸ್ತಗಳು ಸುಟ್ಟು ಕರಕಲಾಗಿವೆ ಎಂದು ತಿಳಿದು ಬಂದಿದೆ. ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಸ್ಥಳಕ್ಕೆ ದೌಡಾಯಿಸಿದ ಅಗ್ನಿ ಶಾಮಕ ದಳದವರು ಬೆಂಕಿ ನಂದಿಸಿ ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ.



ರಬಕವಿ-ಬನಹಟ್ಟಿ: ಬನಹಟ್ಟಿ ವಕೀಲರ ಭವನದಲ್ಲಿ ಕಾನೂನು ಸೇವಾ ಸಮಿತಿ ಹಾಗೂ ನ್ಯಾಯವಾದಿಗಳ ಸಂಘದಿಂದ ಜರುಗಿದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ನಡೆದ ಕಾನೂನು ಅರಿವು-ನೆರವು ಕಾರ್ಯಕ್ರಮ ನಡೆಯಿತು. ನ್ಯಾಯವಾದಿ ರವೀಂದ್ರ ಸಂಪಗಾಂವಿ, ನ್ಯಾಯಾಧೀಶ ಆತಪ್ಪ ಸಣಮನಿ, ನ್ಯಾಯಾಧೀಶೆ ಸೌಮ್ಯಾ ಹೂಲಿ, ಆರ್.ಜಿ.ಶಹಾ, ಆನಂದ ಪಿ.ಎ. ಎಸ್.ಎನ್.ಗುಡ್ಲಮನಿ, ಸುಜಾತಾ ನಿಡೋಣಿ, ಅಶ್ವಿನಿ ಹಾರೂಗೇರಿ ಸೇರಿದಂತೆ ಅನೇಕರಿದ್ದರು.

ಸೋಮಾರಿತನವೇ ದೊಡ್ಡ ಶತ್ರು: ಶ್ರೀಗಳು

ಕಮತಗಿ: ವಿದ್ಯಾರ್ಥಿ ಜೀವನದಲ್ಲಿ ಮೊಬೈಲ್ ಮತ್ತು ಸೋಮಾರಿತನವನ್ನು ಸಾಧನೆಗೆ ಅಡ್ಡಿಯಾಗುವ ದೊಡ್ಡ ಶತ್ರುಗಳಾಗಿವೆ. ಇವುಗಳ ಮೇಲೆ ನಿಯಂತ್ರಣ ಹೊಂದಿದರೆ ಮಾತ್ರ ಜೀವನದಲ್ಲಿ ಯಶಸ್ಸು ಸಾಧಿಸಲು ಸಾಧ್ಯ ಎಂದು ಫಕೀರ ದಿಂಗಾಲೇಶ್ವರ ಸ್ವಾಮೀಜಿ ಹೇಳಿದರು. ಪಟ್ಟಣದಲ್ಲಿ ಹುಚ್ಚೇಶ್ವರ ವಿದ್ಯಾವರ್ಧಕ ಸಂಘದ ವತಿಯಿಂದ ಹೊಳೆ ಹುಚ್ಚೇಶ್ವರ ಸ್ವಾಮೀಜಿಗಳ ಜನ್ಮ ದಿನೋತ್ಸವದ ಅಂಗವಾಗಿ ನಡೆದ ಬೃಹತ್ ಉದ್ಯೋಗ ಮೇಳದಲ್ಲಿ ಮಾತನಾಡಿ, ಯುವಕರು ಉದ್ಯೋಗ ಪಡೆಯಬೇಕಾದರೆ ಉದ್ಯಮಶೀಲತೆ, ಸಾಹಸ, ಧೈರ್ಯ, ಬುದ್ಧಿ, ಶಕ್ತಿ ಮತ್ತು ಪರಾಕ್ರಮ ಎಂಬ ಆರು ಗುಣಗಳು ಅಗತ್ಯವಿದೆ. ಈ ಗುಣಗಳು ನಿಮ್ಮಲ್ಲಿದ್ದರೆ ಜೀವನದಲ್ಲಿ ಯಶಸ್ಸು ನಿಶ್ಚಿತ ಎಂದರು. ಜೀವನದಲ್ಲಿ ನಡೆಯುವ ಒಂದೊಂದು ಘಟನೆಗಳು ನಮ್ಮ ಮೇಲೆ ಪರಿಣಾಮ ಬೀರಿದಾಗ ಮಾತ್ರ ನಾವು ಎಚ್ಚರಗೊಂಡು ಸಾಧನೆಯ ದಾರಿಯಲ್ಲಿ ಸಾಗಲು ಸಾಧ್ಯವಾಗುತ್ತದೆ. ಪ್ರತಿಯೊಬ್ಬ ಯುವಕರೂ ಸ್ವತಂತ್ರವಾಗಿ ದುಡಿಮೆ ಮಾಡುವ ಮನೋಭಾವ ಬೆಳೆಸಿಕೊಳ್ಳಬೇಕು. ನಾವು ದುಡಿದರೆ ಮಾತ್ರ ನಮ್ಮ ಕುಟುಂಬದ ಹೊಟ್ಟೆ ತುಂಬುತ್ತದೆ ಎಂದರು. ಸಂಸ್ಥೆಯ ಅಧ್ಯಕ್ಷ ಹುಚ್ಚೇಶ್ವರ ಸ್ವಾಮೀಜಿ ಅಧ್ಯಕ್ಷತೆ ವಹಿಸಿದ್ದರು. ಈ ಉದ್ಯೋಗ ಮೇಳದಲ್ಲಿ ಉದ್ಯೋಗಕ್ಕೆ ಅರಿಸಿ ಬಂದಂತಹ ವಿದ್ಯಾರ್ಥಿಗಳು 1500 ಜನ,465 ವಿದ್ಯಾರ್ಥಿಗಳು ಉದ್ಯೋಗವನ್ನು ಪಡೆದುಕೊಂಡಿದ್ದಾರೆ ಎಂದರು. ಉಪ್ಪಿನ ಬೆಟಗೇರಿಯ ಕುಮಾರ ವಿರೂಪಾಕ್ಷ ಸ್ವಾಮೀಜಿ, ಅಮೀನಗಡದ ಶಂಕರ ರಾಜೇಂದ್ರ ಸ್ವಾಮೀಜಿ, ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ, ಪ.ಪಂ. ಬಸವರಾಜ ಕುಂಬಳಾವತಿ, ಉಪಾಧ್ಯಕ್ಷೆ ನೇತ್ರಾವತಿ ನಿಂಬಲಗುಂದಿ ಇದ್ದರು.



ಕಮತಗಿ: ಪಟ್ಟಣದಲ್ಲಿ ಹುಚ್ಚೇಶ್ವರ ವಿದ್ಯಾವರ್ಧಕ ಸಂಘದ ವತಿಯಿಂದ ಹೊಳೆ ಹುಚ್ಚೇಶ್ವರ ಸ್ವಾಮೀಜಿಗಳ ಜನ್ಮ ದಿನೋತ್ಸವದ ಅಂಗವಾಗಿ ನಡೆದ ಬೃಹತ್ ಉದ್ಯೋಗ ಮೇಳ ನಡೆಯಿತು. ಫಕೀರ ದಿಂಗಾಲೇಶ್ವರ ಸ್ವಾಮೀಜಿ, ಹೊಳಬಸು ಶೆಟ್ಟರ, ಮಲ್ಲಿಕಾರ್ಜುನ ಚರಂತಿಮಠ, ಸಂತೋಷ ಹೊಕ್ರಾಣಿ, ಪ್ರೊ.ಯು.ಕೆ. ಕುಲಕರ್ಣಿ, ಗುರುಪಾದಯ್ಯ ಹಿರೇಮಠ, ಎಂ.ಎಸ್.ನಟರಾಜ, ಸಂಸ್ಥೆಯ ಸಹ ಕಾರ್ಯದರ್ಶಿ ವಿದ್ಯಾಧರ ಮಳ್ಳಿ, ಸೇರಿದಂತೆ ಇತರರು ಇದ್ದರು.

ಮಾ.18ರಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ | ಪೂರ್ವಸಿದ್ಧತಾ ಸಭೆಯಲ್ಲಿ ಸೂಚನೆ

ಪಾರದರ್ಶಕವಾಗಿ ಪರೀಕ್ಷೆ ನಡೆಸಿ: ಡಿಸಿ

ಬಾಗಲಕೋಟೆ: ಜಿಲ್ಲೆಯಾದ್ಯಂತ ಮಾರ್ಚ 18 ರಿಂದ ಆರಂಭವಾಗಲಿರುವ ಎಸ್.ಎಸ್.ಎಲ್.ಸಿ ಪರೀಕ್ಷೆ-1ನ್ನು ಸುಮಗ ಹಾಗೂ ಪಾದರ್ಶಕವಾಗಿ ನಡೆಸಲು ಎಲ್ಲ ರೀತಿಯ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಸಂಗಪ್ಪ ಸೂಚನೆ ನೀಡಿದರು.



ಜಿಲ್ಲಾ ಪಂಚಾಯತಿ ನೂತನ ಸಭಾಭವನದಲ್ಲಿ ಗುರುವಾರ ಜರುಗಿದ ಎಸ್ಸೆಸ್ಸೆಲ್ಸಿ ಪರೀಕ್ಷೆ-1 ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಜಿಲ್ಲೆಯಲ್ಲಿ ಒಟ್ಟು 97 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಯಾವುದೇ ರೀತಿಯ ಅನಾನುಕೂಲವಾಗದಂತೆ ಬೇಕಾಗುವ ಎಲ್ಲ ರೀತಿಯ ಸಿದ್ದತೆಗಳನ್ನು ಮಾಡಿಕೊಂಡು ಪಾರದರ್ಶಕವಾಗಿ ಪರೀಕ್ಷೆ ನಡೆಸುವಂತೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಪರೀಕ್ಷಾ ಕೇಂದ್ರಗಳಲ್ಲಿ ಶುದ್ದ ಕುಡಿಯುವ ನೀರು, ವಿದ್ಯುತ್ ವ್ಯವಸ್ಥೆ, ಶೌಚಾಲಯ ಸೌಲಭ್ಯ, ಸಿಸಿಟಿವಿ ವ್ಯವಸ್ಥೆ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಕಡ್ಡಾಯವಾಗಿ ಕಲ್ಪಿಸಲು ಸೂಚನೆ ನೀಡಿದರು. ಸಮಯಕ್ಕೆ ಮಹತ್ವ ಕೊಟ್ಟು ಪರೀಕ್ಷೆಗಳು ಸುಗಮವಾಗಿ ನಡೆಯವಂತಾಗಬೇಕು. ಪ್ರಶ್ನೆ ಪತ್ರಿಕೆ ಆಯಾ ಪರೀಕ್ಷಾ ಕೇಂದ್ರಕ್ಕೆ ಸಮಯಕ್ಕೆ ಸರಿಯಾಗಿ ತಲುಪಬೇಕು. ಪರೀಕ್ಷಾ ಕಾರ್ಯಕ್ಕೆ ನೀಡಲಾದ ನಿರ್ದೇಶನಗಳನ್ನು ಚಾಚೂ ತಪ್ಪದೇ ಪಾಲಿಸಬೇಕು ಎಂದರು. ಪರೀಕ್ಷಾ ಕೇಂದ್ರದ ಸುತ್ತ 200 ಮೀಟರ್ ವ್ಯಾಪ್ತಿಯಲ್ಲಿ 144 ಕಲಂ ಜಾರಿ ಮಾಡಿ ಆದೇಶ ಹೊರಡಿಸಲಾಗುವುದೆಂದು ತಿಳಿಸಿದರು.

ಶಾಲಾ ಶಿಕ್ಷಣ ಇಲಾಖೆಯ (ಆಡಳಿತ) ಉಪನಿರ್ದೇಶಕ ಎ.ಜಿ.ಮನ್ನಿಕೇರಿ ಮಾತನಾಡಿ, ಜಿಲ್ಲೆಯಲ್ಲಿ ಒಟ್ಟು 97 ಪರೀಕ್ಷಾ ಕೇಂದ್ರಗಳಿಗೆ 97 ಮುಖ್ಯ ಅಧೀಕ್ಷಕರು, 12 ಹೆಚ್ಚುವರಿ ಅಧೀಕ್ಷಕರನ್ನು, 97 ಅಭಿರಕ್ಷಕರು, 97 ಮೊಬೈಲ್ ಸ್ವಾಧಿನಾಧಿಕಾರಿಗಳು, 97 ಸ್ಥಾನಿಕ ಜಾಗೃತ ದಳಗಳನ್ನು ನೇಮಿಸಲಾಗಿದೆ. ಇದರ ಜೊತೆಗೆ ಶಾಲಾ ಶಿಕ್ಷಣ ಇಲಾಖೆಯಿಂದ 4 ಹಾಗೂ ಇತರೆ ಇಲಾಖೆಯಿಂದ 2 ತಂಡ ಸೇರಿ ಒಟ್ಟು 6 ವಿಚಕ್ಷಣಾ ತಂಡಗಳನ್ನು ಸಹ ರಚಿಸಲಾಗಿದೆ. ಈ ಬಾರಿ ಜಿಲ್ಲೆಯಲ್ಲಿ ಒಟ್ಟು 34578 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದು, ಅದರಲ್ಲಿ ಹೊಸ ವಿದ್ಯಾರ್ಥಿಗಳು 32108, ಖಾಸಗಿ ಅಭ್ಯರ್ಥಿಗಳು 574, ಪುನರಾವರ್ತಿತ ಅಭ್ಯರ್ಥಿಗಳು 1806 ಹಾಗೂ ಪುನರಾವರ್ತಿತ ಖಾಸಗಿ ಅಭ್ಯರ್ಥಿಗಳು 90 ಇದ್ದಾರೆಂದು ತಿಳಿಸಿದರು. ಅಲ್ಲದೇ ಪರೀಕ್ಷಾ ಸಿದ್ದತೆಗೆ ಕೈಗೊಂಡ ಕ್ರಮಗಳನ್ನು ಸಭೆಗೆ ತಿಳಿಸಿದರು.ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಇಲಕಲ್ಲ ಡಯಟ್ ಪ್ರಾಚಾರ್ಯರು ಹಾಗೂ ಶಾಲಾ ಶಿಕ್ಷಣ ಇಲಾಖೆಯ (ಅಭಿವೃದ್ಧಿ) ಉಪನಿರ್ದೇಶಕ ಸಲೀಂ ಪಾಷಾ ಸೇರಿದಂತೆ ಪರೀಕ್ಷಾ ಕೇಂದ್ರದ ಎಲ್ಲ ಮುಖ್ಯ ಅಧೀಕ್ಷಕರು ಉಪಸ್ಥಿತರಿದ್ದರು.

> ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅಗತ್ಯ ಡೆಸ್ಕಗಳ ವ್ಯವಸ್ಥೆ ಮಾಡಬೇಕು. ಪರೀಕ್ಷಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಪಾರದರ್ಶಕವಾಗಿ ಪರೀಕ್ಷೆ ನಡೆಸಲು ಎಲ್ಲ ಇಲಾಖೆ ಅಧಿಕಾರಿಗಳು ಸಮನ್ವಯದಿಂದ ಕೆಲಸ ಮಾಡಬೇಕು.
> ■ ಶಶಿಧರ ಕುರೇರ, ಜಿಪಂ ಸಿಇಒ

ಮಾ.18ರಂದು, ಕನ್ನಡ, 23ರಂದು ವಿಜ್ಞಾನ, 25ರಂದು ದ್ವಿತೀಯ ಭಾಷೆ ಇಂಗ್ಲೀಷ, 28 ರಂದು ಗಣಿತ, 30 ರಂದು ತೃತೀಯ ಭಾಷೆ ಹಿಂದಿ, ಎಪ್ರೀಲ್ 2ರಂದು ಸಮಾಜ ವಿಜ್ಞಾನ ಪರೀಕ್ಷೆಗಳು ನಡೆಯಲಿವೆ.

ಜೀವನದ ಪ್ರತಿ ಕ್ಷಣ ಪ್ರೇರಣೆಯಾಗಿ ಬದುಕಿ

ಮಹಾಲಿಂಗಪುರ: ಇನ್ಸ್ ಪೈರ್ ಬಿಪೋರ್‌ದ ಎಕ್ಸ್‌ಪೈರ್ (ಸಾವು ಬರುವುದಕ್ಕೆ ಮೊದಲೇ ಸ್ಪೂರ್ತಿಗೊಳ್ಳಿ)ಎಂಬಂತೆ ಜೀವನದ ಪ್ರತಿ ಕ್ಷಣವನ್ನೂ ಇನ್ಸ್‌ಪೈರ್ ಆಗಿ ಬದುಕಿನಲ್ಲಿ ಏನನ್ನಾದರೂ ಸಾಧಿಸಿ ಎಂದು ಕಂಪ್ಯೂಟರ್ ಮ್ಯಾನ್ ಖ್ಯಾತಿಯ ಪ್ರತಿಭೆ ಬಸವರಾಜ ಉಮರಾಣಿ ಹೇಳಿದರು.

ಸ್ಥಳೀಯ ಜೆಸಿ ಶಾಲೆಯಲ್ಲಿ ಮಕ್ಕಳೊಂದಿಗೆ ಸಂವಾದ ನಡೆಸಿ, ಶ್ರಮ ಮೇವ ಜಯತೆ ಎಂಬಂತೆ ನಿರಂತರ ಪರಿಶ್ರಮದಿಂದ ಅಸಾಧ್ಯವಾದುದನ್ನು ಸಾಧಿಸಬಹುದು ಎಂದು ಹೇಳಿದ ಅವರು, ಎರಡೂ ಕಣ್ಣುಗಳು ಕಾಣಿಸದಿದ್ದರೂ ಸಹ ಭಾಗಕಾರ, ಗುಣಾಕಾರ, ಸಂಕಲನ, ವ್ಯವಕಲನದ ಉದ್ದುದ್ದ ಲೆಕ್ಕಗಳನ್ನು ಅಂದರೆ ಸುಮಾರು 30 ಸಂಖ್ಯೆಗಳ ಲೆಕ್ಕಗಳನ್ನೂ ಸಹ ಯಾವುದೇ ಪರಿಕರಗಳಿಲ್ಲದೇ ಕ್ಷಣಾರ್ಧದಲ್ಲಿ ಮನಸ್ಸಿನಲ್ಲಿಯೇ ಗುಣಿಸಿ, ಭಾಗಿಸಿ, ಕೂಡಿಸಿ, ಕಳೆದು ಉತ್ತರ ಹೇಳುತ್ತಾ, ಜನ್ಮ ದಿನಾಂಕ ಹೇಳಿದೊಡನೆ ವಾರದ ದಿನ ತಿಳಿಸುತ್ತಾ ಬೆರಗು ಮೂಡಿಸಿದರು.

ಸಂಸ್ಥೆಯ ಉಪಾಧ್ಯಕ್ಷ ಶಿವಾನಂದ ತಿಪ್ಪಾ ಮಾತನಾಡಿ, ಎರಡೂ ಕಣ್ಣಿಲ್ಲದ ಬಸವರಾಜ ಉಮರಾಣಿ ಎಂಟನೇ ವಯಸ್ಸಿನಿಂದಲೇ ಪರಿಶ್ರಮದಿಂದ ಇಂತಹ ಅದ್ಭುತ ಚಮತ್ಕಾರ ಮೈಗೂಡಿಸಿಕೊಂಡಿದ್ದು ಭಾರತದ ಪ್ರಧಾನಿಗಳಿಂದ ಮತ್ತು ಕರ್ನಾಟಕದ ಮುಖ್ಯಮಂತ್ರಿಗಳಿಂದ ಗೌರವ ಸನ್ಮಾನ ಸ್ವೀಕರಿಸಿದ್ದಾರೆ. ಹಲವಾರು ಪ್ರಶಸ್ತಿ, ಪುರಸ್ಕಾರಗಳು ಇವರನ್ನು ಅರಸಿ ಬಂದಿವೆ. 60ಕ್ಕೂ ಹೆಚ್ಚು ದೇಶಗಳಿಗೆ ಹೋಗಿ ಕಾರ್ಯಕ್ರಮ ನೀಡಿ ನಮ್ಮ ನಾಡಿನ ಕೀರ್ತಿ ಪತಾಕೆ ಹಾರಿಸಿ ಬಂದಿದ್ದು, ಇವರು ನಾಲ್ಕು ಸದಸ್ಯರ ಇಡೀ ಕುಟುಂಬವನ್ನು ಕಣ್ಣಿಲ್ಲದ ಬಸವರಾಜನೇ ಊರೂರು ಸುತ್ತಿ ಕಾರ್ಯಕ್ರಮಗಳನ್ನು ನಡೆಸಿ ಸಾಗಿಸಬೇಕಾಗಿದೆ. ಆದರೆ ಯಾವುದೇ ಸರ್ಕಾರಗಳು, ಸಂಘ ಸಂಸ್ಥೆಗಳು ಕೇವಲ ಮಾನ, ಸನ್ಮಾನಕ್ಕಷ್ಟೇ ಸೀಮಿತಗೊಳಿಸಿದ್ದು ಈತನ ಬದುಕಿಗೆ ಆಧಾರವಾಗುವಂತಹ ಯಾವುದೇ ನೆರವನ್ನು ಇದುವರೆಗೂ ನೀಡದಿರುವುದು ಅತ್ಯಂತ ಶೋಚನೀಯ ಮತ್ತು ಇಂತಹ ಮಹಾನ್ ಪ್ರತಿಭೆಗೆ ಮಾಡಿದ ಅವಮಾನ. ಈಗಲಾದರೂ ಸಂಬಂಧ ಪಟ್ಟ ಇಲಾಖೆ, ಸರ್ಕಾರ ಈತನ ಕಡೆ ಗಮನ ಹರಿಸಿ ಈತನ ಸಂಕಷ್ಟಗಳಿಗೆ ಸ್ಪಂದಿಸಿ ಸರಾಗ ಜೀವನಕ್ಕೆ ಸಹಕಾರ ನೀಡಿದಲ್ಲಿ ಇಡಿ ಕುಟುಂಬಕ್ಕೆ ಆಸರೆಯಾಗುತ್ತದೆ. ಆದ್ದರಿಂದ ಸರ್ಕಾರ ಕೂಡಲೇ ಗಮನಹರಿಸಬೇಕು ಎಂದು ಒತ್ತಾಯಿಸಿದರು.



ನಿರಂತರ ಅಧ್ಯಯನದಿಂದ ಸಾಧನೆ ಸಾಧ್ಯ

ಮಹಾಲಿಂಗಪುರ: ವಿದ್ಯಾರ್ಥಿಗಳು ಪಠ್ಯಕ್ರಮಗಳಿಗೆ ಮಾತ್ರ ಅಂಟಿಕೊಳ್ಳದೆ ಗ್ರಂಥಾಲಯ, ಪುಸ್ತಕಾಲಯ ಸೇರಿದಂತೆ ಓದಲು ದೊರೆಯುವ ಯಾವುದೇ ಅವಕಾಶ ತಪ್ಪಿಸಿಕೊಳ್ಳದೆ ನಿರಂತರ ಓದಿನತ್ತ ಗಮನ ಹರಿಸಬೇಕು ಎಂದು ಬಾಗಲಕೋಟೆ ಜಿಲ್ಲಾ ಕಾನಿಪ ಕಾರ್ಯಕಾರಿಣಿ ಸದಸ್ಯ ಚಂದ್ರಶೇಖರ ಮೋರೆ ಹೇಳಿದರು.

ಸಮೀಪದ ಮದಭಾಂವಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಜರುಗಿದ 10ನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪರೀಕ್ಷೆ ಸಮೀಪಿಸಿದಾಗ ಮಾತ್ರ ದಿನದ 24 ಗಂಟೆ ಓದಿ ಆರೋಗ್ಯ ಹದಗೆಡಿಸಿಕೊಳ್ಳದೇ, ವೇಳಾಪಟ್ಟಿ ಸಿದ್ದಪಡಿಸಿಕೊಂಡು ಗುರುಗಳ ಮಾರ್ಗದರ್ಶನದಂತೆ ನಿರಂತರ ಓದಿದರೆ ಮಾತ್ರ ಪರೀಕ್ಷೆ ಎಂಬ ಸಾಧನೆಯ ಮೆಟ್ಟಿಲು ಏರಲು ಸಾಧ್ಯ. ಪರೀಕ್ಷೆಗೆ ಬಾಕಿ ಉಳಿದ ದಿನಗಳನ್ನು ನಿಮ್ಮ ಜೀವನದ ಅವಿಸ್ಮರಣೀಯ ದಿನಗಳೆಂದು ತಿಳಿದು ಏಕಾಗ್ರತೆಯಿಂದ ಅಧ್ಯಯನ ಮಾಡಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿ ಎಂದರು.

ಎಸ್‌ಎಸ್‌ಎಲ್‌ಸಿ ಪ್ರತಿಯೊಬ್ಬ ವಿದ್ಯಾರ್ಥಿಯ ಜೀವನದ ಮಹತ್ವದ ಘಟ್ಟ, ಅದರ ಸದುಪಯೋಗ ಮಾಡಿಕೊಂಡು ಉತ್ತಮ ಅಂಕಗಳನ್ನು ಪಡೆಯುವ ಮೂಲಕ ಜನ್ಮ ನೀಡಿದ ತಂದೆ ತಾಯಿ, ಹುಟ್ಟಿದ ಊರು, ಕಲಿಸಿದ ಗುರುಗಳು, ಕಲಿತ ಶಾಲೆಗೆ ಉತ್ತಮ ಹೆಸರು ತರಲು ಪ್ರಯತ್ನಿಸಿರಿ. ಸಮಯ ಮತ್ತು ಹೆತ್ತವರ



ಶ್ರಮದ ಮಹತ್ವ ಅರಿತು ವಿದ್ಯಾರ್ಥಿಗಳು ಸನ್ಮಾರ್ಗದಲ್ಲಿ ನಡೆದು ಬದುಕನ್ನು ಸಾರ್ಥಕಪಡಿಸಿಕೊಳ್ಳಬೇಕು ಎಂದರು.

ಕಳೆದ ವರ್ಷದ ಎಸ್‌ಎಸ್‌ಎಲ್‌ಸಿಯಲ್ಲಿ ರ್‍ಯಾಂಕ್ ವಿಜೇತ ಮಕ್ಕಳನ್ನು ಪಾಲಕರ ಸಮೇತ ಸನ್ಮಾನಿಸಿ ಗೌರವಿಸಲಾಯಿತು. ವಿಷಯವಾರು ಅತಿಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಶಿಕ್ಷಕರು ವಯಕ್ತಿಕ ನಗದು ಬಹುಮಾನ ನೀಡಿದರು. ವಿದ್ಯಾರ್ಥಿಗಗಳು ಶಿಕ್ಷಕರಿಗೆ ಗುರುಕಾಣಿಕೆ ನೀಡಿದರು. ಶಾಲೆಯ ಮುಖ್ಯಗುರು ಐ.ಜಿ.ಯರಗಾಣಿ, ಶಿಕ್ಷಕ ಐ.ಎಸ್.ಪಾಟೀಲ ಮಾತನಾಡಿದರು.

ಎಸ್‌ಡಿಎಂಸಿ ಅಧ್ಯಕ್ಷ ಸದಾಶಿವ ಪಟ್ಟಣಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ನಾರಾಯಣ ಸುತಾರ, ಸದಸ್ಯರಾದ ಸುಭಾಸ ತಿಮ್ಮಾಪುರ, ಸಂಗಪ್ಪ ವಡರಟ್ಟಿ, ಮಲ್ಲಪ್ಪ ಉರಭಿನ್ನವರ, ವಿಠ್ಠಲ ವಗ್ಗರ, ಬಂದೇನವಾಜ ಮುಜಾವರ, ವಿನೋದ ಉಳ್ಳಾಗಡ್ಡಿ, ಸತ್ಯಪ್ಪ ಮುಧೋಳ, ಶಿಕ್ಷಕರಾದ ಆರ್.ಎಚ್.ಗಾಳಿ, ಎಂ.ಬಿ.ಸೋಅಲೋನಿ, ವಿಜಯಲಕ್ಷ್ಮೀ, ಕಲ್ಮೇಶ ಮಾಚಕನೂರ, ಮಾಲಗಾರ, ಎಸ್.ಎಲ್.ಕುಂಬಾರ, ಎಲ್.ಎಮ್.ಕುರಬೇಟ, ಸಿ.ಆರ್.ಕುದರಿಮನಿ ಸೇರಿದಂತೆ ಹಲವರು ಇದ್ದರು.

ಮಕ್ಕಳಿಗೆ ಶಿಕ್ಷಣದ ಜೊತೆ ಸಂಸ್ಕಾರ ನೀಡಿ: ಬಸವರಾಜ ಖೋತ

ಬೀಳಗಿ: ಒಬ್ಬವ್ಯಕ್ತಿಯ ಮೌಲ್ಯಗಳನ್ನು ನಿರ್ಧರಿಸಲು ಅವನ ಹಣ, ಆಕಾರ, ಅಂತಸ್ತು ಮುಖ್ಯವಾಗುವದಿಲ್ಲ, ಅದಕ್ಕಿಂತ ಹೆಚ್ಚಾಗಿ ಅವನ ಗುಣ, ವಿಶ್ವಾಸ, ನಡತೆಗಳು ಬಹಳ ಮುಖ್ಯವಾಗುತ್ತವೆ. ಆದ್ದರಿಂದ ಮಕ್ಕಳಿಗೆ ವಿದ್ಯೆಯ ಜೊತೆಗೆ ಸಂಸ್ಕಾರವಂತರನ್ನಾಗಿ ಮಾಡಬೇಕೆಂದು ರಾಮಲಿಂಗೇಶ್ವರ ವಿದ್ಯಾ ವರ್ಧಕ ಸಂಘದ ಚೇರಮನ್ ಬಸವರಾಜ ಖೋತ ಹೇಳಿದರು.

ತಾಲೂಕಿನ ಕುಂದರಗಿ ಗ್ರಾಮದ ರಾಮಲಿಂಗೇಶ್ವರ ವಿದ್ಯಾ ವರ್ಧಕ ಸಂಘದ ರಾಮಲಿಂಗೇಶ್ವರ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ಪಾಲಕರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ತಂದೆ-ತಾಯಿಗಳು ಮಕ್ಕಳನ್ನು ಶಾಲೆಗೆ ಕಳುಹಿಸುವುದರ ಜೊತೆಗೆ ಅವರ ಮೇಲೆ ಸೂಕ್ತ ನಿಗಾ ಇಡಬೇಕು ಮತ್ತು ಕಾಳಜಿ ವಹಿಸಬೇಕು ಎಂದರು. ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ.ಎಂ.



ಸಾವಕಾರ ಪಾಲಕರ ಸಭೆ ಉದ್ಘಾಟಿಸಿ ಮಾತನಾಡಿ, ಮನುಷ್ಯನ ನಡೆ, ನುಡಿ ಚೆನ್ನಾಗಿದ್ದರೆ ಮನುಷ್ಯ ಎತ್ತರಕ್ಕೆ ಏರಬಹುದು. ಈನಿಟ್ಟಿನಲ್ಲಿ ಪಾಲಕರು ಮಕ್ಕಳಿಗೆ ಉನ್ನತ ಶಿಕ್ಷಣದ ಜೊತೆಗೆ ನಡೆ ನುಡಿಗಳನ್ನು ಕಲಿಸಿ ಕೊಡಬೇಕೆಂದು ಹೇಳಿದರು.

ಸಂಸ್ಕಾರಯುತ ಶಿಕ್ಷಣ ಉತ್ತಮ ಬದುಕು ಕಟ್ಟಿಕೊಳ್ಳಲು ಸಹಾಯ ಮಾಡುತ್ತದೆ. ಶಾಲೆಯಿಂದ ಮಗು ಮನೆಗೆ ಬಂದಾಗ ಪಾಲಕರು ಮನಸ್ಸು ಕೆಡಿಸುವ ಮೊಬೈಲ್, ಮನೆಗಳನ್ನು ಒಡೆಯುವ ಧಾರಾವಾಹಿಗಳಿಂದ ದೂರವಿರಬೇಕು. ಮಕ್ಕಳು ಅಭ್ಯಾಸ ಮಾಡಲು ಪೂರಕ ವಾತಾವರಣ ನಿರ್ಮಾಣ ಮಾಡಬೇಕೆಂದು ಕರೆ ನೀಡಿದರು.

ಮುಖ್ಯೋಪಾಧ್ಯಾಯ ಎಂ.ಎಂ.ಬಸನಾಳ ಮಾತನಾಡಿ, ಪಾಲಕರು ಮನೆಯಲ್ಲಿ ಮಕ್ಕಳಿಗೆ ಒಳ್ಳೆಯದು ಮತ್ತು ಕೆಟ್ಟದ್ದರ ಕುರಿತು ತಿಳಿಸಿ ಹೇಳಬೇಕು. ಮಕ್ಕಳಿಗೆ ಓದಿಗೆ ಪ್ರೋತ್ಸಾಹ ನೀಡಬೇಕೆಂದು ಹೇಳಿದರು.ರಾಮಲಿಂಗೇಶ್ವರ ವಿದ್ಯಾ ವರ್ಧಕ ಸಂಘದ ಆಡಳಿತ ಮತ್ತು ಪಾಲಕರು ಉಪಸ್ಥಿತರಿದ್ದರು. ಶಿಕ್ಷಕ ಬಸವರಾಜ ದಾವಣಗೆರೆ ನಿರೂಪಿಸಿದರು. ಭೀಮಣ್ಣ ಕುಲಕರ್ಣಿ ವಂದಿಸಿದರು.

ಮಾ.15ರಂದು ಹಿಂದು ಸಮ್ಮೇಳನ, ಬೃಹತ್ ಶೋಭಾಯಾತ್ರೆ

ಗುಳೇದಗುಡ್ಡ: ನಮ್ಮ ಮುಂದಿನ ಪೀಳಿಗೆಗೆ ಮತಾಂತರ, ಭಯೋತ್ಪಾದನೆ, ಆಂತರಿಕ ಕಚ್ಚಾಟಗಳಿಂದ ಮುಕ್ತಗೊಳಿಸಿ ಸಶಕ್ತ ಸದೃಢ ಭಾರತ ಕಟ್ಟಲು ಹಿಂದೂ ಸಮ್ಮೇಳನದ ಉದ್ದೇಶವಾಗಿದ್ದು, ಈ ಹಿನ್ನಲೆಯಲ್ಲಿ ಪಟ್ಟಣದ ಹಿಂದೂ ಸಮ್ಮೇಳನ ಸಂಚಾಲನ ಸಮಿತಿವತಿಯಿಂದ ಮಾ.15ರಂದು ಬೃಹತ್ ಶೋಭಾಯಾತ್ರೆ ಹಾಗೂ ಹಿಂದೂ ಸಮ್ಮೇಳನ ಪಟ್ಟಣದ ಭಂಡಾರಿ ಕಾಲೇಜಿನ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಹಿಂದೂ ಸಮ್ಮೇಳನದ ಸಂಚಲನಾ ಸಮಿತಿ ಅಧ್ಯಕ್ಷ ಅಶೋಕ ಹೆಗಡಿ ಹೇಳಿದರು.

ಗುರುವಾರ ಪಟ್ಟಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹಿಂದೂ ಸಮಾಜವನ್ನು ಸಂಘಟಿಸುವ ನಿಟ್ಟಿನಲ್ಲಿ ದೇಶಾದ್ಯಂತ ಹಿಂದೂ ಸಮ್ಮೇಳನ ಹಮ್ಮಿಕೊಳ್ಳಲಾಗುತ್ತಿದ್ದು, ಪಟ್ಟಣದ ಎಲ್ಲ ಸಮಾಜಭಾಂದವರು ಹಿಂದೂ



ಸಮ್ಮೇಳನದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಹಿಂದು ಮುಖಂಡ ವಿಠ್ಠಲ ಪತ್ತಾರ ಮಾತನಾಡಿ, ಹಿಂದೂ ಸಮ್ಮೇಳನದ ಅಂಗವಾಗಿ ಮಾ. 15ರಂದು ಮಧ್ಯಾಹ್ನ 3 ಗಂಟೆಗೆ ಪಟ್ಟಣದ ಬಾದಾಮಿ ನಾಕಾ ಹತ್ತಿರದ ಅಕ್ಕಲಕೋಟಿ ಚಿಕ್ಕರೇವಣಸಿದ್ದೇಶ್ವರ ಮಠದಿಂದ ಬೃಹತ್ ಶೋಭಾಯಾತ್ರೆ ಪ್ರಾರಂಭಗೊಳ್ಳಲಿದೆ. ಬೃಹತ್ ಶೋಭಾಯಾತ್ರೆಯಲ್ಲಿ ಶೋಭಾಯಾತ್ರೆಯಲ್ಲಿ ಕುಂಭಹೊತ್ತ ಮಹಿಳೆಯರು, ಗೊಂಬೆಗಳು, ಕರಡಿಮಜಲು, ಡೊಳ್ಳು ಕುಣಿತ, ಹಲಗಿ ಮಜಲು ಸೇರಿದಂತೆ ವಿವಿಧ ವಾದ್ಯಮೇಳಗಳು ಭಾಗವಹಿಸಲಿವೆ. ಸಂಜೆ 6 ಗಂಟೆಗೆ ಭಂಡಾರಿ ಕಾಲೇಜನ ಆವರಣದಲ್ಲಿ ನಡೆಯಲಿರುವ ಹಿಂದೂ ಸಮ್ಮೇಳನದಲ್ಲಿ ಪಟ್ಟಣದ ವಿವಿಧ ಮಠಾಧೀಶರು ಸಾನಿಧ್ಯ ವಹಿಸುವರು. ಆರ್‌ಎಸ್‌ಎಸ್‌ನ ಬಳ್ಳಾರಿ ಪ್ರಾಂತ ಕಾರ್ಯಕಾರಣಿ ಸದಸ್ಯ ಗೋಪಿ ಜಿ. ಅವರು ಮುಖ್ಯ ವಕ್ತಾರರಾಗಿ ಪಾಲ್ಗೊಳ್ಳಲಿದ್ದಾರೆ. ಸಮಾರು ಹತ್ತುಸಾವಿರ ಜನರು ಹಿಂದೂ ಸಮ್ಮೇಳನದಲ್ಲಿ ಭಾಗವಹಿಸುವ ನಿರೀಕ್ಷೆ ಇದೆ ಎಂದರು.

ಸಂಪತ್ತಕುಮಾರ್ ರಾಠಿ, ಅಮಾತೆಪ್ಪ ಕೊಪ್ಪಳ, ಪಿ.ಎನ್. ಪವಾರ, ಸಂಜು ಕಾರಕೂನ, ಪ್ರಭು ತಟ್ಟಿಮಠ, ಭುವನೇಶ ಪೂಜಾರ, ವಿಠ್ಠಲ ಶಿರೂರು, ಶಿವಾನಂದ ಬಾದವಾಡಗಿ, ಆದಪ್ಪ ಕಲಬುರ್ಗಿ, ಮಹೇಶ ಸೂಳೇಭಾವಿ, ಈರಣ್ಣ ಬಂಡಿ, ಶಿವಾನಂದ ಬಡಿಗೇರ ಮತ್ತಿತರರು.

ಮಹಿಳೆಯರಿಗೆ ಎಲ್ಲ ಕ್ಷೇತ್ರದಲ್ಲೂ ಅವಕಾಶ



ಬೀಳಗಿ: ಪಟ್ಟಣದ ಸ್ವಾಮಿ ವಿವೇಕಾನಂದ ಪ್ರಥಮ ದರ್ಜೆ ಮಹಾವಿದ್ಯಾಲಯ ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಗುರುವಾರ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲಾಯಿತು. ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆಯ ಆಡಳಿತಾಕಾರಿ ವಿ.ಎಸ್.ಮೇಟಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಇಂದಿನ ಆಧುನಿಕ ಜಗತ್ತಿನಲ್ಲಿ ಮಹಿಳೆಯರಿಗೆ ಎಲ್ಲ ರಂಗದಲ್ಲಿಯೂ ಸಾಕಷ್ಟು ಅವಕಾಶಗಳಿದ್ದು, ಅವುಗಳನ್ನು ಬಳಸಿಕೊಂಡು ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿದು ವೃತ್ತಿಪರ ಮತ್ತು ಕೌಟುಂಬಿಕ ಜೀವನವನ್ನು ಸಮನಾಗಿ ನಿರ್ವಹಣೆ ಮಾಡುತ್ತಿರುವರು ಎಂದು ಹೇಳಿದರು. ಉಪನ್ಯಾಸಕಿ ಗುಲ್ಜರಬಾನು ಮಕಾಂದಾರ ಮಾತನಾಡಿ, ಮಹಿಳೆಯರಿಗೆ ಸಾಮಾಜಿಕ, ಧಾರ್ಮಿಕ ಕಟ್ಟಳೆಗಳನ್ನು ಮೀರದಂತೆ ಸೈದ್ಧಾಂತಿಕವಾಗಿ ಕುಟುಂಬದ ಘನತೆಗೆ ಧಕ್ಕೆಯಾಗದಂತೆ ಎಷ್ಟೇ ಎತ್ತರಕ್ಕೆ ಬೆಳೆದರೂ ಕೂಡ ಮಹಿಳೆ ತನ್ನ ಕುಟುಂಬದ ಉನ್ನತಿಗಾಗಿ ಹಗಲಿರುಳು ಶ್ರಮಿಸುವಳೆಂದು ಹೇಳಿದರು. ಮಹಾವಿದ್ಯಾಲಯದ ಪ್ರಾಚಾರ್ಯ ಎಲ್.ಎಚ್.ಕತ್ತಿ ಮಾತನಾಡಿ, ಸರ್ಕಾರದಿಂದ ದೊರಕುವ ಎಲ್ಲ ಸೌಲಭ್ಯಗಳನ್ನು ಬಳಸಿಕೊಳ್ಳಬೇಕು. ಹಾಗೂ ಸಮಾಜದಲ್ಲಿ ದೊರೆಯುವ ಎಲ್ಲ ಅವಕಾಶಗಳನ್ನು ಬಳಸಿಕೊಂಡು ಮಹಿಳೆರು ಸಮಾಜದ ಮುಖ್ಯವಾಹಿನಿಗೆ ಬರಬೇಕೆಂದು ಹೇಳಿದರು. ಭಾರತಿ ಹಿರೇಮಠ, ತಸ್ಲೀಮ್ ಇನಾಂದಾರ, ಶೋಭಾ ಸಿಂಧೆ, ಭಾಗ್ಯಶ್ರೀ ಮೂಲಿಮನಿ, ಪಲ್ಲವಿ ಗುಲಾಲಗರ್ ಭಾಗವಹಿಸಿದ್ದರು. ಹಾಗೂ ಮಹಾವಿದ್ಯಾಲಯದ ಭೋಧಕ ಮತ್ತು ಭೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕಬಡ್ಡಿ: ಲೋಕಾಪುರ ಪಲ್ಟನ್ ಪ್ರಥಮ

ಲೋಕಾಪುರ: ಸಮೀಪದ ಮುದ್ದಾಪುರ ಗ್ರಾಮದಲ್ಲಿ ಲೋಕಾಪುರ ಕಬ್ಬಡ್ಡಿ ವೈಭವ ಸಿಜನ್-5 ಚಾಂಪಿಯನ್ ಪ್ರೊ ಕಬ್ಬಡ್ಡಿ ಪಂದ್ಯಾವಳಿಯಲ್ಲಿ ಲೋಕಾಪುರ ಪಲ್ಟನ್ ಪ್ರಥಮ ಬಹುಮಾನ ಪಡೆದುಕೊಂಡಿದೆ.

ಆಟಗಾರರಾದ ಚಿದಾನಂದ ವಾಸ್ಟರ್, ಪ್ರವೀಣ ರೊಡ್ಡಪ್ಪನವರ, ಕರಿಯಪ್ಪ ಹರಕಂಗಿ, ಚಿರಂಜಿವಿ ಜುನ್ನಪ್ಪನವರ, ಪ್ರೀತಂ ರೊಡ್ಡಪ್ಪನವರ, ಲಂಕೇಶ ರೊಡ್ಡಪ್ಪನವರ, ಆಕಾಶ ರೊಡ್ಡಪ್ಪನವರ, ವಾಸುದೇವ ಮಾದರ ಇವರನ್ನು ಲೋಕಾಪುರ ಪಟ್ಟಣದ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು, ಕ್ರೀಡಾಭಿಮಾನಿಗಳು ಅಭಿನಂದನೆ ಸಲ್ಲಿಸಿ ಬಸವೇಶ್ವರ ವೃತ್ತದಲ್ಲಿ ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು.

ಈ ಸಂದರ್ಭದಲ್ಲಿ ಸುರೇಶ ಪೂಜಾರ, ಗುಲಾಬಸಾಬ ಅತ್ತಾರ, ವಿಠ್ಠಲ ಜುನ್ನಪ್ಪನವರ, ಗ್ಯಾನು ರೊಡ್ಡಪ್ಪನವರ, ಹಣಮಂತ ಜೋಗಿನ, ಅರ್ಜುನ ಕಾಂಬಳೆ ಹಾಗೂ ಅನೇಕ ಕ್ರೀಡಾಭಿಮಾನಿಗಳು ಇದ್ದರು.



ಮರೇಗುದ್ದಿ ಕಾಮಗಾರಿ ಶೀಘ್ರ ಪೂರ್ಣಗೊಳಿಸಿ

ಜಮಖಂಡಿ: ಗಲಗಲಿ ಮರೇಗುದ್ದಿ ಏತ ನೀರಾವರಿ ಕಾಮಗಾರಿ ವಿಳಂಬವಾಗದೇ ಶೀಘ್ರ ಟೆಂಡರ ಕರೆದು ಕಾಮಗಾರಿ ಪ್ರಾರಂಭಿಸಲು ಒತ್ತಾಯಿಸಿ ಮಾಜಿ ಶಾಸಕ ಆನಂದ ನ್ಯಾಮಗೌಡ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಬೆಂಗಳೂರಿನಲ್ಲಿ ಮನವಿ ನೀಡಿದ್ದಾರೆ.

ಗಲಗಲಿ ಮರೇಗುದ್ದಿ ಏತ ನೀರವರಿ ಯೋಜನೆಯಲ್ಲಿ ಗಲಗಲಿ ಬ್ಯಾರೇಜಿನಿಮದ ಆಲಮಟ್ಟಿ ಜಲಾಶಯದ ಹಿನ್ನೀರನ್ನೆತ್ತಿ ಹಿಪ್ಪರಗಿ ಬ್ಯಾರೇಜಿನವರೆಗೆ ನೀರೆತ್ತುವ ಕಾಮಗರಿಯೂಕೂಡಿಸುಮಾರು 216. 50 ಕೋಟಿ ರೂ.ಗಳಿಗೆ ಟೆಂಡರ್ ಆಗಿದ್ದು, ಟೆಂಡರ್ ಅವಧಿಯಲ್ಲಿ ಈ ಕಾಮಗಾರಿ ಪೂರ್ಣಗೊಳಿಸುವುದು. ವಿಶೇಷ



ಮುತುವರ್ಜಿ ವಹಿಸಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ಸೂಚನೆ ನೀಡಿದ್ದಾರೆ ಎಂದು ತಿಳಿಸಿದ್ದಾರೆ.

ಬೇಸಿಗೆಯಲ್ಲಿ ಚಿಕ್ಕಪಡಸಲಗಿ ಬ್ಯಾರೇಜ್‌ನಲ್ಲಿನ ನೀರನ್ನು ಎತ್ತಿ ಹಾಕಲಾಗುತ್ತಿತ್ತು, ಇನ್ನು ಮುಂದೆ ಒಟ್ಟು 216.50 ಕೋಟಿ ವೆಚ್ಚದ ಯೋಜನೆಯಲ್ಲಿ ಬೇಸಿಗೆ ಸಮಯದಲ್ಲಿ ಆಲಮಟ್ಟಿ ಡ್ಯಾಮಿನ ಹಿನ್ನೀರಿನಿಂದಲ್ಲಿ ನೀರು ಎತ್ತುವ ಕಾರ್ಯಕ್ಕಾಗಿ 11.50 ಕೋಟಿ ಅನುದಾನ ಮೀಸಲಿರಿಸಲಾಗಿದೆ. ಇದರಿಂದ ಚಿಕ್ಕಪಡಸಲಗಿ ವ್ಯಾಪ್ತಿ ಪ್ರದೇಶದ ರೈತರಿಗೂ ಸಹ ಅನುಕೂಲವಾಗುತ್ತದೆ. ಮುಂದಿನ ಬೇಸಿಗೆಯಲ್ಲಿ ಈ ಕಾಮಗಾರಿ ಪೂರ್ಣಗೊಳಿಸುವ ಭರವಸೆಯನ್ನು ಸಹ ನಿಗಮದ ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದ್ದಾರೆ ಎಂದು ಮಾಜಿ ಶಾಸಕ ಆನಂದ ನ್ಯಾಮಗೌಡ ತಿಳಿಸಿದ್ದಾರೆ.

ಮಹಿಳೆಯರ ತಾಳ್ಮೆ, ಸಹನೆ ದೊಡ್ಡದು



ಮಹಾಲಿಂಗಪುರ: ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಗೆ ಅತ್ಯುನ್ನತ ಸ್ಥಾನವಿದೆ, ಕುಟುಂಬ, ಸಮಾಜ, ದೇಶದ ಅಭಿವೃದ್ಧಿಯಲ್ಲಿ ಮಹಿಳೆಯ ತ್ಯಾಗ, ಸಹನೆ, ಕ್ಷಮೆ ಅವರ್ಣನೀಯ ಎಂದು ಶಿಕ್ಷಕಿ ಸಪನಾ ಅನಿಗೋಳ ಹೇಳಿದರು. ಸ್ಥಳೀಯ ಗಡಾದದಲ್ಲಿಯ ವೀರರಾಣಿ ಕಿತ್ತೂರು ಚೆನ್ನಮ್ಮ ಸಭಾಭವನದಲ್ಲಿ ಪಂಚಮಸಾಲಿ ಮಹಿಳಾ ಘಟಕದ ವತಿಯಿಂದ ಜರುಗಿದ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಆಧುನಿಕ ಮಹಿಳೆಯರು ವಿವಿಧ ರಂಗಗಳಲ್ಲಿ ಸಾಧನೆ ಮಾಡುತ್ತಿದ್ದಾರೆ. ಮಕ್ಕಳನ್ನು ದೇಶದ ಶ್ರದ್ಧಾವಂತ ವ್ಯಕ್ತಿಯನ್ನಾಗಿ ಮಾಡುವ ಜವಾಬ್ದಾರಿ ತಾಯಂದಿರ ಮೇಲಿದೆ ಎಂದರು. ಕವಿತಾ ಕೊಣ್ಣೂರ, ಸಾವಿತ್ರಿ ಮೇಟಿ, ಶಿವಲೀಲಾ ಹುಬ್ಬಳ್ಳಿ, ಅನಿತಾ ಸುಣಧೋಳಿ ಮಾತನಾಡಿದರು. ಮಹಿಳಾ ಘಟಕದ ಅಧ್ಯಕ್ಷೆ ವಿದ್ಯಾ ದಿನ್ನಿಮನಿ ಅಧ್ಯಕ್ಷತೆ ವಹಿಸಿದ್ದರು, ಸಲಹಾ ಸಮಿತಿಯ ಅಧ್ಯಕ್ಷೆ ಉಷಾ ಬೆಳಗಲಿ, ಎ.ಎ.ಕಿಚಡಿ, ಶಶಿರೇಖಾ ಉದ್ದಾರ, ರೇಣುಕಾ ಹುಬ್ಬಳ್ಳಿ, ಸುಮಾ ಉಳ್ಳೇಗಡ್ಡಿ, ಸರೋಜಿನಿ ಶಿರೋಳ, ಕವಿತಾ ಸುಣಧೋಳಿ, ಎನ್.ಎಸ್.ಪಾಟೀಲ, ಮೀನಾಕ್ಷಿ ಹುಬ್ಬಳ್ಳಿ, ಶಶಿಕಲಾವಜ್ರಮಟ್ಟಿ, ಮೀನಾಕ್ಷಿ ಕೌಜಲಗಿ, ಸರೋಜಿನಿ ಕುಳಲಿ, ಸವಿತಾಪಾಟೀಲ, ಜಯಶ್ರೀ ಪಟ್ಟಣಶೆಟ್ಟಿ, ಭಾರತೀಯ ಹುದ್ದಾರ, ರತ್ನಾ ದಲಾಲ, ಸರೋಜಿನಿ ಶಿರೋಳ, ಕವಿತಾ ಸುಣಧೋಳಿ, ಎನ್.ಎನ್.ಪಾಟೀಲ ಇತರರಿದ್ದರು.

ಕಿರುಸುದ್ದಿ

ಜಿಲ್ಲಾಮಟ್ಟದ ಸಭೆ ಕರೆಯಲಿ: ಸಂಸದ ಜಿಗಜಿಣಗಿ

ವಿಜಯಪುರ: ಜಿಲ್ಲೆಯಲ್ಲಿ ಬೇಸಿಗೆಗೂ ಮುನ್ನವೇ ಬಿಸಲಿನ ಪ್ರಖರತೆ ಅಧಿಕವಾಗಿದೆ, ಬಿಸಿಲಿನ ತೀವ್ರತೆಯಿಂದ ಜಲಮೂಲಗಳು ಬತ್ತಿ ಕುಡಿಯುವ ನೀರಿಗೆ ವ್ಯತ್ಯಯ ಸೇರಿ ಮತ್ತಿತರ ಎದುರಾಗುವ ಸಮಸ್ಯೆಗಳಿಗೆ ಮುಂಜಾಗ್ರತಾ ಕ್ರಮವಾಗಿ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲರು ಕೂಡಲೇ ಜನಪ್ರತಿನಿಧಿಗಳ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳ ವಿಶೇಷ ಸಭೆ ಕರೆಯಬೇಕು ಎಂದು ಸಂಸದ ರಮೇಶ ಜಿಗಜಿಣಗಿ ಆಗ್ರಹಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ಬೇಸಿಗೆ ಮುನ್ನವೇ ಬಿಸಿಲಿನ ತೀವ್ರತೆ ಅಧಿಕವಾಗಿದೆ, ವಿಜಯಪುರ ನಗರದಲ್ಲಿ 8 ರಿಂದ 10 ದಿನಕ್ಕೆ ನೀರು ಪೂರೈಕೆಯಾಗುತ್ತಿದ್ದು, ನೀರಿನ ಹಾಹಾಕಾರ ಉಂಟಾಗುವ ಎಲ್ಲ ಲಕ್ಷಣಗಳು ಗೋಚರಿಸುತ್ತಿವೆ. ಹೀಗಾಗಿ ಮುಂಬರುವ ಪರಿಸ್ಥಿತಿಗೆ ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳುವುದು ಒಳ್ಳೆಯದು. ನಗರ ಹಾಗೂ ಗ್ರಾಮೀಣ ಯಾವುದೇ ಭಾಗದಲ್ಲಿ ಕುಡಿಯುವ ನೀರಿನ ಸಮರ್ಪಕ ಪೂರೈಕೆಯಾಗಬೇಕು, ಈ ನಿಟ್ಟಿನಲ್ಲಿ ಆಡಳಿತ ಯಂತ್ರ ಚುರುಕಾಗಬೇಕು, ಅನೇಕ ವಿಷಯದಲ್ಲಿ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿರುವ ರಾಜ್ಯ ಕಾಂಗ್ರೆಸ್ ಸರ್ಕಾರ ಈ ವಿಷಯವನ್ನಾದರೂ ಗಂಭೀರವಾಗಿ ತೆಗೆದುಕೊಳ್ಳಬೇಕು ಎಂದರು.



ಪ್ರಧಾನಿ ವಿರುದ್ಧ ಪ್ರತಿಭಟನೆ ಸರಿಯಲ್ಲ: ಅಣ್ಣಿಗೇರಿ

ವಿಜಯಪುರ: ಅಮೆರಿಕ, ಇಸ್ರೇಲ್ ದೇಶಗಳು ಇರಾನ್ ಮೇಲೆ ಯುದ್ಧ ಮಾಡುತ್ತಿರುವುದರಿಂದ ಸುತ್ತಮುತ್ತಲಿನ 14 ದೇಶಗಳಿಗೆ ಯುದ್ಧ ವ್ಯಾಪಿಸಿದೆ. ಇದರಲ್ಲಿ ನರೇಂದ್ರ ಮೋದಿಯವರ ತಪ್ಪಾದರೂ ಏನು? ಆದರೆ ನಮ್ಮ ದೇಶದಲ್ಲಿದಲ್ಲಿ ಕಾಂಗ್ರೆಸ್ ಪಕ್ಷ ನರೇಂದ್ರ ಮೋದಿ ಯವರ ವಿರುದ್ಧ ಪ್ರತಿಭಟನೆಗೆ ಇಳಿದಿರುವುದು ಸರಿಯಲ್ಲ ಎಂದು ಸ್ವಾಮಿ ವಿವೇಕಾನಂದ ಸೇನೆ ರಾಜ್ಯಾಧ್ಯಕ್ಷ ರಾಘವ್ ಅಣ್ಣಿಗೇರಿ ಹೇಳಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ಕರ್ನಾಟಕದಲ್ಲಿ ಸಿಲೆಂಡರ್‌ಗಳನ್ನು ಕೆಲ ಕಾಂಗ್ರೆಸ್ಸಿಗರು ಬೀದಿಯಲ್ಲಿ ತಂದು ಪ್ರತಿಭಟಿಸುತ್ತಿರುವುದು ಏತಕ್ಕಾಗಿ?, ಭಾರತಕ್ಕೆ ಯಾವುದೇ ರೀತಿಯಲ್ಲಿ ಸಂಬಂಧವಿಲ್ಲದ ಆಯಾ ದೇಶಗಳ ಮಧ್ಯದಲ್ಲಿನ ಯುದ್ಧದಿಂದ ಇಡೀ ಪ್ರಪಂಚಕ್ಕೆ ಸಿಲೆಂಡರ್ ಕೊರತೆ ಕಾಡುತ್ತಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ವಿಪಕ್ಷವಾದ ಕಾಂಗ್ರೆಸ್ ತನ್ನ ಜವಾಬ್ದಾರಿ ತಿಳಿದುಕೊಳ್ಳದೇ, ಅನಾವಶ್ಯಕವಾಗಿ ಪ್ರತಿಭಟನೆಗಳನ್ನು ಮಾಡಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಟೀಕಿಸುತ್ತ ದೇಶದಲ್ಲಿ ಮತ್ತಷ್ಟು ಅರಾಜಕತೆ ಉಂಟು ಮಾಡುತ್ತಿರುವುದು ಯಾವ ನ್ಯಾಯ?, ಆಡಳಿತ ಪಕ್ಷದೊಂದಿಗೆ ವಿಪಕ್ಷ ಸೇರಿಕೊಂಡು, ಇಂತಹ ಪರಿಸ್ಥಿತಿಯಲ್ಲಿ ನಾವು ಯಾವುದೇ ರಾಜಕೀಯ ಮಾಡದೆ ನಿಮ್ಮ ಜೊತೆಯಲ್ಲಿ ಇರುತ್ತೇವೆ ಎಂದು ಹೇಳುವುದನ್ನು ಬಿಟ್ಟು, ಇದರಲ್ಲಿಯೂ ಕೂಡ ರಾಜಕೀಯ ಮಾಡಲು ಹೊರಟಿದ್ದು ವಿಪರ್ಯಾಸ ಎಂದು ತಿಳಿಸಿದ್ದಾರೆ.



ರಾಜ್ಯಮಟ್ಟದ ಪ್ರಶಸ್ತಿಗೆ ಆಹ್ವಾನ

ಬಸವನಬಾಗೇವಾಡಿ: ಕರ್ನಾಟಕ ನಾಟಕ ಬರಹಗಾರರ(ಕವಿಗಳ)ಪ್ರಥಮ ಜಿಲ್ಲಾ ಸಮ್ಮೇಳನದ ಅಭಿನಂದನಾ ಸಮಾರಂಭ ಹಾಗೂ ಸ್ಮರಣ ಸಂಚಿಕೆ ಬಿಡುಗಡೆ ಮತ್ತು ಕಲೆ, ಸಾಹಿತ್ಯ, ಕ್ರೀಡೆ, ರಂಗಭೂಮಿ, ಸಂಗೀತ ಕ್ಷೇತ್ರ, ಸಮಾಜ ಸೇವೆ ಪತ್ರಿಕೋದ್ಯಮ, ಶಿಕ್ಷಣ ಹಾಗೂ ಭಜನೆ.ಹಾಗೂ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಿಗೆ ರಾಜ್ಯಮಟ್ಟದ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಏಪ್ರಿಲ್ ಕೊನೆಯ ವಾರದಲ್ಲಿ ಕಾರ್ಯಕ್ರಮ ಆಯೋಜಿಸಲಾಗುವುದು. ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರು ರಾಜ್ಯಮಟ್ಟದ ಪ್ರಶಸ್ತಿಗೆ ಅರ್ಜಿ ಸಲ್ಲಿಸಬಹುದೆಂದು ನಾಟಕ ಬರಹಗಾರರ(ಕವಿಗಳ) ಸಂಘದ ಜಿಲ್ಲಾಧ್ಯಕ್ಷ ವೈ.ಎಚ್.ಅಂಗಡಗೇರಿ ಹಾಗೂ ರಾಜ್ಯ ಸಂಚಾಲಕ ರಾಘವೇಂದ್ರ ಉಮ್ಮರಗಿ ಹೇಳಿದರು. ಅರ್ಜಿಯನ್ನು ಮಾ.25ರ ಒಳಗಾಗಿ ಜಿಲ್ಲಾಧ್ಯಕ್ಷರು ಕರ್ನಾಟಕ ನಾಟಕ ಬರಹಗಾರರ ಕವಿಗಳ ಸಂಘ ವಿಜಯಪುರ.ಸಾ.ನಾಗೂರ ಬಸವನಬಾಗೇವಾಡಿ ತಾಲೂಕು ವಿಜಯಪುರ. ಜಿಲ್ಲೆ 586203 ಈ ವಿಳಾಸಕ್ಕೆ ತಮ್ಮ ಸ್ವ-ವಿವರವುಳ್ಳ ಅರ್ಜಿ ಕಳಿಸಿಕೊಡಲು ಕೋರಲಾಗಿದೆ.

ಶಾಂತಾಬಾಯಿ ನಿಧನ

ಬಸವನಬಾಗೇವಾಡಿ: ಪಟ್ಟಣದ ತೆಲಗಿ ರಸ್ತೆಯ ಕಾಳಹಸ್ತೇಶ್ವರಮಠದ ಹತ್ತಿರದ ಶತಾಯುಷಿ ಅಜ್ಜಿ ವಿಪ್ರ ಸಮಾಜದ ಹಿರಿಯರಾದ ಶಾಂತಾಬಾಯಿ ಗುಂಡೂರಾವ್ ಕುಲಕರ್ಣಿ(102) ನಿಧನರಾದರು. ಮೃತರಿಗೆ ಐದು ಜನ ಪುತ್ರಿಯರು ಸೇರಿ ಅಪಾರ ಬಂಧು-ಬಳಗ ಇದ್ದಾರೆ.





ವಿಜಯಪುರ: ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಅಬಾಟ್ ಇಂಡಿಯಾ ಐಟಿಡಿ ವಿಜಯಪುರ, ಮತ್ತು ವಿದ್ಯಾರ್ಥಿನಿ ಕ್ಷೇಮಪಾಲನ ನಿರ್ದೇಶನಾಲಯ ಹಾಗೂ ಆರೋಗ್ಯ ಕೇಂದ್ರ ಇವರ ಸಹಯೋಗದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಥೈರಾಯಿಡ್ ತಪಾಸಣಾ ಪರೀಕ್ಷಾ ಶಿಬಿರ ಕಾರ್ಯಕ್ರಮ ನಡೆಯಿತು. ಮಹಿಳಾ ವಿವಿಯ ಕುಲಸಚಿವ ಶಂಕರಗೌಡ ಸೋಮನಾಳ ಸೇರಿದಂತೆ ಇತರರು ಇದ್ದರು.

ಮಕ್ಕಳಿಗೆ ಸಂಸ್ಕೃತಿ ಮುಖ್ಯ: ಕಲ್ಲಿನಾಥ ಶ್ರೀಗಳು

ಕೊಲ್ಹಾರ: ಮಕ್ಕಳಿಗೆ ಶಿಕ್ಷಣ ನೀಡುವ ಜವಾಬ್ದಾರಿಗಿಂತಲೂ ಸಂಸ್ಕಾರ ನೀಡುವಲ್ಲಿ ಪಾಲಕರ ಮತ್ತು ಶಿಕ್ಷಕರ ಪಾತ್ರ ಮಹತ್ವದ್ದು. ಇಂದಿನ ದಿನಗಳಲ್ಲಿ ಪಾಲಕರು ತಮ್ಮ ಮಕ್ಕಳನ್ನು ದೊಡ್ಡ ಶಾಲೆಗೆ ಕಳುಹಿಸುತ್ತಾರೆ. ಆದರೆ ಸಂಸ್ಕೃತಿ ಪಡೆಯುವಲ್ಲಿ ವಿಫಲರಾಗುತ್ತಾರೆ. ಇಂತಹ ಸರ್ಕಾರಿ ಶಾಲೆಯಲ್ಲಿ ಮಕ್ಕಳಿಗೆ ವಿದ್ಯೆ ಜೊತೆಗೆ ಸಂಸ್ಕೃತಿ ಕಲಿಸುತ್ತಾರೆ ಎಂದು ಕಲ್ಲಿನಾಥ ದೇವರು ಹೇಳಿದರು. ಪಟ್ಟಣದ ಸರ್ಕಾರಿ ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಾಲೆಯಲ್ಲಿ 121ನೇ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಶ್ರೀಗಳು ಮಾತನಾಡಿದರು. ಕ್ಷೇತ್ರ ಶಿಕ್ಷಣಾಧಿಕಾರಿ ವಸಂತ ರಾಠೋಡ ಮಾತನಾಡಿ, ಈಕೆಜಿಎಸ್ ಶಾಲೆ ಕರ್ನಾಟಕ ಪಬ್ಲಿಕ್ ಶಾಲೆಯಾಗಿ ಪರಿವರ್ತನೆಯಾಗಿದೆ ಇದು ಮುಂದೆ ಹೆಮ್ಮರವಾಗಿ ಬೆಳೆದು ಈ ಭಾಗದ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡಲಿದೆ ಎಂದು ಹೇಳಿದರು. ಪ್ರತಿಭಾವಂತ ಮಕ್ಕಳಿಗೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರನ್ನು ಸನ್ಮಾನಿಸಿ ಗೌರವಿಸಲಾಯಿತು. ಎನ್.ಎ.ಬನಸೋಡೆ ಮಾತನಾಡಿದರು. ಆರ್.ಎಚ್.ನಾವಿ, ಎಸ್ಡಿಎಂಸಿ ಅಧ್ಯಕ್ಷೆ ರೂಪಾ ಗಿಡ್ಡಪ್ಪಗೋಳ, ರಾಜಮಾ ನದಾಫ್, ಅಶೋಕ ಗಿಡ್ಡಪ್ಪಗೋಳ, ಲಕ್ಷ್ಮೀ ಜಿಡ್ಡಿಬಾಗಿಲ, ಕೆ.ಯು.ಗಿಡ್ಡಪ್ಪಗೋಳ, ಸುರೇಶ ಬಿರಾದಾರ, ಜಿ.ಜಿ.ಕುಲಕರ್ಣಿ, ಎಸ್.ಎಸ್.ಜಂಗಮಶೆಟ್ಟಿ, ಎಸ್.ಎನ್.ತಡಲಗಿ, ಆನಂದ ಪವಾರ, ಪುಂಡಲೀಕ ಬೆಳ್ಳುಬ್ಬಿ, ಐ.ಎಂ.ಬಾಟಿ, ಮಾರುತಿ ಪವಾರ, ಲಕ್ಷ್ಮಣ ಕುಂಬಾರ, ಜ್ಯೋತಿ ಕೊಟ್ಟಗಿ, ಮಂಜುನಾಥ ತುಂಬರಮಟ್ಟಿ, ಕಾಶೀಬಾಯಿ ಬಾಲಗೊಂಡ, ಮಂಜುನಾಥ ಲಿಂಬಿಕಾಯಿ ಇದ್ದರು.



ಕೊಲ್ಹಾರ: ಪಟ್ಟಣದ ಸರ್ಕಾರಿ ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಾಲೆಯಲ್ಲಿ 121ನೇ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮಕ್ಕೆ ಕಲ್ಲಿನಾಥ ದೇವರು ಚಾಲನೆ ನೀಡಿದರು. ಹೊನ್ನಪ್ಪ ಹಡಪದ, ಕಲ್ಲು ಬಾಲಗೊಂಡ,ನಾಮದೇವ ಚೌವ್ಹಾಣ್, ಶಕುಂತಲಾ ಚೌಡಪ್ಪನವರ, ಶೋಭಾ ಬಾಟಿ, ರುದ್ರಮ್ಮ ಗಿಡ್ಡಪ್ಪಗೋಳ, ಐ.ಸಿ.ಪಾಟೀಲ, ಜಿ.ಡಿ.ಆಸಂಗಿ, ಪಿ.ಎಸ್.ಬಸರಕೋಡ, ಐ.ಬಿ.ಹಾದಿಮನಿ, ಎಸ್.ಎಂ.ಕೋರಿ, ಆರ್.ಎಸ್.ಜತ್ತಿ ಉಪಸ್ಥಿತರಿದ್ದರು.

ಬಸವಣ್ಣ, ಅಕ್ಕಮಹಾದೇವಿ ವಿರುದ್ಧ ಅವಹೇಳನ: ಕ್ರಮಕ್ಕೆ ಒತ್ತಾಯಿಸಿ ಮನವಿ

ವಿಜಯಪುರ: ವಿಶ್ವಗುರು ಬಸವಣ್ಣ ಹಾಗೂ ಶರಣೆ ಅಕ್ಕಮಹಾದೇವಿ ಕುರಿತು ಕೀಳುಮಟ್ಟದ ಭಾಷೆಯಿಂದ ಅಶ್ಲೀಲವಾಗಿ ಬರೆದು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟ ರಮಾಕಾಂತ ಎಂ. ಎಂಬ ವ್ಯಕ್ತಿಯನ್ನು ಸಾರ್ವಜನಿಕವಾಗಿ ನೇಣುಗಂಬಕ್ಕೆ ಏರಿಸಬೇಕು ಎಂದು ಆಗ್ರಹಿಸಿ ಜಿಲ್ಲೆಯ ಬಸವಾಭಿಮಾನಿಗಳು ಹಾಗೂ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ನಗರದಲ್ಲಿ ಪ್ರತಿಭಟನೆ ನಡೆಸಿ, ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ ಅವರಿಗೆ ಮನವಿ ಸಲ್ಲಿಸಿದರು.

ವಿಶ್ವ ಗುರು ಬಸವಣ್ಣನವರ ವಂಶಸ್ಥ ಅರವಿಂದ ಕುಲಕರ್ಣಿ, ಮಾನವ ಬಂಧುತ್ವ ವೇದಿಕೆ ಜಿಲ್ಲಾ ಸಂಚಾಲಕ ಪ್ರಭುಗೌಡ ಪಾಟೀಲ ಮಾತನಾಡಿ, ಸಾಮಾಜಿಕ ಸಮಾನತೆಯ ಕನಸು ಕಂಡ ಕ್ರಾಂತಿಕಾರಿ ಮನಸ್ಸುಳ್ಳ 12ನೇ ಶತಮಾನದ ಮಹಾಮಾನವತಾವಾದಿ ವಿಶ್ವಗುರು ಬಸವಣ್ಣನವರು ಹಾಗೂ ಶರಣೆ ವೈರಾಗ್ಯ ನಿಧಿ ಅಕ್ಕಮಹಾದೇವಿ ಕುರಿತು ಇತ್ತೀಚೆಗೆ ಫೇಸ್‌ಬುಕ್‌ನಲ್ಲಿ ರಮಾಕಾಂತ ಎಂ. ಎಂಬ ವ್ಯಕ್ತಿ ಕೀಳುಮಟ್ಟದ ಅಶ್ಲೀಲ ಭಾಷೆಯಿಂದ ಬರೆದು ಜಾಲತಾಣದಲ್ಲಿ ಹರಿಬಿಟ್ಟಿದ್ದು, ಇದನ್ನು ಗೀತಾ ಹಿರೋಳಿ ಎಂಬ ಮಹಿಳೆ ಫೇಸ್‌ಬುಕ್ ನೋಡಿ ಹಂಚಿಕೊಂಡಿದ್ದಾರೆ. ಅದರಲ್ಲಿ ಬರೆದ ಭಾಷೆ ಅತಿ ಕೀಳು ಮಟ್ಟದಿಂದ ಅಶ್ಲೀಲ ಪದ ಉಪಯೋಗಿಸಿ ಬರೆದಿದ್ದು ಅದನ್ನು ಗಮನಿಸಿದರೆ ಎಂಥವರಿಗಾದರೂ ಕೂಡ ದಿಗ್ಭ್ರಮೆಯಾಗುತ್ತದೆ. ಕೂಡಲೇ ಈತನ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.



ರಮಾಕಾಂತ ಎಂ. ಎಂಬ ಹೆಸರಿನ ಫೇಸ್‌ಬುಕ್ ಬಳಕೆದಾರನು ಸೋಸಿಯಲ್ ಮಿಡಿಯಾವನ್ನು ದುರುಪಯೋಗ ಪಡಿಸಿಕೊಂಡು ಒಂದು ವರ್ಗದ ಮತ್ತು ಜನಾಂಗದ ಧರ್ಮವನ್ನು ಹಾಗೂ ಧಾರ್ಮಿಕ ಭಾವನೆಗಳಿಗೆ ಧಕ್ಕೆಯನ್ನುಂಟು ಮಾಡುವ ಉದ್ದೇಶದಿಂದ ಅಶ್ಲೀಲ ಪದಗಳನ್ನು ಬಳಸಿದ್ದಾನೆ. ಇದೇ ರೀತಿ ಸಮಾಜದ ಭಾವನೆಗೆ ಧಕ್ಕೆ ತರುವಂತಹ ಕೆಲಸವನ್ನು ಯಾರೂ ಮುಂದೆ ಮಾಡಬಾರದು. ಯಾವುದೇ ಶರಣ ಶರಣೆಯರಿಗೂ ಇಂತಹ ಅವಹೇಳನಕಾರಿ ಅಶ್ಲೀಲಪದಗಳನ್ನು ಬಳಸದಂತೆ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು.

ಈಗಾಗಲೇ ಈ ಕುರಿತು ಬಸವನಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿ ಎಫ್‌ಐಆರ್ ಕೂಡ ಮಾಡಲಾಗಿದೆ. ಕೂಡಲೇ ಪೊಲೀಸ್ ಇಲಾಖೆ ತನಿಖೆ ಕೈಗೊಂಡು ಆರೋಪಿಯನ್ನು ತಕ್ಷಣ ಬಂಧಿಸಬೇಕು ಎಂದರು.

ಈ ಸಂದರ್ಭದಲ್ಲಿ ಜಾಗತಿಕ ಲಿಂಗಾಯತ ಮಹಾಸಭಾದ ಅಧ್ಯಕ್ಷ ಬಸನಗೌಡ ಹರನಾಳ, ಭೋಗೇಶ ಸೊಲ್ಲಾಪುರ, ಶಿವಾನಂದ ಬಿರಾದಾರ, ಶಿವಪ್ಪ ಮಾಳಗೊಂಡ, ಅಪ್ಪಾಸಾಹೇಬ ಶೇನಖೇಡ, ಅಡಿವೆಪ್ಪ ಸಾಲಗಲ್ಲ, ಚಂದ್ರಶೇಖರ ಘಂಟೆಪ್ಪಗೋಳ, ಮಹಾದೇವ ಬನಸೋಡೆ, ಕಿರಣ ಮೇಲಿನಕೇರಿ, ಎನ್.ಕೆ. ಕುಂಬಾರ, ಶ್ರೀನಿವಾಸ ರಾಜಗೋಪಾಲ ಶಹಾಪೂರ, ಮಲ್ಲಿಕಾರ್ಜುನ ಬಟಗಿ, ಶಶಿಕಲಾ ಕೊಟಗಿ, ವಿದ್ಯಾರಾಣಿ ತುಂಗಳ, ಸವಿತಾ ವಗ್ಗರ, ಸಂಗೀತಾ ಪೂಜಾರಿ, ರಾಜೇಶ್ವರಿ ಚೋಳಕೆ ಇದ್ದರು.

ಹಿಂದುತ್ವ ರಾಷ್ಟ್ರೀಯತೆಯ ಸಂಕೇತ

ಚಡಚಣ: ಹಿಂದುತ್ವ ಎನ್ನುವುದು ಒಂದು ಸನಾತನ ಆಚರಣೆ. ಇದು ಎಲ್ಲ ಜಾತಿ ಮತಗಳನ್ನು ಒಳಗೊಂಡ ಒಂದು ರಾಷ್ಟ್ರೀಯತೆಯ ಸಂಕೇತ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕರ್ನಾಟಕ ಉತ್ತರ ಪ್ರಾಂತೀಯ ಕಾರ್ಯಕಾರಣಿ ಸದಸ್ಯ ರವೀಂದ್ರ ಜೀ ಹೇಳಿದರು.

ಪಟ್ಟಣದಲ್ಲಿ ಆಯೋಜಿಸಿದ್ದ ಹಿಂದು ಸಮ್ಮೇಳನದಲ್ಲಿ ಮಾತನಾಡಿ, ಹಿಂದುತ್ವ ಎನ್ನುವುದು ಭಾರತೀಯತೆ, ದೇಶ ಭಕ್ತಿ. ಇದು ಯಾವುದೇ ಜಾತಿ ಮತವಲ್ಲ, ಆರ್.ಎಸ್.ಎಸ್ ಕೆಲಸ ಮಾಡುವುದು ಹಿಂದುತ್ವಕ್ಕಾಗಿ, ಹಿಂದು ರಾಷ್ಟ್ರ ನಿರ್ಮಾಣದ ಉದ್ದೇಶ ಹೊಂದಿದೆ. ಈ ಸಂಘಟನೆ ಹಿಂದುಗಳನ್ನು ಒಗ್ಗೂಡಿಸುವ ಕೆಲಸ ಮಾಡುತ್ತಿದೆ. ಆರ್.ಎಸ್.ಎಸ್ ಒಂದು ಅಲಿಖಿತ ಸಂಘಟನೆ. ಈ ಸಂಘಟನೆ ಎಲ್ಲಿಯೂ ನೋಂದಾವಣೆಯಾಗಿಲ್ಲ. ನಾವುಗಳು ನಮ್ಮ ನಮ್ಮಲ್ಲಿಯ ಪಂಥಗಳನ್ನು ಬಿಟ್ಟು ನಾವೆಲ್ಲ ಹಿಂದೂ ಒಂದೇ ಎಂಬ ಧ್ಯೇಯದಿಂದ ನಡೆದಾಗ ಮಾತ್ರ ಹಿಂದೂ ರಾಷ್ಟ್ರ ಬಲಿಷ್ಠವಾಗಲು ಸಾಧ್ಯ ಎಂದರು.

ಹುಕ್ಕೇರಿಯ ಅಭಿನವ ಮಂಜುನಾಥ ಸ್ವಾಮೀಜಿ ಮಾತನಾಡಿ, ಮೊದಲು ನಾವೆಲ್ಲರೂ ನಮ್ಮಲ್ಲಿಯ ಬೇಧ ಭಾವವನ್ನು ಮರೆತು ಒಗ್ಗೂಡಿಕೊಂಡಾಗ ಮಾತ್ರ ಹಿಂದುತ್ವ ಉಳಿಯಲು ಸಾಧ್ಯ. ನಾವೆಲ್ಲ ಮಠಾಧೀಶರು ಎಲ್ಲರೂ ಹಿಂದು ಎಂದು ಭಾವಿಸಿ, ದೇಶದ ಪ್ರಜೆಗಳಲ್ಲಿ ಹಿಂದುತ್ವದ ಅರಿವನ್ನು ಮೂಡಿಸಬೇಕು. ನಾವು ಹಿಂದುಗಳು ಎಲ್ಲ ಸಮಯದಲ್ಲೂ ಎಚ್ಚರಿಕೆಯಿಂದ ಇದ್ದಾಗ ಮಾತ್ರ ನಮ್ಮ ದೇಶ ಭದ್ರವಾಗಿ, ಹಿಂದೂಗಳು ಸ್ವತಂತ್ರರಾಗಿರುತ್ತಾರೆ ಎಂದರು.

ಸ್ಥಳೀಯ ವಿರಕ್ತ ಮಠದ ಷಡಕ್ಷರ ಸ್ವಾಮೀಜಿ, ಹಾವಿನಾಳದ ವಿಜಯ ಮಹಾಂತೇಶ ಸ್ವಾಮೀಜಿ, ಓಂ ಶಾಂತಿ ಕೇಂದ್ರದ ಶ್ರೀದೇವಿ ಅಕ್ಕ, ಹಿಂದು ಸಮ್ಮೇಳನ ಸಂಚಲನಾ ಸಮಿತಿ ಅಧ್ಯಕ್ಷ ಶಾಂತುಗೌಡ ಬಿರಾದಾರ ಮಾತನಾಡಿದರು.

ಚೇತನ ನಿರಾಳೆ ನಿರೂಪಿಸಿ, ರಾಜುಗೌಡ ಝುಳಕಿ ಸ್ವಾಗತಿಸಿದರು. ಪಟ್ಟಣದ ವಿದ್ಯಾನಗರದ ಹನುಮಾನ ಮಂದಿರದಿಂದ ಬೃಹತ್ ಶೋಭಾ ಯಾತ್ರೆ ಜರುಗಿತು. ಗೊಂಬೆ ಕುಣಿತ, ವಿವಿಧ ವಾದ್ಯ ಮೇಳಗಳು, ಹಲವಾರು ರಾಷ್ಟ್ರೀಯ ನಾಯಕರ ಭಾವಚಿತ್ರಗಳ ಮೆರವಣಿಗೆ ರಿಕ್ಷಾಗಳ ಮೇಲೆ ಇಟ್ಟು ಜಾಥಾ ನಡೆಯಿತು. ಮುಖಂಡರಾದ ಚಿದಾನಂದ ಚಲವಾದಿ, ಭೀಮಾ ಶಂಕರ ಬಿರಾದಾರ, ಸಂಜು ಐಹೊಳ್ಳಿ, ಕಾಂತುಗೌಡ ಪಾಟೀಲ, ರಾಮ ಅವಟಿ, ಚಂದು ನಿರಾಳೆ ಗ್ರಾಮಸ್ಥರು ಪಾಲ್ಗೊಂಡಿದ್ದರು.



ತಾಲೂಕಿನಲ್ಲಿ ಅಭಿವೃದ್ಧಿ ಕಾರ್ಯವಿಲ್ಲ: ಭೂಸನೂರ

ಸಿಂದಗಿ: ಹಾಲಿ ಶಾಸಕರು ಮೂರು ವರ್ಷದ ಅವಧಿಯಲ್ಲಿ ಮೂರು ಕಿಮೀ ಡಾಂಬರ ರಸ್ತೆ ನಿರ್ಮಿಸಿ ಸಾಮಾಜಿಕ ಜಾಲತಾಣದಲ್ಲಿ ಏನೋ ಸಾಧನೆ ಮಾಡಿದ ಹಾಗೆ ಪ್ರಚಾರ ಪಡೆಯುತ್ತಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಅವರ ವಿರುದ್ಧ ಪೋಸ್ಟ್ ಅಥವಾ ಏನಾದರೂ ಬರೆದರೆ ಅಂತಹವರ ವಿರುದ್ಧ ಪೊಲೀಸ್ ಇಲಾಖೆಯಿಂದ ಬೆದರಿಸುವ ಕಾರ್ಯ ಮಾಡುತ್ತಾ ಪೊಲೀಸ್ ಇಲಾಖೆಯನ್ನು ಕಾಂಗ್ರೆಸ್ ಕೀಲಿ ಕೈ ತರಹ ಮಾಡಿಕೊಂಡಿದ್ದಾರೆ ಎಂದು ಮಾಜಿ ಶಾಸಕ ರಮೇಶ ಭೂಸನೂರ ಹರಿಹಾಯ್ದರು.

ಸಿಂದಗಿಯ ಜ್ಯೋತಿ ನಗರದ ಜ್ಯೋತಿ ಕಲ್ಯಾಣ ಮಂಟಪದಲ್ಲಿ ಬಿಜೆಪಿ ಮಂಡಲ ಕಾರ್ಯಕಾರಣಿ ಸಭೆ ಹಾಗೂ ಬಿಎಲ್‌ಎ-2 ಸದಸ್ಯರ ಕಾರ್ಯಗಾರವನ್ನು ಮಾಜಿ ಶಾಸಕ ರಮೇಶ ಭೂಸನೂರ ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದಿಂದ ತುಂಬಿದೆ. ಮುಂಬರುವ ದಿನಮಾನಗಳಲ್ಲಿ ಕಾಂಗ್ರೆಸ್ ಪಕ್ಷ ಅವನತಿ ದಾರಿ ಹಿಡಿಯಲಿದೆ. ತಾಲೂಕಿನಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳಾಗುತ್ತಿಲ್ಲ. ಕೇವಲ ಪ್ರಚಾರಕ್ಕೆ ಮಾತ್ರ ಸಿಮೀತವಾಗಿದೆ ಎಂದು ಆರೋಪಿಸಿದರು.

ಮಂಡಲ ಅಧ್ಯಕ್ಷ ಸಂತೋಷ ಪಾಟೀಲ ಡಂಬಳ ಮಾತನಾಡಿ, ಬಿಜೆಪಿ ವಿಶ್ವದಲ್ಲಿಯೇ ಅತೀ ಹೆಚ್ಚು ಕಾರ್ಯಕರ್ತರನ್ನು ಹೊಂದಿರುವ ಏಕೈಕ ದೊಡ್ಡ ಪಕ್ಷ. ಇಂತಹ ಪಕ್ಷದಲ್ಲಿ ಸದಸ್ಯರು ಇದ್ದದ್ದು ನಮ್ಮ ಹೆಮ್ಮೆಯ ವಿಷಯ ಎಂದರು.

ವಂದೇ ಮಾತರಂ ಗೀತೆಗೆ 150 ವರ್ಷ ಪೂರ್ಣಗೊಂಡ ದಿಸೆಯಲ್ಲಿ ಕಾರ್ಯಕ್ರಮದಲ್ಲಿ ಅಭಿನಂದನಾ ನಿರ್ಣಯ ಕೈಗೊಳ್ಳಲಾಯಿತು. ಅದೇ ರೀತಿ ಸಿಂದಗಿ ನಗರದ ಸರ್ವೇ ನಂ.842 ಪ್ರಕಣದ 84 ಕುಟಂಬಗಳಿಗಾದ ಅನ್ಯಾಯದ ವಿರುದ್ಧ ನಿರ್ಣಯ ಕೈಗೊಳ್ಳಲಾಯಿತು.

ಇದೇ ಸಂದರ್ಭದಲ್ಲಿ ಶ್ರೀಶೈಲಗೌಡ ಬಿರಾದಾರ ಮಾಗಣಗೇರಿ, ಈರಣ್ಣ ರಾವೂರ, ಅಶೋಕ ಅಲ್ಲಾಪುರ, ಮಲ್ಲಿಕಾರ್ಜುನ ಜೋಗೂರ, ವಿವೇಕ ಡಬ್ಬಿ, ಸಿದ್ದು ಬುಳ್ಳಾ, ಪೀರು ಕೆರೂರ, ರಾಜಶೇಖರ ಪೂಜಾರಿ, ಅಶೋಕ ನಾರಾಯಣಪೂರ, ಪ್ರಶಾಂತ ಕದ್ದರಕಿ, ವಿಠ್ಠಲ ನಾಯ್ಕೋಡಿ, ನೀಲಮ್ಮ ಯಡ್ರಾಮಿ, ಶ್ರೀಮಂತ ನಾಗೂರ, ಗುರು ತಳವಾರ, ಸಿದ್ರಾಮ್ ಆನಗೊಂಡ, ಸೇರಿದಂತೆ ಮಂಡಲದ ಪದಾಧಿಕಾರಿಗಳು, ಮೋರ್ಚಾ ಅಧ್ಯಕ್ಷರು, ಪದಾಧಿಕಾರಿಗಳು ಚುನಾಯಿತ ಪ್ರತಿನಿಧಿಗಳು ಇತರರು ಇದ್ದರು.



ಕೇಂದ್ರದಿಂದ ಮಹಿಳೆಯರ ಏಳಿಗೆಗೆ ಹಲವು ಯೋಜನೆ: ಕಣ್ಮುಚನಾಳ

ವಿಜಯಪುರ: ನಾರಿ ಶಕ್ತಿಯೇ ರಾಷ್ಟ್ರ ಶಕ್ತಿ, ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಯರಿಗೆ ಅತ್ಯುನ್ನತ ಸ್ಥಾನವಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಮಹಿಳೆಯರ ಏಳಿಗೆಗಾಗಿ ಹತ್ತು- ಹಲವು ಅನುಕೂಲಗಳನ್ನು ಮಾಡಿಕೊಟ್ಟಿದೆ ಎಂದು ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಸ್ವಪ್ನ ಕಣ್ಮುಚನಾಳ ಹೇಳಿದರು.

ನಗರದ ಎಸ್‌ಬಿಐ ಕಾಲೋನಿಯ ಮಾರಿಗಾಂಬಿಕ ದೇವಸ್ಥಾನದಲ್ಲಿ ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಹಮ್ಮಿಕೊಂಡ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಸ್ವಚ್ಛ ಭಾರತ ಅಭಿಯಾನದಡಿ ಮನೆಮನೆಗೆ ಶೌಚಾಲಯ ನಿರ್ಮಾಣ ಮಾಡುವ ಮೂಲಕ ಮಹಿಳೆಯರಿಗೆ ಗೌರವ ಮತ್ತು ಭದ್ರತೆಯನ್ನು ಒದಗಿಸಲಾಗಿದೆ. ಜಲಜೀವನ್ ಮಿಷನ್ ಮೂಲಕ ಕುಡಿಯುವ ನೀರಿನ ವ್ಯವಸ್ಥೆ, ಬೇಟಿ ಬಚಾವೋ-ಬೇಟಿ ಪಡಾವೋ ಅಭಿಯಾನ, ಸ್ತ್ರೀ ಭ್ರೂಣ ಹತ್ಯೆ ತಡೆ, ಲಕ್ ಪತಿ ದೀದಿ, ಸುಕನ್ಯಾ ಸಮೃದ್ಧಿ ಯೋಜನೆ ಮುಂತಾದ ಕಾರ್ಯಕ್ರಮಗಳು ಮಹಿಳೆಯರ ಪರವಾಗಿವೆ. ಮಹಿಳೆಯರನ್ನು ಸಮಾಜದ ಮತ್ತು ಆರ್ಥಿಕತೆಯ ಮುನ್ನೆಲೆಗೆ ತರುವಲ್ಲಿ ಬಿಜೆಪಿ ಸರ್ಕಾರದ ಕೊಡುಗೆ ಅಪಾರವಾಗಿದೆ ಎಂದರು.

ಬುರಣಾಪುರದ ಯೋಗೇಶ್ವರಿ ಮಾತಾಜಿ ಆಶೀರ್ವಚನ ನೀಡಿ ಮಾತನಾಡಿ, ವೇದಕಾಲದಿಂದಲೂ ಸ್ತ್ರೀಯರಿಗೆ ಸಮಾಜದಲ್ಲಿ ಗೌರವಯುತ ಸ್ಥಾನಮಾನಗಳಿದ್ದವು. ಇಂದಿನ ಮಹಿಳೆಯರು ಸಹ ಎಲ್ಲ ಕ್ಷೇತ್ರಗಳಲ್ಲಿಯೂ



ಅಭೂತಪೂರ್ವ ಸಾಧನೆ ಮಾಡುತ್ತಿದ್ದಾರೆ. ಆದರೆ, ಇತ್ತೀಚಿನ ದಿನಗಳಲ್ಲಿ ಕುಟುಂಬ ವ್ಯವಸ್ಥೆಯಲ್ಲಿ ಹೊಂದಾಣಿಕೆಯ ಕೊರತೆ ಎದ್ದು ಕಾಣುತ್ತಿದೆ. ಇದನ್ನು ಸರಿಪಡಿಸಿಕೊಳ್ಳುವ ಜವಾಬ್ದಾರಿ ಇದೆ. ಮಹಿಳೆಯರು ಕ್ಷಮಯಾ ಧರಿತ್ರಿ ಎಂಬ ನುಡಿಯಂತೆ ತಾಳ್ಮೆ ಮತ್ತು ಸಹನೆಯಿಂದ ಕುಟುಂಬ ಹಾಗೂ ಸಮಾಜ ಮುನ್ನಡೆಸಬೇಕು ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ, ಬಿಜೆಪಿ ರಾಜ್ಯ ವಕ್ತಾರ ಎಚ್.ಎನ್. ಚಂದ್ರಶೇಖರ, ಪ್ರಮುಖರಾದ ಸಂಜೀವ್ ಐಹೊಳೆ, ಸತ್ಯನಾರಾಯಣ ಹೇಮಾದ್ರಿ, ಸಿದ್ದನಗೌಡ ಬಿರಾದಾರ, ವಿಜಯ ಜೋಶಿ, ಗೀತಾ ಚೌಧರಿ, ಸಾವಿತ್ರಿ ಎಕ್ಕನಗುತ್ತಿ, ಸುಶ್ಮಿತಾ ವಾಂಡಕರ, ಶಿಲ್ಪಾ ಕುದರಗೊಂಡ, ವಿಜಯಲಕ್ಷ್ಮಿ ತುಂಗಳ, ಶೈಲಾ ಹಿಟ್ನಳ್ಳಿ, ರಾಜೇಶ್ವರಿ ಅವಟಿ, ಭಾರತಿ ಸರಸಂಬಿ, ಸುಮಂಗಲಾ ಮಠ, ರೇಣುಕಾ ಹೊಸಮನಿ, ದೀಪಾ ಬಿಸೆ ಇದ್ದರು.

ಸ್ಪರ್ಧಾತ್ಮಕ ಯುಗಕ್ಕೆ ಸಿದ್ಧರಾಗಲು ವಿದ್ಯಾರ್ಥಿಗಳು ಕೌಶಲ್ಯ ಪಡೆಯಲಿ: ವಡ್ಡರ

ಮುದ್ದೇಬಿಹಾಳ: ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ನಿರಂತರ ಅಭ್ಯಾಸ, ಪರಿಶ್ರಮ ಮಾಡುತ್ತಾ ಕೌಶಲ್ಯ ಪಡೆಯಬೇಕು. ಪ್ರೌಢಶಾಲೆ ಮುಕ್ತಾಯದ ನಂತರ ಪದವಿಪೂರ್ವ ಕಾಲೇಜು ಹಂತದಲ್ಲಿ ಸೂಕ್ತ ಅಧ್ಯಯನ, ವಿಷಯವನ್ನು ಆಯ್ಕೆ ಮಾಡಿಕೊಂಡು ಭವಿಷ್ಯತ್ತಿನ ನಿರ್ಮಾಣ ಮಾಡಿಕೊಳ್ಳುವಲ್ಲಿ ತಯಾರಿ ಮಾಡಿಕೊಳ್ಳಬೇಕು ಎಂದು ತಾಲೂಕು ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಪರುಶುರಾಮ ವಡ್ಡರ ಹೇಳಿದರು.

ವಿಬಿಸಿ ಪ್ರೌಢಶಾಲೆಯ ವಾರ್ಷಿಕ ಬೀಳ್ಕೊಡುಗೆ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ವಿದ್ಯಾರ್ಥಿಗಳಿಗೆ ಪುರಸ್ಕಾರ ವಿತರಣೆ ಮಾಡಿ ಮಾತನಾಡಿದ ಅವರು, ಪ್ರೌಢಶಾಲೆಯ ಎಳೆಯರ ಆಟ, ಪಾಠ ಅಧ್ಯಯನ ಸದಾ ಸ್ಮರಣೀಯ ಆದರೆ ಭವಿಷ್ಯವನ್ನು ರೂಪಿಸಿಕೊಳ್ಳಲು ಸದಾ ಜಾಗೃತಿ, ಪೂರ್ವ ತಯಾರಿ, ಹೋರಾಟದ ಮನೋಭಾವ ಬೆಳೆಸಿಕೊಂಡು ಹೊಸದನ್ನು ಸಾಧಿಸಲು ಮುನ್ನುಗ್ಗಬೇಕು ಎಂದು ಅವರು ಆಶಯ ವ್ಯಕ್ತಪಡಿಸಿದರು.

ಡಾ. ಜಯಶೇಖರ ಪಾಟೀಲ ಮಾತನಾಡಿ, ಪ್ರೌಢಶಾಲೆ ನಂತರ ವಿಜ್ಞಾನ, ವೈದ್ಯಕೀಯ, ಸಮಾಜ ಶಿಕ್ಷಣ ಅಧ್ಯಯನ ಜೊತೆಗೆ ತಂತ್ರಜ್ಞಾನ, ಬಾಹ್ಯಾಕಾಶ,



ಸಂಶೋಧನೆ ಕುರಿತು ವಿದ್ಯಾರ್ಥಿಗಳು ಚಿಂತಿಸಬೇಕು. ಹೊಸದಾದ ಸಾಧನೆ ಮಾಡಬೇಕು ಎಂದು ಹೇಳಿದರು.

ಮುಖ್ಯಗುರು ವಿ.ಜಿ.ರಾಮಚಂದ್ರಯ್ಯ, ವಿವಿಧ ಸಂಘದ ಹಿರಿಯ ನಿರ್ದೇಶಕ ರುದ್ರಗೌಡ ಪಾಟೀಲ, ಶಿಕ್ಷಕರಾದ ವಿ.ಎಂ.ಚಳಗೇರಿ, ಬಿ.ಎಂ.ಮಟ್ಟಾಳ, ಎಸ್.ಎಸ್.ಹನಗಂಡಿ, ದೈಹಿಕ ಶಿಕ್ಷಕ ಎಸ್.ಎಂ.ಇದ್ದಲಗಿ, ಮನು ಡಿ.ಆರ್., ವಿ.ಎಸ್.ಪಾಟೀಲ, ಎಸ್.ಪಿ.ಜೋಶಿ, ಅಶ್ವಿನಿ ಅವರಾದಿ, ಅಶ್ವಿನಿ ನಾವದಗಿ, ಸುಪ್ರೀತಾ ಮಣಟ್ಯಾಳ ಉಪಸ್ಥಿತರಿದ್ದರು. ವಿದ್ಯಾರ್ಥಿನಿಯರಾದ ನೀಲಮ್ಮ ಚಲವಾದಿ ಪವಿತ್ರಾ ಇದ್ದಲಾಗಿ ಪ್ರಾರ್ಥನೆ ನೆರವೇರಿಸಿದರು.

ಮನವೊಲಿಸುವ ಪ್ರಯತ್ನ ವಿಫಲ: ಉಪವಾಸದ ಎಚ್ಚರಿಕೆ

ತಾಳಿಕೋಟೆ: ತಾಲೂಕಿನ ಮೈಲೇಶ್ವರ ಗ್ರಾಮದ ಹತ್ತಿರ ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕಾಗಿ ಗುರುತಿಸಲಾದ ಸ್ಥಳ ವಿರೋಧಿಸಿ ನಡೆಯುತ್ತಿರುವ ಧರಣಿ ಸತ್ಯಾಗ್ರಹ ಗುರುವಾರ 16ನೇ ದಿನಕ್ಕೆ ಕಾಲಿಟ್ಟಿದ್ದು, ಧರಣಿ ಸ್ಥಳಕ್ಕೆ ಉಪವಿಭಾಗಾಧಿಕಾರಿ ಗುರುನಾಥ ದಡ್ಡೆ ಅವರು ಭೇಟಿ ನೀಡಿ ಪ್ರತಿಭಟನಾಕಾರರೊಂದಿಗೆ ಮಾತುಕತೆ ನಡೆಸಿ ಅವರನ್ನು ಮನವೊಲಿಸಲು ಪ್ರಯತ್ನಿಸಿದರು.

ಮೈಲೇಶ್ವರ ಬಳಿಯ ಗುರುತಿಸಲಾದ ಸ್ಥಳವನ್ನು ತಕ್ಷಣವೇ ರದ್ದುಪಡಿಸಿ ತಾಳಿಕೋಟೆ ಪಟ್ಟಣದಲ್ಲಿಯೇ ಇರುವ ಸರ್ಕಾರಿ ಜಾಗಗಳಲ್ಲಿ ಪ್ರಜಾಸೌಧ ಕಟ್ಟಡವನ್ನು ನಿರ್ಮಿಸಬೇಕು ಎಂದು ಹೋರಾಟಗಾರರು ಆಗ್ರಹಿಸಿದರು. ನಮ್ಮ ಬೇಡಿಕೆ ಈಡೇರುವವರೆಗೆ ಧರಣಿ ಸತ್ಯಾಗ್ರಹವನ್ನು ಮುಂದುವರೆಸುತ್ತೇವೆ, ಯಾವುದೇ ಕಾರಣಕ್ಕೂ ಹೋರಾಟದಿಂದ ಹಿಂದೆ ಸರಿಯುವ ಮಾತೆ ಇಲ್ಲ ಎಂದು ಪ್ರತಿಭಟನಾಕಾರರು ಸ್ಪಷ್ಟಪಡಿಸಿದರು.

ಮಾತುಕತೆ ವಿಫಲವಾದ ಬಳಿಕ ಉಪವಿಭಾಗಾಧಿಕಾರಿ ಗುರುನಾಥ ದಡ್ಡೆ ಅವರು ಈ ವಿಷಯವನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತರುವುದಾಗಿ ಭರವಸೆ ನೀಡಿದರು. ಒಂದು ವೇಳೆ ಸಮಸ್ಯೆಗೆ ಶೀಘ್ರದಲ್ಲಿ ಪರಿಹಾರ ದೊರೆಯದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸುವುದಾಗಿ ಹೋರಾಟಗಾರರು ಎಚ್ಚರಿಕೆ ನೀಡಿದರು . ಅಗತ್ಯವಿದ್ದಲ್ಲಿ ಅಮರಣಾಂತ ಉಪವಾಸ ಸತ್ಯಾಗ್ರಹ ಆರಂಭಿಸುವುದಾಗಿ



ಅವರು ತಿಳಿಸಿದ್ದಾರೆ. ಹೋರಾಟ ಸಮಿತಿ ಅಧ್ಯಕ್ಷ ದಶರಥಸಿಂಗ ಮನಗೂಳಿ ಮಾತನಾಡಿ, ಪ್ರಜಾಸೌಧ ಕಟ್ಟಡವು ಜನಸಾಮಾನ್ಯರಿಗೆ ಅನುಕೂಲವಾಗುವಂತಹ ಕೇಂದ್ರಿಯ ಸ್ಥಳದಲ್ಲಿರಬೇಕು. ನಿರ್ಜನ ಪ್ರದೇಶದಲ್ಲಿ ನಿರ್ಮಾಣ ಮಾಡಿದರೆ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತದೆ ಎಂದರು. ಎಸ್.ಬಿ.ಕಟ್ಟಿಮನಿ, ಮುತ್ತಪ್ಪ ಚಮಲಾಪುರ, ಮಾಸೂಮಸಾಕೆಂಭಾವಿ, ಕಾಶಿನಾಥ ಮುರಾಳ, ವಿಜಯಸಿಂಗ ಹಜೇರಿ, ಪರಶುರಾಮ ತಂಗಡಗಿ, ಗಂಗಾಧರ ಕಸ್ತೂರಿ, ಮೈಬೂಬ ಚೋರಗಸ್ತಿ, ನಾಗೇಶ ಕಟ್ಟಿಮನಿ, ದೇವೇಂದ್ರ ಹಾದಿಮನಿ, ಪ್ರಕಾಶ ಹಜೇರಿ, ಸುರೇಶ ಹಜೇರಿ, ಮಹೇಶ ಚಲವಾದಿ, ರವಿ ಕಟ್ಟಿಮನಿ, ಅಮಿತಸಿಂಗ ಮನಗೂಳಿ, ರತನ ಹಜೇರಿ, ಸಿರಸಕುಮಾರ ಹಜೇರಿ, ಡಿವೈಎಸ್‌ಪಿ ನಂದಗಾವಿ, ತಹಶೀಲ್ದಾರ್ ಡಾ.ವಿನಯಾ ಹೂಗಾರ, ಪಿಎಸ್‌ಐ ಹಾಗೂ ಪೊಲೀಸ್ ಸಿಬ್ಬಂದಿ ಸಹ ಉಪಸ್ಥಿತರಿದ್ದರು.

ಚುನಾವಣೆ: 114 ಸದಸ್ಯರಿಂದ ಮತದಾನ

ಬಸವನಬಾಗೇವಾಡಿ: ಸ್ಥಳೀಯ ನ್ಯಾಯಾಲಯದಲ್ಲಿ ಬುಧವಾರ ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿಗೆ ನಡೆದ ಚುನಾವಣೆ ಶಾಂತಿಯುತವಾಗಿ ನಡೆಯಿತು. ರಾಜ್ಯ ವಕೀಲರ ಪರಿಷತ್ತಿಗೆ 149 ಅಭ್ಯರ್ಥಿಗಳು ಸ್ಪರ್ಧಿಯಲ್ಲಿ ಭಾಗವಹಿಸಿದ್ದು, 133 ಬಲ ಹೊಂದಿರುವ ಸ್ಥಳೀಯ ವಕೀಲರ ಸಂಘ ಸದಸ್ಯರಲ್ಲಿ 114 ಜನ ಸದಸ್ಯರು ಮತ ಚಲಾಯಿಸಿದರು. ಬೆಳಗ್ಗೆ 9.30ರಿಂದ ಆರಂಭವಾದ ಮತದಾನ ಪ್ರಕ್ರಿಯೆ ಆರಂಭದಲ್ಲಿ ಮಂದಗತಿ ಸಾಗಿತ್ತು. ಚುನಾವಣಾ ಕಣದಲ್ಲಿ 149 ಅಭ್ಯರ್ಥಿಗಳು ಇದ್ದು, ಮಧ್ಯಾಹ್ನದ ವೇಳೆ ಮತದಾನ ಕೇಂದ್ರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಮತದಾರರು ಆಗಮಿಸಿದಾಗ ಪ್ರತ್ಯೇಕ ಮೂರು ಟೇಬಲ್ ವ್ಯವಸ್ಥೆ ಮಾಡಿ ಮೂರು ಜನರು ಒಂದೇ ಬಾರಿ ಮತದಾನ ಕೇಂದ್ರದಲ್ಲಿ ಪ್ರಾಶಸ್ತ್ಯ ಮತ ನೀಡಲು ಅನುಕೂಲ ಮಾಡಿಕೊಡಲಾಗಿತ್ತು. ಪಿಆರ್‌ಒ, ಸಹಕಾರಿ ಸಂಘಗಳ ತಾಲೂಕು ಅಭಿವೃದ್ಧಿ ಅಧಿಕಾರಿ ಎಸ್.ಎಂ.ಹಂಗರಗಿ, ತಹಶೀಲ್ದಾರ್ ಕಚೇರಿ ಸಿಬ್ಬಂದಿ ರಾಜು ಹಾದಿಮನಿ, ಪೋಲಿಂಗ್ ಆಫೀಸರ್‌ರಾಗಿ ಎಂ.ಎಂ.ಅವಟಿ, ಕಲಾವತಿ ಅವರು ಕಾರ್ಯನಿರ್ವಹಿಸಿದರು. ವಕೀಲರ ಸಂಘದ ಅಧ್ಯಕ್ಷ ಎನ್.ಎಸ್.ಬಿರಾದಾರ, ವಕೀಲರಾದ ಎಂ.ಎಸ್.ಗೊಳಸಂಗಿ, ಮನೋಜ ಕಂದಂ, ಮಲ್ಲಿಕಾರ್ಜುನ ದೇವರಮನಿ, ತಾನಾಜಿ ಗಾಯಕವಾಡ, ಈಶ್ವರ ಪರಮಗೊಂಡ, ಹೇರನವರ, ಶಿವು ಒಣರೊಟ್ಟಿ, ಮಂಜುನಾಥ ಬಿರಾದಾರ, ಅನೀಲ ಚಿಕ್ಕೊಂಡ, ಶಿಲ್ಪಾ ಮುಚಖಂಡಿ, ಕೆ.ಜಿ.ಕಂದಗಲ್ ಇದ್ದರು.



ಪಕ್ಷದ ಸಂಘಟನೆಗೆ ಶ್ರಮಿಸಿ: ಜಿಲ್ಲಾಧ್ಯಕ್ಷ ಅಂಗಡಿ

ಕೊಲ್ಹಾರ: ಮುಂಬರುವ ಚುಣಾವನೆಗಳಲ್ಲಿ ಭಾರತೀಯ ಜನತಾಪಕ್ಷವು ಅಧಿಕಾರದ ಚುಕ್ಕಾಣಿ ಹಿಡಿಯಲು ಕಾರ್ಯಕರ್ತರು ನಿರಂತರವಾಗಿ ಮತದಾರರೊಂದಿಗೆ ಸಂಪರ್ಕದಲ್ಲಿದ್ದು, ಒಗ್ಗಟ್ಟಿನ ಮೂಲಕ ಜಾಗೃತಿಯಿಂದ ಪಕ್ಷದ ಸಂಘಟನೆ ಮಾಡಲು ಶ್ರಮಿಸಬೇಕು ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಗುರಲಿಂಗಪ್ಪ ಅಂಗಡಿ ಹೇಳಿದರು.

ಪಟ್ಟಣದ ದ್ಯಾಮವ್ವದೇವಿ ಸಮುದಾಯ ಭವನದಲ್ಲಿ ನಡೆದ ಭಾರತೀಯ ಜನತಾಪಕ್ಷದ ಬಸವನ ಬಾಗೇವಾಡಿ ಮಂಡಲ ಕಾರ್ಯಕಾರಣಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸರ್ಕಾರಿ ಕಾಮಗಾರಿಗಳ ಗುತ್ತಿಗೆ ಪಡೆದು ಕಾರ್ಯನಿರ್ವಹಿಸುವ ಗುತ್ತಿಗೆದಾರರ ಸಂಕಷ್ಟಕ್ಕೆ ಆಸರೆಯಾಗದ ಕಾಂಗ್ರೆಸ್ ಸರಕಾರ ಅಭಿವೃದ್ಧಿ ಕಾಮಗಾರಿ ಕೈಗೊಳ್ಳದೇ



ಕಳೆದ ಮೂರು ವರ್ಷಗಳಿಂದ ಎಲ್ಲ ರಂಗಗಳಲ್ಲಿಯೂ ವಿಫಲ ಆಡಳಿತ ನಡೆಸುತ್ತಾ ರಾಜ್ಯದ ಜನರ ಜೊತೆ ಚೆಲ್ಲಾಟ ಆಡುತ್ತಿದೆ ಎಂದು ಆರೋಪಿಸಿದರು.

ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ ಮಾತನಾಡಿ, ರಾಜ್ಯದಲ್ಲಿ ಬಿಜೆಪಿ ಸರಕಾರ ಆಡಳಿತದಲ್ಲಿದ್ದಾಗ ನಾನು ಸಚಿವನಾಗಿ ಮತಕ್ಷೇತ್ರದಲ್ಲಿ ಮಾಡಿರುವ ಅಭಿವೃದ್ಧಿ ಕಾಮಗಾರಿಗಳ ಪರಿಚಯ ಪತ್ರವನ್ನು ಜನರ ಮುಂದೆ ತಲುಪಿಸಲು ಪ್ರತಿ ಮೂರು ತಿಂಗಳಿಗೊಮ್ಮೆ ಅಖಂಡ ಬಸವನ ಬಾಗೇವಾಡಿಮತಕ್ಷೇತ್ರದ ಕೊಲ್ಹಾರ ನಿಡಗುಂದಿ ಬಸವನ ಬಾಗೇವಾಡಿ ಮನಗೂಳಿ ಇನ್ನುಳಿದ ಪ್ರಮುಖ ಪಟ್ಟಣಗಳಲ್ಲಿ ಜನತಾ ಸಮಾವೇಶ ಮಾಡಿ ಜನರ ಬಳಿಯಲ್ಲಿ ಆಡಳಿತ ತಂದು ಜನರ ಸಮಸ್ಯೆಗಳಿಗೆ ಯಾವ ರೀತಿ ಸ್ಪಂದನೆ ಮಾಡಿದ್ದೇನೆ ಎನ್ನುವದರ ಕುರಿತು ವಿವರಣೆ ನೀಡುತ್ತೇವೆ ಎಂದರು.

ಮಂಡಲ ಅಧ್ಯಕ್ಷ ಸಿದ್ರಾಮಪ್ಪ ಕಾಖಂಡಕಿ ಚಂದ್ರಶೇಖರಯ್ಯ ಗಣಕುಮಾರ, ಅಖಿಲಗೌಡ ಪಾಟೀಲ, ಡಾ.ಸಂಗಮೇಶ ಗೂಗಿಹಾಳ, ಬಸವರಾಜ ಬಿಜಾಪೂರ, ಪ್ರಶಾಂತ ಪವಾರ, ರಾಜೇಶ್ವರಿ ಯರಣಾಳ, ಹಣಮಂತ ಗುಡದಿನ್ನಿ, ಚಿನ್ನಪ್ಪ ಗಿಡ್ಡಪ್ಪಗೋಳ ಉಪಸ್ಥಿತರಿದ್ದರು.

ಸದನದಲ್ಲಿ ಗಮನ ಸೆಳೆದ ನಮೋಶಿ



◆**ಕಲಬುರಗಿ:** ಪ್ರಸ್ತುತ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ 2.84 ಲಕ್ಷಕ್ಕೂ ಹುದ್ದೆಗಳು ಖಾಲಿ ಇವೆ ಎಂದು ಹೇಳಲಾಗುತ್ತಿದೆ ಇದು ನಿಜವೇ? ಒಂದು ವೇಳೆ ಇಷ್ಟು ದೊಡ್ಡ ಪ್ರಮಾಣದ ಹುದ್ದೆಗಳು ಖಾಲಿ ಇರುವುದರಿಂದ ಸಾರ್ವಜನಿಕ ಸೇವೆ ನೀಡುವಲ್ಲಿ ಸರ್ಕಾರ ಎದುರಿಸುತ್ತಿರುವ ಆರ್ಥಿಕ ಹಾಗೂ ಆಡಳಿತಾತ್ಮಕ ಸಮಸ್ಯೆ ಯಾವುವು ಎಂದು ಎಂಎಲ್ಸಿ ಶಶೀಲ್ ನಮೋಶಿ ಅಧಿವೇಶನದಲ್ಲಿ ಮುಖ್ಯಮಂತ್ರಿಗಳಿಗೆ ಪ್ರಶ್ನಿಸಿದರು. ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರಸ್ತುತ ರಾಜ್ಯ ಸರ್ಕಾರದಲ್ಲಿ ವಿವಿಧ ಇಲಾಖೆಗಳಲ್ಲಿ 7,76,414 ಹುದ್ದೆಗಳು ಮಂಜೂರಾಗಿದ್ದು,4,91,533 ಹುದ್ದೆಗಳನ್ನು ತುಂಬಲಾಗಿದೆ.ಅಲ್ಲದೇ, ಗ್ರೂಪ್-ಸಿ ಹಾಗೂ ಗ್ರೂಪ್-ಡಿ ವೃಂದದ ಹುದ್ದೆಗಳಾದ ದತ್ತಾಂಶ ನಮೂದು ಸಹಾಯಕ, ವಾಹನ ಚಾಲಕರ 96,844 ಹುದ್ದೆಗಳನ್ನು ಗುತ್ತಿಗೆ,ಹೊರಗುತ್ತಿಗೆ ಆಧಾರದ ಮೇಲೆ ಈಗಾಗಲೇ ಭರ್ತಿ ಮಾಡಲಾಗಿದೆ ಎಲ್ಲಾ ಸೇರಿ 2 5,88,377 ಹುದ್ದೆಗಳನ್ನು ಈಗಾಗಲೇ ತುಂಬಲಾಗಿದೆ, ಕೇವಲ 1,88,037 ಹುದ್ದೆಗಳು ಖಾಲಿ ಇವೆ ಎಂದರು.ಕಳೆದ 3 ವರ್ಷಗಳಲ್ಲಿ ವಿವಿಧ ನೇಮಕಾತಿ ಪ್ರಾಧಿಕಾರಗಳ ಮೂಲಕ ಇಲಾಖೆಗಳಲ್ಲಿ ಖಾಲಿ ಇರುವ 8157 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ.ಮುಂದುವರೆದು 3081 ಹುದ್ದೆಗಳ ನೇಮಕಾತಿ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ. ಅಲ್ಲದೇ, 56,432 ಹುದ್ದೆಗಳನ್ನು ತುಂಬುವ ಪ್ರಕ್ರಿಯೆ 30 ದಿನಗಳಲ್ಲಿ ಪ್ರಾರಂಭಿಸುವಂತೆ ಸರ್ಕಾರದ ಆದೇಶಿಸಿದೆ ಎಂದರು.

ತಾಯಿ, ಮಕ್ಕಳ ಆಸತ್ರೆ ಶೀಘ್ರ ಆರಂಭಿಸಿ



◆**ಕುಷ್ಟಗಿ:** ಪಟ್ಟಣದಲ್ಲಿ ಆರು ತಿಂಗಳ ಹಿಂದೆ ಉದ್ಘಾಟನೆಗೊಂಡಿರುವ ತಾಯಿ ಮತ್ತು ಮಕ್ಕಳ ಆಸತ್ರೆ ಜನ ಸೇವೆಗೆ ಲಭ್ಯವಾಗಿಲ್ಲ. ಆದಷ್ಟು ಬೇಗನೆ ಪ್ರಾರಂಭಿಸಬೇಕು ಎಂದು ಶಾಸಕ ಹಾಗೂ ವಿಧಾನಸಭೆಯ ವಿರೋಧ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ ಹೇಳಿದರು. ವಿಧಾನಸಭೆ ಅಧಿವೇಶನದಲ್ಲಿ ಮಾತನಾಡಿದ ಅವರು, ಪಟ್ಟಣದಲ್ಲಿರುವ ಸರಕಾರಿ ಆಸ್ಪತ್ರೆಯಲ್ಲಿ ಔಷಧೀಯಯನ್ನು ಸರಿಯಾಗಿ ನೀಡುತ್ತಿಲ್ಲ ಹೊರಗಡೆಯಿಂದ ರೋಗಿಗಳು ಔಷಧಿ ತರಬೇಕಾದಂತ ಪರಿಸ್ಥಿತಿ ನಿರ್ಮಾಣವಾಗಿದೆ. ಸಿಟಿ ಸ್ಕ್ಯಾನ್ ನಿರ್ವಹಣೆ ಮಾಡಲು ತಾಂತ್ರಿಕ ಹುದ್ದೆ ಖಾಲಿ ಇವೆ. ಇದರಿಂದ ಸಿಟಿ ಸ್ಕ್ಯಾನ್ ಇದ್ದು ಇಲ್ಲದಂತಾಗಿದೆ ಎಂದರು.

ದ್ಯಾವಮ್ಮದೇವಿ ಮಹಾರಥೋತ್ಸವ

◆**ಮಾನ್ವಿ:** ತಾಲೂಕಿನ ದೇವಿಪುರ ಗ್ರಾಮದ ಗ್ರಾಮ ದೇವತೆಯರಾದ ಶ್ರೀದ್ಯಾವಮ್ಮದೇವಿ ಹಾಗೂ ಚೌಡಮ್ಮದೇವಿಯರ ಜಾತ್ರಾ ಮಹೋತ್ಸವ ಅಂಗವಾಗಿ ಬುಧವಾರ ಬೆಳಿಗ್ಗೆ ಶ್ರೀದ್ಯಾವಮ್ಮ ದೇವಿ ಮತ್ತು ಚೌಡಮ್ಮ ದೇವಿರ ಉತ್ಸವ ಮೂರ್ತಿಗಳನ್ನು ಪಲ್ಲಕ್ಕಿಯಲ್ಲಿಟ್ಟು ಹತ್ತಿರದ ತುಂಗಾ ನದಿಯಲ್ಲಿ ಗಂಗೆ ಪೂಜೆ ಸಲ್ಲಿಸಿ ನಂತರ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು, ಸುಮಂಗಲಿಯರು ಗ್ರಾಮದ ಪ್ರಮುಖ ಬೀದಿಯಲ್ಲಿ ಕುಂಭಗಳನ್ನು ಹೊತ್ತು,ವಾದ್ಯ ಮೇಳದೊಂದಿಗೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ದೇವಸ್ಥಾನಕ್ಕೆ ಆಗಮಿಸಿ ಪೂಜೆ ಸಲ್ಲಿಸಿದರು. ಸಂಜೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ಮಹಾರಥೋತ್ಸವ, ಸಿಡಿ ಬಂಡಿ ಉತ್ಸವ ನೆರವೇರಿತು. ಗ್ರಾಮ ದೇವತೆಯರಾದ ದ್ಯಾವಮ್ಮದೇವಿ ಹಾಗೂ ಚೌಡಮ್ಮದೇವಿಯರಿಗೆ ಜಾತ್ರ ಮಹೋತ್ಸವದ ಅಂಗವಾಗಿ ವಿಶೇಷ ಹೂವಿನ ಅಲಂಕಾರವನ್ನು ಮಾಡಲಾಯಿತು. ಮಹಿಳೆಯರು ದೇವಿಗೆ ಹಸಿರು ಬಳೆ, ಸೀರೆ ಮತ್ತು ಕುಂಕುಮವನ್ನು ಅರ್ಪಿಸುವ ಮೂಲಕ ತಮ್ಮ ಹರಕೆಯನ್ನು ತೀರಿಸಿದರು. ರಾಜ್ಯ ಸೇರಿದಂತೆ ವಿವಿಧ ಜಿಲ್ಲೆಗಳ ಸಾವಿರಾರು ಭಕ್ತರು ಆಗಮಿಸಿದ್ದರು.

ಮಾರ್ಚ್ ಅಂತ್ಯದೊಳಗೆ ಮಧ್ಯಸ್ಥಿಕೆ ಕೇಂದ್ರ ಉದ್ಘಾಟನೆ

◆**ವಿಧಾನಸಭೆ:** ಕೊಪ್ಪಳ ಜಿಲ್ಲೆಯಲ್ಲಿ ಮಧ್ಯಸ್ಥಿಕೆ ಕೇಂದ್ರವನ್ನು ಈ ಮಾರ್ಚ್ ಅಂತ್ಯದೊಳಗೆ ಉದ್ಘಾಟನೆ ಮಾಡಲಾಗುವುದು ಎಂದು ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ಪ್ರಕಾಶ್ ಕೋಳಿವಾಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ರಾಷ್ಟ್ರೀಯ ಬಾಲಸ್ವಾಸ್ಥ್ಯ ಕಾರ್ಯಕ್ರಮ ಅಡಿಯಲ್ಲಿ ರಾಜ್ಯದಲ್ಲಿ 17 ಜಿಲ್ಲಾ ಆರಂಭಿಕ ಮಧ್ಯಸ್ಥಿಕೆ ಕೇಂದ್ರಗಳು ಸ್ಥಾಪಿತವಾಗಿವೆ ಎಂದರು. ಡಿಇಐಸಿ ಅನುಷ್ಠಾನಿತ ಜಿಲ್ಲೆಗಳಲ್ಲಿ ಮಕ್ಕಳಲ್ಲಿ ಅಂಗವೈಕಲ್ಯಗಳು ಸೇರಿದಂತೆ ಬೆಳವಣಿಗೆಯ ಫಲಿತಾಂಶಗಳನ್ನು ಸುಧಾರಿಸಲು ಭೌತಚಿಕಿತ್ಸೆ, ಭಾಷಣಚಿಕಿತ್ಸೆ, ಶ್ರವಣಶಾಸ್ತ್ರ ಮತ್ತು ಸಮಾಲೋಚನೆ ಸೇರಿದಂತೆ ಉಚಿತ ಸಮಗ್ರ ಸೇವೆಗಳನ್ನು ಒದಗಿಸಲಾಗುತ್ತಿದೆ. 2026-27ನೇ ಸಾಲಿನ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಹೇಳಿದರು.



ಗಂಗಾವತಿ: ವಿಧಾನಸಭಾ ಕ್ಷೇತ್ರದ ಕಾಮನೂರು ಗ್ರಾಮದ ಶ್ರೀಮೈಲಾರಲಿಂಗೇಶ್ವರನ 20ನೇ ವರ್ಷದ ಜಾತ್ರಾ ಮಹೋತ್ಸವ 12 ಜೋಡಿಗಳ ಸಾಮೂಹಿಕ ವಿವಾಹ ಸಮಾರಂಭದಲ್ಲಿ ಮಾಜಿ ಶಾಸಕ ಪರಣ್ಣ ಮುನವಳ್ಳಿ ಭಾಗವಹಿಸಿ ನೂತನ ವಧುವರರಿಗೆ ಆಶೀರ್ವದಿಸಿದರು. ರಮೇಶ್ ಕುರುಗೋಡುಗಿ ನಿಂಗಪ್ಪ ಹೈರಾಣಿ, ಮಲ್ಲಪ್ಪ ಬೋವಿ, ಮಲ್ಲೇಶಪ್ಪ ಸಂಗಟಿ, ಆನಂದ್ ಭೋವಿ, ರಮೇಶ್, ಮೈಲಾರಪ್ಪ ಹೈರಾಣಿ, ಗವಿಸಿದ್ದಪ್ಪ ತೋಟದ್, ಶ್ರೀನಿವಾಸ ಅರಕೇರಿ ಇತರರಿದ್ದರು.

ರೇಣುಕಾಚಾರ್ಯರ ಕೊಡುಗೆ ಅಪಾರ

◆**ಕುಕನೂರು:** ರೇಣುಕಾಚಾರ್ಯರು ಮಾನವನನ್ನು ಮಹಾದೇವನಾಗುವಂತೆ ಮಾಡಿದ ಮಹಾನ್ ಚೇತನರು ರೇಣುಕಾಚಾರ್ಯರು ಎಂದು ಕೆಎಂಎಫ್ ನಿರ್ದೇಶಕ ಹಂಪಯ್ಯ ಹಿರೇಮಠ ಹೇಳಿದರು.

ತಾಲೂಕಿನ ಮಂಡಲಗೇರಿ ಗ್ರಾಮದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರ ಮೂರ್ತಿ ಪ್ರತಿಷ್ಠಾಪನೆ, ಜಯಂತ್ಯುತ್ಸವ ಹಾಗೂ ತಾಲೂಕು ಸಮಾವೇಶ ಕಾರ್ಯಕ್ರಮವನ್ನು ವೀರಶೈವ ಲಿಂಗಾಯತ ಸಮಾಜದ ವತಿಯಿಂದ ಅದ್ದೂರಿಯಾಗಿ ಆಚರಿಸಲಾಯಿತು.

ಪಂಚಲೋಹದ ಮೂರ್ತಿ ಹಾಗೂ ಕಳಸ-ಕನ್ನಡಿಗಳೊಂದಿಗೆ ರೇಣುಕಾಚಾರ್ಯರ ಭಾವಚಿತ್ರ ಮೆರವಣಿಗೆ ಗ್ರಾಮದ ಪ್ರಮುಖ ಬಿದಿಗಳಲ್ಲಿ ಸಂಚರಿಸಿ ವೇದಿಕೆ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ರೇಣುಕಾಚಾರ್ಯರು ಕೇವಲ ಜಂಗಮ ಸಮಾಜಕ್ಕೆ ಸೀಮಿತವಾಗಿಲ್ಲಾ ಬದಲಾಗಿ ಅವರು ಸಮಾಜದಲ್ಲಿರುವ ಎಲ್ಲಾ ಒಳಿತಿಗಾಗಿ ಜೀವನ ಸಾಗಿಸಿದ ಮಹಾನ್ ಚೇತನರು ಅಂತವರ ಆದರ್ಶಗಳನ್ನು ಮೈಗುಡಿಸಿಕೊಳ್ಳಬೇಕು ಎಂದು ಹೇಳಿದರು. ಸಾನಿಧ್ಯವನ್ನು ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಅರಳಲೇ ಹಿರೇಮಠ ಮಂಗಳೂರು ವಹಿಸಿದ್ದರು, ಸಾನಿಧ್ಯವನ್ನು ಜಗದ್ಗುರು ವಿಜಯಮಹಾಂತೇಶ್ವರ ಮಹಾಸ್ವಾಮಿಗಳು ಸಂಸ್ಥಾನ ಮೈಸೂರಮಠ ಕುದರಿಮೋತಿ, ಸಿದ್ದರಾಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಅನ್ನದಾನೇಶ್ವರ ಮಠದ ಡಾ.ಮಹಾದೇವ ಸ್ವಾಮಿಗಳು ವಹಿಸಿದ್ದರು. ರುದ್ರಯ್ಯ ಇನಾಮದಾರ, ವೀರಭಂದ್ರಯ್ಯ ಮಠದ, ಚನ್ನಪ್ಪಗೌಡ ಮಾಲಿಪಾಟೀಲ, ವೀರಯ್ಯ ತೊಂಟದಾರ್ಯಮಠ, ಹಂಚ್ಯಾಳಪ್ಪ ತಳವಾರ್, ಹಂಪಯ್ಯ ಹಿರೇಮಠ್, ಮಹೇಶ್, ನಿರೂಪಣೆ ಹರೀಶ್ವರ ಎಸ್ .ಹಿರೇಮಠ ನಡೆಸಿಕೊಟ್ಟರು.



ಕುಕನೂರು: ತಾಲೂಕಿನ ಮಂಡಲಗೇರಿ ಗ್ರಾಮದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರ ಮೂರ್ತಿ ಪ್ರತಿಷ್ಠಾಪನೆ, ಜಯಂತ್ಯುತ್ಸವ ಹಾಗೂ ತಾಲೂಕು ಸಮಾವೇಶ ಕಾರ್ಯಕ್ರಮವನ್ನು ವೀರಶೈವ ಲಿಂಗಾಯತ ಸಮಾಜದ ವತಿಯಿಂದ ಅದ್ದೂರಿಯಾಗಿ ಆಚರಿಸಲಾಯಿತು. ಕೆಎಂಎಫ್ ನಿರ್ದೇಶಕ ಹಂಪಯ್ಯ ಹಿರೇಮಠ, ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಜಗದ್ಗುರು ವಿಜಯಮಹಾಂತೇಶ್ವರ ಮಹಾಸ್ವಾಮಿಗಳು,ದ್ದರಾಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಅನ್ನದಾನೇಶ್ವರ ಮಠದ ಡಾ.ಮಹಾದೇವ ಸ್ವಾಮಿಗಳು ಇತರರು ಇದ್ದರು.

ಮಹಿಳಾ ದಿನಾಚರಣೆ | ತೇಜಸ್ವಿನಿ ಅನಂತ್‌ಕುಮಾರ ಸಲಹೆ

ಮಹಿಳೆಯರು ಸವಾಲಿನ ಕೆಲಸ ಕೈಗೆತ್ತಿಕೊಳ್ಳಲಿ

◆**ಕಲಬುರಗಿ:** ಬಹುಪಾಲು ಜನಸಂಖ್ಯೆಯಲ್ಲಿ ಪೌಷ್ಟಿಕಾಂಶದ ಕೊರತೆ, ಪರಿಸರ ನಾಶ ಮತ್ತು ದೇಶದ ಯುವಕರು ಎದುರಿಸುತ್ತಿರುವ ಮಾನಸಿಕ ಆರೋಗ್ಯ ಸಮಸ್ಯೆಗಳು ಸೇರಿದಂತೆ ದೇಶ ಎದುರಿಸುತ್ತಿರುವ ಗಂಭೀರ ಸಮಸ್ಯೆ ಪರಿಹರಿಸಲು ಮಹಿಳೆಯರು ಮುಂದೆ ಬರಬೇಕೆಂದು ಅದಮ್ಯ ಚೇತನ ಫೌಂಡೇಶನ್ ಅಧ್ಯಕ್ಷೆ ತೇಜಸ್ವಿನಿ ಅನಂತ್ ಕುಮಾರ ಹೇಳಿದರು.

ಗುರುವಾರ ನಗರದ ಶರಣಬಸವ ವಿಶ್ವವಿದ್ಯಾಲಯದ ಆವರಣದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ವಿಶ್ವದ ಅತ್ಯಂತ ಕೆಟ್ಟ ವಾಯು ಮಾಲಿನ್ಯ ಎದುರಿಸುತ್ತಿರುವ 20 ನಗರಗಳಲ್ಲಿ 18 ನಗರಗಳು ಭಾರತದಲ್ಲಿವೆ. ಹೆಚ್ಚುವರಿಯಾಗಿ ಭಾರತದ ನಗರ ಪ್ರದೇಶಗಳಲ್ಲಿ ಪರಿಸರದ ಮೇಲೆ ಪ್ಲಾಸ್ಟಿಕ್‌ನ ಅಪಾಯವು ತುಂಬಾ ಹೆಚ್ಚಾಗಿದೆ ಎಂಬುದು ಕಳವಳಕಾರಿ ವಿಷಯವಾಗಿದೆ ಎಂದರು.

ಭಾರತವು ಜನಸಂಖ್ಯೆಯ ಪೌಷ್ಟಿಕಾಂಶ ಮಟ್ಟದಲ್ಲಿ, ಇಡೀ ವಿಶ್ವದಲ್ಲಿಯೇ 103ನೇ ಸ್ಥಾನದಲ್ಲಿದೆ. ಆಹಾರ ಧಾನ್ಯ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವ ಮೂಲಕ ಭಾರತೀಯ ಮಾರುಕಟ್ಟೆಯ ಬೇಡಿಕೆಗಳನ್ನು ಪೂರೈಸಲು ಸಾಕಷ್ಟು ಪ್ರಮಾಣದ ದ್ವಿದಳ ಧಾನ್ಯಗಳನ್ನು ಪಡೆಯುವ ಮೂಲಕ ದೇಶವು ತನ್ನ ಜನಸಂಖ್ಯೆಗೆ ಆಹಾರದ ಕೊರತೆಯನ್ನು ಯಶಸ್ವಿಯಾಗಿ ನಿವಾರಿಸಿದ್ದರೂ,ದೇಶದ ಬಹುಪಾಲು ಜನಸಂಖ್ಯೆಯು ಆಹಾರ ಸೇವನೆಯಲ್ಲಿ ಪೌಷ್ಟಿಕಾಂಶ ಮಟ್ಟದ ಸಮಸ್ಯೆ ಎದುರಿಸುತ್ತಿದೆ ಎಂದರು.

ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷರುಹಾಗೂಶರಣಬಸವವಿವಿಯಕುಲಾಧಿಪತಿ



ಅವ್ವಾ ಪ್ರಶಸ್ತಿ ಪ್ರದಾನ

ಶರಣಬಸವ ವಿಶ್ವವಿದ್ಯಾಲಯವು ಮಹಿಳಾ ಸಾಧಕರಿಗೆ ಪ್ರತಿ ವರ್ಷ ನೀಡುವ ಪ್ರತಿಷ್ಠಿತ 'ಮಾತೋಶ್ರೀ ಗೋದುತಾಯಿ ಅವ್ವ' ಪ್ರಶಸ್ತಿಯನ್ನು ತೇಜಸ್ವಿನಿ ಅನಂತಕುಮಾರ್ ಸ್ವೀಕರಿಸಿದರು. ಜೊತೆಗೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಗೈಯುತ್ತಿರುವವರಿಗೆ ಸ್ತ್ರೀ ಶಕ್ತಿ ಪ್ರಶಸ್ತಿ, ಸ್ತ್ರೀ ರತ್ನ ಪ್ರಶಸ್ತಿ,ವೀರ ಮಹಿಳಾ ಪ್ರಶಸ್ತಿ, ಕಾಯಕ ರತ್ನ ಮತ್ತು ಉತ್ಕೃಷ್ಟ ಮಹಿಳಾ ಪ್ರಶಸ್ತಿಗಳನ್ನು ವಿವಿಧ ಕ್ಷೇತ್ರದಲ್ಲಿ ಸಮಾಜಕ್ಕೆ ನೀಡಿದ ಕೊಡುಗೆಯನ್ನು ಗುರುತಿಸಿ ಪ್ರದಾನ ಮಾಡಿದರು.

ಡಾ.ದಾಕ್ಷಾಯಿಣಿ ಅವ್ವಾಜಿ ಮಾತನಾಡಿ, ಕರ್ನಾಟಕ ಮತ್ತು ರಾಜಸ್ಥಾನದ ವಿವಿಧ ಭಾಗಗಳ ಶಾಲೆಗಳಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಒದಗಿಸಿದ್ದಕ್ಕಾಗಿ, ತೇಜಸ್ವಿನಿ ಅನಂತ ಕುಮಾರ ಅವರು ಮಾಡಿದ ಸೇವೆಗೆ ಅವರು ಗೌರವ ಪಡೆದಿದ್ದಾರೆ.ಪ್ರತಿದಿನ 2 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ನಿಗದಿತ ಸಮಯದಲ್ಲಿ ಆಹಾರ ನೀಡುವುದು ಸುಲಭದ ಕೆಲಸವಲ್ಲ. ಮಾನವಕುಲಕ್ಕೆ ಸೇವೆ ಸಲ್ಲಿಸುವುದು ದೇವರ ಸೇವೆ ಎಂಬುದು ಅವರ ದೃಢ ನಂಬಿಕೆಯನ್ನು ತೋರಿಸುತ್ತದೆ ಎಂದರು.

ಸಮಾರಂಭದಲ್ಲಿ ಖ್ಯಾತ ನಿರ್ದೇಶಕಿ ಡಾ.ರೂಪಾ ಅಯ್ಯರ್‌ಗೆ ಡಾ.ಅವ್ವಾಜಿ ಸನ್ಮಾನಿಸಿ ಗೌರವಿಸಿದರು.

ಪಾಲಿಕೆ ಮೇಯರ್ ವರ್ಷಾ ಜಾನೆ, ಉಪಮೇಯರ್ ತೃಪ್ತಿ ಲಾಖೆ, ವಿಪಕ್ಷ ನಾಯಕಿ ಶೋಭಾ ದೇಸಾಯಿ ಅವರನ್ನು ಸನ್ಮಾನಿಸಲಾಯಿತು. ಶರಣಬಸವ ವಿವಿಯ ಕುಲಸಚಿವೆ ಡಾ.ಲಕ್ಷ್ಮೀ ಪಾಟೀಲ ಮಾಕಾ ಸ್ವಾಗತಿಸಿದರು. ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಗಳಾದ ಬಸವರಾಜ ದೇಶಮುಖ, ಉಪಕುಲಪತಿ ಪ್ರೊ. ಅನಿಲಕುಮಾರ ಬಿಡವೆ, ಪ್ರೊ.ವಿ.ಡಿ.ಮೈತ್ರಿ, ಡಾ.ಎಸ್.ಎಚ್.ಹೊನ್ನಳ್ಳಿ, ಡಾ.ಕಿರಣ್ ಮಾಕಾ, ಡಾ.ಶಿವಕುಮಾರ ಜವಳಿಗಿ, ಡೀನ್, ಡಾ.ಸುಜಾತಾ ಮಲ್ಲಾಪುರ ಸೇರಿದಂತೆ ಇತರ ಪ್ರಮುಖರು ಉಪಸ್ಥಿತರಿದ್ದರು.

ಯಂತ್ರೋಪಕರಣಗಳ ಪ್ರಾತ್ಯಕ್ಷಿಕೆ ಮೇಳ

◆**ರಾಯಚೂರು:** ಪ್ರಸ್ತುತ ಕೃಷಿಯಲ್ಲಿ ತಾಂತ್ರಿಕ ಬಳಕೆಯಿಂದ ಕಡಿಮೆ ಅವಧಿಯಲ್ಲಿ ನಿಖರವಾಗಿ ಹಾಗೂ ಅಚ್ಚುಕಟ್ಟಾಗಿ ಕೆಲಸವನ್ನು ಮಾಡಲು ಸಾಧ್ಯವಾಗುತ್ತಿದೆ. ಭಾರತದಲ್ಲಿ ಕೃಷಿಯಲ್ಲಿ ಕೆಲಸ ನಿರ್ವಹಿಸುವುದಕ್ಕೆ ಕಾರ್ಮಿಕರ ಸಂಖ್ಯೆ ದಿನದಿಂದ ದಿನಕ್ಕೆ ಕಡಿಮೆ ಆಗುತ್ತಿರುವ ಹಿನ್ನೆಲೆಯಲ್ಲಿ ಇಲ್ಲಿಯೂ ತಾಂತ್ರಿಕ ಅಳವಡಿಕೆ ಹೆಚ್ಚುತ್ತಿದೆ ಎಂದು ಕೃಷಿ ವಿವಿಯ ಕುಲಪತಿ ಡಾ.ಎಂ.ಹನುಮಂತಪ್ಪ ಹೇಳಿದರು.

ಗುರುವಾರ ನಗರದ ಕೃಷಿ ವಿವಿಯ ಪ್ರೇಕ್ಷಾಗೃಹದಲ್ಲಿ ಕೃಷಿ ವಿವಿಯ ತಾಂತ್ರಿಕ ಮಹಾವಿದ್ಯಾಲಯ, ಭಾಕೃಅಪ, ಅಖಿಲ ಭಾರತ ಸಮನ್ವಿತ ಸಂಶೋಧನೆ ಯೋಜನೆಗಳು ಹಾಗೂ ಭಾಕೃಅಪ-ಕೃಷಿ ವಿಜ್ಞಾನ ಕೇಂದ್ರದ ಸಹಯೋಗದಲ್ಲಿ ಆಯೋಜಿಸಿದ್ದ ಕೃಷಿ ತಂತ್ರಜ್ಞಾನ ಹಾಗೂ ಯಂತ್ರೋಪಕರಣಗಳ ಪ್ರಾತ್ಯಕ್ಷಿಕೆ ಮೇಳವನ್ನು ಉದ್ಘಾಟಿಸಿ ಮಾತನಾಡಿದರು.

ಭಾರತದಲ್ಲಿ ಜನಸಂಖ್ಯೆ ಅಧಿಕವಾಗಿದೆ ಆದರೆ ಇತ್ತೀಚೆಗೆ ಕೃಷಿ ಕಾರ್ಮಿಕರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಕಡಿಮೆ ಆಗುತ್ತಿದೆ ಹೀಗಾಗಿ ಅನಿವಾರ್ಯವಾಗಿ ಕೃಷಿಯಲ್ಲಿ ತಂತ್ರಜ್ಞಾನ ಹಾಗೂ ಯಂತ್ರಗಳ ಬಳಕೆಯತ್ತ ಕೃಷಿಕರು ಒಲವು ತೋರುತ್ತಿದ್ದಾರೆ. ವಿದೇಶಗಳಲ್ಲಿ ಕೃಷಿ ಭೂಮಿ ಅಧಿಕವಾಗಿದೆ ಆದರೆ ಅಲ್ಲಿ ಕೃಷಿ ಕಾರ್ಮಿಕರ ಸಂಖ್ಯೆ ಅತ್ಯಂತ ಕಡಿಮೆ ಹೀಗಾಗಿ ಅಲ್ಲಿ ಉನ್ನತ ತಂತ್ರಜ್ಞಾನ ಹಾಗೂ ಬೃಹತ್ ಯಂತ್ರೋಪಕರಣಗಳ ಬಳಕೆ ಮಾಡಲಾಗುತ್ತಿದೆ ಎಂದರು.

ಕೃಷಿ ಜಂಟಿ ನಿರ್ದೇಶಕ ಪ್ರಕಾಶ ಚವ್ಹಾಣ ಮಾತನಾಡಿ, ಇಂದು ಕೃಷಿ ಕಾರ್ಮಿಕರ ಲಭ್ಯತೆ ಬಹಳ ವಿರಳವಾಗುತ್ತಿದೆ. ಕೃಷಿಯಲ್ಲಿ ಯಂತ್ರೋಪಕರಣಗಳ ಬಳಕೆ ಬಹಳ ಅನಿವಾರ್ಯ ಹಾಗೂ ಅವಶ್ಯಕವಾಗಿದೆ. ಯಂತ್ರೋಪಕರಣಗಳ ಬಳಕೆಯಿಂದ ಕೃಷಿ ಚಟುವಟಿಕೆಗಳು ಶೀಘ್ರವಾಗಿ ಆಗುತ್ತಿವೆ ಅದು ಕಡಿಮೆ ಖರ್ಚಿನಲ್ಲಿ ಎಂದರು.

ಭಾರತದಲ್ಲಿ ದೊಡ್ಡ ಹಿಡುವಳಿ ರೈತರಿಂದ ಸಣ್ಣ ಮತ್ತು ಅತಿ ಸಣ್ಣ ರೈತರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ ಇದರಿಂದ ಒಂದೇ ರೀತಿಯ ಕೃಷಿ ಚಟುವಟಿಕೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ ಇದರಿಂದ ಕೃಷಿ ಚಟುವಟಿಕೆಗಳು ಆಗುವುದಕ್ಕೆ ವಿಳಂಬವಾಗುತ್ತಿರುವ ಹಿನ್ನೆಲೆಯಲ್ಲಿ ಇಂತಹ ರೈತರು ಯಂತ್ರೋಪಕರಣಗಳನ್ನು ಅವಲಂಬಿಸುವಂತಾಗಿದೆ ಎಂದು ಹೇಳಿದರು.

ಡಾ.ಪ್ರಕಾಶ ಕೆ.ವಿ., ಡಾ.ಮಲ್ಲಿಕಾರ್ಜುನ ಅಯ್ಯನಗೌಡರ, ಡಾ.ವಿಜಯಕುಮಾರ ಪಲ್ಲೇದ, ಡಾ.ಪಿ.ಎಫ್.ಮಠದ, ಮಲ್ಲಿಕಾರ್ಜುನ.ಡಿ., ತಿಮ್ಮಣ್ಣ ಚೌಡಿ, ಡಾ. ಗುರುರಾಜ ಸುಂಕದ, ಡಾ.ಅಮರೇಗೌಡ ಎ., ಡಾ.ಎ.ಆರ್.ಕುರುಬರ ಸೇರಿದಂತೆ ಇತರರಿದ್ದರು.



ಭೂಗೋಳ ಶಾಸ್ತ್ರ ಅಧ್ಯಯನದಿಂದ ಉದ್ಯೋಗ ಅವಕಾಶ

◆**ಯಲಬುರ್ಗಾ:** ಭೂಗೋಳ ಶಾಸ್ತ್ರವು ಭೂಮಿಯ ಮೇಲ್ಮೈ, ಆದರ ಭೌತಿಕ ಲಕ್ಷಣಗಳು ವಾತಾವರಣ, ಮತ್ತು ಅಲ್ಲಿ ವಾಸಿಸುವ ಜನರು ಹಾಗೂ ಪರಿಸರದ ನಡುವಿನ ಪರಸ್ಪರ ಸಂಬಂಧವನ್ನು ಅಧ್ಯಯನ ಮಾಡುವ ವಿಜ್ಞಾನವಾಗಿದೆ ಎಂದು ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ.ಡಾಣಿ ಹೇಳಿದರು.

ಪಟ್ಟಣದ ಸ್ನಾತಕೋತ್ತರ ಪದವಿ ಕೇಂದ್ರದಲ್ಲಿ ಗುರುವಾರ 21ನೇ ಶತಮಾನದಲ್ಲಿ ಭೂಗೋಳ ಶಾಸ್ತ್ರದ ಮಹತ್ವದ ಕುರಿತು ವಿಶೇಷ ಉಪನ್ಯಾಸ ಮತ್ತು ಭೂಗೋಳ ಶಾಸ್ತ್ರ ಪ್ರಯೋಗಾಲಯದ ಉದ್ಘಾಟಿಸಿ ಮಾತನಾಡಿದ ಅವರು, ಮಾನವ ನಿರ್ಮಿತ ಪರಿಸರಗಳನ್ನು ಮತ್ತು ಅವುಗಳ ಮೇಲಿನ ಪ್ರಭಾವವನ್ನು ವಿಶ್ಲೇಷಿಸುವುದಾಗಿದೆ ಎಂದರು.

ಪದವಿ ಹಂತದಲ್ಲಿಯೇ ಭೂಗೋಳ ಶಾಸ್ತ್ರ ಆರಂಭ ಮಾಡಿ ಕೊಡಲಾಗಿದೆ. ಆನೇಕ ವಿದ್ಯಾರ್ಥಿಗಳು ಭೌಗೋಳಿಕ ಶಾಸ್ತ್ರ ಅಧ್ಯಯನಕ್ಕೆ ಆಸ್ತಕಿ ತೋರುತ್ತಿಲ್ಲ, ಭೌಗೋಳಿಕ ಶಾಸ್ತ್ರ ಅಧ್ಯಯನ ವಿಜ್ಞಾನ ವಿಭಾಗ ಆಗಿರುವುದರಿಂದ ಭೌಗೋಳಿಕ ಶಾಸ್ತ್ರ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಯಾಗುತ್ತದೆ. ವಿದ್ಯಾರ್ಥಿಗಳು ಭೂಗೋಳ ಶಾಸ್ತ್ರದ ಅಧ್ಯಯನ ಮಾಡಿ ಸ್ನಾತಕೋತ್ತರ ಪದವಿ ಪಡೆದುಕೊಂಡರೆ ಹಲವಾರು ರೀತಿಯ ಉದ್ಯೋಗ ಅವಕಾಶ ಪಡೆದುಕೊಳ್ಳಲು ವಿದ್ಯಾರ್ಥಿಗಳಿಗೆ ಹೆಚ್ಚು ಸಹಕಾರಿಯಾಗುತ್ತದೆ ಎಂದು ಹೇಳಿದರು.

ಹಿರಿಯ ಪ್ರಾಧ್ಯಾಪಕ ಮತ್ತು ಅಧ್ಯಕ್ಷರು ಭೌಗೋಳಿಕ ವಿಭಾಗ ಡೀನ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ ಧಾರವಾಡದ ಡಾ.ಅರವಿಂದ ಮೂಲಿಮನಿ ಉಪನ್ಯಾಸ ನೀಡಿ, ಭೌಗೋಳಿಕ ಅಧ್ಯಯನ ಭೂಮಿಯ ಭೌತಿಕ ಲಕ್ಷಣಗಳು, ವಾತಾವರಣ, ಪರಿಸರ ಮತ್ತು ಮಾನವ ಚಟುವಟಿಕೆಗಳ ನಡುವಿನ ಸಂಬಂಧವನ್ನು ವಿಶ್ಲೇಷಿಸುವ ಶಾಸ್ತ್ರವಾಗಿದೆ. ನೀರು, ಮಣ್ಣು, ಸಸ್ಯ, ಪ್ರಾಣಿವರ್ಗ ಹಾಗೂ ಜನರ ನಡುವೆ ಸಂಪರ್ಕ ಕೊಂಡಿಯಂತಿರುವ ಭೂಗೋಳವನ್ನ ರಾಜ್ಯದಲ್ಲಿ ಕಲಾ ವಿಭಾಗದ ವಿದ್ಯಾರ್ಥಿಗಳಿಗೆ ಮಾತ್ರ ಬೋಧಿಸಲಾಗುತ್ತಿದೆ ಎಂದರು.

ಸ್ನಾತಕೋತ್ತರ ಕೇಂದ್ರದ ಆಡಳಿತಾಧಿಕಾರಿ ಕೆ.ಎಚ್.ಛತ್ರದ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥ ಶರಣಪ್ಪ ಡಿ.ಗೌಡ್ರ,ಉಪನ್ಯಾಸಕ ಶ್ರೀಕಾಂತ, ಡಾ.ರವೀಂದ್ರ ಬೇಟಗೇರಿ, ಡಾ.ತಿಮ್ಮರೆಡ್ಡಿ, ಪಡಿಯಪ್ಪ, ರೇಖಾ ಹಾಗೂ ವಿದ್ಯಾರ್ಥಿಗಳು ಇದ್ದರು.



ಬಿಎಲ್‌ಓಗಳಿಗೆ ಮಾಹಿತಿ ನೀಡಿ ಸಹಕರಿಸಿ

◆**ಮಸ್ಕಿ:** ಭಾರತ ಚುನಾವಣೆ ಆಯೋಗದಿಂದ ಕರ್ನಾಟಕ ರಾಜ್ಯದಲ್ಲಿ ವಿಶೇಷ ಸಮಗ್ರ ಪರಿಷ್ಕರಣೆ ಘೋಷಣೆ ಶೀಘ್ರದಲ್ಲೇ ನಿರೀಕ್ಷಿಸಲಾಗಿರುವುದರಿಂದ, ಪೂರ್ವಭಾವಿ ಚಟುವಟಿಕೆಯಾದ ಮ್ಯಾಪಿಂಗ್ ಕಾರ್ಯ ಪ್ರಗತಿಯಲ್ಲಿದ್ದು, 2002ರ ಮತದಾರರ ಪಟ್ಟಿಗೆ ಸಂಬಂಧಿಸಿದ ಈ ಕೆಳಕಂಡ ವಿವರಗಳನ್ನು ಬೂತ್ ಮಟ್ಟದ ಅಧಿಕಾರಿಗಳಿಗೆ ನೀಡಿ ಮ್ಯಾಪಿಂಗ್ ಮಾಡಿಕೊಳ್ಳಬೇಕು ಎಂದು ತಹಶೀಲ್ದಾರ್ ಮಂಜುನಾಥ ಭೋಗವತಿ ತಿಳಿಸಿದ್ದಾರೆ.

ಮ್ಯಾಪಿಂಗ್ 2002ರ ಮತದಾರರ ಪಟ್ಟಿಯನ್ನು 2025ರ ಮತದಾರರ ಪಟ್ಟಿಗೆ ಜೋಡಣೆ ಮಾಡುವುದು. 2002ರ ಮತದಾರರ ಪಟ್ಟಿಯಲ್ಲಿ ಮತದಾರರ ಹೆಸರು ನೋಂದಣಿಯಾಗದಿದ್ದಲ್ಲಿ ಅವರ ತಂದೆ, ತಾಯಿ, ಅಜ್ಜ, ಅಜ್ಜಿಯವರ ಭಾಗ ಸಂಖ್ಯೆ ಹಾಗೂ ಕ್ರಮ ಸಂಖ್ಯೆಯೊಂದಿಗೆ ಜೋಡಣೆ ಮಾಡಿಕೊಳ್ಳಬೇಕು. 2002ರ ಮತದಾರರಾಗಿದ್ದಲ್ಲಿ ನೀವು 2002ರಲ್ಲಿ ವಾಸವಿದ್ದಂತಹ ವಿಧಾನಸಭಾ ಕ್ಷೇತ್ರ ಹೆಸರು, ಭಾಗ ಸಂಖ್ಯೆ ಹಾಗೂ ಕ್ರಮ ಸಂಖ್ಯೆಯನ್ನು ತಮ್ಮ ವ್ಯಾಪ್ತಿಯ ಬೂತ್ ಮಟ್ಟದ ಅಧಿಕಾರಿಗೆ ನೀಡಿ ಸಹಕರಿಸಬೇಕು ಎಂದು ತಿಳಿಸಿದರು.

ಒಂದು ವೇಳೆ ನೀವು 2002ರಲ್ಲಿ ಮತದಾರರಾಗಿ ಇಲ್ಲದಿದ್ದಲ್ಲಿ, ನಿಮ್ಮ ತಂದೆ, ತಾಯಿ, ಅಜ್ಜ, ಅಜ್ಜಿಯವರು ವಾಸವಿದ್ದಂತಹ ವಿಧಾನ ಸಭಾ ಕ್ಷೇತ್ರದ ಹೆಸರು, ಸಂಖ್ಯೆ, ಭಾಗ ಸಂಖ್ಯೆ, ಹಾಗೂ ಕ್ರಮ ಸಂಖ್ಯೆಯನ್ನು ತಮ್ಮ ವ್ಯಾಪ್ತಿಯ ಬೂತ್ ಮಟ್ಟದ ಅಧಿಕಾರಿಗೆ ಮಾಹಿತಿ ನೀಡಬೇಕು ಎಂದು ಮನವಿ ಮಾಡಿದರು.



ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

◆**ಕುಷ್ಟಗಿ:** ನೀಲಕಂಠೇಶ್ವರ ಮಹಿಳಾ ಸ್ವಸಹಾಯ ಸಂಘದವರು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ವಿಜೃಂಭಣೆಯಿಂದ ಆಚರಿಸಿದರು.

ತಾಲೂಕಿನ ತಾವರಗೇರಾ ಪಟ್ಟಣದ ಶ್ರೀವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ಭಾನುವಾರ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ನೀಲಕಂಠೇಶ್ವರ ಮಹಿಳಾ ಸ್ವಸಹಾಯ ಸಂಘದವರು ವಿಜೃಂಭಣೆಯಿಂದ ಆಚರಿಸಿದರು.

ಶಿಕ್ಷಕಿ ಸುಜಾತಾ ಹಿರೇಮಠ ಮಾತನಾಡಿ, ಮಹಿಳೆಯರು ಇಂದು ವಿಶೇಷ ದಿನವಾಗಿದೆ. ಹೆಣ್ಣುಮಕ್ಕಳಿಗೆ ಶೋಷಣೆ ವಿರುದ್ಧ ಪ್ರಕರಣ ದಾಖಲಿಸಲಾಗಿದ್ದು,ಕಡಿಮೆ ಮಾಡಬೇಕು ಹಾಗೂ ಹೆಣ್ಣಿನ ಸಂತತಿ ಕಡಿಮೆಯಾಗುತ್ತಿದೆ ಇದನ್ನು ಹೆಚ್ಚಿಸಬೇಕು ಎಂದು ತಿಳಿಸಿದರು.

ನಂತರದಲ್ಲಿ ಕಲಾವತಿ ಕುಲಕರ್ಣಿ,ಮಹಾಂತಮ್ಮ ಪಾಟೀಲ ಮಾತನಾಡಿ, ಹೆಚ್ಚಿನ ಮಹಿಳೆಯರ ಮೇಲೆ ಹಲ್ಲೆಗಳು ನಡೆಯುತ್ತಿವೆ ಇದನ್ನು ಖಂಡಿಸಬೇಕು ಎಂದು ಹೇಳಿದರು.

ನಂತರದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಪಪಂ ಸದಸ್ಯರಾದ ಬೇಬಿ ರೇಖಾ ಮಾತನಾಡಿ, ಇಂದಿನ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿಲ್ಲಾ,ಮುಂದಿನ ವರ್ಷ ಹೆಚ್ಚಿನ ಪ್ರಮಾಣದಲ್ಲಿ ಭಾಗವಹಿಸಲು ಹೆಚ್ಚಿನ ಶ್ರಮವನ್ನು ಪಡುತ್ತೇನೆ. ಯಾರು ಇನ್ನೊಬ್ಬರನ್ನು ನಂಬದೇ ನಮ್ಮ ಕೆಲಸವನ್ನು ನಾವೇ ನಿಭಾಯಿಸಲು ಮಾತ್ರ ಮಹಿಳೆಯರು ಮುಂದು ಬರಲು ಸಾಧ್ಯ ಎಂದು ತಿಳಿಸಿದರು.



25 ಮಹಿಳೆಯರು ಪೌರಕಾರ್ಮಿಕರು,ಬಿಸಿಯೂಟ ಮಾಡುವರು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು, ಮೇಲ್ವಿಚಾರಕಿಯರು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸೂಪರ್‌ವೈಸರ್ ಸೇರಿದಂತೆ ಅವರುಗಳನ್ನು ಸನ್ಮಾನ ಮಾಡಲಾಯಿತು.

ಡಾ.ಕಾವೇರಿ ಶ್ಯಾವಿ ಉದ್ಘಾಟಿಸಿದರು. ಸುಚಿತ್ರಾ ಐಲಿ, ಶಕೀಲಾ ಶೆಟ್ಟಿ, ಗಂಗಾವತಿ ಚಂದ್ರಕಲಾ ಐಲಿ, ಸವಿತಾ ದೇಶಪಾಂಡೆ, ಪರಿಮಳಾ ಇನ್ನಿತರರು ಉಪಸ್ಥಿತರಿದ್ದರು. ಪ್ರಾರ್ಥನೆ ಗೀತೆ ಶೃತಿ, ಸ್ವಾಗತ ಹಾಗೂ ಪುಷ್ಪಾರ್ಚನೆ ಮತ್ತು ವಂದನಾರ್ಪಣೆ ಸುಧಾ ಐಲಿ ನಿರ್ವಹಿಸಿದರು.

ಶಿವಬಸವ ಕಾಯಕಯೋಗಿ ಪ್ರಶಸ್ತಿ ಪ್ರದಾನ


◆**ಯಲಬುರ್ಗಾ:** ಬನಶ್ರೀ ಸಾಹಿತ್ಯ ಬಳಗ ಯಲಬುರ್ಗಾ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಶಿವಬಸವ ಕಾಯಕಯೋಗಿ ಪ್ರಶಸ್ತಿ ಹಾಗೂ ಗೌರವ ಸನ್ಮಾನ ಕಾರ್ಯಕ್ರಮವನ್ನು ತಾಲೂಕಿನ ದಮ್ಮೂರು ಗ್ರಾಮದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಿತು.

ಆರೋಗ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ವೈದ್ಯ ಡಾ.ಶೇಖರ ಭಜಂತ್ರಿ, ಶಿಕ್ಷಣ ಕ್ಷೇತ್ರದಲ್ಲಿ ತಾಲೂಕಿನ ದಮ್ಮೂರು ಗ್ರಾಮದ ಸರ್ಕಾರಿ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯ ಎಫ್.ಎಂ.ಕಳ್ಳಿ ಹಾಗೂ ತರಲಕಟ್ಟಿ ಗ್ರಾಮದ ರಂಗಭೂಮಿ ಬಾಲ ಕಲಾವಿದ ಯಶ್ವಂತಗೌಡ ಮಾಲಿ ಪಾಟೀಲ್‌ಗೆ ಇವರ ಸೇವಾ ಕಾರ್ಯವನ್ನು ಗುರುತಿಸಿ ನಮ್ಮ ಬನಶ್ರೀ ಸಾಹಿತ್ಯ ಸಂಘಟನೆ ಬಳಗದ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಸಹ ನಮ್ಮ ತಂದೆ ತಾಯಿಯವರು ಸ್ಮರಣಾರ್ಥವಾಗಿ ಶಿವಬಸವ ಕಾಯಕಯೋಗಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ ಎಂದು ಹಿರಿಯ ಪತ್ರಕರ್ತ ವಿ.ಎಸ್.ಶಿವಪ್ಪಯ್ಯನಮಠ ಹೇಳಿದರು.

ನಿವೃತ್ತ ಶಿಕ್ಷಕ ವೈ.ಬಿ.ಮೇಟಿ, ಪತ್ರಕರ್ತರಾದ ನೀಲಪ್ಪ ಖಾನಾವಳಿ, ಶರಣಪ್ಪ ದಾನಕೈ, ಮಾನಪ್ಪ ಬಡಿಗೇರ, ಮುಖ್ಯೋಪಾಧ್ಯಾಯ ಕನಕಪ್ಪ ಕಂಬಳಿ, ಮುಖಂಡರಾದ ಹನಮಂತಪ್ಪ ಹಡಪದ, ಹೋಳಿಯಮ್ಮ ಹಳ್ಳಿಕೇರಿ, ಶಂಕ್ರಪ್ಪ ಹೊನ್ನಳ್ಳಿ, ಶಿಕ್ಷಕ ಲಕ್ಷ್ಮಣ ಛಲವಾದಿ ಸೇರಿದಂತೆ ಶಿಕ್ಷಕರು ಮತ್ತು ಶಿಕ್ಷಕಿಯರು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಮತ್ತು ಗ್ರಾಮಸ್ಥರು ಸೇರಿದಂತೆ ಮತ್ತಿತರರು ಇದ್ದರು.



'ಸ್ಫೂರ್ತಿಯ ನಡೆ': ಸಂಪನ್ಮೂಲ ಶಿಕ್ಷಕರಿಗೆ ಸನ್ಮಾನ



◆ **ಕೊಪ್ಪಳ:** 'ಸ್ಫೂರ್ತಿಯ ನಡೆ' ಕಾರ್ಯಕ್ರಮದಡಿ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದವರ್ಗಗಳಕಲ್ಯಾಣಇಲಾಖೆಹಾಗೂ ಅಲ್ಪಸಂಖ್ಯಾತರಕಲ್ಯಾಣಇಲಾಖೆಯ ಎಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ವಿಶೇಷ ಆನ್‌ಲೈನ್ ತರಗತಿ ನೀಡಿದ ಸಂಪನ್ಮೂಲ ಶಿಕ್ಷಕರಿಗೆ ಬುಧವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸನ್ಮಾನಿಸಲಾಯಿತು.

'ಸ್ಫೂರ್ತಿಯ ನಡೆ' ಕಾರ್ಯಕ್ರಮವು ಕಳೆದ 2025ರ ಡಿಸೆಂಬರ್ ರಿಂದ ಆರಂಭಗೊಂಡು ಪ್ರಸ್ತುತ ಮುಕ್ತಾಯಗೊಂಡಿದ್ದು, ಸಂಪನ್ಮೂಲ ಶಿಕ್ಷಕರಾಗಿ ಜಿಲ್ಲೆಯ ವಿವಿಧ ಸರ್ಕಾರಿ ಪ್ರೌಢ ಶಾಲೆಗಳ ಗಣಿತ, ವಿಜ್ಞಾನ ಮತ್ತು ಇಂಗ್ಲಿಷ್ ಶಿಕ್ಷಕರಿಂದ ಮೂರು ತಿಂಗಳ ಕಾಲ ನಿರಂತರವಾಗಿ ಸೋಮವಾರದಿಂದ ಶನಿವಾರವರೆಗೆ ಪ್ರತಿದಿನ ಸಂಜೆ 6 ರಿಂದ ರಾತ್ರಿ 8 ಗಂಟೆಯವರೆಗೆ ಜಿಲ್ಲೆಯ ಎನ್‌ಐಸಿ ಕಚೇರಿಯಲ್ಲಿ ತರಗತಿಗಳನ್ನು ನಿರ್ವಹಿಸಲಾಗುತ್ತಿತ್ತು. ಇದಕ್ಕಾಗಿ ಅಗತ್ಯ ಸಹಯೋಗ ನೀಡಿದ ಎನ್ ಐಸಿ ಮುಖ್ಯಸ್ಥರಾದ ಬಸವರಾಜ್ ಮತ್ತು ತರಬೇತಿ ನೀಡಿದ ಎಲ್ಲಾ ಸಂಪನ್ಮೂಲ ಶಿಕ್ಷಕರಿಗೆ ಜಿಲ್ಲಾಧಿಕಾರಿಗಳು ಹಾಗೂ ಇತರೆ ಅಧಿಕಾರಿಗಳು ಸೇರಿ ಸನ್ಮಾನಿಸಿದರು.


ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಸೋಮಶೇಖರಗೌಡ ಪಾಟೀಲ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಅಜ್ಜಪ್ಪ ಸೊಗಲದ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ನಾಗಮಣಿ ಹೊಸಮನಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಅಜ್ಮೀರ ಅಲಿ, ಯಲಬುರ್ಗಾ ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ಶಿವಶಂಕರ ಕರಡಕಲ್ ಸೇರಿದಂತೆ ಇತರೆ ಅಧಿಕಾರಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಮನವಿ

◆**ಕುಕನೂರ:** ರಾಜ್ಯ ಸರ್ಕಾರ ಕೊಡಲೇ ಒಳ ಮೀಸಲಾತಿ ಜಾರಿಗೆ ಮಾಡಬೇಕು ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ನವರಿಗೆ ತಹಸೀಲ್ದಾರ್ ಮೂಲಕ ಮಾದಿಗ ಸಮುದಾಯದ ಮುಖಂಡರು ಆಗ್ರಹಿಸಿದರು.

ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಶಿರೇಸದಾರ್ ಸುರೇಶ್ ಬಾಳೆಹೊಸೂರು ಹಾಗೂ ಆಹಾರ ಇಲಾಖೆ ಅಧಿಕಾರಿ ಮಂಜುನಾಥ ಹಲಗೇರಿ ಅವರಿಗೆ ಮನವಿ ಸಲ್ಲಿಸಿದರು.

ಮಾದಿಗ ಸಮುದಾಯ ಸುಮಾರು 35 ವರ್ಷಗಳ ಕಾಲ ಸುದೀರ್ಘವಾಗಿ ಒಳ ಮೀಸಲಾತಿಗಾಗಿ ಬೀದಿಗಿಳಿದು ಹಲವು ರೀತಿಯಲ್ಲಿ ಹೋರಾಟಗಳನ್ನು ಮಾಡುತ್ತಾ ಬಂದಿದ್ದವೆ, ಕಳೆದ 2 ವರ್ಷಗಳ ಹಿಂದೆ ಆಗಸ್ಟ್ 1, 2024 ರಂದು ಪರಿಶಿಷ್ಟ ಜಾತಿ ಮತ್ತು



ಪಂಗಡಗಳ ಮೀಸಲಾತಿಯಲ್ಲಿ ಉಪ-ವರ್ಗೀಕರಣ ಮಾಡಲು ರಾಜ್ಯ ಸರ್ಕಾರಗಳಿಗೆ ಅಧಿಕಾರವಿದೆ ಎಂದು ಸುಪ್ರೀಂ ಕೋರ್ಟ್‌ನ 7 ನ್ಯಾಯಾಧೀಶರ ಸಾಂವಿಧಾನಿಕ ಪೀಠವು ಐತಿಹಾಸಿಕ ತೀರ್ಪು ನೀಡಿದೆ. ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು 6:1 ಅನುಪಾತದಲ್ಲಿ, ಅತಿ ಹಿಂದುಳಿದ ಸಮುದಾಯಗಳಿಗೆ ಒಳ ಮೀಸಲಾತಿ ನೀಡಲು ರಾಜ್ಯಗಳು ಅಧಿಕೃತ ದತ್ತಾಂಶದ ಆಧಾರದ ಮೇಲೆ ನಿರ್ಧಾರ ಕೈಗೊಳ್ಳಬಹುದು ಎಂದು ತಿಳಿಸಿದೆ.

ಸಮುದಾಯದ ಪ್ರಮುಖರಾದ ನಿಂಗಪ್ಪಗೋರ್ಲೆಕೊಪ್ಪ,ಮಲಿಯಪ್ಪ ಅಣ್ಣಿಗೇರಿ, ಮಾರುತಿ ಭಂಡಾರಿ, ಚಂದ್ರಪ್ಪ ಆರುಬೆರಳಿನ, ಶರಣಪ್ಪ ಹಿರೇಮನಿ, ಮಲ್ಲಿಕಾರ್ಜುನ ಗೋರ್ಲೆಕೊಪ್ಪ, ಪ್ರಶಾಂತ್ ಆರುಬೆರಳಿನ, ಹನುಮಂತಪ್ಪ ರಾವಣಕೀ, ಶ್ರೀಧರ್ ಭಂಡಾರಿ, ಭೀಮಣ್ಣ ಬೂದಗುಂಪ,ಪ್ರಕಾಶ್ ಉಜ್ಜನವರ, ಶಂಕರ್ ಭಂಡಾರಿ, ಲೋಹಿತ್ ಹಿರೇಮನಿ ಇತರರು ಇದ್ದರು.

ಕಿರುಸುದ್ದಿ

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಗಾದಿಗನೂರು: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಗ್ರಾಮದಲ್ಲಿ ಭಾನುವಾರ ಶ್ರೀಗಾದಿಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಹೊಲಿಗೆ ಮತ್ತು ಮಗ್ಗಂ ವರ್ಕ್ ತರಬೇತಿ ಶಿಬಿರವನ್ನು ತಾಯಮ್ಮ ಶಕ್ತಿ ಸಂಘದ ಅಧ್ಯಕ್ಷೆ ಕವಿತಾ ಈಶ್ವರ್ ಸಿಂಗ್ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಮಹಿಳೆಯರಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನೇಕ ಯೋಜನೆಗಳನ್ನು ಜಾರಿಗೆ ತಂದಿದ್ದು ಅವುಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಆರ್ಥಿಕ ಸಬಲತೆ ಹೊಂದುತ್ತಿದ್ದಾರೆ. ಮಹಿಳೆಯರು ಸ್ವಾವಲಂಬಿಗಳಾಗಿ ಬದುಕು ಕಟ್ಟಿಕೊಳ್ಳಲು ಮುಂದಾಗಬೇಕು. ತಾಯಮ್ಮ ಶಕ್ತಿ ಸಂಘ ಹಮ್ಮಿಕೊಂಡಿರುವ ಹೊಲಿಗೆ ಮತ್ತು ಮಗ್ಗಂ ವರ್ಕ್ ತರಬೇತಿ ಶಿಬಿರದಲ್ಲಿ ಹೆಚ್ಚಿನ ಮಹಿಳೆಯರು ತರಬೇತಿಯನ್ನು ಪಡೆದು ಮುಂದಿನ ದಿನಗಳಲ್ಲಿ ಸ್ವಂತ ಉದ್ಯೋಗ ರೂಪಿಸಿಕೊಳ್ಳಬೇಕು ಎಂದು ತಿಳಿಸಿದರು.

ತಾಯಮ್ಮ ಶಕ್ತಿ ಸಂಘದ ಸದಸ್ಯರಾದ ಲಲಿತಾದೇವಿ, ನೇತ್ರಾವತಿ, ಪ್ರಮೀಳಾ ಸಂಜೀವ, ವಿಜಯ ಕುಮಾರಿ ಚಂದ್ರಶೇಖರ, ಶೋಭಾ ಗಾಯಕ್ವಾಡ್, ಶಿಕ್ಷಕರಾದ ಎಚ್. ಶೋಭಾ ಆನಂದ್ ಕುಮಾರ, ಸುಜಾತ, ಶಿಕ್ಷಕಿ ನಾಗರತ್ನ ಮೇಡಂ ಹಾಗೂ ಊರಿನ ಗ್ರಾಮಸ್ಥರು ಉಪಸ್ಥಿತಿ ಇದ್ದರು.

ನಾಳೆ ರಾಷ್ಟ್ರೀಯ ಲೋಕ ಅದಾಲತ್



ಬಳ್ಳಾರಿ: ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಇವರ ನಿರ್ದೇಶನದಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ವತಿಯಿಂದ ಮಾ.14 ರಂದು ಬೆ.10ಕ್ಕೆ ನಗರದ ತಾಳೂರು ರಸ್ತೆಯ ಹೊಸ ಜಿಲ್ಲಾ ನ್ಯಾಯಾಲಯ ಸಂಕೀರ್ಣದಲ್ಲಿ ರಾಷ್ಟ್ರೀಯ ಲೋಕ ಅದಾಲತ್ ನಡೆಯಲಿದೆ. ಸಾರ್ವಜನಿಕರು ತಮ್ಮ ವ್ಯಾಜ್ಯಪೂರ್ವ, ರಾಜಿಯಾಗಬಹುದಾದ ಅಪರಾಧಿಕ ಪ್ರಕರಣಗಳು, ಚೆಕ್ ಪ್ರಕರಣಗಳು, ಬ್ಯಾಂಕ್ ಪ್ರಕರಣಗಳು, ಮೋಟಾರು ವಾಹನ ಅಪಘಾತ ಪರಿಹಾರ ನ್ಯಾಯಾಧಿಕರಣದ ಪ್ರಕರಣಗಳು, ವೈವಾಹಿಕ ಹಾಗೂ ಕೌಟುಂಬಿಕ ಪ್ರಕರಣಗಳು, ಸಿವಿಲ್ ಪ್ರಕರಣಗಳು ಹಾಗೂ ಇತರೆ ರಾಜಿಯಾಗಬಹುದಾದ ಪ್ರಕರಣಗಳನ್ನು ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ಒಟ್ಟು 31 ನ್ಯಾಯಾಲಯಗಳಲ್ಲಿ ರಾಷ್ಟ್ರೀಯ ಲೋಕ್ ಅದಾಲತ್ ಮೂಲಕ ಶೀಘ್ರವೇ ಇತ್ಯರ್ಥಗೊಳಿಸಿ ಪರಿಹಾರ ಪಡೆದುಕೊಳ್ಳಲು ಸುವರ್ಣ ಅವಕಾಶವಾಗಿದೆ.ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಥವಾ ದೂ.08392-278077 ಹಾಗೂ ಎನ್‌ಎಲ್ ಎಸ್‌ಎ ಸಹಾಯವಾಣಿ ಸಂಖ್ಯೆ 15100 ಗೆ ಕರೆ ಮಾಡಿ ಮಾಹಿತಿ ಪಡೆಯಬಹುದು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಕೆ.ಜಿ.ಶಾಂತಿ ಅವರು ತಿಳಿಸಿದ್ದಾರೆ.

ಅನುದಾನ ಮಂಜೂರಿಗೆ ಸಂಸದ ತುಕಾರಾಂ ಮನವಿ



ಬಳ್ಳಾರಿ: ಗಣಿನಾಡು ಬಳ್ಳಾರಿ ನಗರದ ಪ್ರಮುಖ ಸಮಸ್ಯೆಯಾಗಿರುವ ರಾಷ್ಟ್ರೀಯ ಹೆದ್ದಾರಿ67 ರಸ್ತೆ ಸಂಚಾರ ದಟ್ಟಣೆ ಮತ್ತು ಮೂಲಸೌಕರ್ಯ ಕೊರತೆಯನ್ನು ಶಾಶ್ವತವಾಗಿ ಪರಿಹರಿಸಲು ಪ್ರಸ್ತುತ ಎನ್‌ಎಚ್-67 ಬಳ್ಳಾರಿ ಬೈ-ಪಾಸ್‌ನಿಂದ ಸುಧಾ ಕ್ರಾಸ್ ವರೆಗಿನ ರಸ್ತೆಯನ್ನು ಎರಡು ಲೈನ್‌ನಿಂದ ನಾಲ್ಕು ಲೈನ್‌ಗೆ ಅಭಿವೃದ್ಧಿಪಡಿಸಲು ಸುಮಾರು 90 ಕೋಟಿ ಅನುದಾನ ಮಂಜೂರು ಮಾಡಬೇಕು ಹಾಗೂ ಗುಳ್ಯಮ್ ಸೇತುವೆ ನಿರ್ಮಾಣಕ್ಕೆ 60 ಕೋಟಿ ಅನುದಾನ ನೀಡಬೇಕು ಎಂದು ಒತ್ತಾಯಿಸಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರಿಗೆ, ವಿಜಯನಗರ, ಬಳ್ಳಾರಿ ಸಂಸದ ಈ.ತುಕಾರಾಂ ಅವರು ಗುರುವಾರ ಮನವಿ ಸಲ್ಲಿಸಿದರು. ನವದೆಹಲಿಯಲ್ಲಿ ಸಚಿವರನ್ನು ಭೇಟಿಯಾದ ಸಂಸದರು ಮಾತನಾಡಿ, ಸಚಿವರು ಅನುದಾನ ನೀಡುವ ಭರವಸೆ ನೀಡಿದ್ದಾರೆ.

ಇದು ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಕೈಗಾರಿಕಾ ಬೆಳವಣಿಗೆ, ರಾಜ್ಯಾದ್ಯಂತ ಸಂಪರ್ಕ ಮತ್ತು ಸಾರ್ವಜನಿಕರ ಸುರಕ್ಷತೆಗಾಗಿ ಈ ರಸ್ತೆ ಅತ್ಯಂತ ಮಹತ್ವದ್ದಾಗಿದ್ದು, ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಟ್ರಾಫಿಕ್ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ಆಗತ್ಯವನ್ನು ಸ್ಪಷ್ಟವಾಗಿ ಸರ್ಕಾರದ ಮುಂದೆ ಮಂಡಿಸಲಾಗಿದೆ ಎಂದು ತಿಳಿಸಿದ್ದಾರೆ.



ಗಾದಿಗನೂರು: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಗ್ರಾಮದಲ್ಲಿ ಭಾನುವಾರ ಶ್ರೀಗಾದಿಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಹೊಲಿಗೆ ಮತ್ತು ಮಗ್ಗಂ ವರ್ಕ್ ತರಬೇತಿ ಶಿಬಿರವನ್ನು ತಾಯಮ್ಮ ಶಕ್ತಿ ಸಂಘದ ಅಧ್ಯಕ್ಷೆ ಕವಿತಾ ಈಶ್ವರ್ ಸಿಂಗ್ ಉದ್ಘಾಟಿಸಿದರು. ತಾಯಮ್ಮ ಶಕ್ತಿ ಸಂಘದ ಸದಸ್ಯರಾದ ಲಲಿತಾದೇವಿ, ನೇತ್ರಾವತಿ, ಪ್ರಮೀಳಾ ಸಂಜೀವ, ವಿಜಯ ಕುಮಾರಿ ಚಂದ್ರಶೇಖರ, ಶೋಭಾ ಗಾಯಕ್ವಾಡ್, ಶಿಕ್ಷಕರಾದ ಎಚ್.ಶೋಭಾ ಆನಂದ್ ಕುಮಾರ, ಸುಜಾತ, ಶಿಕ್ಷಕಿ ನಾಗರತ್ನ ಮೇಡಂ ಹಾಗೂ ಊರಿನ ಗ್ರಾಮಸ್ಥರು ಉಪಸ್ಥಿತಿ ಇದ್ದರು.

ಎನ್‌ಎಸ್‌ಎಸ್ ವಿಶೇಷ ಶಿಬಿರದ ಸಮಾರೋಪ

ಕೆಂಭಾವಿ: ಶಿಬಿರಾರ್ಥಿಗಳು ವಾರ್ಷಿಕ ವಿಶೇಷ ಶಿಬಿರದ ಸದುಪಯೋಗ ಪಡಿಸಿಕೊಂಡು ಉತ್ತಮ ನಾಯಕರಾಗಿ ದೇಶ ಸೇವೆಗೆ ಮುಂದಾಗಬೇಕು ಎಂದು ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಅಶೋಕ ತಳಕೇರಿ ಹೇಳಿದರು.

ಪಟ್ಟಣದ ಗಂಗೂಬಾಯಿ ಶಾಂತಗೌಡ ಪೊಲೀಸ್‌ಪಾಟೀಲ ಮೆಮೋರಿಯಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ, ರಾಷ್ಟ್ರೀಯ ಸೇವಾ ಯೋಜನೆ ಘಟಕ ಹಾಗೂ ಆದಿಕವಿ ಶ್ರೀಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ 2025-26ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದ ಸಮಾರೋಪದಲ್ಲಿ ಅವರು ಮಾತನಾಡಿದರು.

ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಹಿರೇಮಠದ ಪೀಠಾಧಿಪತಿ ಚನ್ನಬಸವ ಶಿವಾಚಾರ್ಯರು ವಿದ್ಯಾರ್ಥಿ ಜೀವನ ಅತ್ಯಮೂಲ್ಯವಾದದ್ದು, ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ ಮೂಲಕ ಸೇವಾ ಮನೋಭಾವದಿಂದ ಮುನ್ನುಗ್ಗಿದಾಗ ಮಾದರಿ ಬದುಕು ತಮ್ಮದಾಗುತ್ತದೆ ಎಂದು ಆಶಿಸಿದರು.

ಸಾಹಿತಿ ನಿಂಗನಗೌಡ ದೇಸಾಯಿ, ಆಂಗ್ಲ ಭಾಷೆಯ ಉಪನ್ಯಾಸಕ ವೀರೇಂದ್ರ ಧರಿ, ಎನ್ ಎಸ್‌ಎಸ್ ಅಧಿಕಾರಿ ಡಾ.ಸಿದ್ದಲಿಂಗ ರಾಠೋಡ್ ಮಾತನಾಡಿದರು.ಪ್ರಾಂಶುಪಾಲ ಡಾ.ನಾಗಪ್ಪ ಚಾವಲ್ಕರ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಶಶಿಕುಮಾರ ಎತ್ತಿನಮನಿ ಸ್ವಾಗತಿಸಿದರು. ಡಾ.ಯಂಕನಗೌಡ ಪಾಟೀಲ ನಿರೂಪಿಸಿದರು. ಮಲ್ಲಣ್ಣ ಬಿಳೆಬಾವಿ ವಂದಿಸಿದರು. ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.



ಕೆಂಭಾವಿ: ಪಟ್ಟಣದ ಗಂಗೂಬಾಯಿ ಶಾಂತಗೌಡ ಪೊಲೀಸ್ ಪಾಟೀಲ ಮೆಮೋರಿಯಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ, ರಾಷ್ಟ್ರೀಯ ಸೇವಾ ಯೋಜನೆ ಘಟಕ ಹಾಗೂ ಆದಿಕವಿ ಶ್ರೀಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ 2025-26ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ನಡೆಯಿತು.

ಯುಪಿಎಸ್‌ಸಿ ಸಾಧಕರಿಗೆ ಸನ್ಮಾನ | ಸಚಿವ ದರ್ಶನಾಪುರ ಅಭಿಮತ

ಸಾಧನೆಗೆ ಕಠಿಣ ಪರಿಶ್ರಮ ಅಗತ್ಯ

ಯಾದಗಿರಿ: ವಿದ್ಯಾರ್ಥಿಗಳು ಜೀವನದಲ್ಲಿ ದೊಡ್ಡ ಪ್ರಮಾಣದ ಗುರಿ ಇಟ್ಟುಕೊಳ್ಳುವ ಮೂಲಕ ಅದನ್ನು ಸಾಧಿಸಲು ಕಠಿಣ ಪರಿಶ್ರಮ ಪಡಬೇಕು. ಸಾಧನೆ ಮಾಡಬೇಕಾದರೆ ಮೊದಲು ಆಲಸ್ಯ ತೊರೆಯಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ ಸಲಹೆ ಮಾಡಿದರು.

ನಗರದ ಜಿಲ್ಲಾಡಳಿತದ ಆಡಿಟೋರಿಯಂನಲ್ಲಿ ಇತ್ತೀಚೆಗೆ ಯುಪಿಎಸ್ ಸಿ ಪರೀಕ್ಷೆಯಲ್ಲಿ ಅಗ್ರ ಶ್ರೇಯಾಂಕದೊಂದಿಗೆ ತೇರ್ಗಡೆಯಾದ ನಾಲ್ಕು ಜನ ಸಾಧಕರಿಗೆ ಜಿಲ್ಲಾಡಳಿತದಿಂದ ಆಯೋಜಿಸಿದ್ದ ಸನ್ಮಾನ ಸಮಾರಂಭ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಕನಸು ಕಾಣಬೇಕು. ಆದರೆ, ಅದೇ ಜೀವನವಾಗಬಾರದು ಎಂದರು.

ಯಾದಗಿರಿ ಜಿಲ್ಲೆಯಿಂದ ನಾಲ್ವರು ನಾಗರಿಕ ಸೇವಾ ಪರೀಕ್ಷೆಯಲ್ಲಿ ಏಕಕಾಲಕ್ಕೆ ಉತ್ತೀರ್ಣರಾಗಿರುವುದು ಅಪ್ರತಿಮ ಸಾಧನೆಯಾಗಿದೆ. ಕನಸು, ನನಸು ಮಾಡಿದ ಅನುಭವವಾಗಿದೆ. ಈ ಅಭ್ಯರ್ಥಿಗಳು ಯುವಜನಾಂಗಕ್ಕೆ ಪ್ರೇರಣೆ ಜೊತೆಗೆ ಆತ್ಮವಿಶ್ವಾಸ ಹೆಚ್ಚಿಸಿದಂತಾಗಿದೆ ಎಂದು ಹೇಳಿದರು.

ಕಲ್ಯಾಣ ಕರ್ನಾಟಕ ಭಾಗದ ಏಳೂ ಜಿಲ್ಲೆಗಳಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯಲ್ಲಿ ಕೆಳಗಿನ ರ‍್ಯಾಂಕ್ ಬರುತ್ತಿರುವ ಸಂದರ್ಭದಲ್ಲಿ, ಒಂದೇ ವರ್ಷದಲ್ಲಿ ನಾಲ್ವರು ಯಶಸ್ವಿಯಾಗಿರುವುದು ಅಚ್ಚರಿ ಹಾಗೂ ಸಂತಸ ಮೂಡಿಸಿದೆ. ಇದು ಅವರ ಪಾಲಕರು, ಕುಟುಂಬ ಹಾಗೂ ಶಿಕ್ಷಕ ವರ್ಗದವರಿಗೆ ಹೆಮ್ಮೆ ತರುವ ಸಂಗತಿಯಾಗಿದೆ ಎಂದು ತಿಳಿಸಿದರು.

ಜೀವನದಲ್ಲಿ ಛಲ, ಗುರಿ ಹಾಗೂ ಕಠಿಣ ಪರಿಶ್ರಮದಿಂದ ಸಾಧನೆ ಮಾಡಲು ಸಾಧ್ಯ ಎಂಬುದಕ್ಕೆ ಈ ನಾಲ್ವರು ಅಭ್ಯರ್ಥಿಗಳು ಉತ್ತಮ ಉದಾಹರಣೆಯಾಗಿದ್ದಾರೆ.ನೀರು,ಗಾಳಿ ರೀತಿಯಲ್ಲಿ ಶಿಕ್ಷಣವು ಕೂಡ ಇಂದು ಅಷ್ಟೇ ಪ್ರಾಮುಖ್ಯತೆ ಪಡೆದಿದೆ ಎಂದ ಅವರು ವಿಶ್ವದಲ್ಲಿ ಬದಲಾವಣೆ ತರಲು ಶಿಕ್ಷಣ ಬಹುಮುಖ್ಯವಾಗಿದೆ ಎಂದು ಹೇಳಿದರು.



> ಕೇಂದ್ರ ಲೋಕಸೇವಾ ಆಯೋಗದ ನಾಗರಿಕ ಸೇವಾ ಪರೀಕ್ಷೆಯಲ್ಲಿ ನಾಲ್ವರು ಅಭ್ಯರ್ಥಿಗಳು ಯಶಸ್ವಿಯಾಗುವ ಮೂಲಕ ರಾಜ್ಯ ಹಾಗೂ ಜಿಲ್ಲೆಯ ಯುವಜನಾಂಗಕ್ಕೆ ಮಾದರಿ ಹಾಗೂ ಸ್ಫೂರ್ತಿಯಾಗಿದ್ದಾರೆ.
> ■ ಶರಣಬಸಪ್ಪ ದರ್ಶನಾಪುರ, ಜಿಲ್ಲಾ ಉಸ್ತುವಾರಿ ಸಚಿವ

ಡಿಸಿ ಹರ್ಷಲ್ ಭೋಯರ್ ಅವರು, ಜಿಲ್ಲೆಗೆ ಈಗ ಐತಿಹಾಸಿಕ ಕ್ಷಣ. ನಾಲ್ವರು ಅಭ್ಯರ್ಥಿಗಳು ಒಂದೇ ಬಾರಿಗೆ ನಾಗರಿಕ ಸೇವಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವುದು. ಎಲ್ಲರಿಗೂ ಹೆಮ್ಮೆಯ ವಿಷಯ. ಶೈಕ್ಷಣಿಕ ಸವಲತ್ತು ಹಾಗೂ ಇತರೆ ಸೌಲಭ್ಯಗಳ ಕೊರತೆ ಮಧ್ಯದಲ್ಲಿಯೂ ಈ ನಾಲ್ವರು ಅಭ್ಯರ್ಥಿಗಳ ಸಾಧನೆ ಅಪ್ರತಿಮವಾಗಿದೆ. ವಿದ್ಯಾರ್ಥಿಗಳು ಇವರಿಂದ ಸ್ಫೂರ್ತಿ ಪಡೆಯುವಂತೆ ತಿಳಿಸಿದ ಅವರು ಈ ಅಭ್ಯರ್ಥಿಗಳ ಸಾಧನೆಗೆ ನೆರವಾದ ಪಾಲಕರು, ಶಿಕ್ಷಕರು ಹಾಗೂ ಮಾರ್ಗದರ್ಶಕರಿಗೆ ಅಭಿನಂದಿಸಿದರು.

ಶಾಸಕ ಚೆನ್ನಾರೆಡ್ಡಿ ಪಾಟೀಲ ತುನ್ನೂರ ಅವರು, ಮಕ್ಕಳು ಲಭ್ಯವಿರುವ ಸಮಯಾವಕಾಶ ಬಳಸಿಕೊಳ್ಳಬೇಕು. ಗುರಿಯೊಂದಿಗೆ, ಕಠಿಣ ಪರಿಶ್ರಮದಿಂದ ಸಾಧನೆ ಮಾಡಬೇಕು.ಆತ್ಮಸ್ಥೈರ್ಯ ಬೆಳೆಸಿಕೊಳ್ಳಬೇಕು. ಪಾಲಕರೂ ಕೂಡ ಮಕ್ಕಳಿಗೆ ಉತ್ತಮ ಶಿಕ್ಷಣ ಹಾಗೂ ಸಂಸ್ಕಾರ ದೊರಕಿಸುವಂತೆ ಸಲಹೆ ನೀಡಿದರು.

ಪರೀಕ್ಷೆಯಲ್ಲಿ ಉತ್ತೀರ್ಣರಾದ ಸಂದೀಪ್ ಬಾಡದ್, ನಿವೇದಿತಾ ಭಾವಿಮನಿ, ಬಸವರಾಜ ಜವಳಿ, ಚಂದ್ರಶೇಖರ ದೊರೆ ಅವರನ್ನು ಸನ್ಮಾನಿಸಲಾಯಿತು.ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುರಾವ್ ಕಾಡ್ಲೂರ್, ಎಸ್ಪಿ ಪೃಥ್ವಿಕ್ ಶಂಕರ್, ಜಿಪಂ ಸಿಇಒ ಲವೀಶ್ ಒರಡಿಯಾ, ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಉಪಾಧ್ಯಕ್ಷರಾಗಿ ನೇತ್ರಾವತಿ ಅವಿರೋಧ ಆಯ್ಕೆ

ಹಗರಿಬೊಮ್ಮನಹಳ್ಳಿ: ಪುರಸಭೆಯ ನೂತನ ಉಪಾಧ್ಯಕ್ಷೆಯಾಗಿ ಸರೇಗಾರ ನೇತ್ರಾವತಿ ಹುಚ್ಚಪ್ಪ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಪುರಸಭೆಯಲ್ಲಿ ತೆರವಾಗಿದ್ದ ಪರಿಶಿಷ್ಟ ಪಂಗಡ ಮಹಿಳೆಯರಿಗೆ ಮೀಸಲಾಗಿದ್ದ ಉಪಾಧ್ಯಕ್ಷ ಸ್ಥಾನಕ್ಕೆ ಗುರುವಾರ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ 23 ಸದಸ್ಯ ಬಲ ಹೊಂದಿರುವ ಪುರಸಭೆ ಈ ಚುನಾವಣೆಯಲ್ಲಿ 18 ಪುರಸಭೆ ಸದಸ್ಯರಿದ್ದರು. ಉಳಿದ ಐದು ಜನ ಸದಸ್ಯರು ಗೈರು ಹಾಜರಾಗಿದ್ದರು.

ಈ ಚುನಾವಣೆಯಲ್ಲಿ ಉಪಾಧ್ಯಕ್ಷ ಸ್ಥಾನಕ್ಕೆ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದಾಗಿ ಚುನಾವಣೆ ನಿಯಮದನ್ವಯ 1965ರ 8(1)ರನ್ವಯ ಪುರಸಭೆ ನೂತನ ಉಪಾಧ್ಯಕ್ಷೆಯಾಗಿ 20ನೇ ವಾರ್ಡಿನ ಸದಸ್ಯರಾಗಿದ್ದ ಸರೇಗಾರ ನೇತ್ರಾವತಿ ಹುಚ್ಚಪ್ಪ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು ಎಂದು ಹೊಸಪೇಟೆ ಸಹಾಯಕ ಆಯುಕ್ತ ಚುನಾವಣಾಧಿಕಾರಿ ವಿವೇಕಾನಂದ ಕೆ.ಆರ್.ಘೋಷಿಸಿದರು.

ಸಹಾಯಕ ಚುನಾವಣಾಧಿಕಾರಿಯಾಗಿ ಪುರಸಭೆ ಮುಖ್ಯಾಧಿಕಾರಿ ಎಂ.ಕೆ.ಮುಗಳಿ ಕಾರ್ಯ ನಿರ್ವಹಿಸಿದರು.

ಪುರಸಭೆ ಅಧ್ಯಕ್ಷ ಎಂ.ಮರಿರಾಮಣ್ಣ, ಸದಸ್ಯರಾದ, ಪವಾಡಿ ಹನುಮಂತಪ್ಪ, ಬಿಡಿ ಗಂಗಾಧರ, ತೆಲಗಿ ಇಸ್ಮಾಯಿಲ್ ಸಾಬ್, ನಾಗರಾಜ್ ಜನ್ನು ಅಜೀದ್ ಉಲ್ಲಾ, ಎಚ್.ಎಂ.ಚೆನ್ನಮ್ಮ, ಮಂಜುಳಾ ಕೃಷ್ಣ ನಾಯ್ಕ್, ಲಂಬಾಣಿ ಗಣೇಶ್, ದೀಪಕ್‌ಸಾ ಕಠಾರೆ, ಕೆ.ರೇಷ್ಮಾ ಸಿಕಂದರ್, ರಾಜೇಶ್ ಬ್ಯಾಡಗಿ, ಅಂಬಿಕಾ ದೇವೇಂದ್ರಪ್ಪ ಖಾಜಬನ್ನಿ ಅಲ್ಲಭಕ್ಷಿ, ಮಲ್ಲೇಶ್ವರಿ ಈರಣ್ಣ ಸುರೇಶ್ ಚುನಾವಣೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡ ಪಾಲ್ಗೊಂಡಿದ್ದರು.

ಜಿಪಂ ಮಾಜಿ ಸದಸ್ಯರಾದ ಹೆಗ್ಡಾಳು ರಾಮಣ್ಣ ,ಅಕ್ಕಿ ತೋಟೇಶ್, ಕಾಂಗ್ರೆಸ್ ಮಹಿಳಾ ಘಟಕದ ಜಿಲ್ಲಾ ಅಧ್ಯಕ್ಷರಾದ ಸಾಹಿರಾಭಾನು, ಕಾಂಗ್ರೆಸ್ ವಕ್ತಾರ ಪತ್ರೇಶ್ ಹಿರೇಮಠ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೋರಿ ಗೋಣಿಬಸಪ್ಪ, ಮಹಿಳಾ ಘಟಕದ ಅಧ್ಯಕ್ಷೆ ಯಶೋಧ ಮಂಜುನಾಥ, ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಸೊನ್ನದ ಗುರು ಬಸವರಾಜ, ವಿಎಸ್‌ಎಸ್ ನ ಅಧ್ಯಕ್ಷ ದಾದಮ್ಮನವರ ಬಸವರಾಜ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಗೋಟೂರ್ ಬಸವರಾಜ ಕಾಂಗ್ರೆಸ್ ಪಕ್ಷದ ಇತರ ಮುಖಂಡರು ಸೇರಿದಂತೆ ಪುರಸಭೆ ನೂತನ ಉಪಾಧ್ಯಕ್ಷರನ್ನು ಅಭಿನಂದಿಸಿದರು.



ಎಲ್ಲ ಕ್ಷೇತ್ರಗಳಲ್ಲಿಯೂ ಮಹಿಳೆ ಮುಂಚೂಣಿ



ಕೊಟ್ಟೂರು: ಹೆಣ್ಣು ಮಕ್ಕಳೆಂದು ಹೆದರಿ ಮೂಲೆ ಸೇರುವ ಮಾತೆ ಇಲ್ಲ ನಮ್ಮ ನಮ್ಮ ಸಾಮರ್ಥ್ಯಗಳಿಗನುಸಾರವಾಗಿ ಪ್ರತಿಯೊಂದು ಕ್ಷೇತ್ರದಲ್ಲಿಯೂ ನಮ್ಮ ಸಾಧನೆಗಳನ್ನು ತೋರಿಸುತ್ತಿದ್ದೇವೆ ಎಂದು ಗಂಗೋತ್ರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ನಿರ್ಮಲ ಶಿವನಗುತ್ತಿ ಹೇಳಿದರು.

ಕೊಟ್ಟೂರಿನ ಕ್ರಿಯೇಟಿವ್ ಲೇಡೀಸ್ ಅಸೋಸಿಯೇಷನ್ ವತಿಯಿಂದ ತುಂಗಭದ್ರಾ ಶಿಕ್ಷಣ ಮಹಾವಿದ್ಯಾಲಯದಲ್ಲಿ 26ನೇ ವರ್ಷದ ಮಹಿಳಾ ದಿನಾಚರಣೆಯನ್ನು ಆಚರಿಸಿ ಅವರು ಮಾತನಾಡಿದರು.

ಇವತ್ತಿನ ದಿನಮಾನಗಳಲ್ಲಿ ಸಮಾಜದ ಪ್ರತಿಯೊಂದು ರಂಗಗಳಲ್ಲಿಯೂ ಮಹಿಳೆಯರು ಪುರುಷರಷ್ಟೇ ಸರಿಸಮಾನವಾಗಿ ನಿಲ್ಲಬಲ್ಲಂತಹ ಸಾಮರ್ಥ್ಯವನ್ನು ಪಡೆದುಕೊಂಡಿದ್ದಾಳೆ ಎಂದು ತಿಳಿಸಿದರು. ಮಹಿಳೆಯು ಸಾಮಾಜಿಕ, ರಾಜಕೀಯ, ಆರ್ಥಿಕ, ಶಿಕ್ಷಣ, ವೈಜ್ಞಾನಿಕ, ತಾಂತ್ರಿಕ ಕ್ಷೇತ್ರಗಳಲ್ಲಿಯೂ ಸಾಧನೆ ಮಾಡುತ್ತಿದ್ದಾರೆ. ಇದು ಪ್ರತಿಯೊಂದು ಮಹಿಳೆಯರು ಹೆಮ್ಮೆ ಪಡುವಂತಹ ಸಂಗತಿಯಾಗಿದ್ದು, ಇಂದಿನ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಮಕ್ಕಳೆಂದು ಹೆದರಿ ಕುಳಿತರೆ ಯಾವುದನ್ನು ಸಾಧಿಸಲು ಸಾಧ್ಯವಿಲ್ಲ, ಆದ್ದರಿಂದ ಪ್ರತಿಯೊಬ್ಬ ಮಹಿಳೆಯರು ಹಿಂಜರಿಕೆ ಮನೋಭಾವವನ್ನು ಬಿಟ್ಟು ಸಮಾಜದಲ್ಲಿ ಮುನ್ನಡೆಯಬೇಕೆಂದು ತಿಳಿಸಿದರು. ಹೆಣ್ಣು ಮಕ್ಕಳು ಸೌಂದರ್ಯವನ್ನು ಹೆಚಿಸಿಕೊಳ್ಳಲು ಮಾಡುವ ಸಮಯವನ್ನು ಮತ್ತು ಅದಕ್ಕೆ ವ್ಯಯಿಸುವ ಹಣವನ್ನು ಬೌದ್ಧಿಕ ವಿಕಸನಕ್ಕಾಗಿ ಬಳಸಿಕೊಂಡರೆ ಜೀವನ ಕೌಶಲ್ಯಪೂರಿತವಾಗಿರುತ್ತದೆ ಎಂದು ಹೇಳಿದರು.

ಕುಟುಂಬ ಮತ್ತು ಸಮಾಜವನ್ನು ಸ್ವಸ್ಥ ವಾಗಿರಿಸಲು ಮಹಿಳೆಯರ ಪಾತ್ರ ದೊಡ್ಡದಿದೆ ಎಂದು ತಿಳಿಸಿದರು ಪುರುಷರು ಮಹಿಳೆಯರನ್ನು ಗೌರವಿಸುವುದರ ಜೊತೆಗೆ ಅವಳ ಆರ್ಥಿಕ ಸಬಲೀಕರಣಕ್ಕೆ ಬೆಂಬಲ ನೀಡಬೇಕೆಂದು ತಿಳಿಸಿದರು.

ಮಹಿಳಾ ದಿನಾಚರಣೆಯ ಪ್ರಯುಕ್ತ ವಿದ್ಯಾರ್ಥಿಗಳಿಗೆ ವಿವಿಧ ರೀತಿಯ ಚಟುವಟಿಕೆಗಳನ್ನು ಮಾಡಿಸಲಾಯಿತು. ತುಂಗಭದ್ರಾ ಶಿಕ್ಷಣ ಮಹಾವಿದ್ಯಾಲಯದ ಉಪನ್ಯಾಸಕಿಯಾದ ಎಂ.ಲತಾ ಅಧ್ಯಕ್ಷತೆ ವಹಿಸಿದ್ದರು. ಕ್ರಿಯೇಟಿವ್ ಲೇಡೀಸ್ ಅಸೋಸಿಯೇಷನ್‌ನ ಸುನಂದ, ಶಾಂತ ರುದ್ರಪ್ಪ, ಕಾಲೇಜಿನ ಉಪನ್ಯಾಸಕಿಯರಾದ, ಬಿ.ಕಾವ್ಯ, ಎಂ.ರಂಜಿತಾ, ಡಿ.ಪ್ರತಿಭಾ, ಬಿ.ಎಂ.ಶಿವಪ್ರಸಾದ್, ಇತರರಿದ್ದರು. ಕ್ರಿಯೇಟಿವ್ ಲೇಡೀಸ್ ಅಸೋಸಿಯೇಷನ್ ಸದಸ್ಯರಾದ ಗಂಗಾ ಪ್ರಾಸ್ತಾವಿಕವಾಗಿ ಮಾತನಾಡಿದರು. ಅರುಣ ಕೊಟ್ರೇಶ್ ಸ್ವಾಗತಿಸಿದರು. ಯಶೋಧ ಮಾಮನಿ ನಿರೂಪಿಸಿದರು.

ನಾಳೆ ನಮ್ಮೂರ ಶಾಲೆ ಉಳಿಸಿ ಸಮಾವೇಶ



ವಿಜಯನಗರ: ಕಲ್ಯಾಣ ಕರ್ನಾಟಕ ಭಾಗದ ಜನರ ಅಭಿವೃದ್ಧಿಗಾಗಿ ಮೀಸಲಿರುವ ಕೆಕೆಆರ್‌ಡಿಬಿ ನಿಧಿಯನ್ನು ನಮ್ಮ ಭಾಗದ ಸರ್ಕಾರಿ ಶಾಲೆಗಳನ್ನು ಮುಚ್ಚಲು ಬಳಸುತ್ತಿರುವುದು ಕರ್ನಾಟಕ ರಾಜ್ಯ ಸರ್ಕಾರ ಈ ಭಾಗದ ಜನರಿಗೆ ಎಸಗುತ್ತಿರುವ ದೊಡ್ಡ ದ್ರೋಹವಾಗಿದೆ.

ಪ್ರತಿಯೊಂದು ಮಗುವಿಗೂ ಉಚಿತವಾಗಿ ಶಿಕ್ಷಣ ಸಿಗಬೇಕು ಎಂಬ ಜ್ಯೋತಿಬಾ ಫುಲೆ, ಸಾವಿತ್ರಿಬಾಯಿ ಫುಲೆ, ಈಶ್ವರ ಚಂದ್ರ ವಿದ್ಯಾಸಾಗರ್, ಪಂಡಿತ್ ತಾರಾನಾಥ್, ಕುದ್ಮುಲ್ ರಂಗರಾವ್‌ರಂತಹ ಮಹಾನ್ ವ್ಯಕ್ತಿಗಳ ಆಶಯಗಳನ್ನು ಗಾಳಿಗೆ ತೂರಿ ತರುತ್ತಿರುವ ಈ ಅನ್ಯಾಯದ ವಿರುದ್ಧ, ಬಡ ಮಕ್ಕಳನ್ನು ಶಾಶ್ವತವಾಗಿ ಶಿಕ್ಷಣದಿಂದ ದೂರ ಇಡುವ ಕೆಪಿಎಸ್ ಮ್ಯಾಗ್ನೆಟ್ ಯೋಜನೆಯ ವಿರುದ್ಧ ಇಡೀ ರಾಜ್ಯದಾದ್ಯಂತ ಹೋರಾಟದ ಅಲೆ ಎದ್ದಿದೆ. ಅಂತೆಯೇ ಕಲ್ಯಾಣ ಕರ್ನಾಟಕ ಜಿಲ್ಲೆಗಳಾದ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ವಿಜಯಪುರ, ಬಳ್ಳಾರಿ, ಕೊಪ್ಪಳ ಹಾಗೂ ವಿಜಯನಗರದ ನೂರಾರು ಹಳ್ಳಿಗಳಲ್ಲಿ ಹೋರಾಟಗಳು ನಡೆಯುತ್ತಿವೆ.

ಈಗ ಈ ಹೋರಾಟದ ಮುಂದುವರಿಕೆಯ ಭಾಗವಾಗಿ ಎಐಡಿಎಸ್‌ಒ ವಿದ್ಯಾರ್ಥಿ ಸಂಘಟನೆ ಹಾಗೂ ಪ್ರತಿ ಜಿಲ್ಲೆ, ಗ್ರಾಮಗಳ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಗಳ ನೇತೃತ್ವದಲ್ಲಿ ಇದೇ ಮಾ.14 ರಂದು ಕಲ್ಯಾಣ ಕರ್ನಾಟಕ ವಲಯ ಮಟ್ಟದ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ.

ಈ ಸಮಾವೇಶಕ್ಕೆ ನಾಡಿನ ಅನೇಕ ಶಿಕ್ಷಣ ತಜ್ಞರು, ಸಾಮಾಜಿಕ ಹೋರಾಟಗಾರರು, ಜನಪರ ಸಂಘಟನೆಗಳ ಮುಖಂಡರು ಹಾಗೂ ಕಲ್ಯಾಣ ಕರ್ನಾಟಕದ ಮೂಲೆ ಮೂಲೆಯಿಂದ ಪೋಷಕರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ. ಹೀಗಾಗಿ ಎಲ್ಲಾ ಶಿಕ್ಷಣಪ್ರೇಮಿ ಜನತೆ ಈ ಸಾರ್ವಜನಿಕ ಶಿಕ್ಷಣ ಉಳಿಸಿ, ನಮ್ಮೂರ ಸರ್ಕಾರಿ ಶಾಲೆಗಳನ್ನು ಉಳಿಸುವ ಹೋರಾಟವನ್ನು ಯಶಸ್ವಿಗೊಳಿಸಬೇಕೆಂದು ಇಡೀ ಕಲ್ಯಾಣ ಕರ್ನಾಟಕದ ಜನತೆಯಲ್ಲಿ ಎಐಡಿಎಸ್‌ಒ ಕರೆ ನೀಡುತ್ತದೆ. ಎಂದು ಎಐಡಿಎಸ್‌ಒ ವಿಜಯನಗರ ಜಿಲ್ಲಾ ಕಾರ್ಯದರ್ಶಿ ಉಮಾದೇವಿ ತಿಳಿಸಿದ್ದಾರೆ.

ಪೈಪ್‌ಲೈನ್ ಕಾಮಗಾರಿಗೆ ಭೂಮಿಪೂಜೆ



ಬಳ್ಳಾರಿ: ಮಹಾನಗರ ಪಾಲಿಕೆ ವ್ಯಾಪ್ತಿಯ 34ನೇ ವಾರ್ಡ್‌ನಲ್ಲಿ ಮಾಜಿ ಮೇಯರ್, ಹಾಲಿ ಸದಸ್ಯೆ ಎಂ.ರಾಜೇಶ್ವರಿ ಸುಬ್ಬರಾಯುಡು ಅವರು ಬುಧವಾರ ಪೈಪ್‌ಲೈನ್ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದರು.

ಅಂದಾಜು 10 ಲಕ್ಷ ರೂ. ವೆಚ್ಚದ 15ನೇ ಹಣಕಾಸು ಯೋಜನೆಯ ಅನುದಾನದಡಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ಮಾಜಿ ಮೇಯರ್ ರಾಜೇಶ್ವರಿ ಸುಬ್ಬರಾಯುಡು ಅವರು ಹೇಳಿದರು. ಮುಖಂಡರಾದ ಸುಬ್ಬರಾಯುಡು, ಭತ್ರಿ ಮಂಜು, ಪರಮೇಶ್, ಪೆದ್ದ ಷಣ್ಮುಖ, ಈಶ್ವರ, ಹೊನ್ನೂರಸ್ವಾಮಿ, ಸೂರಿ, ತಿಪ್ಪೇಶ, ಜಡೆಪ್ಪ ಮತ್ತು ಯೋಗಾನಂದ ರೆಡ್ಡಿ ಸೇರಿದಂತೆ ಇತರರು ಇದ್ದರು.



ಕೊಟ್ಟೂರು: ಸಮೀಪದ ನಾಗರಕಟ್ಟೆಯ ಎಸ್‌ವಿಎಸ್‌ಬಿ ಪ್ರೌಢಶಾಲೆಯಲ್ಲಿ, ಮೌಂಟ್ ಅಕಾಂಕಾಗುವ ಪರ್ವತಾರೋಹಣ ಮಾಡಿದ ಕ್ಯಾ.ಡಾ.ಸಂತೋಷ್‌ಕುಮಾರ್ ಅವರನ್ನು ಗೌರವಿಸಿ ಸನ್ಮಾನಿಸಲಾಯಿತು. ಸಂಸ್ಥೆಯ ಅಧ್ಯಕ್ಷ ಸಾವಜ್ಜಿ ಮಂಜುನಾಥ್ ಗೌಡ್ರು, ಮುಖ್ಯಗುರು ಕೆ.ಬಿ.ಸೋಮಶೇಖರ್ ಇತರರಿದ್ದರು.

ಲಿಂಗ ತಾರತಮ್ಯ ತೊಲಗಲಿ: ಡಾ.ಮಲ್ಲಿಕಾ ಘಂಟಿ



ಬಳ್ಳಾರಿ: ಪುರುಷರಿಗೆ ಸಮಾಜದಲ್ಲಿ ಸಾಂಸ್ಕೃತಿಕ ಮನಸ್ಸಿರಬೇಕು. ಮನೆಯಲ್ಲಿ ಕೆಲಸ ಮಾಡುವಂತಹ ಸಂಸ್ಕೃತಿ ಬರಬೇಕು. ಲಿಂಗ ತಾರತಮ್ಯ ಎನ್ನುವುದು ಮನೆಯಲ್ಲಿ ತಾಯಿಯಿಂದಲೇ ಆರಂಭವಾಗಲಿದೆ. ಮನೆ ಕೆಲಸ ಮಹಿಳೆಯರೇ ಮಾತ್ರ ಮಾಡಬೇಕು ಎಂದು ಸಮಾಜದಲ್ಲಿ ಕಟ್ಟುಪಾಡುಗಳನ್ನು ಹಾಕಿಕೊಂಡಿದ್ದೇವೆ ಇದು ನಿಲ್ಲಬೇಕು, ಮನೆ ಕೆಲಸವನ್ನು ಗಂಡು-ಹೆಣ್ಣು ಬೇಧ ಭಾವವಿಲ್ಲದೆ ಇಬ್ಬರೂ ಸಮಾನವಾಗಿ ಮಾಡಬೇಕು ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಮಲ್ಲಿಕಾ ಘಂಟಿ ಅಭಿಪ್ರಾಯಪಟ್ಟರು.

ನಗರದ ಮಹಿಳಾ ಪ್ರಥಮ ದರ್ಜೆ ಕಾಲೇಜ್ ನಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ನಿಮಿತ್ತ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಮಾತನಾಡಿದರು. ಜೆನೆಟಿನ್ ಎಂಬ ಮಹಿಳೆ 1975ರಲ್ಲಿ ಮಹಿಳಾ ದಿನಾಚರಣೆಯನ್ನು ಆರಂಭಿಸಿದರು. ಅಂದಿನಿಂದ ಪ್ರತಿ ವರ್ಷ ಮಾರ್ಚ್ ತಿಂಗಳಲ್ಲಿ ಮಹಿಳಾ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಬಳ್ಳಾರಿಯ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಾಪ್ತಾಹಿಕ ಕಾರ್ಯಕ್ರಮವನ್ನು ಹಮ್ಮಿಕೊಂಡು ಪೌರಕಾರ್ಮಿಕ ಮಹಿಳೆಯಿಂದ ಉದ್ಘಾಟನೆ ಮಾಡಿಸಿರುವುದು ಅತ್ಯಂತ ಹೆಮ್ಮೆಯ ವಿಷಯ ಮತ್ತು ಇದು ಕಾಲೇಜಿನ ಪ್ರಾಚಾರ್ಯರು ಮಾದರಿಯಾಗುವ ಕೆಲಸ ಮಾಡಿದ್ದಾರೆ ಎಂದರು.

ಕೌಟುಂಬಿಕವಾಗಿ ಗಂಡು ಮಗು ಇಲ್ಲದಿದ್ದರೂ ಪರವಾಗಿಲ್ಲ ಹೆಣ್ಣು ಮಗುವಿಗೆ ಬೇಗ ಮದುವೆ ಮಾಡುವುದು ಅತ್ಯಂತ ಪ್ರಮುಖ ಜವಾಬ್ದಾರಿ ಎಂದು ಪೋಷಕರು ತಿಳಿದುಕೊಂಡಿದ್ದಾರೆ. ಈ ಮನಸ್ಥಿತಿಯಿಂದ ಹೊರಗೆ ಬರಬೇಕು, ಸಮಾಜದಲ್ಲಿ ಮತ್ತು ಕೌಟುಂಬಿಕ ವ್ಯವಸ್ಥೆಯಲ್ಲಿ ಪುಸ್ತಕ ಹಣ ಮತ್ತು ಹೆಣ್ಣು ತಾನಿದ್ದ ಸ್ಥಿತಿಯಲ್ಲಿ ಎಂದು ಕೂಡ ಮರಳಿ ಬರೋಲ್ಲ ಎಂಬುದು ಅತ್ಯಂತ ಕಟು ಸತ್ಯ, ದೇಶದ ಅಭಿವೃದ್ಧಿಯಲ್ಲಿ ಎಲ್ಲ ಕ್ಷೇತ್ರದಲ್ಲಿ ಹೆಣ್ಣು ಒಳಗೊಳ್ಳುವಿಕೆಯಿಂದ ಮಾತ್ರ ದೇಶದ ಸಮಗ್ರ ಮತ್ತು ಸರ್ವತೋಮುಖ ಅಭಿವೃದ್ಧಿ ಸಾಧ್ಯ ಎಂದರು.

ಸುಜಾತಾ ಕಾರ್ಯಕ್ರಮ ನಿರ್ವಹಿಸಿದರು. ಏಳು ದಿನಗಳ ಮಹಿಳಾ ದಿನಾಚರಣೆಯ ಕುರಿತು ವಿದ್ಯಾರ್ಥಿ ಮಾನ್ಯ ಪರಿಚಯಿಸಿದರು. ಪ್ರಾಧ್ಯಾಪಕ ಕೊಟ್ರೇಶ್ ಲೇಖಿಕಿ ಮಲ್ಲಿಕಾ ಘಂಟಿ ಅವರನ್ನು ಪರಿಚಯಿಸಿದರು. ಪ್ರಾಚಾರ್ಯ ಡಾ.ಪ್ರಜ್ಞಾ ಕೆ.ವಿ., ಮಹಿಳಾ ಸಬಲೀಕರಣ ಘಟಕದ ಸಂಚಾಲಕೀ ಸ್ನೇಹಬಿಎಂ,ಪ್ರಾಧ್ಯಾಪಕರಾದ ಡಾ.ಕೆ. ಮಲ್ಲಿಕಾರ್ಜುನ, ಡಾ.ಸಿ.ಕೊಟ್ರಪ್ಪ, ಮರಿಗಾದಿಲಿಂಗಪ್ಪ, ಶಿವರಾಜ ಎಸ್., ದೀಪಾ, ಡಾ.ಜಯಲಕ್ಷ್ಮೀ, ನಾಗರತ್ನಮ್ಮ, ರೇಶ್ಮಾ, ಡಾ.ರಾಜೇಶ್ವರಿ, ಡಾ.ಗಂಗೋತ್ರಿ, ಆದಿಲ ಖಾತೂನ್, ಡಾ.ವೆಂಕನಗೌಡ, ಡಾ.ಮಂಜುನಾಥ ಇತರರಿದ್ದರು.

ಉದಯೋನ್ಮುಖ ಅನ್ವೇಷಕ ಪ್ರಶಸ್ತಿ ಪ್ರದಾನ

ಬಳ್ಳಾರಿ: ಕಿಷ್ಕಿಂದ ವಿಶ್ವವಿದ್ಯಾಲಯದ ಡೀನ್ ಸಂಶೋಧನೆ ಮತ್ತು ನಾವೀನ್ಯತೆ ಹಾಗೂ ಭೌತವಿಜ್ಞಾನದ ಪ್ರಾಧ್ಯಾಪಕ ಡಾ.ಮಂಜುನಾಥ ಎಸ್. ಅವರಿಗೆ ಉದಯೋನ್ಮುಖ ಅನ್ವೇಷಕ ಪ್ರಶಸ್ತಿ ಪ್ರದಾನ ಮಾಡಲಾಗಿದೆ.

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ ನ್ಯಾನೊ ವಿಜ್ಞಾನ ಮತ್ತು ನ್ಯಾನೊತಂತ್ರಜ್ಞಾನ ಹೊರಹೊಮ್ಮಿದ ಪ್ರವೃತ್ತಿಗಳು ಎನ್ನುವ ರಾಷ್ಟ್ರೀಯ ಸಮಾವೇಶದಲ್ಲಿ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ಮಂಜುನಾಥ ಅವರು, ವಸ್ತು ವಿಜ್ಞಾನದಲ್ಲಿ ಸಲ್ಲಿಸಿದ ಉದಯೋನುಖ ಕೊಡುಗೆಗಳಿಗೆ ಈ ಗೌರವಕ್ಕೆ ಭಾಜನರಾಗಿದ್ದಾರೆ. ಈ ಪ್ರಶಸ್ತಿಯನ್ನು ವಿಶ್ವವಿಖ್ಯಾತ ವಿಜ್ಞಾನಿ ಪ್ರೊ.ಸಬು ಥಾಮಸ್ ಅವರಿಂದ ನೀಡಲಾಗಿದೆ. ಕಾಲೇಜಿನ ಪ್ರಾಚಾರ್ಯದ ಡಾ.ದಿನೇಶ್‌ಕುಮಾರ್, ಸಮಾವೇಶದ ಸಂಚಾಲಕ ಪ್ರೊ.ವೈ.ಟಿ.ರವಿಕಿರಣ್, ಬೆಂಗಳೂರಿನ ಜವಾಹರಲಾಲ್ ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರದ ವಿಜ್ಞಾನಿ ಪ್ರೊ.ಪ್ರತಾಪ್ ವಿಷ್ಣೋಯ್ ಉಪಸ್ಥಿತರಿದ್ದರು.



ಸರ್ಕಾರಿ ಶಾಲೆಗಳಿಗೆ ಫುಟ್ಬಾಲ್ ವಿತರಣೆ



ಹೂವಿನಹಡಗಲಿ: ಕ್ರೀಡೆಗಳಿಗೆ ಪ್ರೋತ್ಸಾಹಿಸುವ ಕೆಲಸ ನಿರಂತರವಾಗಿ ಆಗಬೇಕು ಎಂದು ತಾಲೂಕು ದೈಹಿಕ ಪರಿವೀಕ್ಷಕ ರಫೀ ಅಹಮದ್ ಖವಾಸ್ ಹೇಳಿದರು.

ಪಟ್ಟಣದ ಸೊಪ್ಪಿನ ವೀರಮ್ಮ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಣ ಸಚಿವಾಲಯ ಭಾರತ ಸರ್ಕಾರ ಫುಟ್ಬಾಲ್ ಫಾರ್ ಸ್ಕೂಲ್ ಪ್ರೋಗ್ರಾಮ್ ಎಫ್‌ಬಿ ಮತ್ತು ಎಸ್‌ಪಿ ಯೋಜನೆ ಅಡಿಯಲ್ಲಿ ಪಟ್ಟಣದ ಕ್ಲಸ್ಟರ್ ವ್ಯಾಪ್ತಿಯ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಮಾಸಿಕ ಮುಖ್ಯ ಶಿಕ್ಷಕರ ಸಭೆಯಲ್ಲಿ ಫುಟ್ಬಾಲ್ ವಿತರಿಸಿ ಮಾತನಾಡಿದರು.

ಗ್ರಾಮೀಣ ಪ್ರದೇಶಗಳಲ್ಲಿ ಫುಟ್ಬಾಲ್ ಆಟದಲ್ಲಿ ಆಸಕ್ತಿ ಮೂಡಿಸುವ ಸಲುವಾಗಿ ಸರ್ಕಾರಿ ಶಾಲೆಗಳಿಗೆ ಫುಟ್ಬಾಲ್ ನೀಡಲಾಗುತ್ತಿದೆ. ಶಿಕ್ಷಕರು ಫುಟ್ಬಾಲ್ ಸೇರಿದಂತೆ ಇನ್ನಿತರೆ ಆಟೋಗಳಿಗೆ ಉತ್ತೇಜನ ನೀಡಬೇಕು ಎಂದು ತಿಳಿಸಿದರು.

ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ವಿಬಿ ಜಗದೀಶ್ ಫುಟ್ಬಾಲ್ ಜನಪ್ರಿಯಗೊಳಿಸಲು ಸರ್ಕಾರದ ಯೋಜನೆ ಸ್ವಾಗತಾರ್ಹ ಬೆಳವಣಿಗೆ ಎಂದರು. ತಾಲೂಕು ಪ್ರಾಥಮಿಕ ಶಾಲಾ ಕಾರ್ಯದರ್ಶಿ ವಿ.ಯೇಸು ಪಟ್ಟಣ ಶಿಕ್ಷಣ ಸಂಯೋಜಕ ವೀರೇಶ್ ಬಗಲಿ ಸೇರಿದಂತೆ ಪಟ್ಟಣ ವ್ಯಾಪ್ತಿಯ ಪ್ರಾಥಮಿಕ ಶಾಲಾ ಮುಖ್ಯಗುರುಗಳು ಇದ್ದರು.